ಬುಧವಾರ, ಫೆಬ್ರುವರಿ 23, 2022 | ₹ 6.00

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪೌಷ್ಟಿಕ ಆಹಾರ ಸೇವಿಸಿ

‘ಅನಧಿಕೃತ ಫ್ಲೆಕ್ಸ್– ಮೊಕದ್ದಮೆ ದಾಖಲಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಅನಧಿಕೃತ ಬ್ಯಾನರ್, ಫ್ಲೆಕ್ಸ್, ಪೋಸ್ಟರ್, ಬಂಟಿಂಗ್ಸ್ ಅಳವಡಿಸುವವರ ವಿರುದ್ಧ ಪೊಲೀಸ್ ಠಾಣೆಗೆ ದೂರು ನೀಡಿ ಎಫ್‌ಐಆರ್ ದಾಖಲಿಸುವಂತೆ ಎಲ್ಲ ವಲಯದ ಅಧಿಕಾರಿಗಳಿಗೆ ಮುಖ್ಯ ಆಯುಕ್ತ ಗೌರವ್ ಗುಪ್ತ ಸೂಚನೆ ನೀಡಿದ್ದಾರೆ.

ಪಾಲಿಕೆಯ ಎಲ್ಲ 8 ವಲಯಗಳಲ್ಲಿಯೂ ಅನಧಿಕೃತವಾಗಿ ಅಳವಡಿಸಿರುವ ಬ್ಯಾನರ್, ಫ್ಲೆಕ್ಸ್, ಪೋಸ್ಟರ್, ಬಂಟಿಂಗ್‌ಗಳನ್ನು ತೆರವುಗೊಳಿಸಲು ಮುಖ್ಯ ಎಂಜಿನಿಯರ್‌ಗಳ ನೇತೃತ್ವದ ತಂಡವು ವಿಶೇಷ ಕಾರ್ಯಾಚರಣೆ ಹಮ್ಮಿಕೊಂಡಿದೆ.

ಬಿಬಿಎಂಪಿ ‘ಹೊರಾಂಗಣ ಸೈನೇಜ್ ಮತ್ತು ಸಾರ್ವಜನಿಕ ಸಂದೇಶ ನೀತಿ 2018’ ಅನ್ನು ರೂಪಿಸಲಾಗಿದೆ. ಅದಕ್ಕೆ ಅನುಗುಣವಾಗಿ ಬೈ–ಲಾ ರಚಿಸಲಾಗಿದ್ದು, ಇದು 2020ರ ಏ.1ರಿಂದ ಜಾರಿಗೆ ಬಂದಿದೆ. ಇದರ ಪ್ರಕಾರ ಸಾರ್ವಜನಿಕ ಸ್ಥಳಗಳಲ್ಲಿ ಬ್ಯಾನರ್, ಫ್ಲೆಕ್ಸ್, ಪೋಸ್ಟರ್, ಬಂಟಿಂಗ್‌ಗಳನ್ನು ಅನಧಿಕೃತವಾಗಿ ಅಳವಡಿಸಲು ಅವಕಾಶ ಇಲ್ಲ.

ಸಚಿವಾಲಯ ಬಂದ್ ನೌಕರರಿಂದ ಎಚ್ಚರಿಕೆ

ಬೆಂಗಳೂರು: ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಸಚಿವಾಲಯ ನೌಕರರು ಇದೇ 24 ರಂದು ಪ್ರತಿಭಟನೆ ಹಮ್ಮಿಕೊಂಡಿದ್ದಾರೆ.

‘ಸರ್ಕಾರದ ಮುಖ್ಯಕಾರ್ಯದರ್ಶಿ ನಮ್ಮ ಬೇಡಿಕೆಗಳ ಬಗ್ಗೆ ಕಿವಿಗೊಡುತ್ತಿಲ್ಲ. ಮಾತುಕತೆಗೂ ಆಹ್ವಾನಿಸುತ್ತಿಲ್ಲ. ಅವರು ನಮ್ಮನ್ನು ಕರೆಸಿ ಬೇಡಿಕೆಗಳನ್ನು ಈಡೇರಿಸದಿದ್ದರೆ ಸಚಿವಾಲಯ ಬಂದ್ ಮಾಡಲಾಗುವುದು’ ಎಂದೂ ನೌಕರರು ಎಚ್ಚರಿಕೆ ನೀಡಿದ್ದಾರೆ.

ಸಚಿವಾಲಯದಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿ, ಖಾಲಿ ಹುದ್ದೆಗಳಿಗೆ ನಿವೃತ್ತರನ್ನು ಭರ್ತಿ ಮಾಡಬಾರದು, ನೇಮಕಾತಿ ನಿಯಮಾವಳಿಯನ್ನು ಪುನರ್ ಸ್ಥಾಪನೆ, ಕಿರಿಯ ಸಹಾಯಕರನ್ನು ಉಳಿಸಿಕೊಳ್ಳಬೇಕು, ಗ್ರೂಪ್ ಡಿ ಮತ್ತು ಚಾಲಕರ ನೇಮಕಾತಿ ಮಾಡಿಕೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.



ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹ

ಒಬಿಸಿ ರಾಜಕೀಯ ಮೀಸಲು: ಸರ್ಕಾರ ಕ್ರಮಕೈಗೊಳ್ಳಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸುಪ್ರೀಂ ಕೋರ್ಟ್‌ನ ಇತ್ತೀಚಿನ ಆದೇಶದಿಂದ ಸ್ಥಳೀಯ ಸಂಸ್ಥೆಗಳಲ್ಲಿ ಇತರ ಹಿಂದುಳಿದ ಜಾತಿಯ (ಒಬಿಸಿ) ರಾಜಕೀಯ ಮೀಸಲಾತಿಗೆ ಎದುರಾಗಿರುವ ಅಡ್ಡಿ ನಿವಾರಿಸಲು ರಾಜ್ಯ ಸರ್ಕಾರ ತಕ್ಷಣ ಅಗತ್ಯ ಕ್ರಮ ತೆಗೆದುಕೊಳ್ಳಬೇಕು' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದರು.

ಸಿದ್ದರಾಮಯ್ಯ

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 'ರಾಜ್ಯ ಹಿಂದುಳಿದ ವರ್ಗಗಳ ಆಯೋಗ ನಡೆಸಿರುವ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆಯ ವರದಿಯಿಂದ ಈ ಅಡ್ಡಿಯನ್ನು ಪರಿಹರಿಸಿಕೊಳ್ಳಲು ಸಾಧ್ಯವಿದೆ. ವರದಿಯನ್ನು ಸರ್ಕಾರ ಒಪ್ಪಿಕೊಂಡು ಜಾರಿಗೆ ತರಬೇಕು. ಇದನ್ನೇ ಮುಂದಿಟ್ಟುಕೊಂಡು ಸುಪ್ರೀಂ ಕೋರ್ಟ್ ಮುಂದೆ ವಾದ ಮಂಡಿಸಿ ಹಿಂದುಳಿದ ಜಾತಿಗಳಿಗೆ ಆಗಲಿರುವ ಅನ್ಯಾಯ ತಪ್ಪಿಸಬೇಕು' ಎಂದು ಒತ್ತಾಯಿಸಿದರು.

'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಕ್ಷಣ ವಿರೋಧ ಪಕ್ಷಗಳ ನಾಯಕರು ಮತ್ತು ಕಾನೂನು ತಜ್ಞರ ಸಭೆ ಕರೆದು ಚರ್ಚೆ ನಡೆಸಿ, ಸುಪ್ರೀಂ ಕೋರ್ಟ್ ಆದೇಶದಿಂದ ಉದ್ಭವವಾಗಿರುವ ಬಿಕ್ಕಟ್ಟು ಪರಿಹಾರಕ್ಕೆ ಅಭಿಪ್ರಾಯ ಪಡೆದು ಹಿಂದುಳಿದ ಜಾತಿಗಳಿಗೆ ನ್ಯಾಯ ಒದಗಿಸಬೇಕು' ಎಂದರು.

'ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ಜಾತಿಗಳಿಗೆ ರಾಜಕೀಯ ಮೀಸಲಾತಿ ನೀಡಲು ಪ್ರತ್ಯೇಕವಾದ ಆಯೋಗ ರಚಿಸ ಬೇಕೆಂದು ಸುಪ್ರೀಂ ಕೋರ್ಟ್ ಹೇಳಿದೆ. ಆದರೆ, ಕರ್ನಾಟಕದಲ್ಲಿ ಸುಪ್ರೀಂ ಕೋರ್ಟ್ ಆದೇಶಕ್ಕೆ ಅನುಗುಣವಾಗಿ ಇದೇ ಉದ್ದೇಶದಿಂದ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸಿದೆ. ಈ ರೀತಿ ವೈಜ್ಞಾನಿಕವಾಗಿ ದೇಶದ ಬೇರೆ ಯಾವ ರಾಜ್ಯಗಳಲ್ಲಿಯೂ ಸಮೀಕ್ಷೆ ನಡೆಸಲಾಗಿಲ್ಲ' ಎಂದರು.

'ಸುಪ್ರೀಂ ಕೋರ್ಟ್ 2010ರಲ್ಲಿಯೇ ರಾಜಕೀಯ ಮೀಸಲಾತಿಗೆ ಪ್ರತ್ಯೇಕ ಮಾನದಂಡ ರೂಪಿಸುವಂತೆ ಆದೇಶಿಸಿತ್ತು. ಆ ಆದೇಶವನ್ನು ಪರಿಶೀಲಿಸಲು ನಾನು ಮುಖ್ಯಮಂತ್ರಿ ಆಗಿದ್ದಾಗ ಕಾನೂನು ಸಚಿವ ಟಿ.ಬಿ. ಜಯಚಂದ್ರ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿದ್ದೆ. ಅದೇ ಸಮಿತಿಯನ್ನು ಪುನರ್ರಚಿಸಿ ಈಗಿನ ಬಿಕ್ಕಟ್ಟಿಗೆ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಬೇಕು' ಎಂದರು.

ಮೊಯಿಲಿ ಪ್ರಶಸ್ತಿಗೆ ನಾಮನಿರ್ದೇಶನ

ನವದೆಹಲಿ: ಕಾಂಗ್ರೆಸ್ ಹಿರಿಯ ನಾಯಕ, ಕೇಂದ್ರದ ಮಾಜಿ ಸಚಿವ ಎಂ. ವೀರಪ್ಪ ಮೊಯಿಲಿ ಅವರು ಪ್ರೈಮ್ ಪಾಯಿಂಟ್ ಪ್ರತಿಷ್ಠಾನವು ಸಂಸತ್‌ನ ಹಿರಿಯರಿಗೆ ಕೊಡಮಾಡುವ ಜೀವಮಾನ ಸಾಧನೆಯ ಪ್ರಶಸ್ತಿಗೆ ನೇಮಕಗೊಂಡಿದ್ದಾರೆ.

ಎಂ.ವೀರಪ್ಪ ಮೊಯಿಲಿ

ಬಿಜೆಪಿಯ ಹಿರಿಯ ಮುಖಂಡ, ತಮಿಳುನಾಡಿನ ಎಚ್.ವಿ. ಹಂದೆ ಅವರನ್ನೂ ಈ ಪ್ರಶಸ್ತಿಗೆ ನಾಮನಿರ್ದೇಶನ ಮಾಡಲಾಗಿದೆ.

ಕೇಂದ್ರದ ಸಂಸದೀಯ ವ್ಯವಹಾರಗಳ ಖಾತೆ ರಾಜ್ಯ ಸಚಿವ ಅರ್ಜುನ್ ರಾಮ್ ಮೇಘವಾಲ್, ನಿವೃತ್ತ ಮುಖ್ಯ ಚುನಾವಣಾ ಆಯುಕ್ತ ಟಿ.ಎಸ್. ಕೃಷ್ಣಮೂರ್ತಿ ಅವರಿದ್ದ ಸಮಿತಿಯು ನಾಮ ನಿರ್ದೇಶನ ಮಾಡಿದೆ.

ಪ್ರತಿಷ್ಠಾನದ ಪ್ರಸಕ್ತ ಸಾಲಿನ ಪ್ರಶಸ್ತಿಗಳನ್ನು ಮಾರ್ಚ್ 26ರಂದು ಪ್ರದಾನ ಮಾಡಲಾಗುವುದು ಎಂದು ಪ್ರತಿಷ್ಠಾನವು ಪ್ರಕಟಣೆಯಲ್ಲಿ ತಿಳಿಸಿದೆ.

ದೆಹಲಿಯಲ್ಲಿ ಕಾಂಗ್ರೆಸ್ ನಾಯಕರ ಸಭೆ 24ರಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ವರ್ಷ ನಡೆಯಲಿರುವ ರಾಜ್ಯ ವಿಧಾನಸಭೆ ಚುನಾವಣೆಗೆ ಸಿದ್ಧತೆ ಆರಂಭಿಸಿರುವ ಕಾಂಗ್ರೆಸ್ ಹೈಕಮಾಂಡ್, ಈ ಬಗ್ಗೆ ಚರ್ಚಿಸಲು ಇದೇ 24ರಂದು ದೆಹಲಿಗೆ ಬರುವಂತೆ ಪಕ್ಷದ ರಾಜ್ಯ ಮುಖಂಡರಿಗೆ ಆಹ್ವಾನ ನೀಡಿದೆ.

ಈ ಹಿಂದೆ, 25ರಂದು ಸಭೆ ನಡೆಸಲು ತೀರ್ಮಾನಿಸಲಾಗಿತ್ತು. 24ರಂದು ಸಂಜೆ 4 ಗಂಟೆಗೆ ದೆಹಲಿಯಲ್ಲಿ ಎಐಸಿಸಿ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಅವರ ನಿವಾಸದಲ್ಲಿ ಈ ಮಹತ್ವದ ಸಭೆ ನಡೆಯಲಿದೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ರಾಜ್ಯಸಭೆ ಸದಸ್ಯ ಮಲ್ಲಿಕಾರ್ಜುನ ಖರ್ಗೆ, ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ, ಕಾರ್ಯಾಧ್ಯಕ್ಷರಾದ ಧ್ರುವನಾರಾಯಣ, ಸತೀಶ ಜಾರಕಿಹೊಳಿ, ಈಶ್ವರ ಖಂಡ್ರೆ, ರಾಮಲಿಂಗಾರೆಡ್ಡಿ, ಸಲೀಂ ಅಹ್ಮದ್, ಮುಖಂಡರಾದ ಎಚ್.ಕೆ. ಪಾಟೀಲ, ಜಿ. ಪರಮೇಶ್ವರ, ದಿನೇಶ್ ಗುಂಡೂರಾವ್, ಕೆ.ಎಚ್. ಮುನಿಯಪ್ಪ, ರೆಹಮಾನ್ ಖಾನ್ ಸಭೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಕೂಡಾ ಸಭೆ ಇರಲಿದ್ದಾರೆ. ರಾಜ್ಯ ರಾಜಕೀಯದ ಸದ್ಯದ ವಿದ್ಯಮಾನಗಳನ್ನು ಅವಲೋಕಿಸುವ ಜೊತೆಗೆ ಚುನಾವಣೆಗೆ ಸಿದ್ಧವಾಗುವ ನಿಟ್ಟಿನಲ್ಲಿ ಪಕ್ಷವನ್ನು ಸಂಘಟಿಸುವ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಲಿದೆ ಎಂದು ಪಕ್ಷದ ಮೂಲಗಳು ಹೇಳಿವೆ.

ಸಹಾಯಕ ಎಂಜಿನಿಯರ್: ಕೆಎಟಿ ತೀರ್ಪು ಪಾಲಿಸಲು ಆಗ್ರಹ

ಬೆಂಗಳೂರು: 'ಕಿರಿಯ ಎಂಜಿನಿಯರ್ (ಬ್ಯಾಕ್‌ಲಾಗ್) ಹುದ್ದೆಯಿಂದ ಸಹಾಯಕ ಎಂಜಿನಿಯರ್ ಹುದ್ದೆಗೆ ವೃಂದ ಬಲಾವಣೆ ಮಾಡಿ ಕರ್ತವ್ಯ ನಿರ್ವಹಿಸುತ್ತಿರುವ ಎಸ್‌ಸಿ, ಎಸ್‌ಟಿ ಎಂಜಿನಿಯರ್‌ಗಳನ್ನು ವೃಂದ ಬದಲಾವಣೆ ಹೊಂದಿದ ದಿನದಿಂದ ಪೂರ್ವಾನ್ವಯಗೊಳಿಸಿ ಪರಿಗಣಿಸಬೇಕು' ಎಂದು ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘ ಆಗ್ರಹಿಸಿದೆ.

ಈ ಬಗ್ಗೆ ಲೋಕೋಪಯೋಗಿ ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿಗೆ ಮನವಿ ಸಲ್ಲಿಸಿರುವ ಸಂಘದ ಅಧ್ಯಕ್ಷ ಡಿ. ಚಂದ್ರಶೇಖರಯ್ಯ, 'ವೃಂದ ಬದಲಾವಣೆಯ ದಿನದಿಂದ ಸಹಾಯಕ ಎಂಜಿನಿಯರ್ ಎಂದು ಪರಿಗಣಿಸುವಂತೆ ಕರ್ನಾಟಕ ಆಡಳಿತ ನ್ಯಾಯಮಂಡಳಿ (ಕೆಎಟಿ) ತೀರ್ಪು ನೀಡಿದರೂ, ಸಾಧ್ಯ ಇಲ್ಲವೆಂದು ಇಲಾಖೆ ಹಿಂಬರಹ ನೀಡಿದೆ' ಎಂದಿದ್ದಾರೆ.

'ವೃಂದ ಬದಲಾವಣೆಗೆ ಸಂಬಂಧಿಸಿದ ಈ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ಯಾವುದೇ ಆಕ್ಷೇಪ ಎತ್ತಿಲ್ಲ. ಹೀಗಾಗಿ, ಸಾಮಾನ್ಯ ವರ್ಗದವರು ಉದ್ಯೋಗಕ್ಕೆ ಸೇರಿದ ನಂತರ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ಪದವಿ ಗಳಿಸಿ ವೃಂದ ಬದಲಾವಣೆ ಮಾಡಿಕೊಂಡ ರೀತಿಯಲ್ಲಿಯೇ ಎಸ್‌ಸಿ, ಎಸ್‌ಟಿ ನೌಕರರಿಗೂ ಪೂರ್ವಾನ್ವಯವಾಗಿ ಜ್ಯೇಷ್ಠತೆ ನೀಡಬೇಕು. ಒಂದೇ ಕಾನೂನಿನಡಿ ತಾರತಮ್ಯ ಮಾಡುವ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು' ಎಂದೂ ಆಗ್ರಹಿಸಿದ್ದಾರೆ.

ಮತ್ತೊಂದು ಪ್ರತ್ಯೇಕ ಮನವಿಯಲ್ಲಿ, 'ಸಹಾಯಕ ಕಾರ್ಯಪಾಲಕ ಎಂಜಿನಿಯರ್ (ವಿಭಾಗ–1) ವೃಂದದ ಬಡ್ತಿ ಪಟ್ಟಿಯಲ್ಲಿ ಬ್ಯಾಕ್‌ಲಾಗ್ ಎಂಜಿನಿಯರ್‌ಗಳಿಗೆ 1978 ರ ಬಡ್ತಿ ಆದೇಶದಂತೆ ಮತ್ತು ಬಿ.ಕೆ. ಪವಿತ್ರ–2 ಪ್ರಕರಣದ ತೀರ್ಪಿನಂತೆ ಮೀಸಲಾತಿ ನೀಡಿ, ಜ್ಯೇಷ್ಠತೆಯಲ್ಲಿ ಅರ್ಹತೆಯ ದಿನ ನಿಗದಿಪಡಿಸಬೇಕು' ಎಂದೂ ಅವರು ಒತ್ತಾಯಿಸಿದ್ದಾರೆ.

15 ಸಾವಿರ ಶಿಕ್ಷಕರ ನೇಮಕ: ವಯೋಮಿತಿ ಸಡಿಲಿಕೆ

ಬೆಂಗಳೂರು: ರಾಜ್ಯದಲ್ಲಿ 15 ಸಾವಿರ ಪದವೀಧರ ಪ್ರಾಥಮಿಕ ಶಿಕ್ಷಕರ (6ರಿಂದ 8ನೇ ತರಗತಿ) ನೇಮಕಾತಿಯಲ್ಲಿ ಎಲ್ಲ ವರ್ಗದ ಅಭ್ಯರ್ಥಿಗಳಿಗೆ ಎರಡು ವರ್ಷ ವಯೋಮಿತಿ ಸಡಿಲಿಕೆ ನೀಡಲಾಗಿದೆ.

ಎಸ್‌ಸಿ, ಎಸ್‌ಟಿ, ಪ್ರವರ್ಗ–1 ಮತ್ತು ಅಂಗವಿಕಲ ಅಭ್ಯರ್ಥಿಗಳಿಗೆ 47, ಪ್ರವರ್ಗ 2ಎ, 2ಬಿ, 3ಎ ಮತ್ತು 3ಬಿ ಪ್ರವರ್ಗದ ಅಭ್ಯರ್ಥಿಗಳಿಗೆ 45, ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ 42 ವರ್ಷ ಗರಿಷ್ಠ ವಯೋಮಿತಿ ನಿಗದಿಪಡಿಸಲಾಗಿದೆ.

ಅಲ್ಲದೆ, ಪ್ರತಿ ಪ್ರವರ್ಗಗಳಲ್ಲಿ ಶೇ 50ರಷ್ಟು ಹುದ್ದೆಗಳನ್ನು ಮಹಿಳೆಯರಿಗೆ, ಶೇ 1ರಷ್ಟು ಹುದ್ದೆಗಳನ್ನು ತೃತೀಯ ಲಿಂಗದ ಅಭ್ಯರ್ಥಿಗಳಿಗೆ ಮೀಸಲಿಡಲಾಗಿದೆ.

ನೇಮಕಾತಿಗೆ ಪ್ರಕ್ರಿಯೆಗೆ ಪೂರಕವಾಗಿ, ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) ನೇಮಕಾತಿ ವಿಶೇಷ ನಿಯಮಗಳು–2022'ಅನ್ನು ಅಂತಿಮಗೊಳಿಸಿ ರಾಜ್ಯ ಸರ್ಕಾರ ಸರ್ಕಾರ ಮಂಗಳವಾರ ಅಧಿಸೂಚನೆ ಹೊರಡಿಸಿದೆ.

ಎಂಜಿನಿಯರಿಂಗ್ ಓದಿವರಿಗೂ ಅವಕಾಶ: ಗಣಿತ ಮತ್ತು ವಿಜ್ಞಾನ ವಿಷಯ ಬೋಧಿಸಲು ಮೊದಲ ಬಾರಿಗೆ ಎಂಜಿನಿಯರಿಂಗ್ ಕಲಿತವರಿಗೂ ಅವಕಾಶ ಕಲ್ಪಿಸಲಾಗಿದೆ.

ಪದವಿಯಲ್ಲಿ ಗಣಿತ, ಭೌತವಿಜ್ಞಾನ ವಿಷಯಗಳನ್ನು ಐಚ್ಛಿಕವಾಗಿ ಮೂರು ವರ್ಷ ಕಡ್ಡಾಯವಾಗಿ ಕಲಿತ ಪದವೀಧರರು ಈ ವಿಷಯದ ಜೊತೆಗೆ ರಸಾಯನವಿಜ್ಞಾನ, ಗಣಕಶಾಸ್ತ್ರ, ಎಲೆಕ್ಟ್ರಾನಿಕ್ಸ್, ಸಂಖ್ಯಾಶಾಸ್ತ್ರ, ಭೂಗರ್ಭ ವಿಜ್ಞಾನ ಈ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಐಚ್ಛಿಕವಾಗಿ (ಮೂರನೇ ವಿಷಯವಾಗಿ) ಪದವಿಯಲ್ಲಿ ಓದಿರಬೇಕು. ಅಥವಾ ವಾಸ್ತು ಶಿಲ್ಪ ಪದವೀಧರಲ್ಲದ ಎಂಜಿನಿಯರಿಂಗ್ ಪದವೀಧರರು ಪ್ರಥಮ ಮೂರು, ನಾಲ್ಕನೇ ಸೆಮಿಸ್ಟರ್‌ಗಳಲ್ಲಿ ಗಣಿತ ಮತ್ತು ಉಳಿದ ಸೆಮಿಸ್ಟರ್‌ಗಳಲ್ಲಿ ಅನ್ವಯಿಕ ಗಣಿತ ಓದಿದವರೂ ಅರ್ಹರು ಎಂದು ನಿಯಮ ರೂಪಿಸಲಾಗಿದೆ.

ದುಷ್ಕರ್ಮಿಗಳಿಂದ 180 ಅಡಿಕೆ ಗಿಡ ನಾಶ

ಬೇಲೂರು: ತಾಲ್ಲೂಕಿನ ಶಂಭುಗನಹಳ್ಳಿಯಲ್ಲಿ ಸಂತೋಷ್ ಅವರ 180 ಅಡಿಕೆ ಗಿಡಗಳನ್ನು ಸೋಮವಾರ ರಾತ್ರಿ ದುಷ್ಕರ್ಮಿಗಳು ಕತ್ತರಿಸಿ ಹಾಕಿದ್ದಾರೆ.

ಚಿಕ್ಕಮೊದೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಕ್ಕೆ ಸೇರಿದ ಸರ್ವೆ ನಂ 138 ರಲ್ಲಿ 2.17 ಎಕರೆ ಜಮೀನಿನಲ್ಲಿದ್ದ ಗಿಡಗಳನ್ನು ಕತ್ತರಿಸಿದ್ದಷ್ಟೇ ಅಲ್ಲದೆ, ಹನಿ ನೀರಾವರಿ ಪೈಪ್‌ಗಳಿಗೂ ಹಾನಿ ಮಾಡಿದ್ದಾರೆ.

'ಜಮೀನಿನ ಸುತ್ತ ನೆಟ್ಟಿದ ವಿವಿಧ ಜಾತಿಯ ಗಿಡಗಳನ್ನೂ ಕಡಿದಿದ್ದಾರೆ. ಪೊಲೀಸರಿಗೆ ದೂರು ನೀಡಿರುವೆ' ಎಂದು ಸಂತೋಷ್ ತಿಳಿಸಿದರು.

ಕಾಮಗಾರಿಗಾಗಿ ಕೆರೆಯ ನೀರು ಖಾಲಿ ಮಾಡಿ ಹೂಳು ತೆಗೆಯುತ್ತಿರುವ ಬಿಬಿಎಂಪಿ

ದೂಳುಮಯ ಜೆ.ಪಿ.ಉದ್ಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೀವವೈವಿಧ್ಯದ ತಾಣವಾಗಿದ್ದ ಮತ್ತಿಕೆರೆಯ ಜಯಪ್ರಕಾಶ ನಾರಾಯಣ (ಜೆ.ಪಿ) ಉದ್ಯಾನ, ಈಗ ತನ್ನ ವೈಭವ ಕಳೆದುಕೊಂಡಿದೆ. ಶುದ್ಧಗಾಳಿಯೊಂದಿಗೆ ವಾಯುವಿಹಾರ ಮಾಡುತ್ತಿದ್ದ ಜನರೀಗ ಮೂಗು ಮುಚ್ಚಿ ತಿರುಗಾಡುವ ಸ್ಥಿತಿ ಇಲ್ಲಿ ನಿರ್ಮಾಣವಾಗಿದೆ. ಉದ್ಯಾನದ ತುಂಬೆಲ್ಲಾ ತುಂಬಿಕೊಂಡಿರುವ ದೂಳು ಮತ್ತು ಖಾಲಿಯಾದ ಕೆರೆ ನಿಸರ್ಗಪ್ರಿಯರ ಅಸಮಾಧಾನಕ್ಕೆ ಕಾರಣವಾಗಿದೆ.

ಇಲ್ಲಿನ ಅಭಿವೃದ್ಧಿ ಕಾಮಗಾರಿಯನ್ನು ಆದಷ್ಟು ತ್ವರಿತವಾಗಿ ಪೂರ್ಣಗೊಳಿಸಬೇಕು. ಈ ಉದ್ಯಾನವು ಗತವೈಭವಕ್ಕೆ ಮರಳುವಂತೆ ಮಾಡಬೇಕು ಎಂದು ಇಲ್ಲಿ ವಿಹಾರಕ್ಕೆ ಬರುವ ನಾಗರಿಕರು ಒತ್ತಾಯಿಸಿದ್ದಾರೆ.

ಜೆ.ಪಿ.ಉದ್ಯಾನದ ಅಭಿವೃದ್ಧಿ ಕಾಮಗಾರಿಗಳ ಸಲುವಾಗಿ ಕೆರೆಯ ನೀರನ್ನು ಖಾಲಿ ಮಾಡಲಾಗಿದ್ದು, ಅದರಲ್ಲಿದ್ದ ಸಾವಿರಾರು ಮೀನುಗಳು ನಾಶವಾಗಿವೆ. ಕೆರೆಯ ಹೂಳು ತೆಗೆದು ಉದ್ಯಾನದ ಹಸಿರು ಹೊದಿಕೆಯ ಮೇಲೆ ಸುರಿಯಲಾಗುತ್ತಿದ್ದು, ಇಡೀ ಉದ್ಯಾನ ದೂಳಿನಿಂದ ಆವರಿಸಿಕೊಂಡಿದೆ ಎಂದು ಅವರು ದೂರಿದ್ದಾರೆ.

ಉದ್ಯಾನದ ಒಳಗೆ ಕಾಲಿಟ್ಟ ಕೂಡಲೇ ಎದುರುಗೊಳ್ಳುತ್ತಿದ್ದ ದಟ್ಟ ಹಸಿರು ಈಗ ಕಣ್ಮರೆಯಾಗಿದ್ದು, ಎಲ್ಲವೂ ಕೆಮ್ಮಣ್ಣಿನಿಂದ ತುಂಬಿಕೊಂಡಿದೆ. ಪ್ರಾಣಿಗಳು ಮತ್ತು ಜಾನಪದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತಿದ್ದ ಕಲಾಕೃತಿಗಳಿಗೂ ಮಣ್ಣು ಮೆತ್ತಿಕೊಂಡಿದೆ. ಕೆರೆಯ ಹೂಳನ್ನು ಅವುಗಳ ಸುತ್ತಲೇ ಸುರಿಯಲಾಗುತ್ತಿದೆ. ಸಂಗೀತ ಕಾರಂಜಿಯೂ ಕಾರ್ಯನಿರ್ವಹಿಸುತ್ತಿಲ್ಲ. ಅದು ಪಾಳು ಬಿದ್ದ ಸ್ಥಿತಿಗೆ ತಲುಪಿದೆ.

'ಇಡೀ ಉದ್ಯಾನಕ್ಕೆ ಜೀವಕಳೆಯಂತಿದ್ದ ಜಲಕಾಯದ ನೀರನ್ನು ಪೂರ್ತಿ ಹೊರ ಹಾಕಲಾಗಿದೆ. ಜಲಕಾಯದ ಒಂದು ಬದಿಯಲ್ಲಿ ತಡೆಗೋಡೆ ನಿರ್ಮಾಣ ಮಾಡಲಾಗುತ್ತಿದೆ. ಉದ್ಯಾನ ಪುನರುಜ್ಜೀವನದ ಹೆಸರಿನಲ್ಲಿ ಇದ್ದ ಸ್ವಚ್ಛಂದ ವಾತಾವರಣ ಹಾಳು ಮಾಡಲಾಗಿದೆ. ಶುದ್ಧಗಾಳಿ ಹುಡುಕಿಕೊಂಡು ಬರುತ್ತಿದ್ದ ನಾವು, ಈಗ ಮೂಗು ಮುಚ್ಚಿಕೊಂಡು ತಿರುಗಾಡುತ್ತಿದ್ದೇವೆ' ಎಂದು ವಾಯುವಿಹಾರಕ್ಕೆಂದು ಬಂದಿದ್ದ ನಿವೃತ್ತ ಶಿಕ್ಷಕ ಪರಶುರಾಮ್ ಹೇಳಿದರು.

ಕೆರೆಯ ನೀರು ಖಾಲಿ ಮಾಡಿ ತಡೆಗೋಡೆ ನಿರ್ಮಾಣ ಮಾಡುತ್ತಿರುವುದು –ಪ್ರಜಾವಾಣಿ ಚಿತ್ರ/ರಂಜು ಪಿ.

ಈ ಯೋಜನೆಗೆ ಒಂದೇ ಒಂದು ಮರವನ್ನೂ ಕಡಿಯುತ್ತಿಲ್ಲ. ಪರಿಸರಕ್ಕೆ ಪೂರಕವಾಗಿಯೇ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ರಾಜಕೀಯ ದುರುದ್ದೇಶದಿಂದ ಕೆಲವರು ಆರೋಪ ಮಾಡುತ್ತಿದ್ದಾರೆ.
ಮುನಿರತ್ನ, ತೋಟಗಾರಿಕಾ ಸಚಿವ

'ಉದ್ಯಾನ ಹಾಳು ಮಾಡಿ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳುವ ಅಗತ್ಯ ಇರಲಿಲ್ಲ. ಕೆರೆಯ ನೀರು ಖಾಲಿ ಮಾಡಿದ್ದರಿಂದ ಸಾವಿರಾರು ಮೀನುಗಳು, ಲಕ್ಷಾಂತರ ಜಲಚರಗಳು ಬಲಿಯಾಗಿವೆ. ಜೀವವೈವಿಧ್ಯವನ್ನು ನಾಶ ಮಾಡಿ ಅಭಿವೃದ್ಧಿ ಮಾಡುವುದರಲ್ಲಿ ಅರ್ಥವಿದೆಯೇ' ಎಂದು ಅವರು ಪ್ರಶ್ನಿಸಿದರು.

'ಅಭಿವೃದ್ಧಿ ಕಾಮಗಾರಿ ನೆಪದಲ್ಲಿ ಹಲವು ಮರಗಳನ್ನು ಕಡಿದು ಸಾಗಿಸಲಾಗಿದೆ. ಉದ್ಯಾನದಲ್ಲಿ ನಿರ್ಮಾಣ ಕಾಮಗಾರಿ ನಡೆಸಬಾರದು ಎಂಬ ನಿಯಮ ಇದ್ದರೂ, ಲೆಕ್ಕಿಸದೆ ಕೆಲಸ ಮಾಡಲಾಗುತ್ತಿದೆ' ಎಂದು ಮತ್ತಿಕೆರೆ ನಿವಾಸಿ ನಂಜುಂಡಸ್ವಾಮಿ ಆರೋಪಿಸಿದರು.

ಆಟಿಕೆ ರೈಲು, ಕಲ್ಯಾಣಿ ಅಭಿವೃದ್ಧಿ

ಜೆ.ಪಿ ಪಾರ್ಕ್‌ನಲ್ಲಿ ಮಕ್ಕಳ ಆಟಿಕೆ ರೈಲು, ಹಳೇ ಕಾಲದ ರೈಲು ನಿಲ್ದಾಣ, ಗಡಿಯಾರ ಗೋಪುರ, ಕಲ್ಯಾಣಿ, ಬಯಲು ರಂಗಮಂದಿರ ನಿರ್ಮಾಣ ಮಾಡಲಾಗುತ್ತಿದೆ ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು. 'ಮಕ್ಕಳ ಆಟಿಕೆ ರೈಲಿನ ಹಳಿಯ ನಿರ್ಮಾಣವಾಗುವುದರಿಂದ ಕೆರೆಯ ಸ್ವರೂಪಕ್ಕೆ ಧಕ್ಕೆಯಾಗದಂತೆ ತಡೆಗೋಡೆ ನಿರ್ಮಾಣ ಮಾಡಲಾಗುತ್ತಿದೆ. ಉದ್ಯಾನದ ನಿಯಮಾವಳಿ ಮೀರಿ ಯಾವುದೇ ಅಭಿವೃದ್ಧಿ ಕಾಮಗಾರಿಗಳನ್ನು ನಡೆಸುತ್ತಿಲ್ಲ. ಇಡೀ ಯೋಜನೆಗೆ ಒಂದೇ ಒಂದು ಮರವನ್ನೂ ಕಡಿದಿಲ್ಲ. ಕಾಮಗಾರಿ ನಡೆಯುತ್ತಿರುವುದರಿಂದ ದೂಳು ಹರಡಿಕೊಂಡಿದೆ. ಎಲ್ಲ ಕಾಮಗಾರಿ ಪೂರ್ಣಗೊಂಡರೆ ಇಡೀ ಉದ್ಯಾನ ಹಚ್ಚಹಸಿರಾಗಿ ಕಾಣಲಿದೆ' ಎಂದು ಅವರು ವಿವರಿಸಿದರು.

ಬುಧವಾರ, ಫೆಬ್ರುವರಿ 23, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 54 | ಪುಟ 18

• www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಕೃತಕ ಬುದ್ಧಿಮತ್ತೆಯಿಂದ ಲೇಖನ ಬರೆಯುವುದು ಹೇಗೆ? ಇದು ಎಷ್ಟರ ಮಟ್ಟಿಗೆ ಸರಿಯಾಗಿರುತ್ತದೆ? ಕಂಪ್ಯೂಟರ್ ಮೂಲಕವೇ ಲೇಖನ ತಯಾರಿಸಿದರೆ ನಮಗೇನು ಕೆಲಸ?

ಪ್ರಚೋದನಕಾರಿ ಬರಹ: ನಟ ಚೇತನ್ ಬಂಧನ 7

ಆಳ-ಅಗಲ
'ಬಡ್ತಿ ಮೀಸಲು' ಕಗ್ಗಂಟು

ಕೇಸರಿ ಶಾಲು ಧರಿಸಿ ತರಗತಿಗೆ ಹಾಜರಿ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,300 ▼	17,092 ▼	₹51,780 (ಬೆಂಗಳೂರು) ▲	₹66,100 (ಬೆಂಗಳೂರು) ▲	74.84 ▼

ಚರ್ಚೆ ಇಲ್ಲದೇ ಅಂಗೀಕಾರ • ಶೇ 50 ರಿಂದ ಶೇ 60 ರಷ್ಟು ಏರಿಕೆ

ಸಚಿವರು, ಶಾಸಕರ ವೇತನ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ತಂದ ಸಂಕಷ್ಟ, ಆರ್ಥಿಕ ಹಿಂಜರಿತದ ಮಧ್ಯೆಯೂ ಮುಖ್ಯಮಂತ್ರಿ, ಸಚಿವರು, ಶಾಸಕರ ವೇತನ ಮತ್ತು ವಿವಿಧ ಭತ್ಯೆಗಳನ್ನು ಹೆಚ್ಚಿಸುವ ಎರಡು ಪ್ರತ್ಯೇಕ ಮಸೂದೆಗಳಿಗೆ ಯಾವುದೇ ಚರ್ಚೆ ಇಲ್ಲದೇ ವಿಧಾನಮಂಡಲದ ಉಭಯ ಸದನಗಳು ಮಂಗಳವಾರ ಒಪ್ಪಿಗೆ ನೀಡಿವೆ.

ಸಚಿವ ಕೆ.ಎಸ್.ಈಶ್ವರಪ್ಪ ಅವರ ರಾಜೀನಾಮೆಗೆ ಒತ್ತಾಯಿಸಿ ಕಾಂಗ್ರೆಸ್ ಸದಸ್ಯರು ಧರಣಿ, ಕೂಗಾಟ ಮತ್ತು ಗದ್ದಲ ನಡೆಸುತ್ತಿದ್ದರು. ಈ ಮಧ್ಯೆಯೇ, 'ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ (ತಿದ್ದುಪಡಿ) ಮಸೂದೆ 2022' ಹಾಗೂ 'ಕರ್ನಾಟಕ ವಿಧಾನಮಂಡಲದವರ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ಮಸೂದೆ 2022' ಅನ್ನು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ ವಿಧಾನಸಭೆ ಮತ್ತು ಪರಿಷತ್ತಿನಲ್ಲಿ ಮಂಡಿಸಿ, ಅಂಗೀಕಾರ ಪಡೆದರು.

ಎರಡೂ ಮಸೂದೆಗಳು ರಾಜ್ಯಪಾಲರ ಅಂಕಿತ ಪಡೆದು ಕಾಯ್ದೆಯಾದ ಬಳಿಕ, ವೇತನ ಹೆಚ್ಚಳವಾಗಲಿದೆ. ಇದರಿಂದ ರಾಜ್ಯದ ಬೊಕ್ಕಸಕ್ಕೆ ವಾರ್ಷಿಕ ₹92.40 ಕೋಟಿ ಹೆಚ್ಚುವರಿ ಹೊರೆ ಬೀಳಲಿದೆ.

ಇದರಿಂದಾಗಿ ಶಾಸಕರು ಮತ್ತು ವಿಧಾನಪರಿಷತ್ ಸದಸ್ಯರ ವೇತನದಲ್ಲಿ ಶೇ 60, ಮುಖ್ಯಮಂತ್ರಿ ಮತ್ತು ಸಚಿವರ ವೇತನದಲ್ಲಿ ಶೇ 50, ಸಭಾಧ್ಯಕ್ಷರು, ಸಭಾಪತಿ ಮತ್ತು ವಿರೋಧ ಪಕ್ಷಗಳ ನಾಯಕರ ವೇತನದಲ್ಲಿ ಶೇ 50ರಷ್ಟು ಹೆಚ್ಚಳವಾಗಿದೆ. ಆದರೆ, ವೇತನಕ್ಕಿಂತ ವಿವಿಧ ರೀತಿಯ ಭತ್ಯೆಗಳನ್ನು ಗಣನೀಯ ಪ್ರಮಾಣದಲ್ಲಿ ಏರಿಕೆ ಮಾಡಲಾಗಿದ್ದು, ವೇತನಕ್ಕಿಂತ ಭತ್ಯೆಗಳ ಗಳಿಕೆಯೇ ಹೆಚ್ಚಾಗಿದೆ.

7ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 7

ವೇತನ ಪರಿಷ್ಕರಣೆ

ಯಾರಿಗೆಷ್ಟು?	ಪ್ರಸ್ತುತ	ಪರಿಷ್ಕೃತ (ತಿಂಗಳಿಗೆ ₹ಗಳಲ್ಲಿ)
ಮುಖ್ಯಮಂತ್ರಿ	50 ಸಾವಿರ	75 ಸಾವಿರ
ಸಚಿವ	40 ಸಾವಿರ	60 ಸಾವಿರ
ಸಭಾಪತಿ-ಸಭಾಧ್ಯಕ್ಷ	50 ಸಾವಿರ	75 ಸಾವಿರ
ವಿರೋಧಪಕ್ಷದ ನಾಯಕ	40 ಸಾವಿರ	60 ಸಾವಿರ
ಮುಖ್ಯಸಚೇತಕ	35 ಸಾವಿರ	50 ಸಾವಿರ

ಐದು ವರ್ಷಕ್ಕೊಮ್ಮೆ ಪರಿಷ್ಕರಣೆ

'ಇನ್ನು ಮುಂದೆ ಮುಖ್ಯಮಂತ್ರಿ, ಸಚಿವರು, ವಿರೋಧಪಕ್ಷದ ನಾಯಕರು, ಸಭಾಪತಿ, ಸಭಾಧ್ಯಕ್ಷರು ಮತ್ತು ಶಾಸಕರ ವೇತನ ಮತ್ತು ಭತ್ಯೆಗಳ ಪರಿಷ್ಕರಣೆ ನಿಯಮಿತವಾಗಿ ಪ್ರತಿ ಐದು ವರ್ಷಗಳಿಗೊಮ್ಮೆ ಆಗಲಿದೆ. ಇದಕ್ಕಾಗಿ ಇನ್ನು ಮುಂದೆ ಮಸೂದೆಯಯನ್ನು ಮಂಡಿಸುವ ಅಗತ್ಯವಿಲ್ಲ' ಎಂದು ಸಚಿವ ಜೆ.ಸಿ. ಮಾಧುಸ್ವಾಮಿ ವಿಧಾನಸಭೆಯಲ್ಲಿ ತಿಳಿಸಿದರು.

ಕಾಲ- ಕಾಲಕ್ಕೆ ಮನೆ ಬಾಡಿಗೆ, ಪೆಟ್ರೋಲ್, ವೈದ್ಯಕೀಯ ವೆಚ್ಚಗಳೂ ಹೆಚ್ಚಾಗುತ್ತಲೇ ಇರುತ್ತವೆ. ವೆಚ್ಚಗಳ ಸೂಚ್ಯಂಕದ ಅನ್ವಯ ವೇತನ ಪರಿಷ್ಕರಣೆ ಆಗಲೇಬೇಕಿದೆ ಎಂದರು.

ಮಾರ್ಚ್ 4ಕ್ಕೆ ಬಜೆಟ್

ಬೆಂಗಳೂರು: ಹಣಕಾಸು ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಮ್ಮ ಮೊದಲ ಬಜೆಟ್ ಅನ್ನು ಮಾರ್ಚ್ 4ರಂದು ಮಂಡಿಸಲಿದ್ದಾರೆ.

ವಿಧಾನಮಂಡಲ ಕಲಾಪವನ್ನು ಮುಂದೂಡಿದ ಬಳಿಕ ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ಈ ವಿಷಯ ತಿಳಿಸಿದರು. ಇದಕ್ಕೆ ಮುನ್ನ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು, ಕಲಾಪವನ್ನು ಮಾರ್ಚ್ 4ಕ್ಕೆ ಮುಂದೂಡಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಹರ್ಷ ಹತ್ಯೆ: ಮತ್ತೆ ನಾಲ್ವರ ಸೆರೆ

ಶಿವಮೊಗ್ಗ: ಬಜರಂಗ ದಳದ ಕಾರ್ಯಕರ್ತ ಹರ್ಷ ಹತ್ಯೆಯ ನಂತರ ಉದ್ವಿಗ್ನಗೊಂಡಿದ್ದ ಶಿವಮೊಗ್ಗ ನಗರ ಮಂಗಳವಾರ ಸಹಜ ಸ್ಥಿತಿಗೆ ಮರಳಿದೆ.

ಹರ್ಷ

ಈ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಮತ್ತೆ ನಾಲ್ವರನ್ನು ಬಂಧಿಸಿದ್ದು, ಒಟ್ಟಾರೆ ಬಂಧಿತರ ಸಂಖ್ಯೆ ಆರಕ್ಕೆ ಏರಿದೆ.

ಶಿವಮೊಗ್ಗ ಕ್ಲಾರ್ಕ್ ಪೇಟೆಯ ರಿಹಾನ್ ಶರೀಫ್, ಆಸಿಫ್ ಉಲ್ಲಾಖಾನ್, ಮುರಾದ್‌ನಗರದ ನಿಹಾನ್, ಟ್ಯಾಂಕ್ ಮೊಹಲ್ಲಾದ ಅಬ್ದುಲ್ ಅಫಾನ್ ಬಂಧಿತ ಆರೋಪಿಗಳಾಗಿದ್ದಾರೆ. ಪೊಲೀಸರು ಸೋಮವಾರ ಮೊಹಮ್ಮದ್ ಖಾಸಿಫ್, ಸೈಯದ್ ನದೀಂ ಅವರನ್ನು ಬಂಧಿಸಿದ್ದರು. ಬಂಧಿತರ ಪೈಕಿ ಖಾಸಿಫ್ (30) ಹೊರತುಪಡಿಸಿ, ಉಳಿದ ಎಲ್ಲ ಆರೋಪಿಗಳೂ 20ರಿಂದ 22 ವಯಸ್ಸಿನ ಒಳಗಿನವರು.

'ಹರ್ಷ ಹತ್ಯೆಗೆ ಸಂಬಂಧಿಸಿದಂತೆ 12 ಜನರನ್ನು ವಶಕ್ಕೆ ಪಡೆಯಲಾಗಿತ್ತು. ಅವರಲ್ಲಿ 6 ಆರೋಪಿಗಳು ಕೃತ್ಯದಲ್ಲಿ ಭಾಗಿಯಾಗಿರುವುದು ಮೇಲುನೋಟಕ್ಕೆ ದೃಢಪಟ್ಟ ಕಾರಣ ಅವರನ್ನು ಬಂಧಿಸಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮೀಪ್ರಸಾದ್ ಮಾಹಿತಿ ನೀಡಿದರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

'ಅಪ್ಪ, ಅಮ್ಮನಿಗೆ ಒಳ್ಳೆಯ ಮಕ್ಕಳಾಗಿ' 7

ಹಿಜಾಬ್ ವಿದ್ಯಾರ್ಥಿನಿಯ ಪೋಷಕರ ಹೋಟೆಲ್‌ಗೆ ದಾಳಿ: ಅಣ್ಣನ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಉಡುಪಿ: ಹಿಜಾಬ್‌ಗಾಗಿ ಹೋರಾಟ ನಡೆಸುತ್ತಿರುವ ವಿದ್ಯಾರ್ಥಿನಿ ಹಾಜ್ರಾ ಶಿಫಾ ಅವರ ಪೋಷಕರ ಹೋಟೆಲ್ ಮೇಲೆ ದಾಳಿ ನಡೆಸಿ, ಶಿಫಾ ಅವರ ಅಣ್ಣನ ಮೇಲೆ ಹಲ್ಲೆ ನಡೆಸಿದ್ದ ಮೂವರು ಆರೋಪಿಗಳನ್ನು ಮಲ್ಪೆ ಠಾಣೆ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಮಲ್ಪೆಯ ಮಂಜು ಸಾಲಿಯನ್ ಅಲಿಯಾಸ್ ಮನೋಜ್, ದೀಪಕ್ ಸಾಲ್ಯಾನ್ ಹಾಗೂ ಸನಿಲ್ ರಾಜ್ ಬಂಧಿತರು ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆ ವಿವರ: ಸೋಮವಾರ ರಾತ್ರಿ 9 ಗಂಟೆ ಸುಮಾರಿಗೆ 50ಕ್ಕೂ ಹೆಚ್ಚು ಜನರಿದ್ದ ಗುಂಪು ಮಲ್ಪೆಯ ಬಿಸ್ಮಿಲ್ಲಾ ಹೋಟೆಲ್‌ಗೆ ನುಗ್ಗಿ, ಕಿಟಕಿ ಗಾಜುಗಳನ್ನು ಒಡೆದು, ಶಿಫಾಳ ಅಣ್ಣ ಸೈಫ್ ಮೇಲೆ ಹಲ್ಲೆ ನಡೆಸಿ ಪರಾರಿಯಾಗಿತ್ತು. ಗಾಯಗೊಂಡಿದ್ದ ಸೈಫ್ ನಗರದ ಹೈಟೆಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

'ದಾಳಿ ಹಾಗೂ ಹಲ್ಲೆಯ ಹಿಂದೆ ಶಾಸಕ ರಘುಪತಿ ಭಟ್ ಕೈವಾಡವಿರುವ ಶಂಕೆಯಿದ್ದು, ತನಿಖೆ ನಡೆಸಿ ತಪ್ಪಿತಸ್ಥರನ್ನು ಬಂಧಿಸಬೇಕು' ಎಂದು ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ ಜಿಲ್ಲಾ ಘಟಕದ ಅಧ್ಯಕ್ಷ ಅಕ್ರಂ ಅಸೀಲ್ ಒತ್ತಾಯಿಸಿದ್ದಾರೆ.

5ನೇ ಪುಟ ನೋಡಿ

ಮಾಸಿಕ ಚಂದಾ (ರೂ.)	ಅವಧಿ (ತಿಂಗಳು)	ಚಿಟ್ ಮೌಲ್ಯ (ರೂ.)	ಮಾಸಿಕ ಚಂದಾ (ರೂ.)	ಅವಧಿ (ತಿಂಗಳು)	ಚಿಟ್ ಮೌಲ್ಯ (ರೂ.)
2,500	40	1 ಲಕ್ಷ	12,500	40	5 ಲಕ್ಷ
5,000	30	1.5 ಲಕ್ಷ	15,000	40	6 ಲಕ್ಷ
5,000	40	2 ಲಕ್ಷ	10,000	60	6 ಲಕ್ಷ
10,000	30	3 ಲಕ್ಷ	25,000	40	10 ಲಕ್ಷ
8,000	50	4 ಲಕ್ಷ	25,000	100	25 ಲಕ್ಷ
10,000	40	4 ಲಕ್ಷ	50,000	50	25 ಲಕ್ಷ
10,000	50	5 ಲಕ್ಷ	1,00,000	50	50 ಲಕ್ಷ

ವಿವಿಧ ಕ್ಷೇತ್ರಗಳ ತಜ್ಞರಿಂದ ಒಕ್ಕೊರಲ ಅಭಿಮತ • 'ಒಂದು ರಾಷ್ಟ್ರ–ಒಂದು ಚುನಾವಣೆ' ಚರ್ಚೆ

'ಚುನಾವಣೆ ವ್ಯವಸ್ಥೆಯಲ್ಲಿ ಸುಧಾರಣೆ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದಲ್ಲಿ 1952ರಿಂದ 1967ರವರೆಗೆ ಲೋಕಸಭೆ ಹಾಗೂ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆಗಳು ನಡೆದಿದ್ದವು. ಆದರೆ, ಈಗ ಪರಿಸ್ಥಿತಿ ಬದಲಾಗಿದೆ. 'ಒಂದು ರಾಷ್ಟ್ರ–ಒಂದು ಚುನಾವಣೆ'ಯ ಬಗ್ಗೆ ಜನಾಭಿಪ್ರಾಯಗಳನ್ನು ಆಧರಿಸಿ, ಸಂವಿಧಾನದ ಅಡಿಯಲ್ಲಿ ಕ್ರಮವಹಿಸಬೇಕು. ಚುನಾವಣಾ ವ್ಯವಸ್ಥೆಯಲ್ಲಿ ಸಮಗ್ರ ಸುಧಾರಣೆ ತರುವ ಮೂಲಕ ಆಡಳಿತದಲ್ಲಿ ಪಾರದರ್ಶಕತೆಗೆ ಅನುವು ಮಾಡಿಕೊಡಬೇಕು.'

ಇವು ಭಾರತೀಯ ವಿಕಾಸ ವೇದಿಕೆಯು ನಗರದಲ್ಲಿ ಮಂಗಳವಾರ ಆಯೋಜಿಸಿದ 'ಒಂದು ರಾಷ್ಟ್ರ–ಒಂದು ಚುನಾವಣೆ' ದುಂಡು ಮೇಜಿನ ಸಭೆಯಲ್ಲಿ ವಿವಿಧ ಕ್ಷೇತ್ರಗಳ ತಜ್ಞರಿಂದ ವ್ಯಕ್ತವಾದ ಒಮ್ಮತದ ಅಭಿಪ್ರಾಯಗಳು.

ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, 'ಒಂದು ರಾಷ್ಟ್ರ ಒಂದು ಚುನಾವಣೆ ವಿಷಯದ ಬಗ್ಗೆ ನಿರಂತರ ಚರ್ಚೆ ನಡೆಯಬೇಕು. ಚರ್ಚೆಯೇ ಬೇಡ ಎಂಬ ವಾತಾವರಣ ವಿಧಾನಸೌಧದ ಒಳಗಡೆ ಹಾಗೂ ಹೊರಗಡೆ ಇರಬಾರದು. 1983ರಲ್ಲಿಯೇ ಒಂದು ರಾಷ್ಟ್ರ–ಒಂದು ಚುನಾವಣೆಯ ಬಗ್ಗೆ ಚುನಾವಣಾ ಆಯೋಗ ಹೇಳಿದೆ. ಈಗ ಪ್ರಧಾನಿ ನರೇಂದ್ರ ಮೋದಿ ಅವರು ಹೇಳುತ್ತಿದ್ದಾರೆ ಎಂಬ ಮಾತ್ರಕ್ಕೆ ಇದನ್ನು ವಿರೋಧಿಸುವುದು ಸರಿಯಲ್ಲ. ಹಾಲಿ ವ್ಯವಸ್ಥೆಯು ಅಭಿವೃದ್ಧಿಯ ವೇಗಕ್ಕೆ ತಡೆ ಒಡ್ಡುತ್ತಿದೆ. ಚುನಾವಣೆ ನೀತಿ ಸಂಹಿತೆ ಜಾರಿಯಾದ ಬಳಿಕ ಕಾರ್ಯ-ಚಟುವಟಿಕೆಗಳು ಕುಂಠಿತ ಆಗುತ್ತಿವೆ. ಲೋಕಸಭೆ ಚುನಾವಣೆಗೆ ₹ 60 ಸಾವಿರ ಕೋಟಿ ಖರ್ಚಾಗುತ್ತಿದೆ. ಹಣದ ಉಳಿತಾಯ, ಮಾನವ ಶಕ್ತಿಯ ಸದ್ಬಳಕೆಗೆ ಚುನಾವಣೆ ವ್ಯವಸ್ಥೆಯಲ್ಲಿ ಬದಲಾವಣೆ ಅಗತ್ಯ' ಎಂದು ತಿಳಿಸಿದರು.

'ಏಕಕಾಲದಲ್ಲಿ ಚುನಾವಣೆ ಸಾಕಾರಗೊಳ್ಳಲು ಸಾಂವಿಧಾನಿಕ ತಿದ್ದುಪಡಿಗಳು ಅಗತ್ಯ. ಈಗ ಚುನಾವಣೆಗಳಲ್ಲಿ ಜನ ಬಲ, ಧನ ಬಲ ನಿರ್ಣಾಯಕ ಆಗುತ್ತಿವೆ. ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಯನ್ನು ಒಂದೇ ಬಾರಿಗೆ ನಡೆಸಿದರೆ ಮಾನವ ಶ್ರಮ, ಸಮಯ ಮತ್ತು ಭಾರಿ ಮೊತ್ತದ ಹಣ ಉಳಿತಾಯವಾಗುತ್ತದೆ' ಎಂದು ಹೇಳಿದರು.

ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, 'ಒಂದೊಂದು ರಾಜ್ಯದಲ್ಲಿ ಒಂದೊಂದು ಅವಧಿಯಲ್ಲಿ ಚುನಾವಣೆ ನಡೆಯುತ್ತಿರುವುದರಿಂದ ಚುನಾವಣಾ ವೆಚ್ಚ ಅಧಿಕ ಆಗುತ್ತಿದೆ. ಹಾಲಿ ಚುನಾವಣಾ ವ್ಯವಸ್ಥೆಯಲ್ಲಿ ಹಲವಾರು ಲೋಪಗಳಿವೆ. ಒಂದು ರಾಷ್ಟ್ರ–ಒಂದು ಚುನಾವಣೆ ಅಗತ್ಯ. ಇದರಿಂದ ಸಾವಿರಾರು ಕೋಟಿ ರೂಪಾಯಿ ಉಳಿಯುತ್ತದೆ' ಎಂದು ಅಭಿಮತ ವ್ಯಕ್ತಪಡಿಸಿದರು.

ವಕೀಲ ಅಶೋಕ್ ಹಾರನಹಳ್ಳಿ, 'ಚುನಾವಣಾ ವ್ಯವಸ್ಥೆಯಲ್ಲಿ ಸುಧಾರಣೆ ತುರ್ತಾಗಿ ಅಗತ್ಯ. ಈ ಪ್ರಕ್ರಿಯೆ ಸಮುದ್ರ ಮಂಥನದ ರೀತಿ ನಡೆಯಬೇಕು. ಪ್ರಜಾಪ್ರಭುತ್ವದ ಮಂಥನದಲ್ಲಿ ವಿಷವೇ ಹೆಚ್ಚು ಬರುವಂತೆ ಅನಿಸುತ್ತದೆ. 2014ರ ನಂತರ 2-3 ವರ್ಷಗಳಲ್ಲಿ 14ರಿಂದ 15 ಚುನಾವಣೆಗಳು ನಡೆದಿವೆ. 2024ರ ಲೋಕಸಭೆ ಚುನಾವಣೆಗೆ ಒಂದು ಹೆಜ್ಜೆ ಮುಂದಿಡಬೇಕು. ಲೋಕಸಭೆ, ವಿಧಾನಸಭೆ ಚುನಾವಣೆ ನಡೆದರೆ ವ್ಯವಸ್ಥೆಯಲ್ಲಿ ಸುಧಾರಣೆ ಸಾಧ್ಯ' ಎಂದರು.

ಎಫ್‌ಕೆಸಿಸಿಐ ಅಧ್ಯಕ್ಷ ಐ.ಎಸ್. ಪ್ರಸಾದ್, 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಹಾಗೂ ಭಾರತೀಯ ವಿಕಾಸ ವೇದಿಕೆಯ ಪ್ರಧಾನ ಸಂಚಾಲಕ ಎಂ.ಆರ್. ವೆಂಕಟೇಶ್ 'ಒಂದು ರಾಷ್ಟ್ರ–ಒಂದು ಚುನಾವಣೆ' ಎಂದರು.

ದುಂಡುಮೇಜಿನ ಸಭೆಯನ್ನು ವಿಶ್ವೇಶ್ವರ ಹೆಗಡೆ ಕಾಗೇರಿ, ಬಸವರಾಜ ಹೊರಟ್ಟಿ ಮತ್ತು ಅಶೋಕ ಹಾರನಹಳ್ಳಿ ಅವರು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿದರು. (ಎಡದಿಂದ) ಐ.ಎಸ್ ಪ್ರಸಾದ್, ಡಾ. ಸುಧಾಕರ ಹೊಸಹಳ್ಳಿ, ಎಂ.ಆರ್. ದೊರೆಸ್ವಾಮಿ ಮತ್ತು ಬಿ.ಎಲ್ ಶಂಕರ್ ಇದ್ದಾರೆ ಪ್ರಜಾವಾಣಿ ಚಿತ್ರ

'ಮರೆಯಾದ ಸೇವಾ ಮನೋಧರ್ಮ'

'ಪ್ರಜಾಪ್ರಭುತ್ವದಲ್ಲಿ ಚುನಾವಣೆ ಮುಖ್ಯ. 1967ರವರೆಗೆ ಚುನಾವಣೆಗಳಲ್ಲಿ ಅಭ್ಯರ್ಥಿಗಳಿಗೆ ಮತದಾರರೇ ಚುನಾವಣಾ ಖರ್ಚಿಗೆ ಹಣ ನೀಡುತ್ತಿದ್ದರು. ಉತ್ತಮ ಅಭ್ಯರ್ಥಿಗಳ ಆಯ್ಕೆ ನಡೆಯುತ್ತಿತ್ತು. ಅಭ್ಯರ್ಥಿಗಳಲ್ಲಿ ಸೇವಾ ಮನೋಧರ್ಮ ಮತ್ತು ತತ್ವ ನಿಷ್ಠೆಯನ್ನು ಕಾಣಬಹುದಾಗಿತ್ತು. ಇತ್ತೀಚಿನ ದಿನಗಳಲ್ಲಿ ಇದನ್ನು ಕಾಣುವುದು ಕಷ್ಟ. ಒಂದು ರಾಷ್ಟ್ರ ಒಂದು ಚುನಾವಣೆಯಿಂದ ಚುನಾವಣೆ ಆಯೋಗದ ಮೇಲೆ ಹೊರೆ ಕಡಿಮೆ ಆಗಲಿದೆ' ಎಂದು ಪಿ.ಇ.ಎಸ್. ವಿಶ್ವವಿದ್ಯಾಲಯದ ಕುಲಾಧಿಪತಿ ಎಂ.ಆರ್. ದೊರೆಸ್ವಾಮಿ ತಿಳಿಸಿದರು.

'ಸಮಗ್ರ ಬದಲಾವಣೆ ಅಗತ್ಯ'

'ಪಂಚಾಯಿತಿಯಿಂದ ಲೋಕಸಭೆಯ ವರೆಗೆ ಒಂದೇ ಹಂತದಲ್ಲಿ ಚುನಾವಣೆ ನಡೆಸುವ ಬಗ್ಗೆ ಚರ್ಚೆಯಾಗಬೇಕು. ಪ್ರಸ್ತುತ ರಾಜಕಾರಣ ನಂಬಿಕೆ ಮತ್ತು ವಿಶ್ವಾಸ ಕಳೆದುಕೊಂಡಿದ್ದು, ಕೇಂದ್ರ ಸರ್ಕಾರ ವ್ಯಕ್ತಿಗತ ಪ್ರತಿಷ್ಠೆಯಾಗಿ ಪರಿಗಣಿಸುತ್ತಿದೆ. ಪ್ರತಿಪಕ್ಷಗಳನ್ನು ಶತ್ರುಗಳೆಂದು ಪರಿಗಣಿಸುತ್ತಿದೆ. ಇದರಿಂದ ಅಪನಂಬಿಕೆ ಬರುತ್ತಿದೆ. ವಿಪಕ್ಷಗಳು ಪ್ರತಿಸ್ಪರ್ಧಿಗಳೇ ಹೊರತು ಶತ್ರುಗಳಲ್ಲ. ಆದ್ದರಿಂದ ಎಲ್ಲ ಪ್ರಾದೇಶಿಕ ಪಕ್ಷಗಳ ಒಮ್ಮತದ ಅಭಿಪ್ರಾಯದೊಂದಿಗೆ ಈ ವ್ಯವಸ್ಥೆ ಜಾರಿಯಾಗಬೇಕು' ಎಂದು ಕಾಂಗ್ರೆಸ್ ಮುಖಂಡ ಬಿ.ಎಲ್. ಶಂಕರ್ ತಿಳಿಸಿದರು.

ಮಾ.7ರಿಂದ ಇಂದ್ರಧನುಷ್ ಲಸಿಕಾ ಅಭಿಯಾನ

ಬೆಂಗಳೂರು: ಪೋಲಿಯೊ ಸೇರಿದಂತೆ ವಿವಿಧ ರೋಗಗಳ ತಡೆಗೆ ಇಂದ್ರಧನುಷ್ 4.0 ಅಭಿಯಾನದಡಿ ಈವರೆಗೂ ಲಸಿಕೆ ಪಡೆಯದ ಹಾಗೂ ಬಿಟ್ಟುಹೋದ ಮಕ್ಕಳಿಗೆ ಮತ್ತು ಗರ್ಭಿಣಿಯರಿಗೆ ಆರೋಗ್ಯ ಇಲಾಖೆಯು ರಾಜ್ಯದ 10 ಜಿಲ್ಲೆಗಳಲ್ಲಿ ಮೂರು ಸುತ್ತಿನ ಲಸಿಕಾ ಅಭಿಯಾನ ಹಮ್ಮಿಕೊಂಡಿದೆ.

ಮಾ.7, ಏ.4 ಹಾಗೂ ಮೇ 9ರಂದು ಈ ಲಸಿಕಾ ಅಭಿಯಾನ ನಡೆಯಲಿದೆ. ಬೀದರ್, ಗದಗ, ದಕ್ಷಿಣ ಕನ್ನಡ, ಕಲಬುರಗಿ, ಬಳ್ಳಾರಿ, ಬೆಂಗಳೂರು ನಗರ, ವಿಜಯಪುರ, ದಾವಣಗೆರೆ, ಬಿಬಿಎಂಪಿ, ಬಾಗಲಕೋಟೆ, ಚಿಕ್ಕಬಳ್ಳಾಪುರದಲ್ಲಿ ಈ ಅಭಿಯಾನ ನಡೆಯಲಿದೆ. ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆಯನ್ನು ಒದಗಿಸಲಾಗುತ್ತದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

'ಬಿಜೆಪಿ ಫಾರ್ ಬೆಟರ್ ಬೆಂಗಳೂರು' ಕಾರ್ಯಕ್ರಮದಲ್ಲಿ ಸಚಿವ ಆನಂದ ಸಿಂಗ್ ಭರವಸೆ

ಪ್ರವಾಸಿ ತಾಣಗಳಲ್ಲಿ ಹೋಟೆಲ್‌ಗೆ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಪ್ರವಾಸಿ ತಾಣಗಳಲ್ಲಿ ಹೋಟೆಲ್‌ಗಳನ್ನು ತೆರೆಯಲು ಅಗತ್ಯ ಇರುವ ಕಟ್ಟಡ ಸೇರಿ ಮೂಲಸೌಕರ್ಯ ಕಲ್ಪಿಸಲು ಶೀಘ್ರವೇ ಕ್ರಮ ಕೈಗೊಳ್ಳಲಾಗುವುದು' ಎಂದು ಪ್ರವಾಸೋದ್ಯಮ ಸಚಿವ ಆನಂದ ಸಿಂಗ್ ಭರವಸೆ ನೀಡಿದರು.

ಬಿಜೆಪಿ ವೃತ್ತಿಪರರ ಪ್ರಕೋಷ್ಠದ ವತಿಯಿಂದ 'ಬಿಜೆಪಿ ಫಾರ್ ಬೆಟರ್ ಬೆಂಗಳೂರು' ಕಾರ್ಯಕ್ರಮದ ಅಡಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಕೋವಿಡ್ ಸಂದರ್ಭದಲ್ಲಿ ಹೋಟೆಲ್ ಉದ್ಯಮಿಗಳು ಮಾತ್ರವಲ್ಲದೆ ವ್ಯಾಪಾರಕ್ಕೂ ಹೊಡೆತ ಬಿದ್ದಿದೆ. ಎಲ್ಲರೂ ಆ ಕೆಟ್ಟ ಘಳಿಗೆ ಮರೆತು ಮುನ್ನಡೆಯಬೇಕಿದೆ. ಹೋಟೆಲ್ ಉದ್ಯಮಿಗಳಿಗೆ ಪೂರಕವಾದ ವಾತಾವರಣವನ್ನು ಪ್ರವಾಸೋದ್ಯಮ ಸ್ಥಳಗಳಲ್ಲಿ ನಿರ್ಮಿಸಲಾಗುವುದು. ಈ ಸಂಬಂಧ ಹೋಟೆಲ್ ಉದ್ಯಮಿಗಳೊಂದಿಗೆ ಸಭೆ ನಡೆಸಲಾಗುವುದು' ಎಂದು ತಿಳಿಸಿದರು.

ಕೋವಿಡ್ ಸಂಕಷ್ಟದಲ್ಲಿದ್ದ ಹೋಟೆಲ್, ರೆಸಾರ್ಟ್, ರೆಸ್ಟೋರೆಂಟ್ ಮತ್ತು ಮನರಂಜನಾ ಪಾರ್ಕ್‌ಗಳಿಗೆ ನೀಡಲಾಗಿದ್ದ ಶೇ 50ರಷ್ಟು ರಿಯಾಯಿತಿ ಸೌಲಭ್ಯವನ್ನು 200 ಹೋಟೆಲ್ ಮಾಲೀಕರು ಮಾತ್ರ ಪಡೆದುಕೊಂಡಿದ್ದಾರೆ. ಮಾರ್ಚ್ ಅಂತ್ಯದ ವೇಳೆಗೆ ಎಲ್ಲರೂ ಇದರ ಲಾಭ ಪಡೆದುಕೊಳ್ಳಬೇಕು. ಈ ಸಂಬಂಧ ವಿಶೇಷ ಅಭಿಯಾನ ಕೈಗೊಳ್ಳಲಾಗಿದೆ ಎಂದು ಹೇಳಿದರು.

15 ದಿನ ನಡೆಯಲಿರುವ ಅಭಿಯಾನದಲ್ಲಿ ಇಲಾಖೆಯ ತಾಂತ್ರಿಕ ತಂಡ ಎಲ್ಲ ಜಿಲ್ಲೆಗಳಿಗೆ ಭೇಟಿ ನೀಡಲಿದೆ. ಅಲ್ಲಿನ ಹೋಟೆಲ್ ಹಾಗೂ ರೆಸ್ಟೋರೆಂಟ್ ಸಂಘಗಳನ್ನು ಸಂಪರ್ಕಿಸಿ ಅರಿವು ಮೂಡಿಸಲಾಗುವುದು ಎಂದು ಆನಂದ ಸಿಂಗ್ ವಿವರಿಸಿದರು.

'ಸಿಂಗಪುರ, ಥಾಯ್ಲೆಂಡ್ ಸೇರಿ ಹಲವು ರಾಷ್ಟ್ರಗಳು ಪ್ರವಾಸೋದ್ಯಮದಿಂದ ಆರ್ಥಿಕತೆ ಹೊಂದುತ್ತಿವೆ. ನಮ್ಮಲ್ಲೂ ಪ್ರವಾಸೋದ್ಯಮ ಅಭಿವೃದ್ಧಿಗೆ ವಿಪುಲ ಅವಕಾಶಗಳಿವೆ. ಗೋವಾ ಮತ್ತು ಕೇರಳಕ್ಕಿಂತ ಹೆಚ್ಚು ಪ್ರವಾಸೋದ್ಯಮ ಪ್ರದೇಶಗಳನ್ನು ನಮ್ಮ ರಾಜ್ಯ ಹೊಂದಿದೆ. ಅವುಗಳ ಅಭಿವೃದ್ಧಿಗೆ ನಮ್ಮ ಸರ್ಕಾರ ಆದ್ಯತೆ ಕೊಡಲಿದೆ' ಎಂದರು.

ರಾಜ್ಯ ಹೋಟೆಲ್ ಮಾಲೀಕರ ಸಂಘ, ಟ್ಯಾಕ್ಸಿ ಮಾಲೀಕರ ಸಂಘದಿಂದ ಸಚಿವರಿಗೆ ಮನವಿ ನೀಡಲಾಯಿತು. ವಿಧಾನ ಪರಿಷತ್ ಸದಸ್ಯ ಗೋಪಿನಾಥ್ ರೆಡ್ಡಿ, ಎಫ್‌ಕೆಸಿಸಿಐ ಅಧ್ಯಕ್ಷ ಐ.ಎಸ್. ಪ್ರಸಾದ್, ವೃತ್ತಿಪರರ ಪ್ರಕೋಷ್ಠದ ಸಹ ಸಂಚಾಲಕ ರವೀಂದ್ರ ಪೈ, ಸಂಚಾಲಕ ಚನ್ನಮಲ್ಲಿಕಾರ್ಜುನ್ ಇದ್ದರು.

ಸಚಿವ ಆನಂದ ಸಿಂಗ್ ಅವರಿಗೆ ಬೆಂಗಳೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಪಿ.ಸಿ. ರಾವ್ ಮನವಿ ಸಲ್ಲಿಸಿದರು

ಆರೋಗ್ಯ ತಪಾಸಣಾ ಶಿಬಿರ

ಯಲಹಂಕ: ಬೆಂಗಳೂರು ಮಹಾನಗರ ಜಾತ್ಯತೀತ ಜನತಾದಳ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ಘಟಕದ ವತಿಯಿಂದ ಮೆಡ್ ಸ್ಟಾರ್ ಆಸ್ಪತ್ರೆಯ ಸಹಯೋಗದಲ್ಲಿ ಹೆಗಡೆನಗರದ ಎಂ.ಸಿ.ಇ.ಸಿ.ಎಚ್.ಎಸ್ ಬಡಾವಣೆಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿತ್ತು.

ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಬೆಂಗಳೂರು ಮಹಾನಗರ ಜೆಡಿಎಸ್ ಅಧ್ಯಕ್ಷ ಆರ್. ಪ್ರಕಾಶ್, 'ಮೂರು ವರ್ಷಗಳಿಂದ ಕೋವಿಡ್‌ನಿಂದ ಎಲ್ಲರ ಮನಸ್ಸು ಮತ್ತು ದೇಹ ಜರ್ಜರಿತ ವಾಗಿದೆ. ಬಡಜನರು ಸಂಕಷ್ಟ ಪರಿಸ್ಥಿತಿಯಲ್ಲಿರುವ ಈ ಸಂದರ್ಭದಲ್ಲಿ ಆರೋಗ್ಯಸೇವೆ ಒದಗಿಸುವ ಕಾರ್ಯಕ್ಕೆ ಒತ್ತುನೀಡಿ, ಇಂತಹ ಸಮಾಜಮುಖಿ ಕಾರ್ಯಕ್ರಮ ಆಯೋಜಿಸಿರುವುದು ಶ್ಲಾಘನೀಯ' ಎಂದರು.

ಬ್ಯಾಟರಾಯನಪುರ ಕ್ಷೇತ್ರದ ಜೆಡಿಎಸ್ ಘಟಕದ ಅಧ್ಯಕ್ಷ ಎನ್. ವೇಣುಗೋಪಾಲ್ ಮಾತನಾಡಿ, 'ಬಡವರು,ಕೂಲಿಕಾರ್ಮಿಕರಿಗೆ ದೊಡ್ಡ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಸಾಧ್ಯವಿಲ್ಲ. ಆದ್ದರಿಂದ ಉಚಿತವಾಗಿ ಆರೋಗ್ಯ ಶಿಬಿರ ಏರ್ಪಡಿಸಲಾಗಿದೆ' ಎಂದರು.

ಶಿಬಿರದಲ್ಲಿ ವೈದ್ಯರು ಮಹಿಳೆಯೊಬ್ಬರ ಆರೋಗ್ಯ ತಪಾಸಣೆ ನಡೆಸಿದರು. ಬೆಂಗಳೂರು ಮಹಾನಗರ ಜಾತ್ಯತೀತ ಜನತಾದಳದ ಅಧ್ಯಕ್ಷ ಆರ್.ಪ್ರಕಾಶ್, ಬ್ಯಾಟರಾಯನಪುರ ಕ್ಷೇತ್ರದ ಅಧ್ಯಕ್ಷ ಎನ್.ವೇಣುಗೋಪಾಲ್, ಮುಖಂಡರಾದ ಟಿ.ಎನ್.ಹರೀಶ್ ಕುಮಾರ್, ದಾ.ಕೃ.ದೇವರಾಜ್, ಅಂಬಿಕಾ ಮಣಿ ಇದ್ದರು

ರಸ್ತೆಗುಂಡಿ ಮುಚ್ಚುವ ಕಾಮಗಾರಿ ಪರಿಶೀಲಿಸಿದ ಮುಖ್ಯ ಆಯುಕ್ತ

ಮತ್ತೆ ರಸ್ತೆಗಿಳಿಯಲಿದೆ ಪೈಥಾನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ರಸ್ತೆ ಗುಂಡಿಗಳನ್ನು ಮುಚ್ಚಲು ಪರಿಣಾಮಕಾರಿಯಾಗಿ ಕ್ರಮಕೈಗೊಳ್ಳದ ಬಗ್ಗೆ ಹೈಕೋರ್ಟ್‌ನಿಂದ ಪದೇ ಪದೇ ಛೀಮಾರಿ ಹಾಕಿಸಿಕೊಂಡ ಬಿಬಿಎಂಪಿ, ಈ ಕಾಮಗಾರಿಗೆ ಮತ್ತೆ ಪೈಥಾನ್ ಯಂತ್ರ ಬಳಸಲು ನಿರ್ಧರಿಸಿದೆ.

ನಗರದ ಪೂರ್ವ ವಲಯದಲ್ಲಿ 17 ರಸ್ತೆಗಳು, ಪಶ್ಚಿಮ ವಲಯದಲ್ಲಿ 37 ರಸ್ತೆಗಳು, ದಕ್ಷಿಣ ವಲಯದಲ್ಲಿ 32 ರಸ್ತೆಗಳು, ಆರ್.ಆರ್.ನಗರ ವಲಯದಲ್ಲಿ 8 ರಸ್ತೆಗಳು ಹಾಗೂ 28 ಉಪಮುಖ್ಯ ರಸ್ತೆಗಳು ಸೇರಿದಂತೆ 180 ಕಿ.ಮೀ ಉದ್ದದ 122 ರಸ್ತೆಗಳ ಗುಂಡಿಗಳನ್ನು ವಿಶೇಷ ತಾಂತ್ರಿಕತೆ ಅಳವಡಿಸಿರುವ ಪೈಥಾನ್ ಯಂತ್ರದ ಮೂಲಕ ಮುಚ್ಚಲು ಬಿಬಿಎಂಪಿ ಕ್ರಮಕೈಗೊಂಡಿದೆ. ಪೂರ್ವ ವಲಯದ ಕೆಲವು ರಸ್ತೆಗಳಲ್ಲಿನ ಗುಂಡಿಗಳನ್ನು ಪೈಥಾನ್ ಯಂತ್ರ ಬಳಸಿ ಮುಚ್ಚುವ ಕಾರ್ಯವನ್ನು ಪಾಲಿಕೆಯ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಮಂಗಳವಾರ ಪರಿಶೀಲಿಸಿದರು.

ನಗರದ ಮಹಾತ್ಮ ಗಾಂಧಿ ರಸ್ತೆ ಮತ್ತು ಕಬ್ಬನ್ ರಸ್ತೆಗಳಲ್ಲಿ ಗುಂಡಿ ಮುಚ್ಚುವ ಕಾಮಗಾರಿಯನ್ನು ಮುಖ್ಯ ಆಯುಕ್ತರು ವೀಕ್ಷಿಸಿದರು. ಪೈಥಾನ್ ಯಂತ್ರ ಬಳಸಿ ರಸ್ತೆ ಗುಂಡಿ ಮುಚ್ಚುವ ಕಾರ್ಯವನ್ನು ಪೂರ್ಣಗೊಂಡ ಬಳಿಕ ಆ ರಸ್ತೆಗಳಲ್ಲಿ ಮತ್ತೆ ರಸ್ತೆ ಗುಂಡಿ ನಿರ್ಮಾಣವಾಗದಂತೆ ಎಚ್ಚರ ವಹಿಸಬೇಕು ಎಂದು ಹಿರಿಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಮುಖ್ಯ-ರಸ್ತೆಗಳು, ಉಪಮುಖ್ಯ ರಸ್ತೆಗಳು ಹಾಗೂ ವಾರ್ಡ್ ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚುವ ಪ್ರಕ್ರಿಯೆ ಮುಕ್ತಾಯ ಹಂತದಲ್ಲಿದೆ ಎಂದು ಬಿಬಿಎಂಪಿ ತಿಳಿಸಿದೆ. ಪೂರ್ವ ವಿಭಾಗದ ರಸ್ತೆ ಮೂಲಸೌಕರ್ಯ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಗೀತಾ ಹಾಗೂ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

'ರಸ್ತೆ ಗುಂಡಿ ಮುಚ್ಚಲು ನಾವು ಹೊಸ ಪೈಥಾನ್ ಯಂತ್ರ ಖರೀದಿಸಿಲ್ಲ. ಬಿಬಿಎಂಪಿ ಈ ಹಿಂದೆ ಖರೀದಿಸಿದ್ದ ಪೈಥಾನ್ ಯಂತ್ರಗಳನ್ನೇ ಬಳಸಿ ಗುಂಡಿ ಮುಚ್ಚುತ್ತಿದ್ದೇವೆ. ವಾಹನ ದಟ್ಟಣೆ ಇಲ್ಲದ ರಸ್ತೆಯಲ್ಲಿ ಈ ಯಂತ್ರ ಬಳಸಿ ದಿನದಲ್ಲಿ ಗರಿಷ್ಠ 30 ಕಿ.ಮೀ ಉದ್ದದಷ್ಟು ದೂರದವರೆಗೆ ರಸ್ತೆ ಗುಂಡಿಗಳನ್ನು ಮುಚ್ಚಬಹುದು' ಎಂದು ಬಿಬಿಎಂಪಿ ರಸ್ತೆ ಮೂಲಸೌಕರ್ಯ ವಿಭಾಗದ ಮುಖ್ಯ ಎಂಜಿನಿಯರ್ ಬಿ.ಎಸ್.ಪ್ರಹ್ಲಾದ್ 'ಪ್ರಜಾವಾಣಿ'ಗೆ ತಿಳಿಸಿದರು.

2013ರಲ್ಲಿ ಖರೀದಿ:

ನಗರದ ಮುಖ್ಯ ರಸ್ತೆಗಳು ಹಾಗೂ ಉಪಮುಖ್ಯ ರಸ್ತೆಗಳ ಗುಂಡಿಗಳನ್ನು ಎರಡು ಪೈಥಾನ್ ಯಂತ್ರಗಳನ್ನು ಬಳಸಿ ಮುಚ್ಚಲು ಬಿಬಿಎಂಪಿ 2013ರಲ್ಲಿ ಎರಡು 'ಪೈಥಾನ್–5000' ಯಂತ್ರಗಳನ್ನು ಖರೀದಿಸಿತ್ತು. ಇವುಗಳನ್ನು ಬಳಸಿ ರಸ್ತೆ ಗುಂಡಿ ಮುಚ್ಚುವ ಕಾಮಗಾರಿಗೆ ಸಂಬಂಧಿಸಿ ಎರಡು ವರ್ಷಗಳ ಗುತ್ತಿಗೆಯನ್ನು ಬಿಬಿಎಂಪಿಯು ಅಮೆರಿಕನ್ ರೋಡ್ ಟೆಕ್ನಾಲಜಿ ಆ್ಯಂಡ್ ಸಲ್ಯೂಷನ್ ಸಂಸ್ಥೆಗೆ ವಹಿಸಲಾಗಿತ್ತು. ಗುತ್ತಿಗೆ ಅವಧಿಯನ್ನು ಮತ್ತೆ ಒಂದು ವರ್ಷ ಮುಂದುವರಿಸಲಾಗಿತ್ತು. ಆ ಬಳಿಕ ಆ ಯಂತ್ರಗಳು ಬಳಕೆಯಾಗದೆ ಉಳಿದಿವೆ. ಈ ಕಂಪನಿಗೆ ಗುತ್ತಿಗೆ ಮೊತ್ತಕ್ಕಿಂತ ₹ 5.36 ಕೋಟಿಯನ್ನು ಹೆಚ್ಚುವರಿ ಪಾವತಿ ಮಾಡಲಾಗಿದೆ ಎಂಬ ಆರೋಪ ಕೇಳಿಬಂದಿತ್ತು.

'ನಗರದ ರಸ್ತೆ ಗುಂಡಿಗಳಿಂದ ಸಾರ್ವಜನಿಕರು ಸಾವು ನೋವುಗಳಿಗೆ ಈಡಾಗುತ್ತಿದ್ದಾರೆ' ಎಂದು ಆಕ್ಷೇಪಿಸಿ ಕೋರಮಂಗಲದ ವಿಜಯನ್ ಮೆನನ್ ಸೇರಿದಂತೆ ನಾಲ್ವರು 2015ರಲ್ಲಿ ಹೈಕೋರ್ಟ್‌ನಲ್ಲಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸುತ್ತಿದೆ.

ಬಿಬಿಎಂಪಿ ಪರ ವಕೀಲ ವಿ. ಶ್ರೀನಿಧಿ ಅವರು ಈ ಪಿಐಎಲ್‌ನ ವಿಚಾರಣೆಯ ಸಂದರ್ಭದಲ್ಲಿ ಇತ್ತೀಚೆಗೆ, 'ಪಾಲಿಕೆಯ 182.38 ಕಿ.ಮೀ ವ್ಯಾಪ್ತಿಯಲ್ಲಿನ ರಸ್ತೆ ಗುಂಡಿ ಮುಚ್ಚಲು ಕಾರ್ಯಾದೇಶ ನೀಡಲಾಗಿದೆ. ಇದೇ 14ರಂದು ಕೆಲಸ ಆರಂಭಿಸಲಾಗಿದೆ. ಪೈಥಾನ್ ಯಂತ್ರ ಬಳಸಲು ಟೆಂಡರ್ ಕರೆದಿದ್ದೇವೆ. 20 ವರ್ಷ ಬಾಳಿಕೆ ಬರುವಂತಹ ರಸ್ತೆಗಳನ್ನು ನಿರ್ಮಿಸಲಾಗುತ್ತದೆ' ಎಂದು ಪ್ರಮಾಣಪತ್ರ ಸಲ್ಲಿಸಿದ್ದರು.

ಪೈಥಾನ್ ಯಂತ್ರ ಬಳಸಿ ರಸ್ತೆ ಗುಂಡಿ ಮುಚ್ಚುವ ಕಾಮಗಾರಿಯನ್ನು ಗೌರವ್ ಗುಪ್ತ ಅವರು ಮಂಗಳವಾರ ಪರಿಶೀಲಿಸಿದರು

ಸುದ್ದಿ 2 ನಿಮಿಷ

ಮಕ್ಕಳ ನಾಪತ್ತೆ: ವಿವರ ಸಲ್ಲಿಸಲು ಹೈಕೋರ್ಟ್ ನಿರ್ದೇಶನ

ಬೆಂಗಳೂರು: 'ಸರ್ಕಾರದ ಅಧೀನದಲ್ಲಿರುವ ಬಾಲಮಂದಿರಗಳಿಂದ ಕಣ್ಮರೆಯಾಗಿರುವ 141 ಮಕ್ಕಳನ್ನು ಪತ್ತೆ ಹಚ್ಚಲು ಕೈಗೊಂಡಿರುವ ತನಿಖೆಯ ಸಮಗ್ರ ವಿವರಗಳನ್ನು ಸಲ್ಲಿಸಿ' ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಈ ಕುರಿತಂತೆ ಕೋಲಾರದ ಸಾಮಾಜಿಕ ಕಾರ್ಯಕರ್ತ ಕೆ.ಸಿ. ರಾಜಣ್ಣ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಗೃಹ ಇಲಾಖೆ ಸೇರಿದಂತೆ ಪ್ರಕರಣದ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೆ ಆದೇಶಿಸಿದ ನ್ಯಾಯಪೀಠ, ವಿಚಾರಣೆಯನ್ನು ಮಾರ್ಚ್ 9ಕ್ಕೆ ಮುಂದೂಡಿದೆ.

ಅರ್ಜಿದಾರರ ಪರ ವಕೀಲ ಎಸ್.ಉಮಾಪತಿ, 'ರಾಜ್ಯದಲ್ಲಿ ಸರ್ಕಾರದ ಅಧೀನದಲ್ಲಿರುವ ಬಾಲ ಮಂದಿರಗಳಿಂದ 2015–16ರಿಂದ 2021ರ ಅಕ್ಟೋಬರ್‌ವರೆಗಿನ ಅವಧಿಯಲ್ಲಿ ಒಟ್ಟು 420 ಮಕ್ಕಳು ನಾಪತ್ತೆಯಾಗಿದ್ದಾರೆ. ಈ ಕುರಿತು ಎಫ್‌ಐಆರ್ ಕೂಡಾ ದಾಖಲಾಗಿವೆ. ಇವರಲ್ಲಿ 141 ಮಕ್ಕಳು ಇನ್ನೂ ಪತ್ತೆಯಾಗಿಲ್ಲ. ಈ ಕುರಿತಂತೆ ಅರ್ಜಿದಾರರು ಮಾಹಿತಿ ಹಕ್ಕು ಕಾಯ್ದೆಯಡಿ ಮಹಿಳಾ ಮತ್ತು ಮಕ್ಕಳ ಇಲಾಖೆಯಿಂದ ಮಾಹಿತಿ ಪಡೆದಿದ್ದಾರೆ. ಈ ಪ್ರಕರಣದಲ್ಲಿ ಪೊಲೀಸರು ತನಿಖೆ ನಡೆಸಿಲ್ಲ ಎಂಬುದು ಗೊತ್ತಾಗಿದೆ' ಎಂದು ಆಕ್ಷೇಪಿಸಿದರು.

'ಬಾಲ ನ್ಯಾಯ ಕಾಯ್ದೆ ಪ್ರಕಾರ ಪ್ರತಿಯೊಂದು ಪೊಲೀಸ್ ಠಾಣೆಯಲ್ಲೂ ಮಕ್ಕಳ ನಾಪತ್ತೆ ಪ್ರಕರಣಗಳಿಗಾಗಿ ಪ್ರತ್ಯೇಕ ಪೊಲೀಸ್ ಘಟಕ ಇರಬೇಕು. ಆದರೆ, ರಾಜ್ಯದಲ್ಲಿ ಅಂತಹ ವ್ಯವಸ್ಥೆ ಇಲ್ಲ' ಎಂಬುದು ಅರ್ಜಿದಾರರ ಆರೋಪ.

ದ್ವಿಚಕ್ರ ವಾಹನ ಬಾಡಿಗೆ: ಸಾರಿಗೆ ಇಲಾಖೆ ಕ್ರಮದ ಎಚ್ಚರಿಕೆ

ಬೆಂಗಳೂರು: ಮೊಬೈಲ್ ಅಗ್ರಿಗೇಟರ್ ಆ್ಯಪ್ ಬಳಸಿಕೊಂಡು ದ್ವಿಚಕ್ರ ವಾಹನಗಳಲ್ಲಿ ಪ್ರಯಾಣಿಕರನ್ನು ಸಾಗಿಸಿದರೆ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಸಾರಿಗೆ ಇಲಾಖೆ ಎಚ್ಚರಿಕೆ ನೀಡಿದೆ.

ಆ್ಯಪ್ ಬಳಸಿಕೊಂಡು ನಗರದಲ್ಲಿ ಪ್ರಯಾಣಿಕರನ್ನು ಸಾಗಿಸುತ್ತಿರುವುದು ಕಂಡು ಬಂದಿದೆ. ಇದು ಕಾನೂನು ಬಾಹಿರವಾಗಿದ್ದು, ವಾಹನಗಳ ಮಾಲೀಕರು ಈ ರೀತಿಯ ಆ್ಯಪ್‌ಗಳಲ್ಲಿ ನೋಂದಣಿ ಮಾಡಿಕೊಳ್ಳಬಾರದು ಎಂದು ಹೇಳಿದೆ.

ರೆಂಟ್–ಎ–ಕ್ಯಾಬ್ ಪರವಾನಗಿ ಪಡೆದಿರುವ ಕಂಪನಿಗಳು ಖಾಸಗಿ ಮಾಲೀಕತ್ವದ ಕಾರುಗಳನ್ನು ಕಂಪನಿ ಹೆಸರಿನಲ್ಲಿ ಸಾರ್ವಜನಿಕರಿಗೆ ಬಾಡಿಗೆ ನೀಡುತ್ತಿರುವುದೂ ಕಂಡು ಬಂದಿದೆ. ಇಂತಹ ವಾಹನಗಳ ವಿರುದ್ಧವೂ ಇಲಾಖೆ ಕ್ರಮ ಕೈಗೊಳ್ಳಲಾಗುತ್ತಿದೆ. ಸಾರ್ವಜನಿಕರು ತಮ್ಮ ವಾಹನಗಳನ್ನು ಬಾಡಿಗೆಗೆ ನೀಡಬಾರದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಶಿವಮೊಗ್ಗದಲ್ಲಿ ಬಜರಂಗದಳ ಕಾರ್ಯಕರ್ತ ಹರ್ಷ ಅವರ ಹತ್ಯೆ ಖಂಡಿಸಿ ಮಲ್ಲೇಶ್ವರದ ಕುವೆಂಪು ಪ್ರತಿಮೆ ಬಳಿ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು ದೀಪ ಬೆಳಗಿ ಶ್ರದ್ಧಾಂಜಲಿ ಸಲ್ಲಿಸಿದರು. ಯುವ ಮೋರ್ಚಾ ಅಧ್ಯಕ್ಷ ಡಾ.ಸಂದೀಪ್, ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತಿತರರು ಇದ್ದರು.

ಹತ್ಯೆ ಖಂಡಿಸಿ ಯುವ ಮೋರ್ಚಾ ಪ್ರತಿಭಟನೆ

ಬೆಂಗಳೂರು: ಶಿವಮೊಗ್ಗದಲ್ಲಿ ಬಜರಂಗದಳ ಕಾರ್ಯಕರ್ತ ಹರ್ಷ ಅವರ ಹತ್ಯೆಯನ್ನು ಖಂಡಿಸಿ ಬಿಜೆಪಿ ಯುವ ಮೋರ್ಚಾ ನಗರದ ಮಲ್ಲೇಶ್ವರದಲ್ಲಿ ಪ್ರತಿಭಟನೆ ನಡೆಸಿತು.

ಈ ಸಂದರ್ಭದಲ್ಲಿ ಮಾತನಾಡಿದ ರಾಜ್ಯ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಡಾ.ಸಂದೀಪ್, 'ಮತಾಂಧ ದುಷ್ಕರ್ಮಿಗಳಿಂದ ಹರ್ಷ ಅವರ ಹತ್ಯೆ ನಡೆದಿದೆ. ಇದಕ್ಕೆ ಕುಮ್ಮಕ್ಕು ನೀಡಿದ ಸಮಾಜಘಾತುಕ ಶಕ್ತಿಗಳನ್ನು ಸದೆ ಬಡಿಯಬೇಕು' ಎಂದು ಒತ್ತಾಯಿಸಿದರು.

ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿ, 'ರಾಜ್ಯ ಸರ್ಕಾರ ಆದಷ್ಟು ಬೇಗ ಈ ಪ್ರಕರಣದ ಸಮರ್ಪಕ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು. ಯುವಮೋರ್ಚಾ ಪದಾಧಿಕಾರಿಗಳಾದ ಪ್ರಶಾಂತ್ ಗೌಡ, ಅಭಿಲಾಷ್ ರೆಡ್ಡಿ ಮತ್ತು ಪುನೀತ್ ರೆಡ್ಡಿ ಭಾಗವಹಿಸಿದ್ದರು.

ನೈರುತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂ.: ಸಿಎಒ/ಸಿಎನ್/ಬಿಎನ್‌ಸಿ/3/2022 ದಿನಾಂಕ:18.02.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಈ ಕೆಳಗಿನ ಕಾಮಗಾರಿಗಾಗಿ ಇ–ಟೆಂಡರ್‌ನಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ.

	ಕಾಮಗಾರಿ ವಿವರ	ಅಂದಾಜು ವೆಚ್ಚ
1	ಗದಗ–ಹೊಟಗಿ ಡಬ್ಲಿಂಗ್	Rs. 32,57,65,890/-
	ವಿಭಾಗ: ಗದಗ–ಬಾಗಲಕೋಟ ನಿಲ್ದಾಣಗಳ ನಡುವೆ ಅರ್ಥ್ ವರ್ಕ್, ಪಿಎಫ್, ಕಟ್ಟಡ ಮತ್ತಿತರ ವಿವಿಧ ಕಾಮಗಾರಿಗಳ ಅನುಷ್ಠಾನ. (ದ್ವಿ ಲಕೋಟೆ ಪದ್ಧತಿ) (ಟೆಂಡರ್ ಉಲ್ಲೇಖ ಸಂಖ್ಯೆ: ಹೆಚ್‌ಐಜಿಎ/79)	
2	ಲೋಂಡಾ – ಮೀರಜ್	Rs. 1,90,65,000/-
	ಡಬ್ಲಿಂಗ್ ಯೋಜನೆ: ಲೋಂಡಾ – ಮಿರಾಜ್ ನಡುವೆ 60 ಕೆಜಿ / 52 ಕೆಜಿ ಇನ್ಸಿಟು ಗ್ಲ್ಯೂಡ್ ಜಾಯಿಂಟ್ ಫ್ಯಾಬ್ರಿಕೇಶನ್ (ಟೆಂಡರ್ ಉಲ್ಲೇಖ ಸಂಖ್ಯೆ: ಎಂಆರ್‌ಜೆ/61ಆರ್1)	
3	ಹುಬ್ಬಳ್ಳಿ–ಚಿಕ್ಕಜಾಜೂರು	Rs. 49,81,986/-
	ಡಬ್ಲಿಂಗ್ ಯೋಜನೆ: ಸವಣೂರು ಮತ್ತು ಯೆಲವಿಗಿ ನಿಲ್ದಾಣಗಳ ನಡುವೆ ಕಿಮೀ: 417/300–400 ರಲ್ಲಿ ಎಲ್‌ಸಿ–256 ಬದಲಿಗೆ ಆರ್‌ಯುಬಿ–36ಎ ಗಾಗಿ ಒಳಚರಂಡಿ ವ್ಯವಸ್ಥೆ. (ಟೆಂಡರ್ ಉಲ್ಲೇಖ ಸಂಖ್ಯೆ: ಯುಬಿಎಲ್–ಜೆಆರ್‌ಯು/59)	
4	ಗದಗ–ಹೊಟಗಿ ಡಬ್ಲಿಂಗ್	Rs. 35,40,000/-
	ಯೋಜನೆಗೆ ಷರತ್ತುಗಳೊಂದಿಗೆ ಟೆಂಡರ್ ಡಾಕ್ಯುಮೆಂಟ್‌ನ ಕಾರ್ಯಗತಗೊಳಿಸುವಿಕೆ ಮತ್ತು ಚೌಕಟ್ಟಿನ ಯೋಜನೆ ಸೇರಿದಂತೆ ಸೇತುವೆ ನಂ.63ಡಿ (9X45.72ಮಿ. ಓಡಬ್ಲ್ಯೂಟಿಜಿ)ನ ಸಬ್‌ಸ್ಟ್ರಕ್ಚರ್‌ನ ವಿನ್ಯಾಸ ಮತ್ತು ರೇಖಾಚಿತ್ರ, (ದ್ವಿ ಲಕೋಟೆ ಪದ್ಧತಿ) (ಟೆಂಡರ್ ಉಲ್ಲೇಖ ಸಂಖ್ಯೆ: ಹೆಚ್‌ಐಜಿಎ/80)	

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 11.03.2022 ಸಮಯ: 15:00 ಗಂಟೆಯವರೆಗೆ.

ಹೆಚ್ಚಿನ ಮಾಹಿತಿಗಾಗಿ www.ireps.gov.in ಲಾಗ್‌ಆನ್ ಮಾಡಿ

ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾಮಗಾರಿ ಬೆಂಗಳೂರು

ಪಿಯುಬಿ/425/ಎಎಎಲ್/ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2021–22

S.W.Railways SWRRLY SWRRLY

ಭಾರತೀಯ ಸ್ಟೇಟ್ ಬ್ಯಾಂಕ್

ದೊಡ್ಡದುಣ್ಣಸಂದ್ರ ಶಾಖೆ (41155)
ದೊಡ್ಡದುಣ್ಣಸಂದ್ರ ಗ್ರಾಮ, ದೇವನಗುಡಿ ಅಂಚೆ,
ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮ–560067

ಹರಾಜು ಪ್ರಕಟಣೆ

ಕೆಳಕಂಡ ವ್ಯಕ್ತಿಗಳು ಭಾರತೀಯ ಸ್ಟೇಟ್ ಬ್ಯಾಂಕ್, ದೊಡ್ಡದುಣ್ಣಸಂದ್ರ ಶಾಖೆಯಲ್ಲಿ ತಮ್ಮ ಚಿನ್ನಾಭರಣಗಳನ್ನು ಒತ್ತೆಯಿಟ್ಟದ್ದು, ಅವರ ಹೆಸರುಗಳ ಮುಂದೆ ತಿಳಿಸಿರುವ ಚಿನ್ನಾಭರಣದ ಸಾಲವನ್ನು ಪಡೆದುಕೊಂಡಿದ್ದರು. ಸದರಿ ಸಾಲಗಾರರುಗಳಿಗೆ ನೋಟೀಸನ್ನು ಕಳುಹಿಸಿದ್ದು/ನೋಟೀಸ್‌ಗಳು ನೀಡಿಕೆಯಾಗಿರುವುದಿಲ್ಲ ಅಥವಾ ವಾಪಸ್ ಬಂದಿವೆ/ ಪಡೆಯಲು ನಿರಾಕರಿಸಿರುತ್ತಾರೆ. ಇವರು ಸಾಲವನ್ನೂ ಸಹ ಮರುಪಾವತಿ ಮಾಡಿರುವುದಿಲ್ಲ. ಆದ್ದರಿಂದಾಗಿ ಅವರು ಈಡು ಮಾಡಿರುವ ಚಿನ್ನಾಭರಣಗಳನ್ನು ಹರಾಜು ಮಾಡಲಾಗುವುದು. ಅದಕ್ಕಾಗಿ ಈ ಕೆಳಕಂಡಂತೆ ಹರಾಜನ್ನು ನಡೆಸಲಾಗುವುದು.

ಹರಾಜಿನ ದಿನಾಂಕ: 24/02/2022 ರಂದು ಮಧ್ಯಾಹ್ನ 12.30 ಗಂಟೆಗೆ

ದೊಡ್ಡದುಣ್ಣಸಂದ್ರ ಶಾಖೆ, ಕೋಡ್–41155

ಕ್ರಮ ಸಂ	ಸಾಲಗಾರರ ಹೆಸರು	ಸಾಲದ ಖಾತೆ ಸಂಖ್ಯೆ	ಒಟ್ಟು ತೂಕ	ಬಾಕಿ ಮೊತ್ತ
1	ರಮೇಶ್ ಡಿ ಕೆ	39773544759	34	ರೂ. 1,31,981/-
2	ಚಂದ್ರಶೇಖರ್ ಆರ್	39875022124	57.24	ರೂ. 2,10,439/-
3	ನಾರಾಯಣಸ್ವಾಮಿ ವಿ	39899111379	15.3	ರೂ. 62,471/-

ಈ ಮೂಲಕ ಸೂಚಿಸುವುದೇನೆಂದರೆ, ಮೇಲೆ ತಿಳಿಸಿರುವ ಚಿನ್ನಾಭರಣಗಳನ್ನು ಕೆಳಗೆ ತಿಳಿಸಿರುವ ನಿಯಮಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟು ಮೇಲೆ ತಿಳಿಸಿರುವ ದಿನಾಂಕಗಳಂದು ಸಂಬಂಧಪಟ್ಟ ಶಾಖೆಯ ಆವರಣದಲ್ಲಿ ಬಹಿರಂಗ ಹಾರಾಜಿನ ಮೂಲಕ ಮಾರಾಟ ಮಾಡಲಾಗುವುದು.

ನಿಯಮಗಳು ಮತ್ತು ನಿಬಂಧನೆಗಳು:

1) ಆಸಕ್ತಿಯುಳ್ಳ ವ್ಯಕ್ತಿಗಳು ಹರಾಜಿನ ದಿನಾಂಕಕ್ಕಿಂತ ಎರಡು ಗಂಟೆ ಮುಂಚಿತವಾಗಿ ರೂ.1000/- ಮೊತ್ತವನ್ನು ಮುಂಗಡ ಹಣವಾಗಿ ಸಂದಾಯ ಮಾಡಬೇಕು. ಯಶಸ್ವಿಯಾದ ಬಿಡ್‌ದಾರರ ಸಂಬಂಧದಲ್ಲಿ ಈ ಹಣವನ್ನು ಮಾರಾಟವು ತೀರ್ಮಾನವಾದಾಗ ಮಾರಾಟದ ಬೆಲೆಯ ಬಗ್ಗೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು. ಉಳಿದವರಿಗೆ ಬಡ್ಡಿಯಿಲ್ಲದೆ ಈ ಮೊತ್ತವನ್ನು ಹಿಂದಿರುಗಿಸಲಾಗುವುದು.
2) ಯಶಸ್ವಿಯಾದ ಬಿಡ್‌ದಾರರು ಆಭರಣಗಳ 50% ಬೆಲೆಯನ್ನು ಸ್ಥಳದಲ್ಲೆ ತಕ್ಷಣ ಪಾವತಿಮಾಡವೇಕು. ಚೆಕ್‌ಗಳನ್ನು ಅಂಗೀಕರಿಸುವುದಿಲ್ಲ. ಬಾಕಿ ಹಣವನ್ನು ಹರಾಜು ದಿನಾಂಕದಿಂದ ಒಂದು ವಾರದ ಒಳಗೆ ಪಾವತಿ ಮಾಡಬೇಕು. ಇಲ್ಲದಿದ್ದರೆ ಮುಂಗಡ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಬಿಡ್‌ನ ಪೂರ್ಣ ಹಣವನ್ನು ಪಾವತಿ ಮಾಡಿದ ನಂತರ ಮಾತ್ರ ಆಭರಣಗಳನ್ನು ನೀಡಲಾಗುವುದು
3) ಆಸಕ್ತಿಯುಳ್ಳ ಬಿಡ್‌ದಾರರು ಹರಾಜು ನಡೆಯುವುದಕ್ಕೆ ಎರಡು ಗಂಟೆ ಮುಂಚಿತವಾಗಿ ಆಭರಣಗಳನ್ನು ಪರಿಶೀಲಿಸಬಹುದು.
4) ಹರಾಜನ್ನು ಎಲ್ಲಿ ಹೇಗಿದೆಯೊ ಹಾಗಿನ ಆಧಾರದ ಮೇಲೆ ನಡೆಸಲಾಗುವುದು. ಆಭರಣಗಳ ಗುಣಮಟ್ಟದ ಬಗ್ಗೆ ಬ್ಯಾಂಕ್ ಯಾವುದೇ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಿಲ್ಲ.
5) ಯಾವುದೇ ಕಾರಣ ನೀಡದೆ ಹರಾಜನ್ನು ರದ್ದುಪಡಿಸುವ ಅಥವಾ ಮುಂದೂಡುವ ಹಕ್ಕನ್ನು ಬ್ಯಾಂಕ್ ಕಾದಿರಿಸಿ ಕೊಂಡಿರುವುದು.
6) ಯಾವುದೇ ಕಾರಣ ನೀಡದೆ ಯಾವುದೆ ಬಿಡ್‌ಅನ್ನು ಅಂಗೀಕರಿಸುವ ಹಕ್ಕನ್ನು ಬ್ಯಾಂಕ್ ಕಾದಿರಿಸಿಕೊಂಡಿದೆ. ಈ ಬಗ್ಗೆ ಬ್ಯಾಂಕಿನ ತೀರ್ಮಾನವು ಅಂತಿಮವಾದುದಾಗಿರುವುದು ಮತ್ತು ಬದ್ಧವಾಗಿರುವುದು.
7) ವಿವಾದದ ಇತರೆ ಎಲ್ಲಾ ವಿಚಾರಗಳಲ್ಲಿ ಬ್ಯಾಂಕಿನ ತೀರ್ಮಾನವು ಅಂತಿಮವಾಗಿರುವುದು ಮತ್ತು ಬದ್ಧವಾಗಿರುವುದು. ಮತ್ತೆ ಯಾವುದೇ ಪತ್ರವ್ಯವಹಾರವನ್ನು ಮಾನ್ಯ ಮಾಡುವುದಿಲ್ಲ.
8) ಹರಾಜಿನಲ್ಲಿ ಭಾಗವಹಿಸುವ ವ್ಯಕ್ತಿಗಳು ತಾವು ಸದರಿ ನಿಯಮಗಳಿಗೆ ಬದ್ಧರಾಗಿರುವುದಾಗಿ ತಮ್ಮ ಒಪ್ಪಿಗೆಯನ್ನು ದೃಢೀಕರಿಸಿ ಹರಾಜು ಪ್ರಾರಂಭವಾಗುವ ಮುನ್ನ ರಿಜಿಸ್ಟರ್‌ನಲ್ಲಿ ಸಹಿಮಾಡಬೇಕು.

ಸ್ಥಳ: ದೊಡ್ಡದುಣ್ಣಸಂದ್ರ
ದಿನಾಂಕ: 21.02.2022

ಸಹಿ/- ಪ್ರಾದೇಶಿಕ ವ್ಯವಸ್ಥಾಪಕರು, ಭಾರತೀಯ ಸ್ಟೇಟ್ ಬ್ಯಾಂಕ್, ದೊಡ್ಡದುಣ್ಣಸಂದ್ರ ಶಾಖೆ, ಹೊಸಕೋಟೆ ತಾಲ್ಲೂಕು

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಕಾರ್ಯಪಾಲಕ ಅಭಿಯಂತರರವರ ಕಛೇರಿ, "ಜಲಭವನ" ವಿಭಾಗ, 3ನೇ ಮಹಡಿ, 1ನೇ ಘಟ್ಟ, 1ನೇ ಹಂತ, ಬಿಟಿಎಂ ಬಡಾವಣೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560 029.

ಟೆಂಡರ್ ಅಧಿಸೂಚನೆ

No.:KWB/EE/BNG/AE-2/O&M/RMG/2521/2021-22 Dt:21.02.2022

1) ಕಾಮಗಾರಿಯ ವಿವರ: ರಾಮನಗರ ಮತ್ತು ಚನ್ನಪಟ್ಟಣ ನಗರದ ವಾರ್ಷಿಕ ನೀರು ಸರಬರಾಜು ನಿರ್ವಹಣೆಯಡಿ ರಾಮನಗರ ನಗರ ವ್ಯಾಪ್ತಿಯಲ್ಲಿ 6 ತಿಂಗಳು ಅವಧಿಗೆ ವೆಬ್ ಆಧಾರಿತ ನೀರು ಸರಬರಾಜು ಬಿಲ್ಲಿಂಗ್ ಮತ್ತು ಶುಲ್ಕ ಸಂಗ್ರಹ ನಿರ್ವಹಣೆ ಮಾಡುವ ಕಾಮಗಾರಿ.
ಟೆಂಡರ್‌ಗಿಟ್ಟ ಅಂದಾಜು ಮೊತ್ತ : ರೂ. 4,95,000/– (ಜಿ.ಎಸ್.ಟಿ. ಹೊರತುಪಡಿಸಿ).
ಭದ್ರತಾ ಠೇವಣಿ : ರೂ. 12,400/–

No.:KWB/EE/BNG/AE-2/O&M/CPT/2522/2021-22 Dt:21.02.2022

2) ಕಾಮಗಾರಿಯ ವಿವರ: ರಾಮನಗರ ಮತ್ತು ಚನ್ನಪಟ್ಟಣ ನಗರದ ವಾರ್ಷಿಕ ನೀರು ಸರಬರಾಜು ನಿರ್ವಹಣೆಯಡಿ ಚನ್ನಪಟ್ಟಣ ನಗರ ವ್ಯಾಪ್ತಿಯಲ್ಲಿ 6 ತಿಂಗಳು ಅವಧಿಗೆ ವೆಬ್ ಆಧಾರಿತ ನೀರು ಸರಬರಾಜು ಬಿಲ್ಲಿಂಗ್ ಮತ್ತು ಶುಲ್ಕ ಸಂಗ್ರಹ ನಿರ್ವಹಣೆ ಮಾಡುವ ಕಾಮಗಾರಿ.
ಟೆಂಡರ್‌ಗಿಟ್ಟ ಅಂದಾಜು ಮೊತ್ತ : ರೂ. 3,75,000/– (ಜಿ.ಎಸ್.ಟಿ. ಹೊರತುಪಡಿಸಿ).
ಭದ್ರತಾ ಠೇವಣಿ : ರೂ. 9,400/–

ವಿವರಗಳು		
1	ಟೆಂಡರ್ ದಸ್ತಾವೇಜುಗಳು ದೊರೆಯುವ ದಿನಾಂಕ	23.02.2022 ರಿಂದ 09.03.2022ರ ಸಂಜೆ 5.30 ಗಂಟೆಯವರೆಗೆ
2	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	10.03.2022ರ ಸಂಜೆ 5.30 ಗಂಟೆಯವರೆಗೆ
3	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	11.03.2022ರ ಬೆಳಿಗ್ಗೆ 11.00 ಗಂಟೆಯ ನಂತರ

ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಕಾರ್ಯಪಾಲಕ ಅಭಿಯಂತರರವರ ಕಛೇರಿ ದೂರವಾಣಿ 080–41106536 ನಿಂದ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು
ಕನನೀಸ ಮತ್ತು ಒಚ ಮಂಡಳಿ ವಿಭಾಗ, ಬೆಂಗಳೂರು.

ವಾಸಾಸಂಇ/ಬೆಂ.ನ/ಜಿಎ/3484/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಛೇರಿ, ರಾ.ಹೆ–75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ–563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ. ದೂರವಾಣಿ ಸಂಖ್ಯೆ: 08152–200049, ಇ–ಮೇಲ್: eemidklr@rediffmail.com, eemigwddkolar@gmail.com

ಸಂ: ಕಾ.ಪಾ.ಇಂ/ಸ.ನೀ.ವಿ/ಕೋ/ತಾಂ.ಶಾ/ಸ.ಇಂ/ಟೆಂಡರ್ ಪ್ರಕಟಣೆ/279/2021–22 ದಿನಾಂಕ: 18.02.2022

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 12/2021–22, ದಿನಾಂಕ: 18.02.2022

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ ರವರಿಂದ ಒಟ್ಟು 04 ಕಾಮಗಾರಿಗಳಿಗೆ ಕೆ.ಡಬ್ಲ್ಯೂ–2 & 4 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮಾವಳಿ ಅನ್ವಯ 02 ಮತ್ತು 3ನೇ ದರ್ಜೆ ಮತ್ತು ಮೇಲ್ಪಟ್ಟ ನೋಂದಾಯಿತ ಗುತ್ತಿಗೆದಾರರಿಂದ ಒಂದು–ಲಕೋಟೆ ಹಾಗೂ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದೆ. ಗರಿಷ್ಠ ಟೆಂಡರ್ ಅಂದಾಜು ಮೊತ್ತ ರೂ. 220.00 ಲಕ್ಷ ಹಾಗೂ ಕನಿಷ್ಠ ಟೆಂಡರ್ ಅಂದಾಜು ಮೊತ್ತ ರೂ. 40.00 ಲಕ್ಷ. ನಿಗದಿತ ಇಎಂಡಿ ಮೊತ್ತವನ್ನು ಇ–ಪೋರ್ಟಲ್‌ನಲ್ಲಿದ್ದಂತೆ ಸಲ್ಲಿಸುವುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಇ–ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ www.eproc.karnataka.gov.in ಮೂಲಕ ದಿನಾಂಕ: 25.02.2022 ರಿಂದ 11.03.2022 ರವರೆಗೆ ಪಡೆಯಬಹುದು (Download). ಪ್ರೀ ಬಿಡ್ ಸಭೆಯ ದಿನಾಂಕ: 04.03.2022 ರಂದು ಬೆಳಗ್ಗೆ 11.00 ಗಂಟೆಗೆ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕೋಲಾರ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 14.03.2022ರ ಸಂಜೆ 4.30 ಗಂಟೆಯ ನಂತರ. ಮೇಲಿನ ವಿವರಗಳನ್ನು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ www.eproc.karnataka.gov.in ಅಂತರ್ಜಾಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ 395/ಎಂ.ಸಿ.ಎ/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಸಿ.ಎನ್‌.ಅಶ್ವತ್ಥನಾರಾಯಣ ಘೋಷಣೆ

‘ಬಜೆಟ್‌ನಲ್ಲಿ ತಂತ್ರಜ್ಞಾನಾಧಾರಿತ ಕಾರ್ಯಕ್ರಮ’

ಪ್ರಜಾವಾಣಿ ವಾರ್ತೆ

ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಜಿ.ಹೇಮಂತ ಕುಮಾರ್ ಅವರಿಗೆ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಗೌರವ ಫೆಲೋಶಿಪ್ ಪ್ರದಾನ ಮಾಡಲಾಯಿತು.

ಬೆಂಗಳೂರು: ‘ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ತಂತ್ರಜ್ಞಾನಾಧಾರಿತ ಕಾರ್ಯಕ್ರಮಗಳನ್ನು ಮುನ್ನೆಲೆಗೆ ತರುವ ಹಲವು ಕಾರ್ಯಕ್ರಮಗಳನ್ನು ಈ ಬಜೆಟ್‌ನಲ್ಲಿ ಘೋಷಿಸಲಾಗುವುದು’ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದರು.

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ಮಂಗಳವಾರ ಹಮ್ಮಿಕೊಂಡಿದ್ದ ವಿಜ್ಞಾನ ಸಪ್ತಾಹ ಉದ್ಘಾಟನೆ, ಅಕಾಡೆಮಿ ಪ್ರಶಸ್ತಿ ಮತ್ತು ಫೆಲೋಶಿಪ್ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ವಿಜ್ಞಾನವು ಕೇವಲ ಉಳ್ಳವರಿಗೆ ಮಾತ್ರ ಸಿಗುತ್ತಿದೆ. ಮಹತ್ವದ ಸಂಶೋಧನೆಗಳು ಸಮಾಜದ ತಳಸ್ತರಕ್ಕೆ ತಲುಪದಿದ್ದರೆ ಪ್ರಯೋಜನವಿಲ್ಲ. ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ಇನ್ನೂ ಮಾದರಿಗಳ ಬಗ್ಗೆ ಮಾತನಾಡುತ್ತಿರುವುದು ಸರಿಯಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

‘ಜನಸಾಮಾನ್ಯರೂ ವಿಜ್ಞಾನ ಮತ್ತು ತಂತ್ರಜ್ಞಾನದ ಅಭಿವೃದ್ಧಿಯ ಬಗ್ಗೆ ತಿಳಿದುಕೊಳ್ಳುವುದು ಅಗತ್ಯ ಎಂದು ಹೇಳಿದರು.ಸಂಸದ ಡಿ.ವಿ.ಸದಾನಂದ ಗೌಡ,‘ಅಕಾಡೆಮಿಯು ವಿಜ್ಞಾನಿಗಳನ್ನು ಗುರುತಿಸಿ, ಗೌರವಿಸುತ್ತಿರುವುದು ಶ್ಲಾಘನೀಯ’ ಎಂದರು.

ಪ್ರಧಾನಮಂತ್ರಿಗಳ ವೈಜ್ಞಾನಿಕ ಸಲಹೆಗಾರ ಡಾ.ವಿಜಯರಾಘವನ್ ಮತ್ತು ಮೂರ್ತಿ ಪ್ರತಿಷ್ಠಾನದ ಅಧ್ಯಕ್ಷೆ ಸುಧಾ ಮೂರ್ತಿ ಅವರು ಆನ್‌ಲೈನ್ ಮೂಲಕ ಭಾಗವಹಿಸಿದ್ದರು.

ಶಾಸಕ ಎಸ್.ಆರ್.ವಿಶ್ವನಾಥ್, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ.ರಮಣರೆಡ್ಡಿ, ನಿರ್ದೇಶಕ ಬಸವರಾಜು, ಅಕಾಡೆಮಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎ.ಎಂ.ರಮೇಶ್ ಭಾಗವಹಿಸಿದ್ದರು.

ಪ್ರಶಸ್ತಿ ಪ್ರದಾನ

ಕಾರ್ಯಕ್ರಮದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಸಾಧಕರಾದ ಪ್ರೊ.ಬಿ.ಕೆ.ತೆಲ್ಮಾ, ಡಾ.ಇಡ್ಯಾ ಕರುಣಾಸಾಗರ್ ಅವರಿಗೆ ‘ಪ್ರೊ.ಸಿ.ಎನ್.ಆರ್.ರಾವ್–ಅಕಾಡೆಮಿ ಜೀವಮಾನ ಸಾಧನೆ ಪ್ರಶಸ್ತಿ’ ನೀಡಿ ಗೌರವಿಸಲಾಯಿತು.

ಕನ್ನಡದಲ್ಲಿ ವಿಜ್ಞಾನ ಸಂವಹನಕ್ಕಾಗಿ ಖ್ಯಾತ ವೈದ್ಯ ಬಿ.ಎಂ.ಹೆಗ್ಡೆ, ಲೇಖಕ ಟಿ.ಆರ್.ಅನಂತರಾಮು ಅವರಿಗೆ ‘ಜೀವಮಾನ ಸಾಧನೆ ಪ್ರಶಸ್ತಿ’ ಪ್ರಯೋಗ ಮತ್ತು ಕೃಷಿ ಕಲ್ಪ ಸಂಸ್ಥೆಗಳಿಗೆ ಅಕಾಡೆಮಿಯ ಸಾಂಸ್ಥಿಕ ಸಹ ಸದಸ್ಯತ್ವ ನೀಡಲಾಯಿತು.ಪ್ರಧಾನ ಮಂತ್ರಿಗಳ ವೈಜ್ಞಾನಿಕ ಸಲಹೆಗಾರ ಕೆ.ವಿಜಯ ರಾಘವನ್, ಉದ್ಯಮಿ ಕಿರಣ್ ಮಜುಂದಾರ್ ಷಾ, ಮೂರ್ತಿ ಫೌಂಡೇಷನ್ ಅಧ್ಯಕ್ಷೆ ಸುಧಾ ಮೂರ್ತಿ, ಮೈಸೂರು ವಿ.ವಿ. ಕುಲಪತಿ ಜಿ. ಹೇಮಂತ ಕುಮಾರ್, ಗುಲ್ಬರ್ಗ ವಿ.ವಿ. ಕುಲಪತಿ ದಯಾನಂದ ಅಗಸರ್, ಡಿಆರ್‌ಡಿಒ ವಿಜ್ಞಾನಿ ಟೆಸ್ಸೀ ಥಾಮಸ್ ಸೇರಿ 40 ಮಂದಿಗೆ ಗೌರವ ಫೆಲೋಶಿಪ್ ಪ್ರದಾನವಾಯಿತು.

ಮುದಿಗೆರೆ ರಮೇಶ್ ಕುಮಾರ್‌ಗೆ ಕಸಾಪ ದತ್ತಿ ಪ್ರಶಸ್ತಿ



ರಮೇಶ್ ಕುಮಾರ್

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ ‘ಡಾ. ಎಚ್. ವಿಶ್ವನಾಥ್ ಮತ್ತು ಎಂ.ಎಸ್. ಇಂದಿರಾ ದತ್ತಿ ಪ್ರಶಸ್ತಿ’ಗೆ ಸಾಹಿತಿ ಮುದಿಗೆರೆ ರಮೇಶ್ ಕುಮಾರ್ ಅವರ ‘ಬಟಬಯಲು’ ಕವನ ಸಂಕಲನ ಆಯ್ಕೆಯಾಗಿದೆ.

ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ಈ ಪ್ರಶಸ್ತಿಯನ್ನು ದೃಷ್ಟಿದೋಷ ಇರುವ ಲೇಖಕರಿಗೆ ಮೀಸಲಿರಿಸಲಾಗಿದ್ದು, ₹ 10 ಸಾವಿರ ನಗದು ಒಳಗೊಂಡಿದೆ.

ಕೆ.ಎಸ್. ಶಿಕ್ಷಣ ಸಮೂಹ ಸಂಸ್ಥೆಗೆ ನ್ಯಾಕ್ ಮಾನ್ಯತೆ

ಬೆಂಗಳೂರು: ಕೆ.ಎಸ್. ಶಿಕ್ಷಣ ಸಮೂಹ ಸಂಸ್ಥೆಯು ರಾಷ್ಟ್ರೀಯ ಮಾನ್ಯತಾ ಮಂಡಳಿ (ಎನ್‌ಬಿಎ) ಮತ್ತು ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತಾ ಪರಿಷತ್ತು (ನ್ಯಾಕ್) ಮಾನ್ಯತೆ ಪಡೆದಿದೆ.

ಕನಕಪುರ ರಸ್ತೆಯಲ್ಲಿರುವ ಕೆ.ಎಸ್. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮತ್ತು ಕೆ.ಎಸ್. ಸ್ಕೂಲ್ ಆಫ್ ಎಂಜಿನಿಯರಿಂಗ್ ಸಂಸ್ಥೆಯು ಕಮ್ಮವಾರಿ ಸಂಘದ ಅಡಿಯಲ್ಲಿ ನಡೆಯುತ್ತಿದೆ. ಈ ಸಂಸ್ಥೆಗಳಲ್ಲಿ ಬಿ.ಇ, ಬಿ.ಆರ್ಕ್, ಎಂಬಿಎ, ಎಂಟೆಕ್ ಮತ್ತು ಡಿಪ್ಲೊಮಾ ಕೋರ್ಸ್‌ಗಳು ಲಭ್ಯವಿದೆ. ಕೆ.ಎಸ್. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಯ ಪದವಿ ಕೋರ್ಸ್‌ಗಳಾದ ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ಸ್ ಎಂಜಿನಿಯರಿಂಗ್ ಮತ್ತು ಮೆಕಾನಿಕಲ್ ಎಂಜಿಯರಿಂಗ್ ವಿಭಾಗಕ್ಕೆ ಎನ್‌ಬಿಎ ಮಾನ್ಯತೆ, ಕೆ.ಎಸ್. ಸ್ಕೂಲ್ ಆಫ್ ಎಂಜಿನಿಯರಿಂಗ್ ಸಂಸ್ಥೆಗೆ ನ್ಯಾಕ್ ಮಾನ್ಯತೆ ಸಿಕ್ಕಿದೆ.

‘ಉನ್ನತ ಗುಣಮಟ್ಟದ ಸಂಶೋಧನೆ, ಅತ್ಯುತ್ತಮ ಮಟ್ಟದ ಉದ್ಯೋಗ ಅವಕಾಶಗಳು, ನವೀನ ಕಲಿಕಾ ವಿಧಾನಗಳ ಮೂಲಕ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಪ್ರೋತ್ಸಾಹ ನೀಡಿದ್ದರಿಂದ ಈ ಮಾನ್ಯತೆಗಳು ಸಿಕ್ಕಿವೆ’ ಎಂದು ಸಂಸ್ಥೆಯ ಅಧ್ಯಕ್ಷರಾದ ರಾಜಗೋಪಾಲ ನಾಯ್ಡು ಮತ್ತು ಕಾರ್ಯದರ್ಶಿ ಆರ್. ಲೀಲಾ ಶಂಕರ್ ರಾವ್ ತಿಳಿಸಿದ್ದಾರೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಹಿಂದೂ ಸಾದರ ಕ್ಷೇಮಾಭಿವೃದ್ಧಿ ಸಂಘವು ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಿದೆ.

ಅರ್ಜಿಗಳನ್ನು ಸಂಘದ ಕೇಂದ್ರ ಕಚೇರಿ ಹಾಗೂ ತಾಲ್ಲೂಕು ಶಾಖೆಗಳಲ್ಲಿ ವಿತರಿಸಲಾಗುವುದು. ಭರ್ತಿ ಮಾಡಿದ ಅರ್ಜಿಗಳನ್ನು ಕಳುಹಿಸಲು ಮಾರ್ಚ್ 3 ಕೊನೆಯ ದಿನ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಎಚ್.ವಸಂತಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಳಾಸ: ಹಿಂದೂ ಸಾದರ ಕ್ಷೇಮಾಭಿವೃದ್ಧಿ ಸಂಘ, 12ನೇ ಬಿ ಮುಖ್ಯರಸ್ತೆ, ಪಶ್ಚಿಮ ಕಾರ್ಡ್ ರಸ್ತೆ, ಮಹಾಲಕ್ಷ್ಮೀಪುರ, ಬೆಂಗಳೂರು.

ಸಂಪರ್ಕ: 9481940073

ಮುನಿರತ್ನ ಮೊದಲು ರಾಜೀನಾಮೆ ನೀಡಲಿ: ಎಎಪಿ ಪಟ್ಟು

ಬೆಂಗಳೂರು: ‘ರಾಜರಾಜೇಶ್ವರಿನಗರದಲ್ಲಿ ನಡೆದಿರುವ ಹಗರಣಕ್ಕೂ ತಮಗೂ ಸಂಬಂಧವಿಲ್ಲ ಎನ್ನುವಂತೆ ಸಚಿವ ಮುನಿರತ್ನ ಮಾತನಾಡಿರುವುದು ಶಿಕ್ಷೆಯಿಂದ ನುಣುಚಿಕೊಳ್ಳುವ ತಂತ್ರ. ಅವರು ಮೊದಲು ರಾಜೀನಾಮೆ ನೀಡಲಿ. ಮತ್ತೆ ಸಮಜಾಯಿಷಿ ನೀಡಲಿ’ ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ಬೆಂಗಳೂರು ನಗರ ಘಟಕದ ಅಧ್ಯಕ್ಷ ಮೋಹನ್ ದಾಸರಿ ಹೇಳಿದರು.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮುನಿರತ್ನ 2013ರಿಂದಲೂ ರಾಜರಾಜೇಶ್ವರಿ ನಗರದ ಶಾಸಕರಾಗಿದ್ದಾರೆ. ಕಾಂಗ್ರೆಸ್‌ನಿಂದ ಗೆದ್ದು ಬಿಜೆಪಿಯ ಆಮಿಷಕ್ಕೊಳಗಾಗಿ, 2019ರಲ್ಲಿ ಅನರ್ಹಗೊಂಡ ನಂತರವೂ ಅವರು ಅಧಿಕಾರ ಚಲಾಯಿಸುತ್ತಿದ್ದರು. ಆ ಅವಧಿಯಲ್ಲೂ ಶಾಸಕರಂತೆ ಅಧಿಕಾರಿಗಳ ಸಭೆ ನಡೆಸಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಆದರೆ, ಅವರು ತನಗೆ ಸಂಬಂಧವೇ ಇಲ್ಲದಂತೆ ಹೇಳಿಕೆ ನೀಡುತ್ತಿದ್ದಾರೆ’ ಎಂದರು.

‘ಸಂಸದ ಡಿ.ಕೆ.ಸುರೇಶ್‌ರನ್ನು ಎಎಪಿ ಏಕೆ ಪ್ರಶ್ನಿಸುತ್ತಿಲ್ಲ ಎಂದಿರುವ ಮುನಿರತ್ನ ಅವರ ಪ್ರಶ್ನೆ ಹಾಸ್ಯಾಸ್ಪದ. ಲೋಕಾಯುಕ್ತರಿಗೆ ಸುರೇಶ್ ಅವರೇ ದೂರು ನೀಡಿರುವಾಗ ಅವರನ್ನು ಪ್ರಶ್ನಿಸುವ ಪ್ರಮೇಯವೇ ಬರುವುದಿಲ್ಲ. ಡಿ.ಕೆ.ಸುರೇಶ್ ಅವರ ಅಕ್ರಮಗಳನ್ನು ಮುನಿರತ್ನ ಬಯಲಿಗೆಳೆದರೆ, ಆ ಅಕ್ರಮಗಳ ವಿರುದ್ಧವೂಆಮ್‌ಆದ್ಮಿಪಕ್ಷಹೋರಾಟಕ್ಕೆ ಸಿದ್ಧ’ ಎಂದು ಹೇಳಿದರು.

‘ಮುನಿರತ್ನ ಸಚಿವ ಹಾಗೂ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಅಥವಾ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರೇ ಉಚ್ಚಾಟಿಸಬೇಕು. ಇದಕ್ಕಾಗಿ ಫೆಬ್ರುವರಿ 26ರಂದು ರಾಜರಾಜೇಶ್ವರಿ ನಗರದಿಂದ ಬೃಹತ್ ಪ್ರತಿಭಟನೆ ಮೆರವಣಿಗೆ ಹಮ್ಮಿಕೊಂಡಿದ್ದೇವೆ’ ಎಂದರು.

WANTED

A Group of professionally managed CBSE and STATE Board Schools invites applications for the posts of

PRINCIPAL FOR CBSE SCHOOL :
Qualification : Master's Degree with B.Ed/M.Ed.
Experience : Minimum 5 Years as Principal / Vice Principal in reputed CBSE School, aged below 50years.

TEACHERS :
Trained and experienced Graduate / Post Graduate Teachers.

SUBJECT : Physics, Chemistry, Mathematics, Biology, History, Economics, Geography, Social, Sanskrit, English, Kannada Hindi, Computer Science, NTT and Craft for CBSE / State syllabus.

ATL LAB INCHARGE :
Engineering Background with IT / ROBOTIC knowledge

Remuneration commensurate with qualifications and Experience.
Interested candidates may mail your resume with photograph immediately to

SREE AYYAPPA EDUCATIONAL & CHARITABLE TRUST
Sree Ayyappan Temple Complex, S.M.Road, Jalahalli West, Bangalore-560015, Phone : 080-28391638
E-mail Id: ayyappaedutrust@gmail.com

JSS MAHAVIDYAPEETHA
Jagadguru Dr. Shivarathri Rajendra Circle
Mysore-570 004, Email: jss@jssonline.org

REQUIRED
Director, JSS Jan Shikshan Sansthan, Mysore & Bengaluru

Essential:
1. Minimum II Class Master's Degree from a recognized University
2. Seven years' experience in a supervisory capacity, preferably but not necessarily in the field of education or social sciences
3. Working Knowledge of the local language both written and spoken
4. Age : Maximum 55 years.

Emoluments: Consolidated Salary of Rs. 30,000/- per month.

Apply within 30 days from the date of publication of this advertisement to **The Executive Secretary, JSS Mahavidyapeetha, Dr. Sri Shivarathri Rajendra Circle, Mysore-570004** or e-mail: **dse@jssonline.org**
For for more information visit: **www.jssonline.org**

Date: 03-02-2022
Sd/-
Executive Secretary

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ವಿಶೇಷ ಆಯುಕ್ತರವರ ಕಛೇರಿ, ಘತ್ಯಾನಿ, ಅನೆಕ್ಸ್–3 ಕಟ್ಟಡ, ಕೊಠಡಿ ಸಂಖ್ಯೆ 201,
ಬಿಬಿಎಂಪಿ ಕೇಂದ್ರ ಕಛೇರಿ, ಎನ್.ಆರ್. ಚೌಕ, ಬೆಂಗಳೂರು–560002

ಸಂಖ್ಯೆ: ಕಾಪಾಅ–ಘತ್ಯಾನಿ–5/ಪಿಆರ್/159/2021–22 ದಿನಾಂಕ: 19.02.2022

ಸಾರ್ವಜನಿಕ ಪ್ರಕಟಣೆ
ಸ್ವಚ್ಛ ಭಾರತ್ ಮಿಷನ್ - ಕಸ ಮುಕ್ತ ನಗರ

ಘನ ತ್ಯಾಜ್ಯ ನಿರ್ವಹಣಾ ಸರಪಳಿಯ ಸಮಗ್ರ ಮೌಲ್ಯಮಾಪನದ ಆಧಾರದ ಮೇಲೆ ನಗರ ಅಥವಾ ವಾರ್ಡ್ ಅನ್ನು ಕಸ ಮುಕ್ತ ಎಂದು ಘೋಷಿಸಬಹುದು. ಅಂದರೆ ಪ್ರತಿ ಮನೆಯ ತ್ಯಾಜ್ಯ ಸಂಗ್ರಹ, ನಗರ ಮತ್ತು ವಾರ್ಡ್ ಮಟ್ಟದಲ್ಲಿಯೇ ಮೂಲ ತ್ಯಾಜ್ಯ ವಿಂಗಡಣೆ, ಸಾರ್ವಜನಿಕ, ವಾಣಿಜ್ಯ ಮತ್ತು ವಸತಿ ಪ್ರದೇಶಗಳನ್ನು ಗುಡಿಸುವುದು, ತ್ಯಾಜ್ಯ ಸಂಗ್ರಹ ತೊಟ್ಟಿಗಳು & ಕಸದ ತೊಟ್ಟಿಗಳು, ಬೃಹತ್ ತ್ಯಾಜ್ಯ ಉತ್ಪಾದಕಗಳ ಅನುಸರಣೆ, ವೈಜ್ಞಾನಿಕ ತ್ಯಾಜ್ಯ ಸಂಸ್ಕರಣೆ, ವೈಜ್ಞಾನಿಕ ಭೂ ಭರ್ತಿ ಮತ್ತು ಸಿ & ಡಿ ತ್ಯಾಜ್ಯ ನಿರ್ವಹಣೆಯನ್ನು ಒಳಗೊಂಡಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರವು ಪ್ರಮಾಣೀಕರಿಸಬೇಕಾದ ಪೂರ್ವಾರ್ಹತಾ ಮಾನದಂಡವೇನೆಂದರೆ, ನಗರವು ಯಾವುದೇ ಸ್ಟಾರ್ ರೇಟಿಂಗ್‌ಗೆ ಅರ್ಜಿ ಸಲ್ಲಿಸಲು ಸೂಕ್ತ ಬಯಲು ಮುಕ್ತ ಶೌಚ ಸ್ಥಾನಮಾನವನ್ನು ಹೊಂದಿರಬೇಕು. ಈಗಾಗಲೇ ಒಡಿಎಫ್++ ಪ್ರಮಾಣೀಕರಣಕ್ಕೂ ಅರ್ಜಿ ಸಲ್ಲಿಸಿದೆ.

ಈ ನಿಟ್ಟಿನಲ್ಲಿ ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ಕಸ ಮುಕ್ತ ನಗರ (ಜಿಎಫ್‌ಸಿ) ಪ್ರಮಾಣೀಕರಣಕ್ಕಾಗಿ ಬಿಬಿಎಂಪಿ ಅಂದರೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಸಾರ್ವಜನಿಕರ ಪ್ರತಿಕ್ರಿಯೆ ಮತ್ತು ಅಭಿಪ್ರಾಯಗಳನ್ನು ಕೋರಿದೆ.

ಸಾರ್ವಜನಿಕರು ಕೆಳಕಂಡ ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಲು ಮತ್ತು ತಮ್ಮ ಪ್ರತಿಕ್ರಿಯೆ ಮತ್ತು ಅಭಿಪ್ರಾಯಗಳನ್ನು ಸಲ್ಲಿಸಲು ವಿನಂತಿಸಲಾಗಿದೆ.

ಸಹಿ/–, ವಿಶೇಷ ಆಯುಕ್ತರು, ಘ.ತ್ಯಾ.ನಿ.
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

SCAN AND SHARE YOUR VALUABLE FEEDBACK
Scan the QR Code OR Access the link here : https://bit.ly/Blr-SS2020

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



ಅರ್ಕಾವತಿ • ಬನಶಂಕರಿ • ಜೆ.ಪಿ.ನಗರ • ಹೆಚ್.ಆರ್.ಬಿ.ಆರ್ • ಅಂಜನಾಪುರ • ಹೆಚ್.ಎಸ್.ಆರ್. • ಸರ್.ಎಂ.ವಿಶ್ವೇಶ್ವರಯ್ಯ • ನಾಡಪ್ರಭು ಕೆಂಪೇಗೌಡ ಬಡಾವಣೆ

ಸೇರಿದಂತೆ ಹಲವು ಪ್ರತಿಷ್ಠಿತ ಬಡಾವಣೆಗಳ ಮೂಲೆ ನಿವೇಶನಗಳು ಲಭ್ಯ

ಪ್ರಪಂಚದ ಯಾವುದೇ ಮೂಲೆಯಲ್ಲಿ ಕುಳಿತು ನಿಮ್ಮ ಕನಸಿನ ನಿವೇಶನ ವೀಕ್ಷಿಸಬಹುದು ಮತ್ತು ಖರೀದಿಸಬಹುದು.

ನಿವೇಶನಗಳ ಇ-ಬಿಡ್ಡಿಂಗ್ ಪ್ರಾರಂಭವಾಗಿದೆ

ಪ್ರಕಟಣೆ ಕ್ರಮ ಸಂಖ್ಯೆ	ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ ಮತ್ತು ಸಮಯ	ಇ-ಹರಾಜನ್ನು ಮುಕ್ತಾಯಗೊಳಿಸುವ ದಿನಾಂಕ ಮತ್ತು ಸಮಯ
01 TO 75	02.03.2022 ; 6.00 pm IST	03.03.2022 ; 6.00 pm IST
75 TO 150	03.03.2022 ; 6.00 pm IST	04.03.2022 ; 6.00 pm IST
151 TO 225	04.03.2022 ; 6.00 pm IST	05.03.2022 ; 6.00 pm IST
226 TO 300	05.03.2022 ; 6.00 pm IST	07.03.2022 ; 6.00 pm IST
301 TO 375	07.03.2022 ; 6.00 pm IST	08.03.2022 ; 6.00 pm IST
376 TO 450	08.03.2022 ; 6.00 pm IST	09.03.2022 ; 6.00 pm IST
451 TO 525	09.03.2022 ; 6.00 pm IST	10.03.2022 ; 6.00 pm IST

ಇ-ಹರಾಜಿನಲ್ಲಿ ಭಾಗವಹಿಸಲು ಮತ್ತು ಬಿಡ್ಡಿಂಗ್‌ಗಾಗಿ
https://eproc.karnataka.gov.in
080-46010000 / 22631200 / 68948777
ಇ-ಹರಾಜಿನ ಡೆಮೊ ವೀಡಿಯೊ ಹಾಗೂ ಹೆಚ್ಚಿನ ಮಾಹಿತಿಗಾಗಿ
www.bdabangalore.org
080-23368423 / 23368036

ಮಧ್ಯವರ್ತಿಗಳ ತೊಂದರೆಯಿಲ್ಲ, ನೇರವಾಗಿ ಇ-ಹರಾಜಿನಲ್ಲಿ ಭಾಗವಹಿಸಿ.
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560 020.

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

E-BOOK TODAY AT WWW.MARUTISUZUKI.COM OR VISIT YOUR NEAREST MARUTI SUZUKI DEALERSHIP.

MARUTI SUZUKI AUTHORISED DEALERS: BENGALURU: BIMAL: ITPL ROAD, YELAHANKA, BANASHANKARI, VARTHUR, OLD AIRPORT ROAD, HOSKOTE, CHIKKABALLAPUR, DEVANAHALLI, BAGEPALLI, SIDLAGHATTA, VIJAYPURA, H CROSS, BUDIGERE, GUDIBANDA, HESARGHATTA PH: 080-30693069. **KALYANI:** MYSORE ROAD, BANNERGHATTA ROAD, NAGARBHAVI, BANASWADI, LALBAGH, RAMANAGARAM, CHANNAPATNA, KANAKPURA, BANNERGATTA, BIDADI: 95909 90011. **KATARIA:** KANAKAPURA ROAD, PH: 78990 40000. **MANDOVI:** BASAVANAGUDI, COX TOWN, BASAVESHWARA NAGAR, YELAHANKA, MALUR, KOLAR, GOURIBIDNUR, PH: 97400 30077. **PRATHAM:** HSR LAYOUT, BELLANDHUR, ANEKAL, MAGADI, CHINTAMANI, MULBAGAL, DODDABALLAPUR, SARJAPUR VILLAGE, PH: PH: 9591991199. **RNS MOTORS:** YESHWANTHPUR, BOMMANAHALLI, NELAMANGALA, PH: 9538965804. **SURAKSHAA CAR CARE:** ELECTRONICS CITY, KORAMANGALA, BANGARPET, ATTIBELLE, SRINIVASAPURA, HAROHALLI PH: 8884442299. **VARUN MOTORS:** MALLESHWARAM, HEBBAL, 78991 00200. **TUMKUR: SAKETH:** TUMKUR, CHITRADURGA, TIPTUR, KUNIGAL, GUBBI, HOSADURGA, CHALLAKERE, PH: 9980211099.

*Offer includes consumer offer, exchange bonus and corporate offer (wherever applicable) on selected models/ variants. Above mentioned savings amount is the value of maximum savings on selected models. Terms and conditions apply. The terms and conditions are subject to change without any prior notice. For more details, please contact your nearest ARENA dealership. Accessories and features shown in the pictures may not be part of the standard equipment and may vary according to the variant. Images are for illustration purpose only. Colors shown may vary from actual body colors due to printing on paper. Black Glass Shade on the vehicle is due to the lighting effect. Offers vary across variants. Maruti Suzuki India Limited reserves the right to discontinue offers without notice. Above offers are valid till 28th February, 2022.

ಪದ್ಮನಾಭನಗರ: ಉತ್ಪಾದನಾ ಘಟಕದಿಂದ ₹ 6 ಲಕ್ಷ ದಂಡ ವಸೂಲಿ

ವಿವಿಧೆಡೆ ದಾಳಿ: 200 ಕೆ.ಜಿ ಪ್ಲಾಸ್ಟಿಕ್ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ನಿಷೇಧಿತ ಪ್ಲಾಸ್ಟಿಕ್ ಬಳಕೆ ಮಾಡುತ್ತಿರುವ ಮಳಿಗೆಗಳ ಮೇಲೆ ಬಿಬಿಎಂಪಿ ಅಧಿಕಾರಿಗಳು ದಿಢೀರ್ ದಾಳಿ ನಡೆಸಿದ್ದು, 200 ಕೆ.ಜಿ.ಗಳಷ್ಟು ಪ್ಲಾಸ್ಟಿಕ್ ವಶಪಡಿಸಿಕೊಂಡಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಒಮ್ಮೆ ಮಾತ್ರ ಬಳಸಿ ಬಿಸಾಡುವ ಪ್ಲಾಸ್ಟಿಕ್ ಉತ್ಪನ್ನಗಳನ್ನು ನಿಷೇಧಿಸಲಾಗಿದೆ. ಇಂತಹ ಪ್ಲಾಸ್ಟಿಕ್ ಉತ್ಪನ್ನಗಳನ್ನು ಉತ್ಪಾದಿಸುತ್ತಿರುವ ಘಟಕಗಳು, ಅವುಗಳನ್ನು ಬಳಸುತ್ತಿರುವ ಹಾಗೂ ಮಾರಾಟ ಮಾಡುತ್ತಿರುವ ಮಳಿಗೆಗಳನ್ನು ತಪಾಸಣೆಗೆ ಒಳಪಡಿಸುವಂತೆ ಕಸ ವಿಲೇವಾರಿ ವಿಭಾಗದ ಜಂಟಿ ಆಯುಕ್ತರು ವಲಯ ಮಟ್ಟದ ಅಧಿಕಾರಿಗಳಿಗೆ ಸೂಚನೆ ನೀಡಿದ್ದರು.

ಪಾಲಿಕೆಯ ಎಂಟೂ ವಲಯಗಳಲ್ಲಿ ಮಾರ್ಷಲ್‌ಗಳ ಮೇಲ್ವಿಚಾರಕರು, ವಿಭಾಗದ ಮೇಲ್ವಿಚಾರಕರು, ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳು, ಕಿರಿಯ ಆರೋಗ್ಯ ನಿರೀಕ್ಷಕರು ಹಾಗೂ ಮಾರ್ಷಲ್‌ಗಳನ್ನು ಒಳಗೊಂಡ ತಂಡಗಳು ತಮ್ಮ ವ್ಯಾಪ್ತಿಯ ಮಳಿಗೆಗಳಿಗೆ ಅನಿರೀಕ್ಷಿತ ಭೇಟಿ ನೀಡಿ ತಪಾಸಣೆ ನಡೆಸಿದವು.

ದಕ್ಷಿಣ ವಲಯದ ಪದ್ಮನಾಭ ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ಉತ್ಪಾದಿಸುವ ಎರಡು ಘಟಕಗಳಲ್ಲಿ ಪ್ಲಾಸ್ಟಿಕ್ ಉತ್ಪನ್ನಗಳನ್ನು ಅಧಿಕಾರಿಗಳು ವಶಪಡಿಸಿಕೊಂಡು ದಂಡ ವಿಧಿಸಿದ್ದಾರೆ. ಪದ್ಮನಾಭನಗರ ವಾರ್ಡ್‌ನಲ್ಲಿ ಸುಬ್ರಹ್ಮಣ್ಯಪುರ ಮುಖ್ಯ ರಸ್ತೆ ಬಳಿಯ ಅಗ್ರಿ ಎಂಟರ್‌ಪ್ರೈಸಸ್ ಘಟಕದಲ್ಲಿ ನಿಷೇಧಿತ ಪ್ಲಾಸ್ಟಿಕ್ ಬಳಸುತ್ತಿರುವುದು ಕಂಡುಬಂದಿತ್ತು. ಹಳೆಯ ದಂಡ ₹ 5 ಲಕ್ಷ ಹಾಗೂ ಹೊಸದಾಗಿ ₹ 1 ಲಕ್ಷ ದಂಡ ಸೇರಿದಂತೆ ಒಟ್ಟು ₹ 6 ಲಕ್ಷ ಮೊತ್ತದ ಚೆಕ್ ಅನ್ನು ಅಧಿಕಾರಿಗಳು ಈ ಸಂಸ್ಥೆಯ ಮಾಲೀಕರಿಂದ ಪಡೆದುಕೊಂಡಿದ್ದಾರೆ. ಮಳಿಗೆಯಲ್ಲಿದ್ದ 200 ಕೆ.ಜಿ ನಿಷೇಧಿತ ಪ್ಲಾಸ್ಟಿಕ್ ಉತ್ಪನ್ನಗಳನ್ನು ವಶಪಡಿಸಿಕೊಂಡಿದ್ದಾರೆ.

ಪದ್ಮನಾಭ ನಗರ ವಾರ್ಡ್‌ನ ಗೌಡನಪಾಳ್ಯದ ಬಳಿಯಿರುವ ಗ್ರೇಸ್ ಪಾಲಿಮರ್ಸ್ ಘಟಕದಲ್ಲೂ ನಿಷೇಧಿತ ಪ್ಲಾಸ್ಟಿಕ್ ಬಳಸುತ್ತಿರುವುದು ಕಂಡುಬಂದಿದ್ದು, ಈ ಮಳಿಗೆಗೆ ₹ 25 ಸಾವಿರ ದಂಡ ವಿಧಿಸಲಾಗಿದೆ.

ಪದ್ಮನಾಭನಗರದಲ್ಲಿ ಪ್ಲಾಸ್ಟಿಕ್ ಉತ್ಪನ್ನ ತಯಾರಿಸುವ ಘಟಕವನ್ನು ಬಿಬಿಎಂಪಿ ಅಧಿಕಾರಿಗಳು ಪರಿಶೀಲಿಸಿದರು

ವಾಹನ ಡಿಕ್ಕಿ: ಚಿರತೆ ಸಾವು

ಹನೂರು (ಚಾಮರಾಜನಗರ): ಬಿಳಿಗಿರಿರಂಗನಾಥ ಸ್ವಾಮಿ ದೇವಾಲಯ (ಬಿಆರ್‌ಟಿ) ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿರುವ, ತಾಲ್ಲೂಕಿನ ಗುರುಮಲ್ಲಪ್ಪನ ದೊಡ್ಡಿ ರಸ್ತೆಯಲ್ಲಿ ಸೋಮವಾರ ರಾತ್ರಿ ವಾಹನವೊಂದು ಡಿಕ್ಕಿ ಹೊಡೆದು ಗಂಡು ಚಿರತೆ ಮೃತಪಟ್ಟಿದೆ.

ಲೊಕ್ಕನಹಳ್ಳಿಯಿಂದ ತಮಿಳುನಾಡಿನ ಸತ್ಯಮಂಗಲಕ್ಕೆ ಸಂಪರ್ಕ ಕಲ್ಪಿಸುವ ರಾಜ್ಯ ಹೆದ್ದಾರಿಯಲ್ಲಿ ಚಿರತೆ ಸತ್ತು ಬಿದ್ದಿರುವುದನ್ನು ಕಂಡ ಸ್ಥಳೀಯರು ಅರಣ್ಯ ಇಲಾಖೆಗೆ ಮಾಹಿತಿ ನೀಡಿದರು. ಬಿಆರ್‌ಟಿಯ ಬೈಲೂರು ವಲಯದ ಸಿಬ್ಬಂದಿ ಪರಿಶೀಲನೆ ನಡೆಸಿದರು.

ದೇವಸ್ಥಾನಕ್ಕೆ ಭೂಮಿಪೂಜೆ

ಪ್ರಜಾವಾಣಿ ವಾರ್ತೆ

ಯಲಹಂಕ: ಕಾಡಿಗಾನಹಳ್ಳಿಯ ಬೃಂದಾವನ ಬಡಾವಣೆಯಲ್ಲಿ ವಿನಾಯಕ-ಸಾಯಿಬಾಬ ದೇವಸ್ಥಾನ ನಿರ್ಮಾಣ ಕಾಮಗಾರಿಗೆ ಸಂಸದ ಡಿ.ವಿ.ಸದಾನಂದಗೌಡ ಮತ್ತು ಶಾಸಕ ಕೃಷ್ಣ ಬೈರೇಗೌಡ ಭೂಮಿಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಸದಾನಂದಗೌಡ, 'ಯಾಂತ್ರಿಕ ಯುಗದಲ್ಲಿ ಎಲ್ಲರ ಮನಸ್ಸಿಗೂ ಶಾಂತಿ, ನೆಮ್ಮದಿ ಮತ್ತು ಸಂತೋಷ ಅಗತ್ಯವಾಗಿ ಬೇಕಾಗಿದೆ. ಸೇವಾ ಮತ್ತು ದೇವಕಾರ್ಯದಲ್ಲಿ ತೊಡಗಿಸಿಕೊಳ್ಳುವುದರಿಂದ ಇವೆಲ್ಲವೂ ಸಿಗಲು ಸಾಧ್ಯವಾಗಲಿದೆ' ಎಂದರು.

ಕೃಷ್ಣ ಬೈರೇಗೌಡ ಮಾತನಾಡಿ, 'ಎಲ್ಲರೂ ಸ್ಥಿತಿವಂತರಾಗಿ ಎಲ್ಲವನ್ನೂ ಸಂಪಾದಿಸಿದ್ದರೂ ಜೀವನದಲ್ಲಿ ನೆಮ್ಮದಿ ಇಲ್ಲದಂತಾಗಿದೆ. ದೇವಸ್ಥಾನ ನಿರ್ಮಾಣಕ್ಕಾಗಿ ದಿವ್ಯಭಾರತ್ ಟ್ರಸ್ಟ್‌ನಿಂದ 7 ಸಾವಿರ ಅಡಿ ಹೃದಯ ವೈಶಾಲ್ಯ ತೋರಿದ್ದಾರೆ' ಜಾಗವನ್ನು ದಾನ ನೀಡುವ ಮೂಲಕ ಎಂದು ಹೇಳಿದರು.

ಯಲಹಂಕ ಸಮೀಪದ ಕಾಡಿಗಾನಹಳ್ಳಿಯ ಬೃಂದಾವನ ಬಡಾವಣೆಯಲ್ಲಿ ವಿನಾಯಕಸಾಯಿಬಾಬ ದೇವಸ್ಥಾನ ನಿರ್ಮಾಣ ಕಾಮಗಾರಿಗೆ ಶಾಸಕ ಕೃಷ್ಣಬೈರೇಗೌಡ ಭೂಮಿಪೂಜೆ ನೆರವೇರಿಸಿದರು. ಬೃಂದಾವನ್ ಸಮೂಹ ಕಂಪನಿಗಳ ವ್ಯವಸ್ಥಾಪಕ ನಿರ್ದೇಶಕ ಆರ್‌.ಸತ್ಯನಾರಾಯಣರಾಜು, ಬೃಂದಾವನ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಉದಯಶಂಕರ್, ಪ್ರಧಾನ ಕಾರ್ಯದರ್ಶಿ ಶಿವಾನಂದ ಮಠಪತಿ ಇದ್ದರು

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

REQUIRED PHYSICS chemistry mathematics Biology teachers for Pre University/ NEET classes, excellent remuneration, send your details WhatsApp only (don't call) 8762424646 deevige Malleswaram

SILICON CITY COLLEGE
(Institution of MJ Education Trust)
Accredited By NAAC with 'A' Grade
Recognised under Section 2(f) & 12(B) by UGC, Affiliated to Bengaluru North University
Empowerment Through Knowledge
Walk in Interview
Applications are invited for the following positions in Commerce, Management, Mathematics, Statistics, Computer Science, Kannada and English with requisite qualifications
Assistant Professor: M.Com, MBA, M.Sc/MCA, M.Sc (Mathematics / Statistics), MA (Kannada / English)
Associate Professor: M.Com, MBA, M.Sc (Mathematics / Statistics), MA (Kannada / English) with NET/SLET/PhD
Professor: M.Com, MBA, M.Sc (Mathematics / Statistics), MA (Kannada / English) with PhD
Experience: Candidates must have minimum 3 years of teaching experience in the respective disciplines.
System Admin: Minimum of 2 years experience in Educational Institutions, Good Communication Skills, Expertise in Hardware and Networking
Front Office Executive: Good Communication Skills, Computer knowledge, Tally & Typing proficiency in English & Kannada.
Candidates fulfilling the above requirements may attend walk-in-interview and demo along with their original testimonials and recent passport size photo on Sunday 27th February, 2022 between 9.30 AM to 1 PM
Silicon City College, #26/2 Ravindra Layout, Near Police Quarters, K R Puram, Bengaluru - 560 036.
PH: 8147093466, 8147093467, 7411072259
Email id: chairman@siliconcitycollege.ac.in
www.siliconcitycollege.ac.in

MANGALORE PU COLLEGE
TAPROOT COLLEGE
Ullal Main Road | Yelahanka | C V Raman Nagar
MIPU & TAPROOT Colleges requires following qualified & committed facilitators

AGM Academics	15+ years of experience- PU Board
Subject Matter Experts	8 to 10 years - Teaching the subjects at Board level. To help us in material, scheduling, QP and timetable
Principal	M.Com/MBA/Ph.D having 10 years of teaching experience in a degree college
Asst. Professors	To teach B.com/BBA/BCA courses, PG/Ph.D in respective subjects
Lectures	Subjects - Physics, Chemistry, Biology, Computer Science, English, Kannada, Sanskrit, Hindi, Accountancy, Business Studies, Economics, Statistics, Basic Mathematic, Minimum experience of 3+ years
Instructors	Lab assistants, System Management Executive, Accountant, DTP operators having knowledge in word and pagemaker.
Librarian	Qualification: PG in library science with 5 years of experience
Office Assistants	All college branches. Any undergraduate can apply. 1+ years of experience

Link to Apply -careers@orchids.edu.in

HOLY ANGEL'S High School #2, 5th Main, 4th Cross, R.P.C Layout, Vijayanagar, Bengaluru-560104. Phone : 23404465, 23405556, 23202042 E-mail: holyangels.highschoolrpclayout@gmail.com Requires Experienced Teachers to handle Hindi, English, Kannada,Social-Science, Computer-Science, Mathematics for Primary, Higher Primary & High School for the Academic year 2022-2023. STATE & ICSE. Qualification : B.A/B.Sc.,M.A/M.Sc., B.ED/M.Ed and BCA/MCA. Only English medium candidates need apply.

NEW CAMBRIDGE INTERNATIONAL PUBLIC SCHOOL
CA Site No: 6 (P), WOC Road, II Stage, Mahalakshmipuram, Bangalore -560086.
Contact: 9886006459 / 9845087439 / 8660136247
E-mail: info@ncips.in
REQUIRED TEACHERS
Vice Principal post with subject expertise English & Social.
And Teachers (Bsc / BA, B.Ed) with minimum 5 years Exp handling CBSE board in English and Social.
Sanskrit Teacher (BA/MA, B.Ed) for Class 5 to 8

WANTED
Female Teacher for
SCIENCE & ENGLISH
ESI, PF and Accommodation Facility available
Swamy Vivekananda English Medium High School
Krishnayanapalya, Near Byyappanahalli Railway & Metro station, Old Madras Road. Bangalore-38
M-8951406438, 7619612115
msmani46@gmail.com

WANTED TEACHERS for ISC with B.A, M.A (ECONOMICS), B.Ed. and B.Sc, M.Sc (PHYSICS) B.Ed. Apply- SACRED HEART GIRLS' HIGH SCHOOL (ICSE, ISC), Bangalore-25 Phone:-810585 0131 shghs2016@gmail.com

REQUIRED EXPERIENCED TEACHERS HIGH_SCHOOL: Academic Co-ordinator, Social,English,Science. PRIMARY: EVS,English,PT. NURSERY:Academic Counselor,Teacher and Security Guard.Walk-in: ROYAL PUBLIC SCHOOL, Jnanabharathi,B'lore-56. #9035033560,9986494290

WANTED B.PHARMA STAFF For REPUTED COLLEGE Bangalore Handsome Salary, Walk-in interview, Spot Appointment: 7619472919 9342680178

Little Lillys Education Society
Vidyaranyapura
Requires Trained Lady Teachers with Experience for Nursery, **Higher Primary**: Hindi & Kannada, **High School**: G.S, Maths, S.S, with Excellent English
Salary: 2.4 To 3.6 Per Annum
Mahalakshmi Layout
Requires Trained Lady Teachers with Experience for **Higher Primary**: English, Maths, **High School**: English, S.S, Kannada, Office Assistant with Accounts Background with Excellent English
Salary: 3 To 3.6 Per Annum
Contact: 9535498177 9731558585 6363935893

SANSKRIT TEACHERS needed for Chitrakoota CBSE School in Nagarbhavi, Kengeri Ring Road, with high salary. Immediately or for the next academic year. Call: 7829647333 WALK-IN WELCOME.

ENGLISH SOCIAL Science PRIMARY/ HIGH SCHOOL TEACHERS Bhoruka English School, Madanayakanahalli, Tumkur Road.Whatsapp resume: 8088201545.

Wanted Experienced Lady Teachers with excellent communication skills in English
1. Lower Primary
Graduate with B.Ed./D.Ed.
2. Higher Primary
Graduate with B.Ed. to teach English and Social Science.
3. High School
Post Graduate with B.Ed. to teach Hindi, English and Social Science.
4. Front Office Receptionist
Graduate in Computer Applications
5. Librarian
Graduate/Post-Graduate in Library Science with a passion for reading.
Walk-in Interview
Feb 24th and 25th, 2022
Thursday and Friday
Between 3 p.m. - 4 p.m.
Or Email your resume to enquiry@florenceschool.in for an appointment.
Florence High School
3rd Block, 3rd Stage, Basaveshwaranagar, Bengaluru-560 079
Tel : 080-23236160/41536693

AURO MIRRA INTERNATIONAL SCHOOL (CBSE)
Invites applications for
- Vice Principal
- Academic Coordinator
- Maintenance Manager
- Transport Manager
- Video Editor
- System / IT
- Admin Executive
- House Keeping Executive
- HOD / Teacher - English
- HOD / Teacher - Math
- Teachers- English, Math, Science, Sanskrit, Social Sc, Hindi, Computer Sc, Librarian & P.E

Apply to: jobs@amis.auroschools.org enquiries@amis.auroschools.org
110, Gangadhar Chetty Road, Ulsoor, Bangalore - 560 042
https://amis.auroschools.org
080 – 2558 0888 / 77609 77548

HINDI & MATHS Language TEACHERS needed for Chitrakoota CBSE School in Nagarbhavi, Kengeri Ring Road, with high Salary. Immediately or for the academic year. Call: 7829647333

General

WANTED B.SC Computer Science candidate,with Experience of 0/2 Year only. Contact: Yukthi Datasoft Pvt.Ltd. Mobile:-7795734869

REQUIRED COMPUTER operator with MS Office knowledge Excellent remuneration send your details (WhatsApp only) 8762424646 (please don't call) Deevige educational institutions Malleshwaram

OPPORTUNITY FOR Retired Officials, Bankers, NRI, Teachers, Professionals, Homemakers, CAs. Earn salary + Incentives. 8095301555

Accounts & Finance

REQUIRE ACCOUNTANT
F.P. Seating Systems Pvt Ltd.
Accounts Assist:
Having 3-4 Years Experience With Basic Knowledge of Billing, Inward, Outward, Invoicing, Bank Related work with Tally Expertise.
G.M Accounts:
15-20 Years Experience Capable Of Handling Accounts Upto Finalization Level For 3 to 4 Companies.
ADDRESS:- No 6/1, Karihobanahalli, Tiglarapalya Main Road.
Intrested candidates mail your resume to below ID
md@fpseatingsystems.com

WANTED FEMALE Office Assistant Knowing Accounts with Tally Having Fluency In English & Hindi In & Around Rajajinagar Contact: 9108458798/ 23384085

Graphic Designers

WANTED DTP Operator/ Graphic Designer Corel Draw, Illustrator & Photoshop for a Pvt Limited Company in around Rajajinagar Contact: 23307910/ 9108458798

Engg/ Production Technical

WANTED EXPERIENCED Diploma ENGINEERS for Production, Purchase, Marketing, ITI FITTERS, TURNERS, PRESS OPERATORS, HELPERS for Peenya Engineering Industries. Contact: 9448288666 Email: pelconindia@gmail.com

WANTED B.E Candidate from ECE,EEE and CSE,with Experience of 0/2Year only.Contact: Yukthi Datasoft Pvt.Ltd. Mobile:-986934382

Madhu Infotech Where Service Matters
REQUIRES
Executive - Production
Looking for people having min 5 yrs exp. in notebook / Dairy manf. company. Perfectionist in Case Binding, Spiral Binding, Cutting, Pasting, etc Salary Rs. 26,000 - 40,000 per month
Asst. Manager - Production
Looking for people having min 8 -10 yrs exp. in notebook/Dairy manf. company. Should be Perfectionist in Case Binding, Spiral Binding, Cutting, Pasting, etc and capable of handling Production, Team and Execute Orders to Perfection. Salary Rs. 35,000 - 50,000 per month
Mail your resume to hr@madhuinfotech.com
Call: 9071703311
Work location Kudlu Gate – Hosur Road Bangalore

Marketing & Sales

MATRIX MEDICAL SYSTEMS, Leading Medical Equipment Solution Providers are looking for SALES PERSONNEL for Bangalore & Mangalore region. Qualification: Bachelors Degree in Science/ Diploma in Engineering, Experience: 1 or 2years, preferably in medical field Fluency in English & Kannada. Those Interested may send Bio-data to: matrixmedsystems@gmail.com

REQUIRED MARKETING officers for admission process, Excellent remuneration, send your details WhatsApp only 8762424646 (please don't call) DEEVIGE educational institutions Malleswaram also required digital marketing experts

JOB OPPORTUNITY in leading Real estate company for Telesales / Telemarketing role. Please send your profile to smita@casagrand.co.in

PEST-CONTROL CO @ Horamavu REQUIRES M/F SALESREP-CUM-OFFICE ASSISTANT_with_Computer Knowledge,TWO-WHEELER PREFERRED.Contact: 9379434433/6364647557.

AN HONEST Working Salesman for Hitech Paint Industries, Peenya. Experience with Similar Field Required. Contact: 9844017838

Receptionist/ Secretary

POPULAR HAEID requires professionally qualified front office administrator cum receptionist with accounts background. Immediate placement with handsome salary.Call Or WhatsApp resume to+91 9880007134

REQUIRED telecallers for admission process excellent remuneration send your details WhatsApp only (don't call) 8762424646 Deevige educational institutions Malleswaram

WANTED RECEPTIONIST with minimum 2 years experience and computer knowledge for an office at 4th Block Jayanagar. 9844076925.

Wanted

WANTED EXPERIENCED Kannada and English Female Typist Timings: 11. Am To 7.PM around Rajajinagar, Mahalakshmi Layout and Shankara Mutta Contact: 9448116763/ 7019835825

REAL ESTATE SELLING

Flat

J P Nagar

1100 SFT, North facing Semi furnished Flat for Sale at JPNagar & Bank Loan Available, A-Khata & OC CC Available, Immediate ready to move, Owner going Abroad. Contact- 6362961311/ 9901050888.

House

Anjanapura

600 SFT, East facing BDA Property is for Sale at Anjanapura. Brokers Excuse. Contact on 6362961311/ 9901050888.

J P Nagar

J.P.NAGAR FIRST Phase 40x60 South old House,Vacant Site 20x30 East BDA Sixth Phase Murali: 9845232711

Kumaraswamy Layout

20X30 BDA House for Sale at Kumaraswamy Layout, West Facing G+3, fully furnished with Car Parking. 7899156466

Industrial & Factory

J P Nagar

SALE- INDUSTRIAL PLOT 4000/ 6000/ 8000sft Pipeline Road, Jaraganahalli, near JP-Nagar Metro station. Call Verna Developers: 9620253180/ 9353128035

Sites

Yelahanka

SALE BDA approved North Facing 1427 sft Site Jayasurya Nagar, Iii Phase 'A' Block, (Vidhana Soudha Layout) at Agrahara, Yelahanka, Bangalore, Contact 9535773366, 9448488818

AUTOMOTIVE

Four Wheelers Selling

Others

QUOTATIONS REQUIRED for with & without RC /AP16 CF9729/ 2012/ Nissan sunny DCIXVBSIV Accident vehicle, Contact: 8332816999/ 9844080129

BUSINESS

Business Offers

Finance

WANTED BUSINESS Partner Non Veg Hotel 5 to 10 Lakhs Investment Daily Income: 9606701007/ 8892501007

NRI'S INVESTMENT And Finance Available On Low Interest Against Properties, Land & Building, Sites, Flats, Converted& Agriculture Lands Call: 7411265189

General

IF YOU Have Any Ecommerce Idea Contact Us For Investment 9342546425 7760780309

PUBLIC NOTICE

ELCITA
TENDERS INVITED BY ELECTRONICS CITY INDUSTRIAL TOWNSHIP AUTHORITY (ELCITA), BANGALORE
ELECTRONICS CITY INDUSTRIAL TOWNSHIP AUTHORITY (ELCITA), having its office at Sy. No. 7 (P), West Phase, Electronics City, Bangalore: 560 100 is invited tender as detailed below:

Sl.No	Tender name	Tender number	Last date to apply	Closing timings
1	Tender for providing House Keeping Services by using essential manpower and appropriate equipment within the jurisdiction of E-City Industrial Township Area Electronics City, Bangalore-560 100, Karnataka.	ELCITA/UDD/ 2021-22/ house keeping_0802	05.03. 2022	17.00 hrs

Details of the Tenders can be downloaded from the e-procurement **website eproc.karnataka.gov.in** under Urban Development Department- Electronics city Industrial Township Authority.
Also, details are available in **www.elcita.in**
For queries Contact: 080-4660 2222 / write to: estate.am@elcita.in and cso@elcita.in-

PUBLIC NOTICE
My client entered into Sale Agreement to purchase the Schedule Property from Smt, PREMA W/o. Devaraju and Sri. SUNIL KUMAR .D S/o Devaraju, Both are residing at Budigere Village, Channarayapatna Hobli, Devanahalli Taluk, Bangalore Rural District. This Notice is hereby given for the information of General Public that any Persons or Banks or Financial Institutions or any statutory authorities having any right, title, interest or claim against the Schedule Property, may contact with documentary proof in support of his/her/their claim. If no claim is so lodged with us within the said period of 15 days from this date of publication, it shall be presumed by my client that no one has any claim against the Schedule Property.
SCHEDULE PROPERTY
All that piece and parcel of immovable property of agricultural dry land bearing Survey No. 50/1, presently assigned as New Survey No.50/20, situated at M.Hosahalli Village, Jala Hobli, Bangalore North Taluk, presently Yelahanka Taluk, Bangalore measuring 1 Acre 33 Guntas.
Bounded on: East By: Survey No.50/2 West By: Survey No.50/1 and Government Naala North By: Road South By: Old Survey No.50/1, New Survey No. 50/21
Sd/-
P. Narasimhaiah, Advocate,
No.1,18th Cross, Malleswaram, Bangalore- 560055
Phone: 080 23343461/ 080 23343467
E-mail: p.narasimhalah@yahoo.com
Place.- Bangalore Date .- 23.02.2022

ADMISSION CORNER

ADMISSIONS OPEN 2021-2022
Govt. Recognised Diploma Courses
LABORATORY / RADIOLOGY OPHTHALMIC / OPERATION THEATER DIALYSIS TECHNICIAN COURSES
Eligibility & Duration: 3 years for SSLC & 2 years for PUC (Science)
SIDDAGANGA INSTITUTE OF PARAMEDICAL SCIENCES
(Recognised by Ministry of Medical Education, Govt of Karnataka)
43, Narasimhaswamy Layout, Service Road, Near Laggere Last Bus Stop, Laggere, Bengaluru-560058
LAST DATE FOR ADMISSIONS: 28-2-2022 | CALL: 9844068838
SGGNG-21206

EDUCATIONAL

Admission

ONE SITTING: B.Sc (Paramedical All/ Agriculture/ Hotel/ Hospital Management/ Yoga/ IT/CS). D.Pharma/ B.Pharma/ BPT/DPT/ DMLT/BYNS/ B.Tech/ MBA/ BBA/BCA/ SSLC/PU. Asha Academy: Bangalore. 9448460103/ 7093438248

Correspondence Courses

PASS IN ONE YEAR! LL.B/LL.M/B.Tech/M.Tech/ Diploma/M.Phil/MBA/MCA/ M.Sc/BCA/BBA/B.Sc/B.Com/ 10th/ PU (NIOS). Asha Academy, Bangalore: 9448460103/ 7093438248

PERSONAL

Change of Name

CHANGE OF NAME
I, KAVITHA GANESAN D/o. Ganesan Sundaresan, Residing at F103, 2nd Main, Syndicate Bank Colony, Omkar Nagar, Arekere, Bannerghatta Road, Bangalore-76, have changed my name to KAVITA GANESAN vide affidavit dated 22.02.2022, before Notary N. Narayana Swamy, Bangalore. Henceforth, I shall be called KAVITA GANESAN only.

VDAIYAPPAN, FATHER/O, 6493082W, HAV/ ASH, U SENTHIL KUMAR, Vill- Soochani, Thiruvadanai, Ramanathapuram, Tamil Nadu, changed name from VDAIYAPPAN to UDAIYAPPAN, 21/02/2022, Notary K. V. Mani, Bangalore

I, HARISH KUMAR. S Residing at #2, Police Quarters, Krishnananda Nagar, Nandini Layout, Bengaluru- 560096, have changed my name to HARSHAD vide affidavit dated 22.02.2022, before notary A.C. Subbu Swamy, Bangalore. Henceforth I shall be called HARSHAD only.

MUTHULAXMI, MOTHER/O, 6493082W, HAV / ASH, U SENTHIL KUMAR, Vill- Soochani, Thiruvadanai, Ramanathapuram, Tamil Nadu, changed name from MUTHULAXMI to MUTHULAKSHMI UDAIYAPPAN, 21/02/2022, Notary K. V. Mani, Bangalore

LAKSHMI DEVI, Wife/o, JC671638N, SUB/ MT, ABBURI MALAKONDAIAH, Vill- Komarole, Giddalur, Prakasam, Andhra Pradesh, changed name from LAKSHMI DEVI to ABBURI LAKSHMI DEVI, 21/02/2022, Notary K. V. Mani, Bangalore

I, NICHOLAS JOSEPH FERNANDES, residing at Hassan-573127 have changed my name as NICHOLAS FERNANDES, vide affidavit dated 22/02/2022 before Notary P.C.Ramaiah, Bangalore

I, RAVI S/o. Late. Bose Gowda, residing at Badagalahundi Village, Varuna Hobli, Mysore Taluk, Mysore District- 570010, have changed my name to HUCHAIAH, vide affidavit dated 22.07.2021, before notary V. Srinivasa Reddy, Bangalore.

I, JAISIRANI. S R/o. #161, 9th cross, 13th Main, V.S.Garden, J.J.R.Nagar, Bengaluru-26, have changed my name to S. SHIYAMALA DEVI, affidavit 22.10.2021, before XXXII Additional Chief Metropolitan Magistrate, Bengaluru.

I, CHANDRAKANTHA BHAT Residing at A-403, Century Marvel Apt, Opp. Sindhi School, Hebbal, Kempapura, Bangalore-24, have changed my name to M. CHANDRAKANTHA BHAT vide affidavit dated 22.02.2022, before notary L. Gopalakrishna, Bangalore. Henceforth I shall be called M. CHANDRAKANTHA BHAT only.

Lost

LOST
I, Roopa. C, R/at. # 011, Gopalan Brindavan Aprt. Amarjyothi Nagar, Blr-79, Have lost my Original Gift Deed & BBMP Katha Certificate of Site No.16 & 17, Katha No.588/68/2, Document No: KEN-1-04114-2021-22, Book-1, CD No. KEND1377. Reg. on 18.09.2021 in Kengeri Sub Registrar office. Site located at Vajarahalli Village, Uttarahalli Hobli. If Found pls Contact: 9343364401.

ಕಳೆದಿದೆ
ಮಹೇಶ್ ಎಂ. ಆದ ನಾನು ಮಾಕಳಿ ಗ್ರಾಮ, ದಾಸನಪುರ ಹೋಬಳಿ ಬೆಂಗಳೂರು ಉತ್ತರ ತಾಲ್ಲೂಕು ಬೆಂಗಳೂರು ಜಿಲ್ಲೆ ಇಲ್ಲಿ ವಾಸವಾಗಿದ್ದು ದಿನಾಂಕ 15-01-2022 ರಂದು ಮಾಕಳಿ ಗ್ರಾಮದ ಖಾತೆ ನಂ. 20 ರಲ್ಲಿನ ಪದ್ಮ ಮತ್ತು ಗೀತಾ ಅವರು ಮಂಜುನಾಥ ಅವರಿಗೆ ಕೊಟ್ಟ ಕ್ರಯ ಪತ್ರ ಮನೆ ಬದಲಾವಣೆ ಮಾಡುವಾಗ ಕಳೆದುಹೋಗಿರುತ್ತದೆ. ಯಾರಿಗಾದರೂ ಸಿಕ್ಕಿದ್ದಲ್ಲಿ ಸಂಪರ್ಕಿಸಿ: 9742153819 ಅಥವಾ ಹತ್ತಿರದ ಪೊಲೀಸ್ ಠಾಣೆಗೆ ತಿಳಿಸಿ.

LOST
I, Lakshmi, have lost my Sale Deed No. JGN-1-10731/ 2012-13. Site No. 50 Bilavaradahalli, Shanboganahalli Village, Jigani hobli, Anekal Taluk, Bangalore-83 while transit.
Finders please contact: G.K. Manju Mobile: 9980550270

I, T. Arjun have lost my ICSCE Marks card, Migration Certificate, Pass Certificate, unique id #5836497, index #1153230/016 St.Peter's High School, Kaikondrahalli, Bangalore, year 2015 (ICSCE Board) & PUC Registration no. 300601, year 2017, AECS Magnolia Maruti Pre-University College, while travelling. Finders please contact: 9900541576.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH DECCAN HERALD ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB | LOST | REAL ESTATE | NAME CHANGE | EDU | HEALTH
MATRI | AUTO | ASTRO | NOTICE | TRAVEL
condition apply*
WWW.DHCLASSIFIEDS.COM
For more information Contact:
9880856233 | 9731810277 | 9901641752 | 9845114560 | 9886213331
Email: dhclassifieds@deccanherald.co.in

ಬಿಬಿಎಂಪಿ ವಾರ್ಡ್ ಮರು ವಿಂಗಡಣೆಯಲ್ಲಿ ವಿಳಂಬ ಸರಿಯೇ?

ರಾಜಧಾನಿ ಒಡಲದನಿ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಚುನಾಯಿತ ಕೌನ್ಸಿಲ್ ಅವಧಿ ಅಂತ್ಯಗೊಂಡು ಒಂದು ವರ್ಷ ಐದು ತಿಂಗಳು ಕಳೆದಿದೆ. ಚುನಾವಣೆ ಯಾವಾಗ ನಡೆಯಬಹುದು? ಎಂಬುದು ಯಕ್ಷಪ್ರಶ್ನೆಯಾಗಿಯೇ ಉಳಿದಿದೆ. ವಾರ್ಡ್‌ಗಳ ವಿಂಗಡಣೆ ಪ್ರಕ್ರಿಯೆ ಕುಂಟುತ್ತಾ ಸಾಗಿರುವುದು ಚುನಾವಣೆಗೆ ಅಡ್ಡಗಾಲಾಗಿ ಪರಿಣಮಿಸಿದೆ.

ಹೊರವಲಯದ ಪ್ರದೇಶಗಳನ್ನೂ ಸೇರಿಸಕೊಂಡು ಬಿಬಿಎಂಪಿಯ ವಾರ್ಡ್‌ಗಳ ಸಂಖ್ಯೆಯನ್ನು 198ರಿಂದ 243ಕ್ಕೆ ಹೆಚ್ಚಿಸಲು ರಾಜ್ಯ ಸರ್ಕಾರ ಮುಂದಾಗಿತ್ತು. ನಂತರ ಆ ಪ್ರಸ್ತಾವ ಕೈಬಿಟ್ಟು 198 ವಾರ್ಡ್‌ಗಳಿಗೇ ಚುನಾವಣೆ ನಡೆಸಲು ಮುಂದಾಯಿತು. ಪುನಃ 198 ವಾರ್ಡ್‌ಗಳ ಪ್ರದೇಶದಲ್ಲೇ 243 ವಾರ್ಡ್‌ಗಳನ್ನು ಸೃಷ್ಟಿಸುವ ತೀರ್ಮಾನಕ್ಕೆ ಬರಲಾಯಿತು. ವಾರ್ಡ್ ಮರು ವಿಂಗಡಣೆ ಪ್ರಕ್ರಿಯೆಯಲ್ಲಿ ವಿಳಂಬ ಸರಿಯೇ? ಎಂಬುದರ ಕುರಿತು ವಿವಿಧ ಪಕ್ಷಗಳ ಮುಖಂಡರು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರು ಈ ವಾರದ 'ರಾಜಧಾನಿಯ ಒಡಲ ದನಿ'ಯಲ್ಲಿ ಅಭಿಪ್ರಾಯ ಹಂಚಿಕೊಂಡಿದ್ದಾರೆ.

'ಚುನಾವಣೆ ನಡೆಸುವ ಇಚ್ಛಾಶಕ್ತಿಯ ಕೊರತೆ'

2007ರಿಂದ 2010ರವರೆಗೂ ಬಿಬಿಎಂಪಿಯಲ್ಲಿ ಚುನಾಯಿತ ಪ್ರತಿನಿಧಿಗಳು ಇರಲಿಲ್ಲ. 2020ರ ಸೆಪ್ಟೆಂಬರ್‌ನಿಂದ ಅದೇ ಸ್ಥಿತಿ ಇದೆ. ಕೌನ್ಸಿಲ್ ಸದಸ್ಯರ ಅವಧಿ ಮುಗಿಯುವ ಮುನ್ನವೇ ವಾರ್ಡ್‌ಗಳ ಮರು ವಿಂಗಡಣೆ ನಡೆಸಲು ಸಾಧ್ಯವಿತ್ತು. ಆದರೆ, ಚುನಾವಣೆ ಮುಂದೂಡುವ ಕಾರಣಕ್ಕಾಗಿಯೇ ಸಕಾಲದಲ್ಲಿ ಆ ಕೆಲಸ ಮಾಡಲಿಲ್ಲ. ಆಡಳಿತದ ಚುಕ್ಕಾಣಿ ಹಿಡಿದವರಿಗೆ ಚುನಾವಣೆ ನಡೆಸುವ ಇಚ್ಛಾಶಕ್ತಿ ಇಲ್ಲದಿರುವುದೇ ಈಗಿನ ವಿಳಂಬಕ್ಕೆ ನೇರ ಕಾರಣ.

ಬೆಂಗಳೂರು ನಗರದ ಮೇಲೆ ರಾಜ್ಯ ಸರ್ಕಾರ ಸಂಪೂರ್ಣ ನಿಯಂತ್ರಣ ಹೊಂದಿರಬೇಕೆಂಬ ಉದ್ದೇಶವೂ ವಿಳಂಬದ ಹಿಂದಿದೆ. ಶಾಸಕರು, ಸಚಿವರು ಮತ್ತು ಅಧಿಕಾರಿಗಳ ಇಚ್ಛೆಗೆ ತಕ್ಕಂತೆ ಎಲ್ಲವೂ ನಡೆಯುತ್ತಿದೆ. ಅಧಿಕಾರಿಗಳ ಮೂಲಕವೇ ನಗರದ ಆಡಳಿತ ನಡೆಸಬೇಕೆಂಬ ಸರ್ಕಾರದ ತಂತ್ರಗಾರಿಕೆ ಇದರ ಹಿಂದಿದೆ.

ರಸ್ತೆ ಗುಂಡಿ ಮುಚ್ಚುವುದಕ್ಕೂ ಮುಖ್ಯಮಂತ್ರಿ ಬಳಿ ಹೋಗಬೇಕಾ? ಈ ಪ್ರಶ್ನೆಗೆ ಸರ್ಕಾರವೇ ಉತ್ತರಿಸಬೇಕು. ನಗರದ ವಿಸ್ತಾರ ಮತ್ತು ಜನಸಂಖ್ಯೆಗೆ ಹೋಲಿಸಿದರೆ 400 ವಾರ್ಡ್ ಅಗತ್ಯ. ಆದರೆ, ವೈಜ್ಞಾನಿಕವಾಗಿ, ತ್ವರಿತಗತಿಯಲ್ಲಿ ಮರು ವಿಂಗಡಣೆ ಮಾಡಿ ಚುನಾವಣೆ ನಡೆಸಲು ಸಾಧ್ಯವಿದೆ.

– ಶ್ರೀನಿವಾಸ್ ಅಲವಿಲ್ಲಿ, ಜನಾಗ್ರಹ ಸಂಸ್ಥೆ

'ಹಣ ಲೂಟಿಗಾಗಿ ಚುನಾವಣೆ ವಿಳಂಬ'

ಬಿಬಿಎಂಪಿಯಲ್ಲಿ ಚುನಾಯಿತ ಸದಸ್ಯರಿದ್ದರೆ ಜನರ ಅನುಕೂಲಕ್ಕೆ ಅಗತ್ಯವಿರುವ ಕೆಲಸ ಮಾಡುತ್ತಾರೆ. ಸ್ಥಳೀಯ ಪ್ರತಿನಿಧಿಗಳೇ ಇಲ್ಲದಿದ್ದರೆ ಅನುದಾನದ ಲೂಟಿಗೆ ಅವಕಾಶ ದೊರೆಯುತ್ತದೆ. ಈ ಕಾರಣಕ್ಕಾಗಿಯೇ ವಾರ್ಡ್‌ಗಳ ಮರು ವಿಂಗಡಣೆ ಹೆಸರಿನಲ್ಲಿ ಚುನಾವಣೆ ವಿಳಂಬ ಮಾಡಲಾಗುತ್ತಿದೆ.

198 ವಾರ್ಡ್‌ಗಳಿಗೇ ಚುನಾವಣೆ ನಡೆಸಲು ಸಾಧ್ಯವಿತ್ತು. 243 ವಾರ್ಡ್‌ಗಳನ್ನು ರಚಿಸಬೇಕೆಂಬ ಬೇಡಿಕೆಯನ್ನು ಇಟ್ಟವರು ಯಾರು? ಶಾಸಕರು ಮತ್ತು ಸಚಿವರು ಒಗ್ಗೂಡಿಕೊಂಡು ಚುನಾವಣೆ ತಪ್ಪಿಸಲು ಈ ತಂತ್ರ ಮಾಡಿದ್ದಾರೆ. ಇದರಿಂದಾಗಿ ಅಧಿಕಾರಿಗಳ ಅಂಧಾ ದರ್ಬಾರ್ ಮುಂದುವರಿಯಲು ಅವಕಾಶ ದೊರಕಿದೆ.

ಇನ್ನೂ ವಾರ್ಡ್ ಮರು ವಿಂಗಡಣೆ ಹೆಸರಿನಲ್ಲಿ ಚುನಾವಣೆ ವಿಳಂಬ ಮಾಡುವುದು ಜನಪರವಾದ ನಡೆಯಲ್ಲ. ಬಿಬಿಎಂಪಿ ವ್ಯಾಪ್ತಿಯಲ್ಲಿ ಹಲವು ಸಮಸ್ಯೆಗಳಿವೆ. ಎಲ್ಲವನ್ನೂ ರಾಜ್ಯ ಸರ್ಕಾರದ ಬಳಿ ತೆಗೆದು ಕೊಂಡು ಹೋಗಲು ಸಾಧ್ಯವಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ದುರ್ಬಲಗೊಳಿಸುವ ಇಂತಹ ಪ್ರಯತ್ನವನ್ನು ಕೈಬಿಟ್ಟು, ಚುನಾವಣೆ ನಡೆಸುವುದಕ್ಕೆ ಸರ್ಕಾರ ಆದ್ಯತೆ ನೀಡಬೇಕು.

– ಆರ್. ಪ್ರಕಾಶ್, ಜೆಡಿಎಸ್ ಮುಖಂಡ

'ತ್ವರಿತವಾಗಿ ಚುನಾವಣೆ ನಡೆಸಲೇಬೇಕು'

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇರುವಂತೆಯೇ ಮೂರನೇ ಹಂತದಲ್ಲಿ ಸ್ಥಳೀಯ ಸಂಸ್ಥೆಗಳು ಇರಬೇಕು ಎಂಬುದನ್ನು ಸಂವಿಧಾನವೇ ಹೇಳುತ್ತದೆ. ಸಂವಿಧಾನದ ಮೂಲಕವೇ ಸ್ಥಳೀಯ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದಿವೆ. ವಾರ್ಡ್‌ಗಳ ಮರು ವಿಂಗಡಣೆಯ ಕಾರಣ ನೀಡಿ ಬಿಬಿಬಿಎಂಪಿ ಚುನಾವಣೆ ವಿಳಂಬ ಮಾಡುವುದು ಸಂವಿಧಾನದ ಉಲ್ಲಂಘನೆ ಆಗುತ್ತದೆ.

ಸ್ಥಳೀಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು ಜನರ ಧ್ವನಿಯಾಗಿ ಕೆಲಸ ಮಾಡುತ್ತಾರೆ. ಮಹಾನಗರ ಪಾಲಿಕೆ ಸದಸ್ಯರೇ ಇಲ್ಲದಿದ್ದರೆ ಜನರ ಧ್ವನಿಯೇ ಇರುವುದಿಲ್ಲ. ಸಂಸದರು, ಶಾಸಕರು ಇರಬಹುದು. ಆದರೆ, ಸ್ಥಳೀಯ ಸಂಸ್ಥೆಗಳ ಸದಸ್ಯರು ಇದ್ದಂತೆ ಆಗುವುದಿಲ್ಲ. ಜನರ ನಿತ್ಯದ ಸಮಸ್ಯೆಗಳಿಗೆ ಸ್ಪಂದಿಸಲು ವಾರ್ಡ್ ಮಟ್ಟದ ಪ್ರತಿನಿಧಿಗಳು ಬೇಕು. ವಾರ್ಡ್ ವಿಂಗಡಣೆಯನ್ನು ಪೂರ್ಣಗೊಳಿಸಿ, ತ್ವರಿತವಾಗಿ ಚುನಾವಣೆ ನಡೆಸಬೇಕು.

– ಪದ್ಮನಾಭ ರೆಡ್ಡಿ, ಬಿಜೆಪಿ ಮುಖಂಡ

'ಮರು ವಿಂಗಡಣೆಯಲ್ಲಿನ ಹಸ್ತಕ್ಷೇಪವೇ ವಿಳಂಬಕ್ಕೆ ಕಾರಣ'

ಬಿಬಿಎಂಪಿ ಕೌನ್ಸಿಲ್ ಅವಧಿ ಮುಗಿಯುತ್ತಿದ್ದಂತೆಯೇ ಚುನಾವಣೆ ನಡೆಯಬೇಕಿತ್ತು. ಆದರೆ, ಚುನಾವಣೆಯನ್ನು ಮುಂದೂಡುವ ಏಕೈಕ ಉದ್ದೇಶದಿಂದ ಹೊರ ವಲಯದ ಪ್ರದೇಶಗಳನ್ನೂ ಸೇರಿಸಿಕೊಂಡು 243 ವಾರ್ಡ್‌ಗಳನ್ನು ಸೃಷ್ಟಿಸುವ ಪ್ರಯತ್ನ ಮಾಡಲಾಯಿತು. ಸರಿಯಾದ ಅಂಕಿಅಂಶ, ಜನಸಂಖ್ಯೆಯ ವಿವರ ಮತ್ತು ತಯಾರಿ ಇಲ್ಲದೇ ಪ್ರಕ್ರಿಯೆ ಆರಂಭಿಸಿದ್ದರಿಂದ ಹಿನ್ನಡೆ ಅನುಭವಿಸಿದ ಸರ್ಕಾರ, ಮುಂದೆಯೂ ಹಗ್ಗ ಜಗ್ಗಾಟ ಬಿಡಲಿಲ್ಲ.

198 ವಾರ್ಡ್‌ಗಳನ್ನೇ 243 ವಾರ್ಡ್‌ಗಳನ್ನಾಗಿ ಮರು ವಿಂಗಡಣೆ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಆದರೆ, ಅದನ್ನೂ ರಾಜಕೀಯ ಲೆಕ್ಕಾಚಾರದಲ್ಲೇ ಮಾಡಲಾಗುತ್ತಿದೆ. ಆಡಳಿತ ಪಕ್ಷದ ಅನುಕೂಲಕ್ಕೆ ತಕ್ಕಂತೆ ವಾರ್ಡ್‌ಗಳನ್ನು ವಿಭಜಿಸುವ ಕಸರತ್ತು ನಡೆಯುತ್ತಿದೆ. ರಾಜಕೀಯವಾಗಿ ಯೋಚಿಸಿ ಕೆಲಸ ಮಾಡುತ್ತಿರುವುದೇ ವಿಳಂಬಕ್ಕೆ ಕಾರಣ. ಇದು ಸರಿಯಲ್ಲ. ತಾಂತ್ರಿಕವಾಗಿ ಒಂದೇ ಮಾನದಂಡ ಇರಿಸಿಕೊಂಡು ಪ್ರಕ್ರಿಯೆ ನಡೆಸಬೇಕು. ಸ್ಥಳೀಯ ಸಂಸ್ಥೆಗಳ ಅಧಿಕಾರ ಮೊಟಕುಗೊಳಿಸುವ ಪ್ರಯತ್ನ ನಿಲ್ಲಬೇಕು.

– ಎಂ. ಶಿವರಾಜು, ಕಾಂಗ್ರೆಸ್ ಮುಖಂಡ

ಲಂಚ ಪ್ರಕರಣ: ಬಿಬಿಎಂಪಿ, ಬೆಸ್ಕಾಂನ ನೌಕರರು ಸೇರಿ ಆರು ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡು ಪ್ರತ್ಯೇಕ ಲಂಚ ಪ್ರಕರಣಗಳಲ್ಲಿ ಬಿಬಿಎಂಪಿ ಮತ್ತು ಬೆಸ್ಕಾಂ ಅಧಿಕಾರಿಗಳು, ನೌಕರರು ಸೇರಿದಂತೆ ಆರು ಮಂದಿಯನ್ನು ಮಂಗಳವಾರ ಬಂಧಿಸಿರುವ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ), ₹ 1.60 ಲಕ್ಷ ನಗದು ವಶಪಡಿಸಿಕೊಂಡಿದೆ.

ಮುರುಗೇಶ ಪಾಳ್ಯದಲ್ಲಿರುವ ನಿವೇಶನವೊಂದಕ್ಕೆ 'ಎ' ಖಾತಾ ನೀಡುವಂತೆ ಜೆ.ಪಿ. ನಗರದ ಸನ್ ಸಿಟಿ ನಿವಾಸಿಯೊಬ್ಬರು ಬಿಬಿಎಂಪಿಯ ಕೋನೇನ ಅಗ್ರಹಾರ ವಾರ್ಡ್ (ಸಂಖ್ಯೆ 113) ಕಚೇರಿಗೆ ಅರ್ಜಿ ಸಲ್ಲಿಸಿದ್ದರು. ₹ 30,000 ಶುಲ್ಕ ಮತ್ತು ₹ 1.10 ಲಕ್ಷ ಲಂಚ ನೀಡುವಂತೆ ಅಲ್ಲಿನ ಸಹಾಯಕ ಕಂದಾಯ ಅಧಿಕಾರಿ ಬೇಡಿಕೆ ಇಟ್ಟಿದ್ದರು. ಈ ಕುರಿತು ಅರ್ಜಿದಾರರು ಎಸಿಬಿ ಬೆಂಗಳೂರು ನಗರ ಘಟಕಕ್ಕೆ ದೂರು ನೀಡಿದ್ದರು.

ಅಪರಾಧ ಸುದ್ದಿ

ಬಿಬಿಎಂಪಿ ಅಧಿಕಾರಿಗಳ ಪರವಾಗಿ ಶ್ರೀನಿವಾಸ್ ಎಂಬ ಖಾಸಗಿ ವ್ಯಕ್ತಿ ಲಂಚದ ಹಣವನ್ನು ಪಡೆದುಕೊಂಡರು. ಅವರೊಂದಿಗೆ ಬಿಬಿಎಂಪಿ ಜೀವನಬಿಮಾ ನಗರದ ಉಪ ವಿಭಾಗದ ಸಹಾಯಕ ಕಂದಾಯ ಅಧಿಕಾರಿ ಮೂರ್ತಿ ಮತ್ತು ಕಂದಾಯ ನಿರೀಕ್ಷಕ ಮೊಹಮ್ಮದ್ ಇದ್ರೀಸ್ ಅವರನ್ನು ಬಂಧಿಸಲಾಗಿದೆ ಎಂದು ಎಸಿಬಿ ಮಾಹಿತಿ ನೀಡಿದೆ.

ವಿಚಕ್ಷಣಾ ಅಧಿಕಾರಿಗಳ ಬಂಧನ: ಅಮೃತಹಳ್ಳಿ ನಿವಾಸಿಯೊಬ್ಬರು ಹೈ ಟೆನ್ಷನ್ ವಿದ್ಯುತ್ ಮಾರ್ಗದ ಅಡಿಯಲ್ಲಿ ಮನೆ ನಿರ್ಮಿಸಿದ್ದರು. ಅವರು ತಾತ್ಕಾಲಿಕವಾಗಿ ಪಡೆದುಕೊಂಡಿದ್ದ ವಿದ್ಯುತ್ ಸಂಪರ್ಕದ ಅವಧಿ 2021ರ ಆಗಸ್ಟ್–ಸೆಪ್ಟೆಂಬರ್‌ನಲ್ಲಿ ಅಂತ್ಯಗೊಂಡಿತ್ತು. ಬೆಸ್ಕಾಂ ಅಧಿಕಾರಿಗಳು ವಿದ್ಯುತ್ ಸಂಪರ್ಕ ಕಡಿತಗೊಳಿಸಿದ್ದರು. ಬಳಿಕ ಆ ವ್ಯಕ್ತಿ ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದರು.

ದೂರಿನ ಆಧಾರದಲ್ಲಿ ಸ್ಥಳ ಪರಿಶೀಲನೆ ನಡೆಸಿದ್ದ ಬೆಸ್ಕಾಂ ವಿಚಕ್ಷಣ ದಳದ ಅಧಿಕಾರಿಗಳು, ಮಹಜರು ನಡೆಸಿದ್ದರು. ₹ 1.10 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದ ಅಧಿಕಾರಿಗಳು, ₹ 45,000 ಪಡೆದುಕೊಂಡಿದ್ದರು. ಉಳಿದ ಮೊತ್ತ ನೀಡುವಂತೆ ಪುನಃ ಬೇಡಿಕೆ ಇಟ್ಟಿದ್ದರು. ಕಟ್ಟಡದ ಮಾಲೀಕರಾಗಿರುವ ಮಹಿಳೆಯ ಸಹೋದರ ಎಸಿಬಿಗೆ ದೂರು ನೀಡಿದ್ದರು.

ಮಲ್ಲೇಶ್ವರದಲ್ಲಿರುವ ಬೆಸ್ಕಾಂ ವಿಚಕ್ಷಣಾ ದಳದ ಸಹಾಯಕ ಕಾರ್ಯ–ನಿರ್ವಾಹಕ ಎಂಜಿನಿಯರ್ ನಾಗೇಶ್ ಮತ್ತು ಹೆಡ್ ಕಾನ್‌ಸ್ಟೆಬಲ್ ರಾಜೇಶ್ ಪರವಾಗಿ ಮೊಹಿದ್ದೀನ್ ಆರೀಫ್ ಎಂಬ ಖಾಸಗಿ ವ್ಯಕ್ತಿ ₹ 50,000 ಲಂಚದ ಹಣ ಪಡೆದುಕೊಂಡರು. ಮೂವರನ್ನೂ ಬಂಧಿಸಲಾಯಿತು ಎಂದು ಎಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ರಾಮೋಹಳ್ಳಿಯ ಪುಷ್ಪವನ ಚಾರಿಟಬಲ್ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ ವಾರ್ಷಿಕೋತ್ಸವ ಸಮಾರಂಭದಲ್ಲಿ ಸಹಕಾರ ಸಚಿವ ಎಸ್‌ಟಿ.ಸೋಮಶೇಖರ್ ಅವರು ಕಲಾ ತಂಡಗಳಿಗೆ ಪ್ರಶಸ್ತಿ ಪ್ರದಾನ ಮಾಡಿದರು. ರಾಮೋಹಳ್ಳಿಯ ಸಿದ್ಧಾರೂಢ ಮಿಷನ್ ಆಶ್ರಮದ ಅಧ್ಯಕ್ಷ ಆರೂಢ ಭಾರತೀ ಸ್ವಾಮೀಜಿ ಹಾಗೂ ಟ್ರಸ್ಟ್‌ನ ಪದಾಧಿಕಾರಿಗಳು ಇದ್ದಾರೆ.

ಮೂಡಲಪಾಳ್ಯದಲ್ಲಿ ಘಟನೆ: ಪೊಲೀಸರಿಗೆ ಶರಣಾದ ಆರೋಪಿ

ಮಚ್ಚಿನಿಂದ ಹೊಡೆದು ಅತ್ತೆ, ಪತ್ನಿ ಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮೂಡಲ ಪಾಳ್ಯದಲ್ಲಿ ತಾಯಿ– ಮಗಳನ್ನು ಮಚ್ಚಿನಿಂದ ಹೊಡೆದು ಮಂಗಳವಾರ ಬೆಳಿಗ್ಗೆ ಕೊಲೆ ಮಾಡಲಾಗಿದೆ.

'ಸಾವಿತ್ರಿ ಹಾಗೂ ಅವರ ತಾಯಿ ಸರೋಜಮ್ಮ ಕೊಲೆಯಾದವರು. ಸಾವಿತ್ರಿ ಅವರ ಪತಿ ರವಿಕುಮಾರ್ ಎಂಬಾತ ಕೃತ್ಯ ಎಸಗಿದ್ದು, ಆತನನ್ನು ಗೋವಿಂದರಾಜನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ತೀರ್ಥಹಳ್ಳಿಯ ಆರೋಪಿ ರವಿ ಕುಮಾರ್, 20 ವರ್ಷಗಳ ಹಿಂದೆ ಸಾವಿತ್ರಿ ಅವರನ್ನು ಮದುವೆಯಾಗಿದ್ದ. ಕೆಲಸ ಹುಡುಕಿಕೊಂಡು ಕೆಲ ವರ್ಷಗಳ ಹಿಂದೆ ದಂಪತಿ ನಗರಕ್ಕೆ ಬಂದಿದ್ದರು. ರವಿಕುಮಾರ್ ಎಳನೀರು ಮಾರಾಟ ಮಾಡುತ್ತಿದ್ದ. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ.'

'ನಗರದ ಬೇರೆಡೆ ವಾಸವಿದ್ದ ದಂಪತಿ, ಆರು ತಿಂಗಳ ಹಿಂದೆ ಮೂಡಲ ಪಾಳ್ಯದಲ್ಲಿ ಹೊಸ ಬಾಡಿಗೆ ಮನೆಗೆ ಬಂದಿದ್ದರು. ದಂಪತಿ, ಇಬ್ಬರು ಮಕ್ಕಳು ಹಾಗೂ ಸರೋಜಮ್ಮ ಮನೆಯಲ್ಲಿ ವಾಸವಿದ್ದರು. ಎಳನೀರು ವ್ಯಾಪಾರದಲ್ಲಿ ನಷ್ಟ ಅನುಭವಿಸಿದ್ದ ರವಿಕುಮಾರ್, ಹೊಸದಾಗಿ ಕಾಂಡಿಮೆಂಟ್ಸ್ ಅಂಗಡಿ ತೆರೆದಿದ್ದ' ಎಂದೂ ತಿಳಿಸಿದರು.

ಶೀಲದ ಬಗ್ಗೆ ಶಂಕೆ: 'ರವಿಕುಮಾರ್ ಬೆಳಿಗ್ಗೆ ಮನೆಯಿಂದ ಕೆಲಸಕ್ಕೆ ಹೋದರೆ ರಾತ್ರಿ ಮರಳುತ್ತಿದ್ದ. ಪತ್ನಿ ಶೀಲದ ಬಗ್ಗೆ ಶಂಕೆ ವ್ಯಕ್ತಪಡಿಸಿದ್ದ ಆತ, ಅದೇ ವಿಚಾರವಾಗಿ ಹಲವು ಬಾರಿ ಜಗಳ ಮಾಡಿದ್ದ' ಎಂದು ಪೊಲೀಸರು ಹೇಳಿದರು.

'ತಾನು ಕೆಲಸಕ್ಕೆ ಹೋದ ನಂತರ ಪತ್ನಿ ಬೇರೊಬ್ಬನ ಕಡೆ ಹೋಗುತ್ತಾಳೆಂದು ಭಾವಿಸಿದ್ದ ಆರೋಪಿ, 6 ತಿಂಗಳಿಗೊಮ್ಮೆ ಬಾಡಿಗೆ ಮನೆ ಬದಲಿಸುತ್ತಿದ್ದ. ಅದೇ ಕಾರಣಕ್ಕೆ ಮೂಡಲಪಾಳ್ಯದಲ್ಲೂ ಹೊಸ ಬಾಡಿಗೆ ಮನೆ ಮಾಡಿದ್ದ' ಎಂದೂ ತಿಳಿಸಿದರು.

ಮಕ್ಕಳನ್ನು ಶಾಲೆಗೆ ಬಿಟ್ಟು ಬಂದು ಹತ್ಯೆ: 'ಸೋಮವಾರ ರಾತ್ರಿ ದಂಪತಿ ನಡುವೆ ಜಗಳವಾಗಿತ್ತು. ಅದೇ ಸಿಟ್ಟಿನಲ್ಲಿದ್ದ ರವಿಕುಮಾರ್, ಮಂಗಳವಾರ ಬೆಳಿಗ್ಗೆ ಮಕ್ಕಳಿಬ್ಬರನ್ನು ಶಾಲೆಗೆ ಬಿಟ್ಟು ಮನೆಗೆ ವಾಪಸು ಬಂದಿದ್ದ. ಪುನಃ ಪತ್ನಿ ಜೊತೆ ಜಗಳ ತೆಗೆದಿದ್ದ' ಎಂದು ಪೊಲೀಸರು ವಿವರಿಸಿದರು.

'ರವಿಕುಮಾರ್ ಹಾಗೂ ಸಾವಿತ್ರಿ ನಡುವೆ ಮಾತಿನ ಚಕಮಕಿ ನಡೆದು, ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು. ಸರೋಜಮ್ಮ ಜಗಳ ಬಿಡಿಸಲು ಹೋಗಿದ್ದರು. ಅದೇ ವೇಳೆ ಆರೋಪಿ ರವಿಕುಮಾರ್, ಎಳನೀರು ಕೊಚ್ಚಲು ತಂದಿಟ್ಟಿದ್ದ ಮಚ್ಚಿನಿಂದ ಸಾವಿತ್ರಿ ಕತ್ತು ಹಾಗೂ ದೇಹದ ಹಲವು ಭಾಗಗಳಿಗೆ ಹೊಡೆದಿದ್ದ. ಸರೋಜಮ್ಮ ಮೇಲೂ ಮಚ್ಚು ಬೀಸಿದ್ದ. ತೀವ್ರ ಗಾಯಗೊಂಡಿದ್ದ ಇಬ್ಬರೂ ಸ್ಥಳದಲ್ಲೇ ಕುಸಿದು ಬಿದ್ದು ಮೃತಪಟ್ಟಿದ್ದಾರೆ' ಎಂದೂ ತಿಳಿಸಿದರು.

'ಚಂದ್ರಾಲೇಔಟ್ ಠಾಣೆಗೆ ಶರಣಾಗಿದ್ದ'

'ಕೊಲೆ ನಡೆದ ಜಾಗ, ಹೊಸದಾಗಿ ಆರಂಭವಾಗಿರುವ ಗೋವಿಂದರಾಜನಗರ ಠಾಣೆ ವ್ಯಾಪ್ತಿಗೆ ಬರುತ್ತದೆ. ಆರೋಪಿ ರವಿಕುಮಾರ್, ಚಂದ್ರಾಲೇಔಟ್ ಠಾಣೆಗೆ ಹೋಗಿ ಶರಣಾಗಿದ್ದ. ಈ ಬಗ್ಗೆ ಅಲ್ಲಿಯ ಪೊಲೀಸರು, ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದರು. ನಂತರ ಗೋವಿಂದ–ರಾಜನಗರ ಪೊಲೀಸರು ಆತನನ್ನು ಬಂಧಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿ ತನ್ನ ಸ್ಕೂಟರ್‌ನಲ್ಲಿ ಠಾಣೆಗೆ ಬಂದು ಶರಣಾಗಿದ್ದಾನೆ. 'ಪತ್ನಿ ಬೇರೊಬ್ಬನ ಜೊತೆ ಸಲುಗೆ ಇಟ್ಟುಕೊಂಡಿದ್ದಳು. ಅದರಿಂದ ಬೇಸತ್ತು ಕೊಲೆ ಮಾಡಿದ್ದೇನೆ' ಎಂಬುದಾಗಿ ಆತ ಹೇಳಿಕೆ ನೀಡಿದ್ದಾನೆ' ಎಂದೂ ಅಧಿಕಾರಿ ಹೇಳಿದರು.

ರವಿಕುಮಾರ್

ವಿದೇಶದಿಂದ ಗಾಂಜಾ ತರಿಸಿ ಮಾರಾಟ

ಬೆಂಗಳೂರು: ಹೊರ ದೇಶದಿಂದ ಗಾಂಜಾ ತರಿಸಿ ಮಾರಾಟ ಮಾಡುತ್ತಿದ್ದ ಜಾಲವನ್ನು ಎನ್‌ಸಿಬಿ ಅಧಿಕಾರಿಗಳು ಭೇದಿಸಿದ್ದು, ಇಬ್ಬರು ನೈಜೀರಿಯಾ ಪ್ರಜೆಗಳನ್ನು ಬಂಧಿಸಿದ್ದಾರೆ.

'2021ರಲ್ಲಿ ಗ್ರೀಕ್‌ನಿಂದ ತರಿಸಲಾಗಿದ್ದ 1 ಕೆ.ಜಿ ಗಾಂಜಾವನ್ನು ಜಪ್ತಿ ಮಾಡಿ, ಆರೋಪಿಯೊಬ್ಬನನ್ನು ಬಂಧಿಸಲಾಗಿತ್ತು. ಅದೇ ಜಾಲದಲ್ಲಿ ಸಕ್ರಿಯವಾಗಿದ್ದ ನೈಜೀರಿಯಾದ ಇಬ್ಬರು ಪ್ರಜೆಗಳನ್ನು ಇತ್ತೀಚೆಗೆ ಹೈದರಾಬಾದ್‌ನಲ್ಲಿ ಬಂಧಿಸಲಾಗಿದೆ. ಅಮೆರಿಕದಿಂದ ತರಿಸಿದ್ದ 1 ಕೆ.ಜಿ 420 ಗ್ರಾಂ ಗಾಂಜಾ ಜಪ್ತಿ ಮಾಡಲಾಗಿದೆ' ಎಂದು ಎನ್‌ಸಿಬಿ ತಿಳಿಸಿದೆ. '

ಮುಂಬೈ ಪೊಲೀಸರಿಂದ ಆರೋಪಿ ಬಂಧನ

ಕ್ರಿಪ್ಟೋ ಹೂಡಿಕೆ ಹೆಸರಲ್ಲಿ ವಂಚನೆ

ಮುಂಬೈ (ಪಿಟಿಐ): ಕ್ರಿಪ್ಟೋ ಕರೆನ್ಸಿಯಲ್ಲಿ ಹೂಡಿಕೆ ಮಾಡಿ ಹೆಚ್ಚಿನ ಲಾಭ ತಂದುಕೊಡುವ ಭರವಸೆ ನೀಡಿ ಸಂಗೀತ ಶಿಕ್ಷಕರೊಬ್ಬರಿಂದ ₹2.43 ಲಕ್ಷ ಪಡೆದು ವಂಚಿಸಿದ ಆರೋಪದಲ್ಲಿ ವ್ಯಕ್ತಿಯೊಬ್ಬನನ್ನು ಬೆಂಗಳೂರಿನಲ್ಲಿ ಬಂಧಿಸಿರುವುದಾಗಿ ಮುಂಬೈ ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಬೆಂಗಳೂರಿನ ರೆಸ್ಟೋರೆಂಟ್‌ವೊಂದರ ಡೆಲಿವರಿ ಬಾಯ್ ಮೊಹಮ್ಮದ್ ಜಾಬಿರ್ ಮೊಹಮ್ಮದ್ ನೂರುದ್ದೀನ್ ಬಂಧಿತ ಆರೋಪಿ.

ಶಿಕ್ಷಕ ಪಾವತಿಸಿದ್ದ ಹಣವು ಮೊಹಮ್ಮದ್ ಜಾಬಿರ್‌ನ ಖಾತೆಗೆ ಜಮೆಯಾಗಿತ್ತು ಎಂಬುದು ತನಿಖೆಯಿಂದ ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.



'ಕ್ರಿಪ್ಟೋ ಮೈನಿಂಗ್ ಮೂಲಕ ಪ್ರತಿದಿನ ₹2ಸಾವಿರ ಗಳಿಸಬಹುದು ಎಂಬ ಸಂದೇಶ 'ಆರ್ಗೊಹಾಶ್' ಎಂಬ ಆ್ಯಪ್‌ನಿಂದ ಮೊಬೈಲ್‌ಗೆ ಬಂದಿತ್ತು. ಅದನ್ನು ನಂಬಿ ಅದರಲ್ಲಿದ್ದ ಲಿಂಕ್ ಮೂಲಕ ಆ್ಯಪ್ ಡೌನ್‌ಲೋಡ್ ಮಾಡಿ ಹಣ ಪಾವತಿಸಿದ್ದೇನೆ. ಸ್ವಲ್ಪ ಸಮಯದ ಬಳಿಕ ಆ ಆ್ಯಪ್ ಕೆಲಸ ನಿರ್ವಹಿಸುವುದನ್ನು ನಿಲ್ಲಿಸಿತ್ತು. ಅನಂತರ 'ಆರ್ಗೊ ಪ್ರೊ' ಎಂಬ ಹೆಸರಿನಲ್ಲಿ ಅದು ಕಾರ್ಯಾಚರಿಸಲು ಆರಂಭಿಸಿತ್ತು. ಆಗ ವಂಚನೆಗೊಳಗಾಗಿರುವುದು ಅರಿವಿಗೆ ಬಂತು' ಎಂದು ಸಂಗೀತ ಶಿಕ್ಷಕ ಮುಂಬೈನ ಮಾಟುಂಗ ಪೊಲೀಸ್ ಠಾಣೆಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ಫೆಬ್ರುವರಿ 9,10 ಮತ್ತು 11ರಂದು ಮೊಹಮ್ಮದ್ ಜಾಬಿರ್‌ನ ಖಾತೆಗೆ ವಿವಿಧ ಮೂಲಗಳಿಂದ ₹71 ಲಕ್ಷ ಹಣ ಜಮೆಯಾಗಿತ್ತು. ಈತನ ಖಾತೆಯಿಂದ ತಕ್ಷಣ ಹಿಂಪಡೆಯಲಾಗುತ್ತಿದ್ದ ಹಣ ದೆಹಲಿ ಮೂಲದ ಕಂಪನಿಯೊಂದಕ್ಕೆ ಜಮಾವಣೆಗೊಳ್ಳುತ್ತಿತ್ತು. ಕಂಪನಿ ಈ ರೀತಿ ₹225 ಕೋಟಿ ಸಂಗ್ರಹಿಸಿರುವುದು ತನಿಖೆಯಿಂದ ತಿಳಿದುಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ತೃತೀಯಲಿಂಗಿ ಸಲುಗೆ: ಚಾಲಕನ ಕೊಲೆಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೃತೀಯ ಲಿಂಗಿ ಜೊತೆಗಿನ ಸಲುಗೆ ವಿಚಾರವಾಗಿ ಮಾರಾಮಾರಿ ನಡೆದಿದ್ದು, ಆಟೊ ಚಾಲಕ ಸ್ಯಾಮ್ಯುಯೆಲ್ (24) ಎಂಬುವರಿಗೆ ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಲಾಗಿದೆ.

'ಸ್ಥಳೀಯ ಎ.ಕೆ. ಕಾಲೊನಿ ನಿವಾಸಿ ಸ್ಯಾಮ್ಯುಯೆಲ್ ತೀವ್ರ ಗಾಯಗೊಂಡಿದ್ದು, ನಿಮ್ಹಾನ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಕೊಲೆ ಯತ್ನ ಆರೋಪದಡಿ ಪ್ರವೀಣ್ ಅಲಿಯಾಸ್ ಪುಣೆ (24) ಎಂಬಾತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸ್ಯಾಮ್ಯುಯೆಲ್ ಹಾಗೂ ಪ್ರವೀಣ್, ಇಬ್ಬರೂ ಸ್ನೇಹಿತರು. ಗಾಯಾಳು ಸ್ಯಾಮ್ಯುಯೆಲ್, ತೃತೀಯ ಲಿಂಗಿಯೊಬ್ಬರ ಜೊತೆ ಕೆಲ ವರ್ಷಗಳಿಂದ ಒಡನಾಟ ಹೊಂದಿದ್ದರು. ಅದೇ ತೃತೀಯ ಲಿಂಗಿ ಜೊತೆ ಕೆಲದಿನಗಳಿಂದ ಪ್ರವೀಣ್ ಸುತ್ತಾಡುತ್ತಿದ್ದ. ಇದೇ ವಿಚಾರವಾಗಿ ಅವರಿಬ್ಬರ ನಡುವೆ ವೈಷಮ್ಯ ಬೆಳೆದಿತ್ತು.'

'ತೃತೀಯಲಿಂಗಿ ಜೊತೆಗೆ ಸ್ಯಾಮ್ಯುಯೆಲ್ ಖಾಸಗಿ ಕ್ಷಣ ಕಳೆಯುತ್ತಿದ್ದ ವಿಡಿಯೊವನ್ನು ಪ್ರವೀಣ್ ಮೊಬೈಲ್‌ನಲ್ಲಿ ಚಿತ್ರೀಕರಿಸಿದ್ದ. ಆ ವಿಡಿಯೊ ತೋರಿಸಿ ಬ್ಲ್ಯಾಕ್‌ಮೇಲ್ ಸಹ ಮಾಡುತ್ತಿದ್ದ ಎನ್ನಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಮದ್ಯದ ಅಮಲಿನಲ್ಲಿ ಮಾರಾಮಾರಿ: 'ಠಾಣೆ ವ್ಯಾಪ್ತಿಯ ತ್ರಿವಳಿ ಜಂಕ್ಷನ್ ಬಳಿಯ ಬಾರ್‌ಗೆ ಒಟ್ಟಿಗೆ ಬಂದಿದ್ದ ಸ್ಯಾಮ್ಯುಯೆಲ್ ಹಾಗೂ ಪ್ರವೀಣ್, ಮದ್ಯ ಕುಡಿದಿದ್ದರು. ಅದರ ಅಮಲಿನಲ್ಲಿ ಪರಸ್ಪರ ಬೈದಾಡಿಕೊಂಡಿದ್ದರು. ಜಗಳ ವಿಕೋಪಕ್ಕೆ ಹೋಗಿ ಕೈ ಕೈ ಮಿಲಾಯಿಸಿದ್ದರು' ಎಂದು ಮೂಲಗಳು ಹೇಳಿವೆ.

'ಆರೋಪಿ ಪ್ರವೀಣ್, ಸ್ಯಾಮ್ಯುಯೆಲ್ ಎದೆ ಹಾಗೂ ಇತರೆ ಭಾಗಗಳಿಗೆ ಚಾಕುವಿನಿಂದ ಇರಿದಿದ್ದ. ನರಳಾಡುತ್ತಿದ್ದ ಸ್ಯಾಮ್ಯುಯೆಲ್‌ನನ್ನು ಸ್ಥಳೀಯರು ಆಸ್ಪತ್ರೆಗೆ ಸೇರಿಸಿದ್ದರು' ಎಂದೂ ತಿಳಿಸಿವೆ.

ಗಾಂಜಾ ಮಾರುತ್ತಿದ್ದ ನಾಲ್ವರ ಬಂಧನ

ಬೆಂಗಳೂರು: ನಾಗರಬಾವಿ ಎರಡನೇ ಹಂತದಲ್ಲಿ ಗಾಂಜಾ ಮಾರುತ್ತಿದ್ದ ನಾಲ್ವರು ಆರೋಪಿಗಳನ್ನು ಅನ್ನಪೂರ್ಣೇಶ್ವರಿನಗರ ಪೊಲೀಸರು ಬಂಧಿಸಿದ್ದಾರೆ.

'ವಿನೋದ್‌ಕುಮಾರ್, ರಂಜಿತ್, ಸಯ್ಯದ್ ಇಮ್ತಿಯಾಜ್ ಹಾಗೂ ಪವನ್‌ಕುಮಾರ್ ಬಂಧಿತರು. ಅವರಿಂದ 7 ಕೆ. ಜಿ 35 ಗ್ರಾಂ ಗಾಂಜಾ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ನಾಗರಬಾವಿ ಎರಡನೇ ಹಂತದ ಕೊಟ್ಟಿಗೆಪಾಳ್ಯ–ಕೆಂಗೇರಿ ನಡುವಿನ ರಸ್ತೆಯಲ್ಲಿ ಮರಳು ಸಂಗ್ರಹ ಘಟಕವಿದೆ. ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಇದೇ ಸ್ಥಳಕ್ಕೆ ದ್ವಿಚಕ್ರ ವಾಹನದಲ್ಲಿ ಬಂದಿದ್ದ ಆರೋಪಿಗಳು, ಗಾಂಜಾ ಪೊಟ್ಟಣಗಳನ್ನು ಮಾರುತ್ತಿದ್ದರು. ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಆರೋಪಿಗಳನ್ನು ಬಂಧಿಸಲಾಯಿತು' ಎಂದೂ ತಿಳಿಸಿದರು.

ಸುಲಿಗೆಗೆ ಯತ್ನ

ಕೆ.ಜಿ. ಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ತಲ್ವಾರ್ ತೋರಿಸಿ ವ್ಯಾಪಾರಿಗಳ ಸುಲಿಗೆಗೆ ಯತ್ನಿಸಲಾಗಿದ್ದು, ಇದರ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

'ಇದೇ 18ರಂದು ನಡೆದಿದೆ ಎನ್ನಲಾದ ಸುಲಿಗೆಯ ವಿಡಿಯೊ ಗಮನಕ್ಕೆ ಬಂದಿದೆ. ಅದನ್ನು ಆಧರಿಸಿ ತನಿಖೆ ಆರಂಭಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕಿರಾಣಿ ಅಂಗಡಿಗೆ ತಲ್ವಾರ್ ಹಿಡಿದು ನುಗ್ಗಿದ್ದ ದುಷ್ಕರ್ಮಿಯೊಬ್ಬ, ಹಣ ನೀಡದಿದ್ದರೆ ಕೊಲೆ ಮಾಡುವುದಾಗಿ ವ್ಯಾಪಾರಿಯನ್ನು ಬೆದರಿಸುತ್ತಿದ್ದ ದೃಶ್ಯ ವಿಡಿಯೊದಲ್ಲಿದೆ. ಇದನ್ನು ವ್ಯಕ್ತಿಯೊಬ್ಬರು ಕಮಿಷನರ್ ಅವರ ಟ್ವಿಟರ್ ಖಾತೆಗೆ ಟ್ಯಾಗ್ ಮಾಡಿದ್ದಾರೆ' ಎಂದು ಮೂಲಗಳು ಹೇಳಿವೆ.

ಕಿರುಕುಳ ತಾಳದೇ ಸೀಮೆಎಣ್ಣೆ ಸುರಿದುಕೊಂಡು ಪತ್ನಿ ಆತ್ಮಹತ್ಯೆ: ಪತಿಯ ಬಂಧನ

ಬೆಂಗಳೂರು: ಮೈ ಮೇಲೆ ಸೀಮೆಎಣ್ಣೆ ಸುರಿದುಕೊಂಡು ಅನಿಶಾ ಎಂಬುವರು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಸಂಬಂಧ ಪತಿ ನಿಜಾಮುದ್ದೀನ್ ಎಂಬಾತನನ್ನು ಡಿ.ಜೆ.ಹಳ್ಳಿ ಪೊಲೀಸರು ಬಂಧಿಸಿದ್ದಾರೆ.

'ಡಿ.ಜೆ. ಹಳ್ಳಿಯ ಈದ್ಗಾ ಮೊಹಲ್ಲಾ ಬಳಿ ವಾಸವಿದ್ದ ಅನಿಶಾ, ಫೆ. 17ರಂದು ಮೈ ಮೇಲೆ ಸೀಮೆಎಣ್ಣೆ ಸುರಿದುಕೊಂಡು ಬೆಂಕಿ ಹಚ್ಚಿಕೊಂಡಿದ್ದರು. ತೀವ್ರ ಗಾಯಗೊಂಡಿದ್ದ ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಅವರು ಭಾನುವಾರ (ಫೆ. 20) ತೀರಿಕೊಂಡಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಪತಿ ನಿಜಾಮುದ್ದೀನ್ ಕಿರುಕುಳದಿಂದ ಬೇಸತ್ತು ಅನಿಶಾ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ತಾಯಿ ದೂರು ನೀಡಿದ್ದರು. ಆತ್ಮಹತ್ಯೆಗೆ ಪ್ರಚೋದನೆ ಆರೋಪದಡಿ ಪ್ರಕರಣ ದಾಖಲಿಸಿಕೊಂಡು, ನಿಜಾಮುದ್ದೀನ್‌ನನ್ನು ಬಂಧಿಸಲಾಗಿದೆ' ಎಂದರು.

3 ವರ್ಷದ ಹಿಂದೆ ಮದುವೆ: 'ಬಡಗಿ ಕೆಲಸ ಮಾಡುತ್ತಿದ್ದ ನಿಜಾ ಮುದ್ದೀನ್, ಅನಿಶಾ ಅವರನ್ನು ಮೂರು ವರ್ಷಗಳ ಹಿಂದೆ ಮದುವೆಯಾಗಿದ್ದ. ದಂಪತಿಗೆ ಇಬ್ಬರು ಮಕ್ಕಳಿದ್ದರು' ಎಂದು ಅಧಿಕಾರಿ ಹೇಳಿದರು.

'ನೀನು ಸುಂದರವಾಗಿಲ್ಲ. ಎಲ್ಲಾದರೂ ಸತ್ತು ಹೋಗು. ಸತ್ತರೆ ಬೇರೊಂದು ಮದುವೆಯಾಗುತ್ತೇನೆ' ಎಂಬುದಾಗಿ ಹೇಳಿ ನಿಜಾಮುದ್ದೀನ್, ಪತ್ನಿಗೆ ಕಿರುಕುಳ ನೀಡುತ್ತಿದ್ದ. ಅದಕ್ಕೆ ಆತನ ಮನೆಯವರೂ ಸಹಕಾರ ನೀಡುತ್ತಿದ್ದರು. ಇದರಿಂದ ಬೇಸತ್ತ ಅನಿಶಾ ಆತ್ಮಹತ್ಯೆ ಮಾಡಿಕೊಂಡಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ' ಎಂದೂ ತಿಳಿಸಿದರು.

11 ವರ್ಷಗಳ ಬಳಿಕ ಸಿಕ್ಕ ಆರೋಪಿ

ಬೆಂಗಳೂರು: ಅತೀ ವೇಗದಲ್ಲಿ ಲಾರಿ ಚಲಾಯಿಸಿ ಪಾದಚಾರಿಗೆ ಗುದ್ದಿಸಿ ಸಾವಿಗೆ ಕಾರಣವಾಗಿದ್ದ ಚಾಲಕ ಗೋಪಾಲಕೃಷ್ಣ, 11 ವರ್ಷಗಳ ನಂತರ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ.

'ಮಾಗಡಿ ರಸ್ತೆಯ ಅಂಜನಾನಗರದ ಗೋಪಾಲಕೃಷ್ಣ, ವಿಜಯನಗರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ 2011ರ ಮೇ 17ರಂದು ಅಪಘಾತವನ್ನುಂಟು ಮಾಡಿದ್ದ. ಪಾದಚಾರಿ ಮನೀಶಾ (30) ಎಂಬುವರು ಮೃತಪಟ್ಟಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬಿಎಂಟಿಸಿ ನೌಕರನಾಗಿದ್ದ ಗೋಪಾಲಕೃಷ್ಣನನ್ನು ಸೇವೆಯಿಂದ ವಜಾ ಮಾಡಲಾಗಿತ್ತು. ಹೀಗಾಗಿ, ಆತ ಲಾರಿ ಚಾಲನೆ ಮಾಡುತ್ತಿದ್ದ. ಅಪಘಾತ ಪ್ರಕರಣದಲ್ಲಿ ಗೋಪಾಲಕೃಷ್ಣನಿಗೆ ಜೈಲು ಶಿಕ್ಷೆ ಆಗಿತ್ತು. ಆದರೆ, ಆತ ತಲೆಮರೆಸಿಕೊಂಡಿದ್ದ. ಇತ್ತೀಚೆಗೆ ಆತನ ಬಗ್ಗೆ ಪೊಲೀಸರಿಗೆ ಸುಳಿವು ಸಿಕ್ಕಿತ್ತು. ಆತನನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ' ಎಂದೂ ತಿಳಿಸಿದರು.

ಹೃದಯಾಘಾತ: ಹರ್ಷ ಸೋದರತ್ತೆ ಸಾವು

ಶಿವಮೊಗ್ಗ: ಇಲ್ಲಿನ ಬಜರಂಗದಳದ ಕಾರ್ಯಕರ್ತ ಹರ್ಷ ಅವರ ನಿಧನದ ಸುದ್ದಿ ಭದ್ರಾವತಿಯಲ್ಲಿರುವ ಅವರ ಸೋದರತ್ತೆ ಜಲಜಾಕ್ಷಮ್ಮ (65) ಅವರಿಗೆ ತಿಳಿಯುತ್ತಿದ್ದಂತೆ, ಅವರು ತೀವ್ರ ಹೃದಯಾಘಾತದಿಂದ ಸೋಮವಾರ ರಾತ್ರಿಯೇ ಮೃತ ಪಟ್ಟಿದ್ದಾರೆ.

ಪೊಲೀಸ್ ಕೆಲಸಕ್ಕೆ ರಾಜೀನಾಮೆ: ಕಳ್ಳತನ ಪ್ರಕರಣದಲ್ಲಿ ಬಂಧನ

ಬೆಂಗಳೂರು: ಮಾರಾಟ ಮಳಿಗೆ ಎದುರು ನಿಲ್ಲಿಸಿದ್ದ ಕಾರು ಕಳ್ಳತನ ಮಾಡಿದ್ದ ಆರೋಪದಡಿ ಪಿಳಕಲ್ ನಜೀರ್ ಅಹ್ಮದ್ ಎಂಬುವರನ್ನು ಬ್ಯಾಟರಾಯನಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕೇರಳದ ನಜೀರ್, ಪೋಷಕರ ಜೊತೆ ಬಾಲ್ಯದಲ್ಲಿ ಸೌದಿಗೆ ಹೋಗಿ ನೆಲೆಸಿದ್ದರು. ಅಲ್ಲಿಯೇ ಪೊಲೀಸ್ ಇಲಾಖೆಗೆ ಸೇರಿ 10 ವರ್ಷ ಕೆಲಸ ಮಾಡಿದ್ದರು. ವೈಯಕ್ತಿಕ ಕಾರಣಗಳಿಂದ ಪೊಲೀಸ್ ಕೆಲಸಕ್ಕೆ ರಾಜೀನಾಮೆ ನೀಡಿ, ಕೇರಳಕ್ಕೆ ವಾಪಸು ಬಂದಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನಜೀರ್ ಅವರ ಮಗನಿಗೆ ಬೆಂಗಳೂರಿನ ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಕೆಲಸ ಸಿಕ್ಕಿತ್ತು. ಮಗನ ಜೊತೆ ನಜೀರ್ ನಗರಕ್ಕೆ ಬಂದಿದ್ದರು. ಖರ್ಚಿಗೆ ಮಗ ಹಣ ಕೊಡುತ್ತಿರಲಿಲ್ಲ. ಹೀಗಾಗಿ, ನಜೀರ್ ಕಳ್ಳತನ ಮಾಡಲು ಮುಂದಾಗಿದ್ದರು' ಎಂದೂ ತಿಳಿಸಿವೆ.

'ಇತ್ತೀಚೆಗಷ್ಟೇ ಖರೀದಿಸಿದ್ದ ಟಾಟಾ ಹ್ಯಾರಿಯರ್ ಕಾರನ್ನು ಮಾಲೀಕರು, ಸರ್ವೀಸ್‌ಗೆಂದು ಮಳಿಗೆ ಬಳಿ ನಿಲ್ಲಿಸಿ ಹೋಗಿದ್ದರು. ಮಳಿಗೆ ಬಂದಿದ್ದ ಆರೋಪಿ, ಕಾರು ಕದ್ದುಕೊಂಡು ಪರಾರಿಯಾಗಿದ್ದರು. ಕಾರಿನಲ್ಲಿ ಅಳವಡಿಸಿದ್ದ ಬ್ಲೂಟೂತ್ ಉಪಕರಣದಿಂದ ಆರೋಪಿ ನಜೀರ್ ಸುಳಿವು ಸಿಕ್ಕಿತ್ತು. ಅವರನ್ನು ಬಂಧಿಸಿ ಕಾರು ಹಾಗೂ ಎರಡು ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

17,76,725 ▲ ಒಟ್ಟು ಸೋಂಕಿತರು (17,76,173 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
5,255 ▼	17,54,627 ▲	16,842 ▲

ದಿನದ ಏರಿಕೆ	
ಹೊಸ ಪ್ರಕರಣ	552 ▲
ಗುಣಮುಖ	916 ▲
ಸಾವು	14 ▲

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಕೋವಿಡ್ ಅಂಕಿ–ಅಂಶ

ಆಧಾರ: ಮೈಗೌ.ಇನ್ / ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	42.72 ಕೋಟಿ ▲	4.28 ಕೋಟಿ
ಸಕ್ರಿಯ ಪ್ರಕರಣ	6.66 ಕೋಟಿ ▼	1.81 ಲಕ್ಷ ▼
ಗುಣಮುಖ	35.46 ಕೋಟಿ ▲	4.21 ಕೋಟಿ ▲
ಸಾವು	59.13 ಲಕ್ಷ ▲	5.12 ಲಕ್ಷ

ದಿನದ ಮಾಹಿತಿ	ವಿಶ್ವ	ಭಾರತ
ಹೊಸ ಪ್ರಕರಣ	12.63 ಲಕ್ಷ ▼	13,405 ▼
ಗುಣಮುಖ	25.49 ಲಕ್ಷ ▲	34,226 ▼
ಸಾವು	6,373 ▲	235 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಜರ್ಮನಿ	ರಷ್ಯಾ	ಫ್ರಾನ್ಸ್
1.11 ಲಕ್ಷ ▲	1.52 ಲಕ್ಷ ▼	59,003

ಪ್ರಜಾವಾಣಿ ಗ್ರಾಫಿಕ್ಸ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು

ಅಮೆರಿಕ	ಜರ್ಮನಿ	ಫ್ರಾನ್ಸ್
2.72 ಕೋಟಿ ▼	37.62 ಲಕ್ಷ ▲	31.50 ಲಕ್ಷ ▲

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.43 ಲಕ್ಷ
ಕೇರಳ	64,273 ▲
ತಮಿಳುನಾಡು	37,981 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	78.59 ▲
ಕೇರಳ	64.73 ▲
ತಮಿಳುನಾಡು	34.45 ▲

ಭಾರತದ ಕೋವಿಡ್ ಸಂಖ್ಯೆ ವಿವರ: ಮಂಗಳವಾರ ಬೆಳಿಗ್ಗೆ 8ರವರೆಗಿನ ಮಾಹಿತಿ

ನಗರದಲ್ಲಿ ಇಂದು

'ನಿರ್ಮಾಣ ತಂತ್ರಜ್ಞಾನದಲ್ಲಿ ಸುಸ್ಥಿರ ಪ್ರಗತಿ' ವಿಚಾರ ಸಂಕಿರಣ: ಉದ್ಘಾಟನೆ–ವಿಜಯ ರಾಘವ ರೆಡ್ಡಿ, ಅತಿಥಿಗಳು–ಡಿ.ಎಸ್.ಸುರೇಶ್, ವಿ.ರಾಮಚಂದ್ರ, ಮಾತನಾಡುವವರು–ಎಂ.ಆರ್. ಯೋಗೇಂದ್ರ, ಪಿ.ಕೆ.ಉಮೇಶ, ಸಿ.ಲಕ್ಷ್ಮೀ, ಮಂಗಳಾ ಕೇಶವ, ಎಲ್. ಆರ್.ಮಂಜುನಾಥ್, ಆಯೋಜನೆ–ದಯಾನಂದ ಸಾಗರ್ ಎಂಜಿನಿಯರಿಂಗ್ ಕಾಲೇಜು, ಸ್ಥಳ–ಸಿ.ಡಿ.ಸಾಗರ್ ಸಭಾಂಗಣ, ಕಾಲೇಜು ಕ್ಯಾಂಪಸ್, ಕುಮಾರಸ್ವಾಮಿ ಬಡಾವಣೆ, ಬೆಳಿಗ್ಗೆ 10

'ಕರ್ನಾಟಕ ಸಂಗಾತಿ' ಹಾಗೂ 'ಕನ್ನಡ ಪ್ರಜ್ಞೆ' ಪುಸ್ತಕಗಳ ಬಿಡುಗಡೆ: ರಾಜ್ಯಪಾಲ ಥಾವರಚಂದ್ ಗೆಹಲೋತ್, ಅಧ್ಯಕ್ಷತೆ–ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್, ಅತಿಥಿ–ಪಿ.ವಿ.ಕೃಷ್ಣ ಭಟ್ಟ, ಪ್ರಾಸ್ತಾವಿಕ ನುಡಿ–ಟಿ.ಎಸ್.ನಾಗಾಭರಣ, ಆಯೋಜನೆ–ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಸ್ಥಳ–ಬ್ಯಾಂಕ್ವೆಟ್ ಹಾಲ್, ರಾಜಭವನ, ಬೆಳಿಗ್ಗೆ 11

'ಸೌಹಾರ್ದತೆಗಾಗಿ ನಾವು–ನೀವು' ಗೀತಗಾಯನ, ಸಂವಾದ: ಭಾಗವಹಿಸುವವರು–ರಾಜಪ್ಪ ದಳವಾಯಿ, ನಾದ ಮಣಿನಾಲ್ಕೂರು, ಕೆ.ಷರೀಫಾ, ಸೂಫಿ ವಲಿಬಾ, ಹಂದಲಗೆರೆ ಗಿರೀಶ್, ಶಾಖಿರಾ ಖಾನಮ್, ರಾಹುಲ್ ಜಾರ್ಜ್, ಆಯೋಜನೆ–ಸೌಹಾರ್ದತೆಗಾಗಿ ಬೆಂಗಳೂರು, ಸ್ಥಳ–ಸೌಹಾರ್ದ, ಸುಬ್ಬಯ್ಯ ವೃತ್ತ, ಮಿಷನ್ ರಸ್ತೆ, ಸಂಜೆ 5

ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಮಾದರಿ ಶಾಲೆ ಉದ್ಘಾಟನೆ: ಅತಿಥಿಗಳು–ನಟ ರಮೇಶ್ ಅರವಿಂದ್, ಎನ್‌ಇಪಿ ಎನ್‌ಇಪಿ ಕರಡು ಸಮಿತಿಯ ಅಧ್ಯಕ್ಷ ಡಾ.ಕೆ.ಕಸ್ತೂರಿ ರಂಗನ್, ಆಯೋಜನೆ ಮತ್ತು ಸ್ಥಳ–ಸಿಲಿಕಾನ್ ಸಿಟಿ ಅಕಾಡೆಮಿ, ನ್ಯೂ ಬ್ಯಾಂಕ್ ಕಾಲೊನಿ, ಕೋಣನಕುಂಟೆ, ಸಂಜೆ 5



ರಮೇಶ್ ಅರವಿಂದ

ನಿಧನ ವಾರ್ತೆ

ವೈ.ಎನ್. ಗಂಗಾಧರ ಶೆಟ್ಟಿ

ಬೆಂಗಳೂರು: ವಿ.ಕೃ. ಗೋಕಾಕ್ ಟ್ರಸ್ಟ್‌ನ ನಿಕಟಪೂರ್ವ ಅಧ್ಯಕ್ಷ ವೈ.ಎನ್. ಗಂಗಾಧರ ಶೆಟ್ಟಿ (102) ಅವರು ಮಂಗಳವಾರ ನಿಧನರಾದರು.

ಅವರು ವಯೋಸಹಜ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದರು. ಜಯನಗರದಲ್ಲಿ ವಾಸವಿದ್ದ ಅವರು, ನಿವಾಸದಲ್ಲಿಯೇ ಮೃತಪಟ್ಟಿದ್ದಾರೆ. ಪತ್ನಿ, ಆರು ಜನ ಪುತ್ರರು ಹಾಗೂ ಮೂವರು ಪುತ್ರಿಯರನ್ನು ಅಗಲಿದ್ದಾರೆ. ಟಿ.ಆರ್. ಮಿಲ್‌ನ ಚಿತಾಗಾರದಲ್ಲಿ ಅಂತ್ಯಸಂಸ್ಕಾರ ನೆರವೇರಿಸಲಾಯಿತು.

ಸಮಾಜಸೇವಕರಾಗಿದ್ದ ಅವರು, ಟ್ರಸ್ಟ್‌ನಲ್ಲಿ ನಾಲ್ಕೂವರೆ ದಶಕ ಸೇವೆ ಸಲ್ಲಿಸಿದ್ದರು.

ಬುಧವಾರ • ಫೆಬ್ರುವರಿ 23, 2022 ಪ್ರಜಾವಾಣಿ

ವಿರೋಧ ಪಕ್ಷವಾಗಿಯೂ ಕಾಂಗ್ರೆಸ್ ವಿಫಲ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

‘ಬಜೆಟ್‌ನಲ್ಲಿ ನಾಡಿನ ಪ್ರಗತಿಯ ಭವಿಷ್ಯ ಬರೆಯುವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಉತ್ತರ ನೀಡುವ ಸಂದರ್ಭದಲ್ಲೇ ಮುಂದಿನ ತಿಂಗಳ ಬಜೆಟ್ ಕನಸುಗಳನ್ನು ಹಂಚಿಕೊಳ್ಳಬೇಕು ಅಂದುಕೊಂಡಿದ್ದೆ. ಆದರೆ, ನೀವು (ಕಾಂಗ್ರೆಸ್) ಬೇಜವಾಬ್ದಾರಿಯಿಂದ ನಡೆದುಕೊಂಡು, ಐದು ದಿನ ಕಲಾಪವನ್ನು ನಡೆಯಲು ಬಿಡದ ಕಾರಣ ಅದು ಸಾಧ್ಯವಾಗಲಿಲ್ಲ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಂದನಾ ನಿರ್ಣಯದ ಮೇಲಿನ ಚರ್ಚೆಗೆ ವಿಧಾನಸಭೆಯಲ್ಲಿ ಮಂಗಳವಾರ ಅವರು ಉತ್ತರ ನೀಡಿದರು.

‘ಸಮರ್ಥ ವಿರೋಧ ಪಕ್ಷವಾಗಿ ಕಾರ್ಯನಿರ್ವಹಿಸುವಲ್ಲಿ ಕೂಡ ಕಾಂಗ್ರೆಸ್ ವಿಫಲವಾಗಿದೆ. ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಅವರಂತಹ ಹಿರಿಯರ ಅನುಭವಕ್ಕೆ ಮುಸುಕು ಬಿದ್ದಿದೆ. ಹೀಗಾಗಿ ಕಾಂಗ್ರೆಸ್‌ಗೆ ರಾಜಕೀಯ ಭವಿಷ್ಯವಿಲ್ಲ. ಸಚಿವ ಈಶ್ವರಪ್ಪ ಅವರ ಹೇಳಿಕೆಯಲ್ಲಿ ಗದ್ದಲ ಮಾಡುವಂತಹದ್ದು ಏನೂ ಇರಲಿಲ್ಲ. ಅದನ್ನು ಹಿಡಿದುಕೊಂಡು ಜಗ್ಗಾಡಿದರು. ಹಿಜಾಬ್ ವಿವಾದ, ಶಿವಮೊಗ್ಗದಲ್ಲಿ ಪ್ರಕ್ಷುಬ್ಧ ವಾತಾವರಣ ಸೇರಿದಂತೆ ಹಲವು ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚಿಸಿ ತಿಳಿಗೊಳಿಸಬೇಕಿತ್ತು. ಸರ್ಕಾರಕ್ಕೆ ಸಲಹೆ ನೀಡಬೇಕಿತ್ತು. ವಿರೋಧ ಪಕ್ಷವಾಗಿ ತನ್ನ ಪಾತ್ರವನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ವಿಫಲವಾಯಿತು’ ಎಂದು ಅವರು ಟೀಕಿಸಿದರು.

ಕೋವಿಡ್ ನಿಯಂತ್ರಣಕ್ಕೆ ₹2 ಸಾವಿರ ಕೋಟಿ: ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ವಿಧಾನ ಪರಿಷತ್‌ನಲ್ಲಿ ಉತ್ತರ ನೀಡಿದ ಮುಖ್ಯಮಂತ್ರಿ, ‘ಕೋವಿಡ್ ಸಂಕಷ್ಟದ ನಡುವೆಯೂ ಸರ್ಕಾರ ಜನಪರವಾಗಿ ಕೆಲಸ ಮಾಡುತ್ತಿದೆ. ಕೋವಿಡ್ ನಿಯಂತ್ರಣಕ್ಕಾಗಿ ₹ 2,000 ಕೋಟಿ ವೆಚ್ಚ ಮಾಡಿದೆ. ಕೋವಿಡ್ ಲಸಿಕೆ ವಿತರಣೆಯಲ್ಲಿ ಮುಂಚೂಣಿಯಲ್ಲಿದೆ’ ಎಂದರು.

‘ರೈತ ವಿದ್ಯಾನಿಧಿ ಯೋಜನೆಯಡಿ ರೈತರ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡಲಾಗಿದೆ. ಕಟ್ಟಡ ಕಾರ್ಮಿಕರ ಮಕ್ಕಳಿಗೂ ವಿದ್ಯಾರ್ಥಿ-ವೇತನ ನೀಡಲಾಗಿದೆ. ಐದು ಲಕ್ಷ ಮನೆ ನಿರ್ಮಾಣಕ್ಕೆ ಮಂಜೂರಾತಿ ನೀಡಿದ್ದು, 48,000 ಮನೆಗಳ ನಿರ್ಮಾಣ ಮುಗಿದಿದೆ. ಗ್ರಾಮ ಒನ್ ಯೋಜನೆಯನ್ನು ಇನ್ನೂ ಹತ್ತು ಜಿಲ್ಲೆಗಳಿಗೆ ವಿಸ್ತರಿಸಲಾಗುವುದು’ ಎಂದು ಬೊಮ್ಮಾಯಿ ಹೇಳಿದರು.

ಭಾಷಣದ ಪ್ರಮುಖ ಅಂಶಗಳು

- ರಾಜ್ಯ ಹೆದ್ದಾರಿಗಳ ಅಭಿವೃದ್ಧಿಗೆ ₹ 3,500 ಕೋಟಿ ಒದಗಿಸಲಾಗಿದೆ. ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ₹ 1,400 ಕೋಟಿ ನೀಡಲಾಗಿದೆ. ಮುಂದಿನ ವರ್ಷ ₹ 3,000 ಕೋಟಿ ಒದಗಿಸಲಾಗುವುದು.
- ರೈತ ವಿದ್ಯಾರ್ಥಿ ನಿಧಿ ಯೋಜನೆಯಡಿ 4.50 ಲಕ್ಷ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ. ವಿವಿಧ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕಾಗಿ ₹150 ಕೋಟಿಯನ್ನು ಒದಗಿಸಲಾಗಿದೆ.
- 31,627 ಎಕರೆ ಭೂಮಿಯನ್ನು ನೀರಾವರಿಗೆ ಒಳಪಡಿಸಲಾಗಿದೆ.
- ಕೋವಿಡ್ ಮೊದಲ ಡೋಸ್ ಶೇ 100 ರಷ್ಟು ಮತ್ತು ಎರಡನೇ ಡೋಸ್ ಶೇ 90 ರಷ್ಟು ಜನರಿಗೆ ನೀಡಲಾಗಿದೆ. ಒಟ್ಟಾರೆ ಕೋವಿಡ್ ನಿರ್ವಹಣೆ ರಾಜ್ಯಕ್ಕೇ ಮಾದರಿ.

ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ವಿರೋಧ ಪಕ್ಷ ಕಾಂಗ್ರೆಸ್ ಭಾಗವಹಿಸದೇ ಧರಣಿ ಮಾಡಿದ್ದು ವಿಧಾನಮಂಡಲದ ಇತಿಹಾಸದಲ್ಲೇ ಕಪ್ಪು ಚುಕ್ಕೆ, ಮಾತ್ರವಲ್ಲ ಬೇಜವಾಬ್ದಾರಿಯ ನಡೆ

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಗದ್ದಲದ ಮಧ್ಯೆ ಐದು ಮಸೂದೆ ಅಂಗೀಕಾರ

ಬೆಂಗಳೂರು: ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಅವರನ್ನು ಸಂಪುಟದಿಂದ ವಜಾಗೊಳಿಸುವಂತೆ ಆಗ್ರಹಿಸಿ ಸಭಾಪತಿ ಪೀಠದ ಎದುರು ಕಾಂಗ್ರೆಸ್ ಸದಸ್ಯರ ಧಿಕ್ಕಾರಗಳ ಮಧ್ಯೆಯೇ, 2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲು ಅವಕಾಶ ಕಲ್ಪಿಸುವ ಮಸೂದೆ ಸೇರಿ ಒಟ್ಟು ಐದು ಮಸೂದೆಗಳಿಗೆ ಸರ್ಕಾರ, ವಿಧಾನ ಪರಿಷತ್‌ನಲ್ಲಿ ಅಂಗೀಕಾರ ಪಡೆಯಿತು.

‘ಕರ್ನಾಟಕ ಸಿವಿಲ್ ಸೇವೆಗಳ (2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿಗಳ ಆಯ್ಕೆ ಮತ್ತು ನೇಮಕಾತಿಯ ಸಿಂಧುಗೊಳಿಸುವಿಕೆ) ಮಸೂದೆ–2022’ ಮಂಡಿಸಿ ಮಾತನಾಡಿದ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, ‘ಈ ಸಾಲಿನಲ್ಲಿ ಆಯ್ಕೆಯಾದ

ಅಭ್ಯರ್ಥಿಗಳಿಗೆ ಅನ್ಯಾಯವಾಗಿದ್ದು, ಅವರಿಗೆ ನ್ಯಾಯ ಕೊಡಲು ಈ ಮಸೂದೆ ರೂಪಿಸಲಾಗಿದೆ’ ಎಂದರು.

‘ಅಭ್ಯರ್ಥಿಯೊಬ್ಬರು ನೀಡಿದ್ದ ದೂರು ಆಧರಿಸಿ ಅಂದಿನ ಸರ್ಕಾರ ಕೆಪಿಎಸ್‌ಸಿ ನೇಮಕಾತಿಯ ಅಧಿಸೂಚನೆಯನ್ನೇ ವಾಪಸು ಪಡೆದಿತ್ತು. ಈ ಕುರಿತ ಪ್ರಕರಣದಲ್ಲಿ ಕೆಎಟಿಯಿಂದ ತೀರ್ಪು ಪ್ರಕಟವಾದ ಬಳಿಕ ಮತ್ತೆ ನೇಮಕಾತಿ ಆದೇಶ ಕೊಡಲು ಸರ್ಕಾರ ನಿರ್ಧರಿಸಿತ್ತು. ಈ ಪ್ರಕರಣಲ್ಲಿ ಹೈಕೋರ್ಟ್‌ಗೂ ತಪ್ಪು ಮಾಹಿತಿ ನೀಡಿ ಕಾನೂನು ಉಲ್ಲಂಘನೆ ಮಾಡಲಾಗಿತ್ತು. ಇದೀಗ, ಕಾಯ್ದೆ ಮೂಲಕ ಆಯ್ಕೆಯನ್ನು ಊರ್ಜಿತಗೊಳಿಸಲು ನಿರ್ಧರಿಸಲಾಗಿದ್ದು, ಈ ವಿಷಯದಲ್ಲಿ ಯಾವುದೇ ಕಾನೂನು ತೊಡಕು ಎದುರಾದರೂ ಅಭ್ಯರ್ಥಿಗಳ ಹಿತ ಕಾಪಾಡಲು ಬದ್ಧ’ ಎಂದರು.

ಮಸೂದೆ ಸಮರ್ಥಿಸಿ ಮಾತನಾಡಿದ ಜೆಡಿಎಸ್‌ನ ಕೆ.ಟಿ. ಶ್ರೀಕಂಠೇಗೌಡ, ತಿಪ್ಪೇಸ್ವಾಮಿ, ಬಿಜೆಪಿಯ ಎನ್. ರವಿಕುಮಾರ್, ‘ಈ ಸಾಲಿನಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ನ್ಯಾಯ ಒದಗಿಸುವ ಮಾನವೀಯ ಕೆಲಸವನ್ನು ಸರ್ಕಾರ ಮಾಡಿದೆ’ ಎಂದರು.

‘ಕರ್ನಾಟಕ ಸ್ಟ್ಯಾಂಪ್ ತಿದ್ದುಪಡಿ ಮಸೂದೆ–2022’ ಮಂಡಿಸಿ ಮಾತನಾಡಿದ ಕಂದಾಯ ಸಚಿವ ಆರ್. ಅಶೋಕ, ‘ಸಹಕಾರ ಸಂಘಗಳ ಗೃಹ ನಿರ್ಮಾಣ ಸಂಘಗಳ ಮೂಲಕ ಖರೀದಿಸಿದ ನಿವೇಶನದ ನೋಂದಣಿಗೆ ಮುದ್ರಾಂಕ ಶುಲ್ಕ ಹೆಚ್ಚಿದ್ದು, ಅದನ್ನು ಕಡಿಮೆ ಮಾಡಲಾಗುತ್ತಿದೆ. ಇದರಿಂದ ಬಹಳಷ್ಟು ಜನರಿಗೆ ಸಹಾಯವಾಗಲಿದೆ’ ಎಂದರು.

‘ಕರ್ನಾಟಕ ಸ್ಟ್ಯಾಂಪ್ (ಎರಡನೇ ತಿದ್ದುಪಡಿ) ಮಸೂದೆ–2022’ ಮಂಡಿಸಿದ ಅವರು, ‘ಕಂಪನಿಗಳ ಸ್ಥಿರಾಸ್ತಿ ಮೇಲೆ ಸಂಗ್ರಹಿಸಲಾಗುತ್ತಿದ್ದ ಶೇ 3 ಮುದ್ರಾಂಕ ಶುಲ್ಕ ದುಬಾರಿಯಾಗುತ್ತಿತ್ತು. ಇದರಿಂದ ಖಾಸಗಿ ಕಂಪನಿಗಳು ನೆರೆಯ ಮಹಾರಾಷ್ಟ್ರಕ್ಕೆ ವಲಸೆ ಹೋಗುತ್ತಿದ್ದವು, ಇನ್ನು ಮುಂದೆ ಕಂಪನಿಗಳ ಸ್ಥಿರಾಸ್ತಿ ಹಾಗೂ ಷೇರು ಮೌಲ್ಯಗಳನ್ನು ಸಂಗ್ರಹಿಸುವ ಶುಲ್ಕವನ್ನು ಗರಿಷ್ಠ ₹25 ಕೋಟಿಗೆ ಸೀಮಿತಗೊಳಿಸಲಾಗಿದೆ’ ಎಂದರು. ಗೃಹ ಸಚಿವರ ಪರವಾಗಿ ಸಚಿವ ಜೆ.ಸಿ. ಮಾಧುಸ್ವಾಮಿ, ಕ್ರಿಮಿನಲ್ ಕಾನೂನು ತಿದ್ದುಪಡಿ ಅಧ್ಯಾದೇಶ ತಿದ್ದುಪಡಿ ಮಸೂದೆ ಮಂಡಿಸಿದರು.

ಸುದ್ದಿ 2 ನಿಮಿಷ

ಗೃಹ ರಕ್ಷಕರ ದಿನ ಭತ್ಯೆ ಹೆಚ್ಚಿಸಲು ಚಿಂತನೆ: ಗೃಹ ಸಚಿವ ಆರಗ

ಬೆಂಗಳೂರು: ಪೊಲೀಸ್ ಇಲಾಖೆ ಹೊರತುಪಡಿಸಿ ಇತರ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗೃಹ ರಕ್ಷಕರಿಗೆ ಕರ್ತವ್ಯ ದಿನ ಭತ್ಯೆಯನ್ನು ₹600ಕ್ಕೆ ಹೆಚ್ಚಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ವಿಧಾನಸಭೆಯಲ್ಲಿ ಜೆಡಿಎಸ್‌ನ ಎ.ಮಂಜುನಾಥ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಪ್ರಸ್ತಾವನೆ ಆರ್ಥಿಕ ಇಲಾಖೆಯ ಮುಂದಿದೆ ಎಂದು ಹೇಳಿದರು.

ಪೊಲೀಸ್ ಇಲಾಖೆಯಲ್ಲಿ ನಿಯೋಜಿತರಾದ ಗೃಹ ರಕ್ಷಕರಿಗೆ 2020ರ ಏಪ್ರಿಲ್‌ನಿಂದ ಜಾರಿಗೆ ಬರುವಂತೆ ಕರ್ತವ್ಯ ದಿನ ಭತ್ಯೆಯನ್ನು ₹750 ಕ್ಕೆ ಹೆಚ್ಚಿಸಲು ಮಂಜೂರಾತಿ ನೀಡಲಾಗಿದೆ. ಇತರೆ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುವ ಗೃಹರಕ್ಷಕರಿಗೆ ₹455 ಮತ್ತು ಬೆಂಗಳೂರು ಹೊರತುಪಡಿಸಿದ ಸ್ಥಳಗಳಲ್ಲಿ ₹380 ನೀಡಲಾಗುತ್ತಿದೆ. ಎರಡೂ ಕಡೆಗಳಲ್ಲಿ ₹600ಕ್ಕೆ ಹೆಚ್ಚಿಸಲು ಪ್ರಸ್ತಾವನೆ ನೀಡಲಾಗಿದೆ ಎಂದರು.

ಮಾ. 24ಕ್ಕೆ ಪ್ರಧಾನಿ ಕಲಬುರಗಿ ಭೇಟಿ?

ಕಲಬುರಗಿ: ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ‘ಸ್ವಾಮಿತ್ವ ಹಕ್ಕುಪತ್ರ ವಿತರಣೆ’ಗೆ ಪ್ರಧಾನಿ ನರೇಂದ್ರ ಮೋದಿ ಅವರು ಮಾರ್ಚ್ 24ರಂದು ಕಲಬುರಗಿ ಜಿಲ್ಲೆಗೆ ಆಗಮಿಸುವ ಸಾಧ್ಯತೆ ಇದೆ.

‘ರಾಜ್ಯದ ಶಿವಮೊಗ್ಗ, ವಿಜಯನಗರ ಹಾಗೂ ಕಲಬುರಗಿ ಜಿಲ್ಲೆಗಳಲ್ಲಿ ಸ್ವಾಮಿತ್ವ ಹಕ್ಕುಪತ್ರ ವಿತರಣೆ ಕಾರ್ಯಕ್ರಮಗಳು ನಡೆಯಲಿವೆ. ಕಲಬುರಗಿ ತಾಲ್ಲೂಕಿನ ಭೀಮಳ್ಳಿ ಗ್ರಾಮದಲ್ಲಿ ಕೂಡ ಈ ಸಮಾರಂಭಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ. ಆದರೆ, ಪ್ರಧಾನಿ ಭೇಟಿಯ ಬಗ್ಗೆ ನಮಗೆ ಅಧಿಕೃತ ಮಾಹಿತಿ ಬಂದಿಲ್ಲ’ ಎಂದು ಜಿಲ್ಲಾಧಿಕಾರಿ ಯಶವಂತ್ ಗುರುಕರ್ ತಿಳಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿದ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಅಧ್ಯಕ್ಷ ದತ್ತಾತ್ರೇಯ ಪಾಟೀಲ ರೇವೂರ ಅವರು, ‘ಕಲಬುರಗಿ ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ಒಳಪಟ್ಟ ಭೀಮಳ್ಳಿ ಗ್ರಾಮದಲ್ಲಿ ಸ್ವಾಮಿತ್ವ ಹಕ್ಕುಪತ್ರ ವಿತರಣೆ ಕಾರ್ಯಕ್ರಮಕ್ಕೆ ಸಿದ್ಧತೆ ಮಾಡಲಾಗಿದೆ. ನನ್ನ ಕ್ಷೇತ್ರಕ್ಕೆ ಪ್ರಧಾನಿ ಅವರು ಬರುತ್ತಿರುವ ಸುದ್ದಿ ಸಂತಸದಾಯಕ. ಈಗಾಗಲೇ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿದ್ದೇನೆ. ಅತ್ಯಂತ ಹಿಂದುಳಿದ ಈ ಭಾಗಕ್ಕೆ ಪ್ರಧಾನಿ ಬಂದರೆ ನಮಗೆ ಆನೆಬಲ ಬಂದಂತೆ. ಈ ಅವಕಾಶವನ್ನು ಸದುಪಯೋಗ ಮಾಡಿಕೊಳ್ಳುತ್ತೇವೆ’ ಎಂದರು. ಹಳ್ಳಿಗಳಲ್ಲಿನ ಆಸ್ತಿಗಳ ಹಕ್ಕನ್ನು ಜನರಿಗೇ ಮಾಡಿಕೊಡುವುದು ‘ಸ್ವಾಮಿತ್ವ’ ಯೋಜನೆಯ ಉದ್ದೇಶ. ರಾಜ್ಯದ 16 ಜಿಲ್ಲೆಗಳಲ್ಲಿ ಇದರ ಡ್ರೋಣ್ ಸರ್ವೆ ಮಾಡಲಾಗುತ್ತಿದೆ.

ಕಟ್ಟಡ, ಅಗ್ನಿ ಸುರಕ್ಷತೆ: ನಿಯಮ ಸರಳೀಕರಣ– ಬಿ.ಸಿ. ನಾಗೇಶ್

ಬೆಂಗಳೂರು: ‘ಶಾಲಾ-ಕಾಲೇಜುಗಳ ಕಟ್ಟಡ ಮತ್ತು ಅಗ್ನಿ ಸುರಕ್ಷತೆ, ಹೊಸ ಮಾನ್ಯತೆ ಮತ್ತು ಮಾನ್ಯತೆ ನವೀಕರಣವನ್ನು ಸರಳೀಕರಿಸಲು ಚಿಂತನೆ ನಡೆದಿದೆ’ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

ಸಾರ್ವಜನಿಕ ಶಿಕ್ಷಣ ಇಲಾಖೆ, ಅಗ್ನಿಶಾಮಕ ಇಲಾಖೆ ಹಾಗೂ ಲೋಕೋಪಯೋಗಿ ಇಲಾಖೆ ಅಧಿಕಾರಿಗಳ ಜೊತೆ ‘ಕಟ್ಟಡ ಮತ್ತು ಅಗ್ನಿ ಸುರಕ್ಷತೆ’ ಕುರಿತು ಸಚಿವರು ಮಂಗಳವಾರ ಸಭೆ ನಡೆಸಿದರು. ನಂತರ ಮಾತನಾಡಿದ ನಾಗೇಶ್, ‘ಸುಪ್ರೀಂ ಆದೇಶವನ್ನು ಪಾಲಿಸುವ ಜೊತೆಗೆ ಮಾನ್ಯತೆ ನವೀಕರಣವನ್ನು ಸರಳೀಕರಣ ಮಾಡುವ ಪ್ರಯತ್ನಗಳು ನಡೆದಿವೆ. ಶಾಲಾ-ಕಾಲೇಜುಗಳ ಆಡಳಿತ ಮಂಡಳಿಗಳು ಸಲ್ಲಿಸಿರುವ ಮನವಿಗಳ ಕುರಿತು ಪರಿಶೀಲಿಸಿ ಒಂದು ವಾರದಲ್ಲಿ ವರದಿ ನೀಡಲು ಅಗ್ನಿಶಾಮಕ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ಸಭೆಯಲ್ಲಿ ಸೂಚಿಸಲಾಗಿದೆ’ ಎಂದರು.

‘ಹೊಸ ಶಾಲಾ-ಕಾಲೇಜುಗಳ ಆರಂಭ ಮತ್ತು ಮಾನ್ಯತೆ ನವೀಕರಣ ವೇಳೆ ಲೋಕೋಪಯೋಗಿ ಇಲಾಖೆ ಹಾಗೂ ಅಗ್ನಿಶಾಮಕ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆಯಬೇಕಿದೆ. ಆದರೆ, ಒಂದು ಮಹಡಿ ಇರುವ ಕಟ್ಟಡಕ್ಕೂ ಹಲವು ನಿಯಮಗಳನ್ನು ವಿಧಿಸಲಾಗಿದೆ. ಇದರಿಂದ ಮಾನ್ಯತೆ ಪಡೆದುಕೊಳ್ಳುವುದು ಹಾಗೂ ಈಗಾಗಲೇ ಇರುವ ಕಟ್ಟಡಗಳ ಮಾನ್ಯತೆ ನವೀಕರಣಕ್ಕೆ ಸಮಸ್ಯೆಯಾಗುತ್ತಿದೆ. ಮಾನ್ಯತೆ ನವೀಕರಣವಾಗದೆ ಲಕ್ಷಾಂತರ ಮಕ್ಕಳ ಶಿಕ್ಷಣಕ್ಕೆ ತೊಡಕು ಉಂಟಾಗುತ್ತದೆ ಎಂದು ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳು ಆತಂಕ ವ್ಯಕ್ತಪಡಿಸಿದ್ದರಿಂದ ಮುಖ್ಯಮಂತ್ರಿ ನೇತೃತ್ವದಲ್ಲಿ ಡಿಸೆಂಬರ್‌ನಲ್ಲಿ ನಡೆದ ಸಭೆಯಲ್ಲಿ ಸರಳೀಕರಣಕ್ಕೆ ಕ್ರಮ ಕೈಗೊಳ್ಳಲಾಗಿತ್ತು. ಇನ್ನೂ ಕೆಲವು ನಿಯಮಗಳಿಗೆ ಆಕ್ಷೇಪ ವ್ಯಕ್ತವಾಗಿದ್ದರಿಂದ ಅಧಿಕಾರಿಗಳ ಜೊತೆ ಚರ್ಚಿಸಲಾಗಿದೆ’ ಎಂದರು.

ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರಾದ ಆರ್. ವಿಶಾಲ್, ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿ ಕೃಷ್ಣಾರೆಡ್ಡಿ, ಅಗ್ನಿಶಾಮಕ ಇಲಾಖೆ ಉಪ ನಿರ್ದೇಶಕ ವೈ.ಎ. ಕೌಸರ್ ಈ ಸಭೆಯಲ್ಲಿ ಇದ್ದರು.

ರಾಜ್ಯಪಾಲರ ಮಧ್ಯಪ್ರವೇಶಕ್ಕೆ ಎಚ್‌. ಡಿ. ಕುಮಾರಸ್ವಾಮಿ ಆಗ್ರಹ

‘ರಾಜ್ಯದಲ್ಲಿ ಶಾಂತಿ, ಭದ್ರತೆಗೆ ಅಪಾಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಶಾಂತಿ ಮತ್ತು ಭದ್ರತೆಗೆ ಅಪಾಯ ಎದುರಾಗಿದ್ದು, ರಾಜ್ಯಪಾಲರು ತಕ್ಷಣ ಮಧ್ಯಪ್ರವೇಶ ಮಾಡಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್. ಡಿ. ಕುಮಾರಸ್ವಾಮಿ ಆಗ್ರಹಿಸಿದರು.



ಕುಮಾರಸ್ವಾಮಿ

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ‘ಹಿಜಾಬ್, ಕೇಸರಿ ಶಾಲಿನಿಂದ ಆರಂಭವಾದ ಗಲಾಟೆ ಶಿವಮೊಗ್ಗದಲ್ಲಿ ಯುವಕನೊಬ್ಬನ ಕೊಲೆಯವರೆಗೂ ತಲುಪಿದೆ. ರಾಜ್ಯವು ಈಗ ಕುದಿಯುವ ಕುಲುಮೆಯಾಗಿದೆ. ಈ ಸಮಯದಲ್ಲಿ ರಾಜ್ಯಪಾಲರು ಮೌನವಾಗಿರುವುದು ಸರಿಯಲ್ಲ. ಅವರು ಯಾರ ಕೈಗೊಂಬೆಯೂ ಆಗಬಾರದು. ತಕ್ಷಣ ಮಧ್ಯಪ್ರವೇಶ ಮಾಡಿ, ರಾಜ್ಯ ಸರ್ಕಾರದಿಂದ ಮಾಹಿತಿ ಪಡೆದು ಕೇಂದ್ರಕ್ಕೆ ವರದಿ ಸಲ್ಲಿಸಬೇಕು’ ಎಂದು ಒತ್ತಾಯಿಸಿದರು.

ಸರ್ಕಾರ ಅಸಮರ್ಥವಾಗಿದೆ ಎಂದು ಬಿಜೆಪಿಯ ಸಂಸದರೇ ಆರೋಪಿಸಿದ್ದಾರೆ. ಜನರು ಕೂಡ ಈ ಸರ್ಕಾರದ ಬಗ್ಗೆ ರೋಸಿ ಹೋಗಿದ್ದಾರೆ. ರಾಜ್ಯ ಸರ್ಕಾರವನ್ನು ವಜಾಗೊಳಿಸಬೇಕಾದ ಪರಿಸ್ಥಿತಿ ಇದೆ. ಶಾಲೆ, ಕಾಲೇಜುಗಳಲ್ಲಿ ಸಂಘರ್ಷದ ವಾತಾವರಣ ಇದೆ. ಹೈಕೋರ್ಟ್ ನಿತ್ಯವೂ ಸರ್ಕಾರಕ್ಕೆ ಛೀಮಾರಿ ಹಾಕುತ್ತಿದೆ ಎಂದರು.

ಶಿವಮೊಗ್ಗದ ಘಟನೆಯಲ್ಲಿ ಬಂಧಿತರ ಸಂಖ್ಯೆ ಕುರಿತು ಗೃಹ ಸಚಿವರು ಮತ್ತು ಪೊಲೀಸ್ ಅಧಿಕಾರಿಗಳು ತದ್ವಿರುದ್ಧ ಮಾಹಿತಿ ನೀಡುತ್ತಿದ್ದಾರೆ. ಶ್ರೀಮಂತರ ಮಕ್ಕಳು ಮತ್ತು ಮೇಲ್ಜಾತಿಯವರು ಇಂತಹ ಘಟನೆಯಲ್ಲಿ ಭಾಗಿಯಾಗುವುದಿಲ್ಲ. ಊಟಕ್ಕೆ ಪರದಾಡುವ ಸ್ಥಿತಿ ಇರುವ ಕುಟುಂಬದ ಮಕ್ಕಳೇ ಬಲಿಯಾಗುತ್ತಿದ್ದಾರೆ. ಈ ಬಗ್ಗೆ ಸದನದಲ್ಲಿ ಚರ್ಚೆ ನಡೆಯಬೇಕಿತ್ತು ಎಂದು ಹೇಳಿದರು.

ಶಿವಮೊಗ್ಗದಲ್ಲಿ ನಡೆದ ಘಟನೆಯ ಪರಿಣಾಮಗಳು ಇಲ್ಲಿಗೇ ನಿಲ್ಲುವುದಿಲ್ಲ. ಸರ್ಕಾರ ಎಚ್ಚರಿಕೆ ವಹಿಸಿ ಇದರ ಕಾವು ಬೇರೆ ಕಡೆ ಹಬ್ಬದಂತೆ ಎಚ್ಚರವಹಿಸಬೇಕು. ಆದರೆ, ಎರಡೂ ಕಡೆಯವರು ತಮ್ಮ ಮತ ಬ್ಯಾಂಕ್ ಗಟ್ಟಿಪಡಿಸಿಕೊಳ್ಳಲು ಬಡವರನ್ನು ಬಳಸಿಕೊಳ್ಳುತ್ತಿದ್ದಾರೆ. ಅದನ್ನು ಜನ ಅರ್ಥಮಾಡಿಕೊಳ್ಳಬೇಕು ಎಂದರು.

ಯಾವ ಪುರುಷಾರ್ಥಕ್ಕೆ ಭೇಟಿ?: ವಿಧಾನಮಂಡಲ ಕಲಾಪವನ್ನು ಹಾಳು ಮಾಡಿದ ಕಾಂಗ್ರೆಸ್ ಪಕ್ಷದವರೇ ರಾಜ್ಯಪಾಲರನ್ನು ಭೇಟಿಮಾಡಿದ್ದಾರೆ. ಯಾವ ಪುರುಷಾರ್ಥಕ್ಕೆ ಈ ಭೇಟಿ ನಡೆದಿದೆಯೋ ತಿಳಿಯದು. ಡಿ.ಜೆ. ಹಳ್ಳಿ, ಕೆ.ಜಿ. ಹಳ್ಳಿಯಲ್ಲಿ ಗಲಭೆ ಮಾಡಿಸಿದವರೇ ಈಗ ವಿಧಾನಸಭೆ ಚುನಾವಣೆ ಟಿಕೆಟ್‌ಗಾಗಿ ಕೆಪಿಸಿಸಿ ಅಧ್ಯಕ್ಷರ ಹಿಂದೆ ಓಡಾಡುತ್ತಿದ್ದಾರೆ ಎಂದು ಟೀಕಿಸಿದರು.

‘ನದಿ ಜೋಡಣೆ: ರಾಜ್ಯಕ್ಕೆ ಅನ್ಯಾಯ’

‘ಗೋದಾವರಿ, ಕೃಷ್ಣಾ, ಪೆನ್ನಾರ್ ಮತ್ತು ಕಾವೇರಿ ನದಿಗಳ ಜೋಡಣೆ ಯೋಜನೆಯಡಿ ನೀರು ಹಂಚಿಕೆ ವಿಚಾರದಲ್ಲಿ ಕೇಂದ್ರ ಸರ್ಕಾರವು ರಾಜ್ಯಕ್ಕೆ ಅನ್ಯಾಯ ಮಾಡಿದೆ. ತೆಲಂಗಾಣ, ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಿಗೆ ಮಾತ್ರ ನೀರು ಹಂಚಿಕೆ ತೀರ್ಮಾನ ಮಾಡಲಾಗಿದೆ. ರಾಜ್ಯಕ್ಕೆ ಒಂದು ಕ್ಯೂಸೆಕ್ ನೀರನ್ನೂ ನಿಗದಿ ಮಾಡಿಲ್ಲ’ ಎಂದು ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ಇದೇ 18ರಂದು ದೆಹಲಿಯಲ್ಲಿ ನಡೆದ ಕೇಂದ್ರ ಜಲ ಆಯೋಗದ ಸಭೆಯಲ್ಲಿ ರಾಜ್ಯದ ಪ್ರತಿನಿಧಿಯೊಬ್ಬರು ಭಾಗವಹಿಸಿದ್ದರು. ಅವರ ಉಪಸ್ಥಿತಿಯಲ್ಲೇ 242 ಟಿಎಂಸಿ ಅಡಿ ನೀರಿನ ಪೈಕಿ, ತಮಿಳುನಾಡಿಗೆ 92 ಟಿಎಂಸಿ ಅಡಿ, ಆಂಧ್ರ ಪ್ರದೇಶಕ್ಕೆ 90 ಟಿಎಂಸಿ ಅಡಿ, ತೆಲಂಗಾಣಕ್ಕೆ 60 ಟಿಎಂಸಿ ಅಡಿ ನೀರು ಹಂಚಿಕೆ ಮಾಡಲಾಗಿದೆ. ಆದರೆ, ನಮ್ಮ ಮುಖ್ಯಮಂತ್ರಿಗಳು ಮಾತ್ರ, ರಾಜ್ಯಗಳ ಸಹಮತ ಪಡೆದು ನೀರು ಹಂಚಿಕೆ ಮಾಡಬೇಕು, ಡಿಪಿಆರ್ ಮಾಡುವ ಮುನ್ನ ನಮ್ಮೊಂದಿಗೆ ಚರ್ಚೆ ನಡೆಸಬೇಕು. ಈಗ ಆಗಿರುವ ತೀರ್ಮಾನಗಳನ್ನು ನಾವು ಒಪ್ಪಲಿಕ್ಕೆ ತಯಾರಿಲ್ಲ ಎಂದು ಬೊಬ್ಬೆ ಹೊಡೆಯುತ್ತಿದ್ದಾರೆ ಎಂದು ಟೀಕಿಸಿದರು.

ರಾಜ್ಯವ್ಯಾಪಿ ದ್ವಿಭಾಷಾ ಪ್ರಯೋಗಾಲಯ ಸ್ಥಾಪನೆಗೆ ಚಿಂತನೆ: ಬಿ.ಕೆ.ಎಸ್‌.ವರ್ಧನ್

ಧಾರವಾಡ: ‘ವಿದ್ಯಾರ್ಥಿಗಳು ತಮ್ಮ ಮಾತೃಭಾಷೆಯೊಂದಿಗೆ ಅಂತರರಾಷ್ಟ್ರೀಯ ಸಂವಹನ ಭಾಷೆಯಾಗಿರುವ ಇಂಗ್ಲಿಷ್ ಕಲಿಕೆಯನ್ನೂ ಪ್ರೋತ್ಸಾಹಿಸಲುರಾಜ್ಯವ್ಯಾಪಿ ದ್ವಿಭಾಷಾ ಪ್ರಯೋಗಾಲಯಗಳ ಸ್ಥಾಪನೆಗೆ ಸರ್ಕಾರ ಚಿಂತನೆ ನಡೆಸಿದೆ’ ಎಂದು ಬೆಂಗಳೂರಿನ ದಕ್ಷಿಣ ಭಾರತ ವಲಯದ ಪ್ರಾದೇಶಿಕ ಇಂಗ್ಲಿಷ್ ಭಾಷಾ ಸಂಸ್ಥೆಯ ನಿರ್ದೇಶಕ ಡಾ. ಬಿ.ಕೆ.ಎಸ್.ವರ್ಧನ್ ಹೇಳಿದರು.

ಇಲ್ಲಿನ ಡಯಟ್‌ನಲ್ಲಿರುವ ಭಾಷಾ ಪ್ರಯೋಗಾಲಯಕ್ಕೆ ಮಂಗಳವಾರ ಭೇಟಿ ನೀಡಿ ಅವರು ತಜ್ಞರೊಂದಿಗೆ ಸಮಾಲೋಚಿಸಿದರು.

‘ಈಗಾಗಲೇ ವಿಭಾಗ ಮಟ್ಟದಲ್ಲಿ ಆಲೂರ ವೆಂಕಟರಾವ್ ಭಾಷಾ ಪ್ರಯೋಗಾಲಯಗಳಿದ್ದು, ಅವುಗಳನ್ನು ಹಂತ ಹಂತವಾಗಿ ಜಿಲ್ಲೆ, ತಾಲ್ಲೂಕು ಮತ್ತು ಕ್ಲಸ್ಟರ್ ಮಟ್ಟಕ್ಕೂ ವಿಸ್ತರಿಸುವ ಗುರಿ ಹೊಂದಲಾಗಿದೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳು ಸುಲಭವಾಗಿ ತಂತ್ರಾಂಶ ಆಧಾರಿತ ಇಂಗ್ಲಿಷ್ ಕಲಿಕೆಗೆ ಯೋಜನೆ ರೂಪಿಸಲಾಗುವುದು’ ಎಂದರು.

‘ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳು ಮಾತೃಭಾಷೆ ಕನ್ನಡದೊಂದಿಗೆ ಇಂಗ್ಲಿಷ್ ಕಲಿಕೆಯನ್ನು ಅರಿಯಲು, ಬರೆಯಲು, ಮಾತನಾಡಲು ಮತ್ತು ನಿರರ್ಗಳವಾಗಿ ಅಭಿವ್ಯಕ್ತಿಸಿ ಸಂವಹನ ಸಾಧ್ಯವಾಗುವಂತೆ ಮಾಡಲು ರಾಜ್ಯದ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಚಿಂತನೆ ನಡೆಸಿದೆ. ಈ ನಿಟ್ಟಿನಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರೊಂದಿಗೆ ಮೊದಲ ಸುತ್ತಿನ ಚಿಂತನಾ ಸಭೆ ನಡೆಸಲಾಗಿದೆ’ ಎಂದರು.

ಡಾ.ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಶ್ರೀ

ಧರ್ಮಗಳ ನಡುವೆ ಸಂಘರ್ಷ ಒಳ್ಳೆಯದಲ್ಲ

ಪ್ರಜಾವಾಣಿ ವಾರ್ತೆ

ಸಾಸ್ವೆಹಳ್ಳಿ: ‘ಭಾಷೆ-ಭಾಷೆಗಳಲ್ಲಿ, ಸಮುದಾಯ-ಸಮುದಾಯಗಳಲ್ಲಿ, ಧರ್ಮ-ಧರ್ಮಗಳಲ್ಲಿ ಸಂಘರ್ಷ ನಡೆಯುವುದು ನಮ್ಮ ದೇಶಕ್ಕೆ ಒಳ್ಳೆಯದಲ್ಲ’ ಎಂದು ಶ್ರೀಶೈಲ ಪೀಠದ ಡಾ.ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಸಮೀಪದ ಕ್ಯಾಸಿನಕೆರೆ ಗ್ರಾಮದಲ್ಲಿ ಮಂಗಳವಾರ ಪುರಾಣ ಮಠದ ಪುರಂದರ ಸ್ವಾಮಿಯವರ ಮನೆಯಲ್ಲಿ ಇಷ್ಟಲಿಂಗ ಪೂಜಾಕಾರ್ಯದಲ್ಲಿ ಪಾಲ್ಗೊಂಡ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

‘ದೇಶದಲ್ಲಿ ಅನೇಕ ಧರ್ಮ, ಸಂಪ್ರದಾಯ, ಸಮುದಾಯ, ಭಾಷೆಗಳು ಇವೆ. ಏಕತೆಯಲ್ಲಿ ಅನೇಕತೆ, ಅನೇಕತೆಯಲ್ಲಿ ಏಕತೆ ಇರುವುದೇ ನಮ್ಮ ದೇಶದ ವಿಶೇಷ. ಇಂಥ ಭಿನ್ನತೆಗಳಿದ್ದರೂ ಎಲ್ಲರೂ ಕೂಡಿಕೊಂಡು ಹೋಗುವುದು ವರ್ತಮಾನದ ಅವಶ್ಯಕತೆಯಾಗಿದೆ. ಹೀಗಾಗಿ ಮೊದಲು ನಾವೆಲ್ಲರೂ ಭಾರತೀಯರು ಎಂದು ಅರಿಯಬೇಕು. ಇದನ್ನು ಅರಿಯದೇ ಧರ್ಮದ ಹೆಸರಿನಲ್ಲಿ ಸಾಮರಸ್ಯ ಕದಡುವುದು, ಇನ್ನೊಂದು ಸಮುದಾಯದವರ ಹತ್ಯೆ ಮಾಡುವಂಥದ್ದು ಖಂಡನೀಯ’ ಎಂದು ಅವರು ಹೇಳಿದರು.

‘ಶಿವಮೊಗ್ಗದಲ್ಲಿ ಬಜರಂಗದಳದ ಕಾರ್ಯಕರ್ತನ ಹತ್ಯೆ ನಿಜಕ್ಕೂ ಆತಂಕಕಾರಿ ಬೆಳವಣಿಗೆ. ಇಂಥ ಹೀನ ಕೃತ್ಯ ಮಾಡಿದವರನ್ನು ಬಂಧಿಸಿ ಶಿಕ್ಷಿಸಬೇಕು’ ಎಂದು ಅವರು ಆಗ್ರಹಿಸಿದರು.

‘ಇನ್ನು ಮುಂದಾದರೂ ಭಾಷೆ, ಸಂಪ್ರದಾಯ ಭಿನ್ನತೆಗಳಿದ್ದರೂ ಎಲ್ಲರೂ ಒಂದಾಗಿ, ಒಗ್ಗಟ್ಟಾಗಿ ಬದುಕುವುದನ್ನು ರೂಢಿಸಿಕೊಳ್ಳಬೇಕು’ ಎಂದು ಮನವಿ ಮಾಡಿದರು.

ರಾಂಪುರ ಬೃಹನ್ಮಠದ ಶಿವಕುಮಾರ ಹಾಲಸ್ವಾಮೀಜಿ, ಜೈನಾಪುರ ಮಠದ ರೇಣುಕಾ ಶಿವಾಚಾರ್ಯ ಸ್ವಾಮೀಜಿ ಪಾಲ್ಗೊಂಡಿದ್ದರು

ಬೆಳಗಾವಿಯ ಕೆಎಲ್‌ಇ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಅಕಾಡೆಮಿಗೆ ಈಚೆಗೆ ಭೇಟಿ ನೀಡಿದ್ದ ನ್ಯಾಕ್ ತಂಡದೊಂದಿಗೆ ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ, ಕುಲಪತಿ ಡಾ.ವಿವೇಕ್ ಸಾವೋಜಿ ಮೊದಲಾದವರು ಇದ್ದಾರೆ

ಕೆಎಲ್‌ಇ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಅಕಾಡೆಮಿ

ನ್ಯಾಕ್: ‘ಎ+’ ಶ್ರೇಯಾಂಕದ ಸಾಧನೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ಕೆಎಲ್‌ಇ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಅಕಾಡೆಮಿಯು ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತಾ ಸಮಿತಿ (ನ್ಯಾಕ್)ಯ ಪರಿಶೀಲನೆಯಲ್ಲಿ ಸಿಜಿಪಿಎ 3.39 ಅಂಕಗಳೊಂದಿಗೆ ‘ಎ +’ ಶ್ರೇಯಾಂಕ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದೆ.

ಈ ಹಿಂದೆ ನಡೆದಿದ್ದ ಮೊದಲನೇ ಹಾಗೂ 2ನೇ ಮರುಮೌಲ್ಯಮಾಪನದಲ್ಲೂ ‘ಎ’ ಶ್ರೇಯಾಂಕ ಗಳಿಸಿತ್ತು.

ಏಳು ಸದಸ್ಯರನ್ನು ಒಳಗೊಂಡ ನ್ಯಾಕ್ ಪ್ರಗತಿ ಪರಿಶೀಲನಾ ತಂಡವು ಫೆ. 17ರಿಂದ 19ರವರೆಗೆ ಇಲ್ಲಿಗೆ ಭೇಟಿ ನೀಡಿ ಶೈಕ್ಷಣಿಕ ಸಾಧನೆ ಮತ್ತು ಸಂಶೋಧನೆಗಳನ್ನು ಪರಿಶೀಲಿಸಿ ಪರಾಮರ್ಶಿಸಿತ್ತು. ಅಕಾಡೆಮಿಯ ಕಾರ್ಯವೈಖರಿ, ಸಂಶೋಧನೆ, ವಿದ್ಯಾರ್ಥಿಗಳ ಸಾಧನೆ, ಆಸ್ಪತ್ರೆ ಸೇವೆ, ಸಮುದಾಯ ಕೇಂದ್ರಿತ ಸೇವೆ, ಅಗತ್ಯ ರಚನಾತ್ಮಕ ಹಾಗೂ ಕ್ರಿಯಾತ್ಮಕವಾದ ಚಟುವಟಿಕೆಗಳು ಮೊದಲಾದ ಉಪಕ್ರಮಗಳನ್ನು ಪರಿಶೀಲಿಸಿತ್ತು.

ಅಂತರರಾಷ್ಟ್ರೀಯ ಮಟ್ಟದಲ್ಲಿ ತಾಯಂದಿರು ಹಾಗೂ ನವಜಾತ ಶಿಶುಗಳ ಆರೈಕೆಯಲ್ಲಿ ಕೈಗೊಂಡಿರುವ ಉಪಕ್ರಮಗಳು ಹಾಗೂ ಸಂಶೋಧನೆಗಳ ಕುರಿತು ಮೆಚ್ಚುಗೆ ವ್ಯಕ್ತಪಡಿಸಿತ್ತು. ವಿದ್ಯಾರ್ಥಿಗಳಿಗೆ ಅಧ್ಯಯನಕ್ಕೆ ಅಗತ್ಯವಾದ ಅತ್ಯುತ್ತಮ ಕಲಿಕಾ ಮೂಲ ಸೌಕರ್ಯಗಳನ್ನು ನೀಡಿರುವ ಕುರಿತು ಹಾಗೂ ಎಲ್ಲ ಹಂತಗಳಲ್ಲೂ ಸಾಧಿಸಿರುವ ಪ್ರಗತಿ ಬಗ್ಗೆ ಅಭಿನಂದಿಸಿತ್ತು ಎಂದು ಕೆಎಲ್‌ಇ ಪ್ರಕಟಣೆ ತಿಳಿಸಿದೆ.

ಉತ್ತಮ ಶ್ರೇಯಾಂಕ ಸಿಕ್ಕಿರುವುದಕ್ಕೆ ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷರೂ ಆಗಿರುವ ಅಕಾಡೆಮಿಯ ಕುಲಾಧಿಪತಿ ಪ್ರಭಾಕರ ಕೋರೆ ಹರ್ಷ ವ್ಯಕ್ತಪಡಿಸಿದ್ದಾರೆ.

ಎಲೆ ಬಿಚ್ಚಾಲಿ ಜಮೀನು ಸ್ವಾಧೀನಕ್ಕೆ ಹುನ್ನಾರ: ಆರೋಪ

ಬೆಂಗಳೂರು: ‘ಸರ್ಕಾರದ ಮಟ್ಟದಲ್ಲಿ ಪ್ರಭಾವ ಬಳಸಿ ರಾಯಚೂರಿನ ಎಲೆ ಬಿಚ್ಚಾಲಿಯ ಬೃಂದಾವನದ ಬಳಿ ಇರುವ ಜಾಗವನ್ನು ಪಡೆಯಲು ಕೆಲವರು ಮುಂದಾಗಿದ್ದಾರೆ. ಇದು ಕಾನೂನಿನ ಪ್ರಕಾರ ತಪ್ಪು’ ಎಂದು ಜಪದಕಟ್ಟೆ ಬಿಚ್ಚಾಲಿ ಅಪ್ಪಣ್ಣಾಚಾರ್ಯ ಸೇವಾ ಟ್ರಸ್ಟ್‌ನ ಪದಾಧಿಕಾರಿಗಳು ತಿಳಿಸಿದ್ದಾರೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಪ್ಪಣ್ಣಾಚಾರ್ಯ ಅವರ ವಂಶಸ್ಥ ಬಾಡದ ಪವಮಾನಾಚಾರ್, ‘ಈ ವಿವಾದಿತ ಜಾಗದ ಕುರಿತು ಹೈಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದ್ದು, ವಾಮಮಾರ್ಗದ ಮೂಲಕ ಜಮೀನು ಸ್ವಾಧೀನ ಪಡಿಸಿಕೊಳ್ಳಲು ಹುನ್ನಾರಗಳು ನಡೆಯುತ್ತಿವೆ. ಸಂಪುಟ ಸಭೆಯಲ್ಲಿ ಅನುಮೋದನೆ ಪಡೆದು, ವಿವಾದಿತ ಸ್ಥಳವನ್ನು ತಮಗೆ ಹಂಚಿಕೆ ಮಾಡಿಕೊಳ್ಳುವ ಪ್ರಯತ್ನ ನಡೆದಿದೆ. ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥ ಆಗುವವರೆಗೆ ಸರ್ಕಾರ ಯಾವುದೇ ನಿರ್ಧಾರ ತೆಗೆದುಕೊಳ್ಳಬಾರದು’ ಎಂದು ಒತ್ತಾಯಿಸಿದರು.

ಲೋಕ ಅದಾಲತ್; ಮೈಸೂರಿಗೆ ಮೊದಲ ಸ್ಥಾನ

ಮೈಸೂರು: ‘ಕಳೆದ ವರ್ಷ ಡಿ. 18ರಂದು ನಡೆದಿದ್ದ ಲೋಕ ಅದಾಲತ್‌ನಲ್ಲಿ ಒಟ್ಟು 52 ಸಾವಿರ ಪ್ರಕರಣಗಳು ಇತ್ಯರ್ಥಗೊಂಡಿದ್ದು, ರಾಜ್ಯದಲ್ಲೇ ಮೈಸೂರು ಪ್ರಥಮ ಸ್ಥಾನ ಗಳಿಸಿದೆ’ ಎಂದು ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಎಂ.ಎಲ್.ರಘುನಾಥ್ ತಿಳಿಸಿದರು.

‘ಕಳೆದ ವರ್ಷ ಒಟ್ಟಾರೆ 96 ಸಾವಿರ ಪ್ರಕರಣಗಳು ಲೋಕ ಅದಾಲತ್‌ನಲ್ಲಿ ಬಗೆಹರಿದಿವೆ. ಮಾರ್ಚ್ 12ರಂದು ನಡೆಯಲಿರುವ ಲೋಕ ಅದಾಲತ್‌ನಲ್ಲೂ ಹೆಚ್ಚಿನ ಪ್ರಕರಣಗಳು ಇತ್ಯರ್ಥವಾಗಲಿವೆ’ ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಎಚ್‌ಪಿಸಿಎಲ್ ಸಮೂಹದಿಂದ ಮುರುಗೇಶಪಾಳ್ಯದ ಆಟೊ ಕೇರ್ ಸೆಂಟರ್‌ನಲ್ಲಿ ‘ಪವರ್ 100’ ಅಲ್ಟ್ರಾ ಪ್ರೀಮಿಯಮ್ ಹೈ ಆಕ್ಟೇನ್ ಪೆಟ್ರೋಲ್ ವಿತರಣೆಗೆ ಸಮೂಹದ ಅಧ್ಯಕ್ಷ ಮುಖೇಶ್ ಕುಮಾರ್ ಸುರಾನಾ ಚಾಲನೆ ನೀಡಿದರು. ಮುಖ್ಯ ವ್ಯವಸ್ಥಾಪಕ ಎನ್‌.ಕೆ. ಚಾರಿ ಹಾಗೂ ಅಧಿಕಾರಿಗಳು ಇದ್ದರು.

ಸಂಕ್ಷಿಪ್ತ ಸುದ್ದಿ

ವಿದ್ಯುತ್ ವ್ಯತ್ಯಯ

ಬೆಂಗಳೂರು: ಬೆಸ್ಕಾಂ ವಿದ್ಯುತ್ ಕೇಂದ್ರಗಳಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ಫೆ.23ರಂದು ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ವ್ಯತ್ಯಯವಾಗುವ ಸ್ಥಳಗಳು: ರಾಘವೇಂದ್ರ ಬ್ಲಾಕ್, ವಿದ್ಯಾಪೀಠ ರಸ್ತೆ, ಟಿ.ಜಿ.ಪಾಳ್ಯ ಮುಖ್ಯರಸ್ತೆ, ಮಾರುತಿ ನಗರ, ಅಪೂರ್ವ ಬಡಾವಣೆ, ಉಪಕಾರ್ ಬಡಾವಣೆ, ದೊಡ್ಡಬಸ್ತಿ ಮುಖ್ಯರಸ್ತೆ, ಭುವನೇಶ್ವರಿ ನಗರ, ಅಂಬೇಡ್ಕರ್ ನಗರ, ದುಬಾಸಿಪಾಳ್ಯ, ಬಿಡಿಎ ಕಾಲೊನಿ, ಉಲ್ಲಾಳ ಬಸ್ ನಿಲ್ದಾಣ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಪಿಪಿಗಳ ಭರ್ತಿಗೆ ಆದೇಶ

ಬೆಂಗಳೂರು: ‘ರಾಜ್ಯದಲ್ಲಿ ಖಾಲಿ ಇರುವ 300ಕ್ಕೂ ಹೆಚ್ಚು ಪಬ್ಲಿಕ್ ಪ್ರಾಸಿಕ್ಯೂಟರ್ (ಪಿಪಿ) ಹುದ್ದೆಗಳನ್ನು ಮೂರು ತಿಂಗಳಲ್ಲಿ ಭರ್ತಿ ಮಾಡಿ’ ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ.

ಈ ಕುರಿತಂತೆ ಹೈಕೋರ್ಟ್ ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

‘ಈಗಾಗಲೇ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳಿಲ್ಲದೆ ನ್ಯಾಯಾಲಯಗಳಲ್ಲಿ ಕಲಾಪಗಳು ಸಮರ್ಪಕವಾಗಿ ನಡೆಯುತ್ತಿಲ್ಲ. ಇದರಿಂದಾಗಿ ವಿಚಾರಣಾಧೀನ ಕೈದಿಗಳಿಗೆ ಸಾಕಷ್ಟು ತೊಂದರೆ ಆಗುತ್ತಿದೆ. ಆದ್ದರಿಂದ, ಖಾಲಿ ಹುದ್ದೆಗಳ ಭರ್ತಿಗೆ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು’ ಎಂದು ನ್ಯಾಯಪೀಠ ಸೂಚಿಸಿದೆ. ವಿಚಾರಣೆಯನ್ನು ಜೂನ್ ಮೊದಲ ವಾರಕ್ಕೆ ಮುಂದೂಡಲಾಗಿದೆ.

ಅಮೃತ ನಗರ ಯೋಜನೆಯಡಿ ಕಾಮಗಾರಿ ಕೈಗೆತ್ತಿಕೊಳ್ಳಲು ಸಲಹೆ

ಇಟ್ಟಮಡು ಜಂಕ್ಷನ್ ಮೇಲ್ಸೇತುವೆ: ಅನುದಾನಕ್ಕೆ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದ್ಮನಾಭನಗರ ವಿಧಾನ ಸಭಾಕ್ಷೇತ್ರವ್ಯಾಪ್ತಿಯಲ್ಲಿ ಇಟ್ಟಮಡು ಜಂಕ್ಷನ್‌ನಿಂದ ಕಾಮಾಕ್ಯ ಜಂಕ್ಷನ್‌ವರೆಗೆ ಹೊರ ವರ್ತುಲ ರಸ್ತೆಯಲ್ಲಿ ಮೇಲ್ಸೇತುವೆ ನಿರ್ಮಿಸುವ ₹ 152 ಕೋಟಿ ಅಂದಾಜು ವೆಚ್ಚದ ಕಾಮಗಾರಿಗೆ ಅನುಮೋದನೆ ನೀಡಲು ನಗರಾಭಿವೃದ್ಧಿ ಇಲಾಖೆ ನಿರಾಕರಿಸಿದೆ.

ಈ ಕಾಮಗಾರಿಗೆ ₹ 62 ಕೋಟಿಗಳಷ್ಟು ಹೆಚ್ಚುವರಿ ಅನುದಾನದ ಅಗತ್ಯ ಇರುವುದರಿಂದ, ಇದನ್ನು ಅಮೃತ ನಗರೋತ್ಥಾನ ಯೋಜನೆಯಡಿ ಸೇರ್ಪಡೆಗೊಳಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಅನುಮೋದನೆ ಪಡೆಯುವಂತೆ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅವರು ಬಿಬಿಎಂಪಿಗೆ ಸಲಹೆ ನೀಡಿದ್ದಾರೆ.

ಮುಖ್ಯಾಂಶಗಳು

- ₹162 ಕೋಟಿ ಮೊತ್ತದ ಯೋಜನೆ
- ಸಿಗ್ನಲ್‌ಮುಕ್ತ ಕಾರಿಡಾರ್‌ನ ಅನುದಾನ ಬಳಸಲು ಯೋಜಿಸಿದ್ದ ಪಾಲಿಕೆ
- ಹೊಸ ಪ್ರಸ್ತಾವನೆ ಸಲ್ಲಿಸಿ ಅನುಮೋದನೆ ಪಡೆಯಲು ಸೂಚನೆ

ಹೊರವರ್ತುಲ ರಸ್ತೆಯಲ್ಲಿ ಇಟ್ಟಮಡು ಜಂಕ್ಷನ್–ಫುಡ್‌ವರ್ಲ್ಡ್ ಜಂಕ್ಷನ್, ಕಾಮಾಕ್ಯ ಜಂಕ್ಷನ್‌ಗಳನ್ನು ಒಳಗೊಂಡು 1.5 ಕಿ.ಮೀ ಉದ್ದದ ಮೇಲ್ಸೇತುವೆ ನಿರ್ಮಿಸುವ ಯೋಜನೆಯನ್ನು ಬಿಬಿಎಂಪಿ ರೂಪಿಸಿದೆ. ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆ ಪಡೆದು ₹ 152 ಕೋಟಿ ಅಂದಾಜು ವೆಚ್ಚದ ಸಮಗ್ರ ಯೋಜನಾ ವರದಿ ಪಾಲಿಕೆ ತಯಾರಿಸಿದೆ.

ಸಿಗ್ನಲ್‌ಮುಕ್ತ ಕಾರಿಡಾರ್ ನಿರ್ಮಾಣಕ್ಕಾಗಿ 2019ರ ಸೆ.16ರಂದು ₹90 ಕೋಟಿ ಅನುದಾನವನ್ನು ಮಂಜೂರು ಮಾಡಲಾಗಿತ್ತು. ಇದರಲ್ಲಿ ಬಳಕೆ ಆಗದೆ ಉಳಿದ ಅನುದಾನವನ್ನು ಈ ಮೇಲ್ಸೇತುವೆಗೆ ಬಳಸಲು ಬಿಬಿಎಂಪಿ ನಿರ್ಧರಿಸಿತ್ತು. ಸಿಗ್ನಲ್‌ಮುಕ್ತ ಕಾರಿಡಾರ್ ಯೋಜನೆಯಡಿ ಫುಡ್‌ವರ್ಲ್ಡ್ ಜಂಕ್ಷನ್, ಜೇಡಿಮರ ಜಂಕ್ಷನ್‌ಗಳಲ್ಲಿ ಕೆಳಸೇತುವೆ ನಿರ್ಮಿಸುವ ಪ್ರಸ್ತಾವನೆಗಳನ್ನು ಬಿಬಿಎಂಪಿ ರದ್ದುಪಡಿಸಿದೆ. ಇದಕ್ಕೆ ಬಳಸಲು ಉದ್ದೇಶಿಸಿದ್ದ ₹ 37.54 ಕೋಟಿ ಅನುದಾನ ಖರ್ಚಾಗದೇ ಉಳಿದಿದೆ. ಅನುಮೋದನೆಗೊಂಡ ಕೆಲ ವೈಟ್‌ಟಾಪಿಂಗ್ ಕಾಮಗಾರಿಗಳನ್ನು ಸರ್ಕಾರ 2019ರ ಸೆ.20ರಂದು ಪರಿಷ್ಕರಿಸಿತ್ತು. ಆಯ್ದ ಕೆಲವು ರಸ್ತೆಗಳ ವೈಟ್‌ಟಾಪಿಂಗ್ ಕಾಮಗಾರಿಗೆ ಮೀಸಲಿಟ್ಟಿದ್ದ ₹ 50 ಕೋಟಿ ಅನುದಾನದಲ್ಲಿ ₹ 24.46 ಕೋಟಿ ಅನುದಾನವೂ ಖರ್ಚಾಗದೇ ಉಳಿದಿದೆ.

ಈ ಎರಡು ಕಾಮಗಾರಿಗಳ ಉಳಿಕೆ ಅನುದಾನಗಳ ಜೊತೆ ಇತರ ಕೆಲವು ಕಾಮಗಾರಿಗಳ ಉಳಿಕೆ ಅನುದಾನ ಬಳಸಿ ಈ ಮೇಲ್ಸೇತುವೆ ನಿರ್ಮಿಸಲು ಅನುಮೋದನೆ ನೀಡಬೇಕು. ಈ ಮೇಲ್ಸೇತುವೆ ನಿರ್ಮಾಣ ಕಾಮಗಾರಿಯ ₹ 152 ಕೋಟಿ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಬೇಕು. ಕಾಮಗಾರಿಗೆ ಟೆಂಡರ್ ಆಹ್ವಾನಿಸುವುದಕ್ಕೆ ಅನುಮೋದನೆ ನೀಡಬೇಕು ಎಂದು ಕೋರಿ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ನಗರಾಭಿವೃದ್ಧಿ ಇಲಾಖೆಗೆ ಪ್ರಸ್ತಾವ ಸಲ್ಲಿಸಿದ್ದರು. ಬಿಬಿಎಂಪಿಯ ಈ ಪ್ರಸ್ತಾವವನ್ನು ಪರಿಶೀಲಿಸಿರುವ ನಗರಾಭಿವೃದ್ಧಿ ಇಲಾಖೆ, ಈ ಪ್ರಸ್ತಾಪಿತ ಯೋಜನೆಗೆ ₹ 62 ಕೋಟಿ ಹೆಚ್ಚುವರಿ ಅನುದಾನದ ಅಗತ್ಯವಿದೆ. ಹಾಗಾಗಿ ಈ ಅನುದಾನವನ್ನು ಅಮೃತ ನಗರೋತ್ಥಾನ ಯೋಜನೆಯಡಿ ಬಳಸಲು ಅನುವು ಮಾಡಿಕೊಡಬೇಕಾಗುತ್ತದೆ. ಹಾಗಾಗಿ ಅಮೃತ ನಗರೋತ್ಥಾನ ಯೋಜನೆ ಅಡಿ ಈ ಕಾಮಗಾರಿಯನ್ನು ಸೇರ್ಪಡೆಗೊಳಿಸಿ ಕ್ರಿಯಾಯೋಜನೆ ತಯಾರಿಸಿ, ಈ ಕುರಿತು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಬೇಕು. ಆ ಪ್ರಸ್ತಾವ ಅನುಮೋದನೆಗೊಂಡ ಬಳಿಕವೇ ಮುಂದಿನ ಪ್ರಕ್ರಿಯೆಗಳನ್ನು ಕೈಗೆತ್ತಿಕೊಳ್ಳಬೇಕು ಎಂದು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ಫೆ 16ರಂದು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಚಳ್ಳಕೆರೆಯಲ್ಲಿ ಪ್ರಾಂಶುಪಾಲರು, ಬೋಧಕರ ಜತೆ ವಿದ್ಯಾರ್ಥಿಗಳ ವಾಗ್ವಾದ

ಕೇಸರಿ ಶಾಲು ಧರಿಸಿ ತರಗತಿಗೆ ಹಾಜರಿ

ಪ್ರಜಾವಾಣಿ ವಾರ್ತೆ

ಹುಮನಾಬಾದ್ (ಬೀದರ್): ಪಟ್ಟಣದ ಪ್ರಥಮ ದರ್ಜೆ ಕಾಲೇಜಿನ ಬಿಕಾಂ ಪ್ರಥಮ ವರ್ಷದ ಕೆಲವು ವಿದ್ಯಾರ್ಥಿಗಳು ಮಂಗಳವಾರ ಕೇಸರಿ ಶಾಲು ಧರಿಸಿ ತರಗತಿಗೆ ಹಾಜರಾದರು.

‘ಮುಸ್ಲಿಂ ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರು ನಿತ್ಯ ಹಿಜಾಬ್ ಮತ್ತು ಬುರ್ಖಾ ಧರಿಸಿ ಬರುತ್ತಿದ್ದಾರೆ. ನ್ಯಾಯಾಲಯದ ಮಧ್ಯಂತರ ಆದೇಶದ ಪಾಲನೆ ಆಗುತ್ತಿಲ್ಲ. ಎಲ್ಲರಿಗೂ ನ್ಯಾಯ ಒಂದೇ ಆಗಿದೆ. ಅದನ್ನು ಅವರು ನಿರ್ಲಕ್ಷ್ಯ ಮಾಡುತ್ತಿದ್ದಾರೆ. ನಾವು ಸಹ ಕೇಸರಿ ಶಾಲು ಧರಿಸಿಕೊಂಡು ಬಂದಿದ್ದೇವೆ’ ಎಂದು ಕೇಸರಿ ಶಾಲು ಧರಿಸಿದ್ದ ವಿದ್ಯಾರ್ಥಿಗಳು ಹೇಳಿದರು.

ಕೇಸರಿ ಶಾಲು ಧರಿಸಿ ತರಗತಿಗೆ ಹಾಜರಾಗಿದ್ದ ವಿದ್ಯಾರ್ಥಿಗಳಿಗೆ ಕಾಲೇಜು ಪ್ರಾಂಶುಪಾಲ ವೀರಣ್ಣತುಪ್ಪದ್ ಮನವೊಲಿಸಿ, ಅವರನ್ನು ಮನೆಗೆ ಕಳುಹಿಸಿದರು.

‘ಹಿಜಾಬ್ ಮತ್ತು ಕೇಸರಿ ವಿವಾದ ಇಷ್ಟು ದಿನಗಳವರೆಗೆ ಕಾಲೇಜಿನಲ್ಲಿ ಇರಲಿಲ್ಲ. ಮಂಗಳವಾರ ಕೆಲವು ವಿದ್ಯಾರ್ಥಿಗಳು ಏಕಾಏಕಿ ಕೇಸರಿ ಶಾಲು ಧರಿಸಿ ಬಂದಿದ್ದರು. ಅವರನ್ನು ಮನೆಗೆ ಕಳಿಸಲಾಗಿದೆ. ಸದ್ಯ ಕಾಲೇಜಿನಲ್ಲಿ ಶಾಂತಿಯ ವಾತಾವರಣ ಇದೆ. ವಿವಾದ ಹೆಚ್ಚಾದರೇ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು, ಅವರು ನೀಡುವ ಆದೇಶ ಪಾಲಿಸಲಾಗುವುದು’ ಎಂದು ವೀರಣ್ಣ ತುಪ್ಪದ್ ಹೇಳಿದರು.

ಚಳ್ಳಕೆರೆಯಲ್ಲೂ ಕೇಸರಿ ಶಾಲು (ಚಿತ್ರದುರ್ಗ ವರದಿ): ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯ ಪ್ರಥಮ ದರ್ಜೆ ಕಾಲೇಜಿನಲ್ಲೂ ಹಿಜಾಬ್ ಧರಿಸಿಕೊಂಡು ಬರುತ್ತಿದ್ದುದನ್ನು ಪ್ರಶ್ನಿಸಿದ ಕೆಲ ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿ ಕಾಲೇಜು ಆವರಣ ಪ್ರವೇಶಿಸಿ ಪ್ರಾಂಶುಪಾಲರು ಮತ್ತು ಬೋಧಕರ ಜತೆ ವಾಗ್ವಾದಕ್ಕಿಳಿದರು.

ಚಿತ್ರದುರ್ಗದ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿಯರು ‘ನಾವು ಯಾವುದೇ ಕಾರಣಕ್ಕೂ ಹಿಜಾಬ್ ತೆಗೆಯುವುದಿಲ್ಲ’ ಎಂದು ಪಟ್ಟುಹಿಡಿದು ಪ್ರತಿಭಟನೆ ನಡೆಸಿದರು. ನಿಯೋಜಿತ ಕಾರ್ಯದ ನೋಟ್ ಬುಕ್‌ಗಳನ್ನು ಸಿಬ್ಬಂದಿಗೆ ನೀಡಿ ಸ್ಥಳದಿಂದ ತೆರಳಿದರು.

ಹುಮನಾಬಾದ್‌ನ ಪ್ರಥಮ ದರ್ಜೆ ಕಾಲೇಜಿನ ತರಗತಿಯಲ್ಲಿ ಕೇಸರಿ ಶಾಲು ಧರಿಸಿ ಕುಳಿತಿದ್ದ ವಿದ್ಯಾರ್ಥಿಗಳು

ವಿದ್ಯಾರ್ಥಿನಿಯರ ಪ್ರತಿಭಟನೆ: ಮೈಸೂರಿನ ಕಾಲೇಜಿಗೆ ರಜೆ

ಮೈಸೂರು: ಇಲ್ಲಿನ ರಾಜೀವ್ ನಗರದ ಸಂತ ಜೋಸೆಫರ ಪದವಿಪೂರ್ವ ಕಾಲೇಜಿನಲ್ಲಿ ಸೋಮವಾರ ವಿದ್ಯಾರ್ಥಿನಿಯರು ಹಿಜಾಬ್ ಧರಿಸಲು ಅವಕಾಶ ನೀಡುವಂತೆ ಪ್ರತಿಭಟಿಸಿದ್ದರಿಂದ ಮಂಗಳವಾರ ಕಾಲೇಜಿಗೆ ರಜೆ ಘೋಷಿಸಲಾಗಿತ್ತು.

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆಯ ಗೌತಮ್ ಪ್ರೌಢಶಾಲೆಯಲ್ಲಿ ಹಿಜಾಬ್ ಧರಿಸಿ ಬಂದಿದ್ದ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿನಿ ಮಂಗಳವಾರವೂ ಪೂರ್ವ ಸಿದ್ಧತಾ ಪರೀಕ್ಷೆ ಬರೆದಿಲ್ಲ. 9ನೇ ತರಗತಿಯ ವಿದ್ಯಾರ್ಥಿನಿಗೂ ತರಗತಿಗೆ ಹಾಜರಾಗಲು ಅವಕಾಶ ನೀಡಿಲ್ಲ.

ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಶನಿವಾರಸಂತೆಯ ಭಾರತಿ ವಿದ್ಯಾಸಂಸ್ಥೆ ಪ್ರಥಮ ದರ್ಜೆ ಕಾಲೇಜಿಗೆ ಬಂದ 10 ವಿದ್ಯಾರ್ಥಿನಿಯರ ಪೈಕಿ ಏಳು ಮಂದಿ ಹಿಜಾಬ್ ತೆಗೆದು ತರಗತಿಗೆ ಹಾಜರಾದರು.

ಕಾಲೇಜಿನ ಸಿಬ್ಬಂದಿ ಜತೆ ವಾಗ್ವಾದ (ಯಾದಗಿರಿ ವರದಿ): ಯಾದಗಿರಿ ಜಿಲ್ಲೆಯ ಶಹಾಪುರದ ಸರ್ಕಾರಿ ಬಾಲಕಿಯ ಪದವಿ ಪೂರ್ವ ಕಾಲೇಜಿನಲ್ಲಿ ಹಿಜಾಬ್ ಧರಿಸಿ ಬಂದಿದ್ದ ವಿದ್ಯಾರ್ಥಿನಿಯರ ಪ್ರವೇಶಕ್ಕೆ ಕಾಲೇಜಿನ ಸಿಬ್ಬಂದಿ ನಿರಾಕರಿಸಿದರು. ಆಗ ವಿದ್ಯಾರ್ಥಿನಿಯರು ಮತ್ತು ಅವರ ಪಾಲಕರು ಸಿಬ್ಬಂದಿ ಜತೆ ವಾಗ್ವಾದ ನಡೆಸಿ ಪ್ರತಿಭಟನೆ ನಡೆಸಿದರು.

ವಿಡಿಯೊ: ಚಿಂಗಾರಿ ಸ್ಟಾರ್ ಸ್ಪರ್ಧೆ

ಬೆಂಗಳೂರು: ಕಿರು ವಿಡಿಯೊ ರೂಪಿಸುವವರು ಹಾಗೂ ಇತರರ ಮೇಲೆ ಪ್ರಭಾವ ಬೀರಬಲ್ಲ ಯುವಕರು ಖ್ಯಾತಿ ಸಂಪಾದಿಸುವಂತೆ ಆಗಬೇಕು, ಜೊತೆಜೊತೆಗೇ ಆನ್‌ಲೈನ್ ಜಗತ್ತಿನಲ್ಲಿ ಒಂದು ವೃತ್ತಿಯನ್ನು ಕಟ್ಟಿಕೊಳ್ಳಬೇಕು ಎಂಬುದು ಉದ್ದೇಶದಿಂದ ಚಿಂಗಾರಿ ಆ್ಯಪ್, ‘ಚಿಂಗಾರಿ ಸ್ಟಾರ್’ ಸ್ಪರ್ಧೆಯನ್ನು ಈಚೆಗೆ ಘೋಷಿಸಿದೆ.

2020ರಲ್ಲಿ ಚಿಂಗಾರಿ ಆ್ಯಪ್‌ಗೆ ಕೇಂದ್ರ ಸರ್ಕಾರದ ಆತ್ಮನಿರ್ಭರ ಭಾರತ ಅತ್ಯುತ್ತಮ ಆ್ಯಪ್ ಪ್ರಶಸ್ತಿ ಲಭಿಸಿದೆ. ಕಿರು ಅವಧಿಯ ವಿಡಿಯೊಗಳ ವಿಭಾಗದಲ್ಲಿ ಚಿಂಗಾರಿ ಆ್ಯಪ್ ಎರಡು ವರ್ಷಗಳ ಅವಧಿಯಲ್ಲಿ ತಾಂತ್ರಿಕವಾಗಿ ಹೊಸತನಗಳನ್ನು ಅಳವಡಿಸಿಕೊಳ್ಳುವ ಮೂಲಕ ದೇಶದ ನಂಬರ್ 1 ವಿಡಿಯೊ ಆ್ಯಪ್ ಆಗಿ ಬೆಳೆದಿದೆ ಎಂದು ಪ್ರಕಟಣೆ ತಿಳಿಸಿದೆ.

‘ವಿಡಿಯೊ ರೂಪಿಸುವವರಿಗೆ ಹೆಚ್ಚಿನ ಸ್ವಾತಂತ್ರ್ಯ ನೀಡಿರುವುದು ನಮ್ಮ ವೇದಿಕೆಯು ವೇಗವಾಗಿ ಬೆಳವಣಿಗೆ ಕಾಣುವುದಕ್ಕೆ ಒಂದು ಕಾರಣ. ಇದರಿಂದಾಗಿ ಪ್ರತಿಭಾವಂತರು ನಮ್ಮ ಕಡೆ ಮುಖ ಮಾಡಿದ್ದಾರೆ. ಚಿಂಗಾರಿ ಆ್ಯಪ್ ಮೂಲಕ ವಿಡಿಯೊ ವೀಕ್ಷಿಸುವವರು ಕೂಡ ಆದಾಯ ಗಳಿಸಬಹುದು’ ಎಂದು ಆ್ಯಪ್‌ನ ಸಿಇಒ ಸುಮಿತ್ ಘೋಷ್ ಹೇಳಿದ್ದಾರೆ.

ಚಿಂಗಾರಿ ಆ್ಯಪ್‌ನಲ್ಲಿನ $ಗಾರಿ ಟೋಕನ್‌ಗಳು ಬ್ಲಾಕ್‌ಚೈನ್ ತಂತ್ರಜ್ಞಾನವನ್ನು ಬಳಸಿ, ವಿಡಿಯೊ ರೂಪಿಸುವವರಿಗೆ ಆ್ಯಪ್ ಮೂಲಕ ಆದಾಯ ಸಂಗ್ರಹಿಸಲು ನೆರವಾಗುತ್ತವೆ. 10 ಕೋಟಿಗೂ ಹೆಚ್ಚು ಜನ ಈಗ ಈ ಆ್ಯಪ್ ಬಳಸುತ್ತಿದ್ದಾರೆ. ಚಿಂಗಾರಿ ಸ್ಟಾರ್ ಸ್ಪರ್ಧೆಯಲ್ಲಿ ಜಯ ಗಳಿಸುವ ವ್ಯಕ್ತಿಗೆ ₹ 1 ಕೋಟಿ ಮೌಲ್ಯದ $ಗಾರಿ ಟೋಕನ್‌ಗಳು ಸಿಗುತ್ತವೆ ಎಂದು ಕಂಪನಿ ಹೇಳಿದೆ.

ಪಟಾಕಿ ಕಾರ್ಖಾನೆಯಲ್ಲಿ ಸ್ಫೋಟ, 7 ಸಾವು

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶದ ಉನಾ ಜಿಲ್ಲೆಯ ಪಟಾಕಿ ತಯಾರಿಸುವ ಕಾರ್ಖಾನೆಯೊಂದರಲ್ಲಿ ಮಂಗಳವಾರ ಸಂಭವಿಸಿದ ಸ್ಫೋಟದಲ್ಲಿ ಏಳು ಮಂದಿ ಮೃತಪಟ್ಟಿದ್ದು, 12 ಮಂದಿಗೆ ಸುಟ್ಟ ಗಾಯಗಳಾಗಿವೆ.

ಬಾಥು ಕೈಗಾರಿಕಾ ಪ್ರದೇಶದಲ್ಲಿ ಈ ದುರಂತ ಸಂಭವಿಸಿದೆ. ಮೃತರು ಹಾಗೂ ಗಾಯಗೊಂಡವರಲ್ಲಿ ಬಹುತೇಕರು ವಲಸೆ ಕಾರ್ಮಿಕರಾಗಿದ್ದಾರೆ ಎಂದು ಜಿಲ್ಲಾಧಿಕಾರಿ ರಾಘವ ಶರ್ಮಾ ತಿಳಿಸಿದ್ದಾರೆ. ದುರಂತಕ್ಕೆ ಆಘಾತ ವ್ಯಕ್ತಪಡಿಸಿರುವ ಪ್ರಧಾನಿ ನರೇಂದ್ರ ಮೋದಿ, ಮೃತರ ಕುಟುಂಬದವರಿಗೆ ತಲಾ ₹ 2 ಲಕ್ಷ ಮತ್ತು ಗಾಯಗೊಂಡವರಿಗೆ ತಲಾ ₹ 50 ಸಾವಿರ ಪರಿಹಾರ ಪ್ರಕಟಿಸಿದ್ದಾರೆ.

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಛೇರಿ, ಕೃಭಾಜನಿನಿ, ಅರಣ್ಯ ವಿಭಾಗ, ಆಲಮಟ್ಟಿ.

ಕಛೇರಿ ದೂರವಾಣಿ: 08426-281410.

ಸಂ:ಕೃಭಾಜನಿನಿ/ಉಅಸಂ/ಬಿಯುಡಿ/ಡಿಪಿಟಿ/ಕ್ಯಾಟ್.ಯೋ/ಇ-ಟೆಂಡರ್/2021-22/988 ದಿನಾಂಕ:19.02.2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಈ ಕೆಳಗೆ ನಮೂದಿಸಿದ (ಕ್ಯಾಟ್) ಯೋಜನೆಯ 6 ಕಾಮಗಾರಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಡಿ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಿದ್ದು, ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು ವೆಬ್‌ಸೈಟ್ www.e-proc.karnataka.gov.in ಮೂಲಕ ಪಡೆದುಕೊಳ್ಳಬಹುದು. ಇ-ಪ್ರೊಕ್ಯೂರ್‌ಮೆಂಟ್ ನಿಗದಿಪಡಿಸಿದಂತೆ ಟೆಂಡರ್ ಪ್ರೋಸೆಸ್ಸಿಂಗ್ ಶುಲ್ಕವನ್ನು ಇ-ಪೇಮೆಂಟ್ ಮುಖಾಂತರ ಪಾವತಿಸತಕ್ಕದ್ದು.

ನಿಗದಿತ ದಿನಾಂಕದಂದು 1ನೇ ಕರೆ ಟೆಂಡರ್‌ದಲ್ಲಿ ಯಾವುದೇ ಗುತ್ತಿಗೆದಾರರು ಭಾಗವಹಿಸದೇ ಇದ್ದಲ್ಲಿ ಮರು ಟೆಂಡರ್ 2 ನೇ ಕರೆ ದಿನಾಂಕವನ್ನು ಸಹ ತೋರಿಸಿದ್ದು ಈ ಕೆಳಗಿನಂತಿವೆ.

ಕ್ರ.ಸಂ	ವಿವರ	1ನೇ ಕರೆ ಟೆಂಡರ್ ದಿನಾಂಕ	2ನೇ ಕರೆ ಟೆಂಡರ್ ದಿನಾಂಕ
1	ಟೆಂಡರ್ ಪ್ರಕಟಿಸುವ ದಿನಾಂಕ (ಅಂದಾಜು)	19.02.2022 ಸಂಜೆ 5.00 ಘಂಟೆಯವರೆಗೆ	07.03.2022 ಸಂಜೆ 5.00 ಘಂಟೆಯವರೆಗೆ
2	ಪ್ರಿ ಬಿಡ್ ಮೀಟಿಂಗ್	22.02.2022 ಬೆಳಿಗ್ಗೆ 11.30 ಘಂಟೆಯವರೆಗೆ	10.03.2022 ಸಂಜೆ 5.00 ಘಂಟೆಯವರೆಗೆ
3	ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ	28.02.2022 ಸಂಜೆ 5.00 ಘಂಟೆಯವರೆಗೆ	15.03.2022 ಸಂಜೆ 5.00 ಘಂಟೆಯವರೆಗೆ
4	ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ	02.03.2022 ಬೆಳಿಗ್ಗೆ 11.00 ಘಂಟೆಗೆ	17.03.2022 ಬೆಳಿಗ್ಗೆ 11.00 ಘಂಟೆಗೆ
5	ಆರ್ಥಿಕ ಬಿಡ್ ತೆರೆಯುವ ದಿನಾಂಕ	04.03.2022 ಬೆಳಿಗ್ಗೆ 11.00 ಘಂಟೆಗೆ	19.03.2022 ಬೆಳಿಗ್ಗೆ 11.00 ಘಂಟೆಗೆ

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕೃಭಾಜನಿನಿ, ಅರಣ್ಯ ವಿಭಾಗ, ಆಲಮಟ್ಟಿ

ವಾಸಾಸಂಇ/ವಿಜಯಪುರ/545/ಎಂಸಿಎ/2021-22

ತರಗತಿಯೊಳಗೆ ಮಾತ್ರವೇ ಹಿಜಾಬ್ ನಿರ್ಬಂಧ: ಅಡ್ವೊಕೇಟ್ ಜನರಲ್

‘ಹಿಜಾಬ್ ನಿರ್ಬಂಧ: ಸಿ.ಡಿ.ಸಿಗಳ ವಿವೇಚನಾಧಿಕಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಿಜಾಬ್ ಧರಿಸುವುದು ಬಿಡುವುದು ಮುಸ್ಲಿಂ ಮಹಿಳೆಯರ ಇಚ್ಛೆಗೆ ಬಿಟ್ಟ ವಿಚಾರ. ಆದರೆ, ಶಿಕ್ಷಣ ಸಂಸ್ಥೆಗಳ ಘನತೆ ಮತ್ತು ಶಿಸ್ತು ಕಾಪಾಡುವ ದೃಷ್ಟಿಯಿಂದ ಸರ್ಕಾರ ಅದನ್ನು ಧರಿಸಿ ತರಗತಿಯೊಳಗೆ ಬರದಂತೆ ಕಾಲೇಜು ಆಡಳಿತ ಮಂಡಳಿಗಳು (ಸಿಡಿಸಿ) ಕಟ್ಟಳೆ ಹೇರಿವೆ. ಇದು ಕೇವಲ ಶಿಕ್ಷಣ ಸಂಸ್ಥೆಗಳ ಅದರಲ್ಲೂ ತರಗತಿಗಳ ಒಳಗಿನ ಪ್ರವೇಶಕ್ಕೆ ಮಾತ್ರವೇ ಇರುವಂತಹ ನಿರ್ಬಂಧವಾಗಿದ್ದು, ಬೇರೆಡೆ ಅವರ ಇಚ್ಛೆಗೆ ತಕ್ಕಂತೆ ನಡೆದುಕೊಳ್ಳುವ ಸ್ವಾತಂತ್ರ್ಯ ಇದ್ದೇ ಇದೆ’ ಎಂದು ಅಡ್ವೊಕೇಟ್ ಜನರಲ್ ಹೈಕೋರ್ಟ್‌ಗೆ ತಿಳಿಸಿದರು.

ಹಿಜಾಬ್ ಧರಿಸಿ ತರಗತಿ ಪ್ರವೇಶಿಸುವುದನ್ನು ನಿರ್ಬಂಧಿಸಿದ್ದ ಕೆಲ ಶಾಲೆ-ಕಾಲೇಜು ಆಡಳಿತ ಮಂಡಳಿಗಳ ನಿರ್ಧಾರ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ದಾಖಲಾಗಿರುವ ಎಲ್ಲ ರಿಟ್ ಅರ್ಜಿಗಳ ವಿಚಾರಣೆಯನ್ನು, ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ, ನ್ಯಾಯಮೂರ್ತಿಗಳಾದ ಕೃಷ್ಣ ಎಸ್. ದೀಕ್ಷಿತ್ ಮತ್ತು ಜೆ.ಎಂ.ಖಾಜಿ ಅವರಿದ್ದ ಮೂವರು ಸದಸ್ಯರ ಸಾಂವಿಧಾನಿಕ ನ್ಯಾಯಪೀಠ ಮಂಗಳವಾರ ಮುಂದುವರಿಸಿತು.

ವಾದ ಮುಂದುವರಿಸಿದ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ.ನಾವದಗಿ, ‘ಹಿಜಾಬ್ ನಿರ್ಬಂಧ ಕುರಿತಂತೆ ಸರ್ಕಾರ ಯಾವುದೇ ಆದೇಶ ಹೊರಡಿಸಿಲ್ಲ. ಶಿಕ್ಷಣ ಸಂಸ್ಥೆಗಳ ಶಿಸ್ತಿನ ಹಿತದೃಷ್ಟಿಯಿಂದ ಮುಸ್ಲಿಂ ವಿದ್ಯಾರ್ಥಿನಿಯರು ತರಗತಿಯೊಳಗೆ ಹಿಜಾಬ್ ಧರಿಸುವುದಕ್ಕೆ ಒಂದಷ್ಟು ಕಟ್ಟಳೆ ವಿಧಿಸಲಾಗಿದೆ. ಈ ನಿರ್ಬಂಧದ ಅಧಿಕಾರವೂ ಆಯಾ ಶಿಕ್ಷಣ ಸಂಸ್ಥೆಗಳ ಕಾಲೇಜು ಆಡಳಿತ ಮಂಡಳಿಗಳ (ಸಿಡಿಸಿ) ವಿವೇಚನೆಗೆ ಒಳಪಟ್ಟ ವಿಚಾರವಾಗಿದೆ’ ಎಂದು ಸ್ಪಷ್ಟಪಡಿಸಿದರು.

‘ಸಂವಿಧಾನದಲ್ಲಿ ಉಲ್ಲೇಖಿಸಲಾದ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಧಾರ್ಮಿಕ ಆಚರಣೆಗೆ ಸಂಬಂಧಿಸಿದ ವಿಧಿಗಳನ್ನು ನಾವು ಏಕಕಾಲಕ್ಕೆ ಒಂದೇ ಹಳಿಯಲ್ಲಿ ತಳ್ಳಿಕೊಂಡು ಹೋಗುತ್ತೇವೆ ಎಂದರೆ ಅದು ಸಾಧ್ಯವಿಲ್ಲ. ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ 19 (1) (ಎ) ಮತ್ತು ಧಾರ್ಮಿಕ ಆಚರಣೆಯ 25ನೇ ವಿಧಿಗಳನ್ನು ಬೇರೆ ಬೇರೆಯಾಗಿಯೇ ನೋಡಬೇಕು. ಹಿಜಾಬ್ ಧರಿಸಿಕೊಂಡು ಬರುವುದನ್ನು ನಿಷೇಧಿಸುವ ಮೂಲಕ ಸಂವಿಧಾನದ 15ನೇ ವಿಧಿಯನ್ನು ಉಲ್ಲಂಘಿಸಲಾಗಿದೆ ಎಂಬ ಆರೋಪಗಳಲ್ಲಿ ಯಾವುದೇ ಹುರುಳಿಲ್ಲ’ ಎಂದರು.

‘ಸಾಂಸ್ಥಿಕ ಶಿಸ್ತುಗಳನ್ನು ಪಾಲಿಸುವ ಸಂದರ್ಭದಲ್ಲಿ ವೈಯಕ್ತಿಕ ಆಚರಣೆಗಳಿಗೆ ಅವಕಾಶವಿರುವುದಿಲ್ಲ. ಆದರೆ, ಶಾಲೆವರೆಗೂ ಹಿಜಾಬ್ ಹಾಕಿಕೊಂಡು ಬರಲು ಅಭ್ಯಂತರವಿಲ್ಲ. ಆದಾಗ್ಯೂ, ಹಿಜಾಬ್ ಧರಿಸುವುದನ್ನು ಮಹಿಳೆಯ ಆಯ್ಕೆಗೇ ಬಿಡಬೇಕು. ಕಡ್ಡಾಯಗೊಳಿಸಬಾರದು. ಕೆಲವರು ಹಿಜಾಬ್ ಧರಿಸಲು ಇಷ್ಟಪಡದೇ ಇರಬಹುದು. ಇಂತಹ ಸಂದರ್ಭದಲ್ಲಿ ಸಂವಿಧಾನದ 25ನೇ ವಿಧಿಯ ಅನುಸಾರ ಹಿಜಾಬ್ ಧರಿಸುವುದು ಧಾರ್ಮಿಕ ಅಗತ್ಯ ಆಚರಣೆ ಎಂದು ಹೇಳಿದರೆ ಅದು 19(1)(ಎ) ಅಡಿ ಅವರ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ವಿರುದ್ಧವಾಗುತ್ತದೆ’ ಎಂದು ವಿಶ್ಲೇಷಿಸಿದರು.

ಉಡುಪಿ ಪಿ.ಯು ಶಿಕ್ಷಕರ ಪರ ವಾದ ಮಂಡಿಸಿದ ಹಿರಿಯ ವಕೀಲ ಆರ್. ವೆಂಕಟರಮಣಿ, ‘ಸಾರ್ವಜನಿಕ ಪ್ರದೇಶಕ್ಕೂ ಶಾಲೆಯ ಆವರಣದೊಳಗಿನ ವಾತಾವರಣಕ್ಕೂ ಸಾಕಷ್ಟು ವ್ಯತ್ಯಾಸವಿದೆ. ವಿದ್ಯಾರ್ಥಿಗಳು ಶಿಕ್ಷಣದ ಉದ್ದೇಶಕ್ಕಾಗಿ ಶಿಸ್ತು, ಸುವ್ಯವಸ್ಥೆ ಪಾಲನೆ ಮಾಡಬೇಕು. ಈ ವಿಷಯದಲ್ಲಿ ವಿದ್ಯಾರ್ಥಿಗಳು ಸ್ವತಂತ್ರ ಪ್ರಜ್ಞೆಯನ್ನು ಹೊಂದಿರಬೇಕು. ಒಂದು ಧರ್ಮ ದೊಡ್ಡದು ಮತ್ತೊಂದು ಚಿಕ್ಕದು ಎಂಬುದಿಲ್ಲ’ ಎಂದರು.

ವಿಲೇವಾರಿ: ‘ಅಲ್ಪಸಂಖ್ಯಾತ ಶೈಕ್ಷಣಿಕ ಸಂಸ್ಥೆಗಳಿಗೆ ನಿರ್ಬಂಧ ವಿಧಿಸಿರುವ ಕ್ರಮ ಸರಿಯಿಲ್ಲ’ ಎಂದು ಆಕ್ಷೇಪಿಸಲಾದ ಅರ್ಜಿಗೆ ಸಂಬಂಧಿಸಿದಂತೆ ಪ್ರಸ್ತಾಪಿಸಿದ ನಾವದಗಿ, ‘ಈ ಸಂಸ್ಥೆಗಳಿಗೆ ಸರ್ಕಾರ ಯಾವುದೇ ಆದೇಶ ನೀಡಿಲ್ಲ. ಆಯಾ ಶಿಕ್ಷಣ ಸಂಸ್ಥೆಗಳೇ ವಸ್ತ್ರಸಂಹಿತೆ ನಿಗದಿ ಮಾಡುತ್ತವೆ. ಸರ್ಕಾರ ಸಮವಸ್ತ್ರ ನಿಗದಿಪಡಿಸಿಲ್ಲ’ ಎಂದು ಸ್ಪಷ್ಟಪಡಿಸಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಅರ್ಜಿ ವಿಲೇವಾರಿ ಮಾಡಿದೆ. ವಿಚಾರಣೆಯನ್ನು ಬುಧವಾರಕ್ಕೆ (ಫೆ.23) ಮುಂದೂಡಲಾಗಿದೆ.

ಅರ್ಜಿದಾರರು ಹಾಗೂ ಪ್ರತಿವಾದಿಗಳು ತಮ್ಮ ವಾದವನ್ನು ಕ್ಷಿಪ್ರವಾಗಿ ಮಂಡಿಸಿ. ಲಿಖಿತ ಆಕ್ಷೇಪಣೆಗಳನ್ನು ತ್ವರಿತವಾಗಿ ಸಲ್ಲಿಸಿ. ಸಾಧ್ಯವಾದರೆ ಈ ವಾರವೇ ಪ್ರಕರಣವನ್ನು ಇತ್ಯರ್ಥಪಡಿಸೋಣ.

ಋತುರಾಜ್ ಅವಸ್ಥಿ
ಮುಖ್ಯ ನ್ಯಾಯಮೂರ್ತಿ

ಅಡ್ವೊಕೇಟ್ ಜನರಲ್ ಹೇಳಿದ್ದು

- ಕುರಾನ್‌ನಲ್ಲಿರುವ ಅಂಶಗಳ ಬಗ್ಗೆ ನಮ್ಮ ತಕರಾರಿಲ್ಲ. ಆದರೆ, ಸಾರ್ವಜನಿಕ ಪ್ರದೇಶಗಳಲ್ಲಿನ ಆಚರಣೆಗಳನ್ನು ಶಿಕ್ಷಣ ಸಂಸ್ಥೆಗಳ ಒಳಗೂ ಆಚರಿಸುತ್ತೇವೆ ಎನ್ನುವುದು ಸರಿಯಲ್ಲ.
- ವಿದ್ಯಾರ್ಥಿಗಳಲ್ಲಿ ಶಿಸ್ತು ತರಲು ಶಿಕ್ಷಣ ಸಂಸ್ಥೆಗಳು ತಮ್ಮದೇ ಆದ ಕೆಲ ನಿಯಮಗಳನ್ನು ಹೊಂದಿರುತ್ತವೆ. ಅವು ಹೇಗೆ ಆಡಳಿತ ಹೇಗೆ ನಡೆಸಬೇಕು ಎಂಬ ವಿಚಾರಗಳಲ್ಲಿ ತಲೆ ತೂರಿಸಬಾರದು. ಹಕ್ಕುಗಳ ಉಲ್ಲಂಘನೆಯಾದಾಗ ಮಾತ್ರವೇ ಮಧ್ಯಪ್ರವೇಶಿಸಬಹುದು.

‘ಹಿಜಾಬ್ ತೆಗೆದಿಡಲು ವ್ಯವಸ್ಥೆ ಕಲ್ಪಿಸಿ’

ಬೆಂಗಳೂರು: ಕಾಲೇಜು ಅಭಿವೃದ್ಧಿ ಸಮಿತಿ (ಸಿಡಿಸಿ) ಸೂಚಿಸಿದ ವಸ್ತ್ರ ಸಂಹಿತೆ ಅಳವಡಿಸಿಕೊಂಡ ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್ ಧರಿಸಿ ಬರುವ ವಿದ್ಯಾರ್ಥಿನಿಯರು, ಹಿಜಾಬ್ ತೆಗೆದು ತರಗತಿ ಪ್ರವೇಶಿಸಲು ಅನುಕೂಲವಾಗುವಂತೆ ವ್ಯವಸ್ಥೆ ಕಲ್ಪಿಸಬೇಕು ಎಂದು ಪದವಿಪೂರ್ವ ಶಿಕ್ಷಣ ಇಲಾಖೆ ಸೂಚಿಸಿದೆ.

ಈ ಬಗ್ಗೆ ಮಂಗಳವಾರ ಸುತ್ತೋಲೆ ಹೊರಡಿಸಿರುವ ಇಲಾಖೆ, ‘ಹೈಕೋರ್ಟ್ ಮಧ್ಯಂತರ ಆದೇಶದಲ್ಲಿ, ಕಾಲೇಜು ಅಭಿವೃದ್ಧಿ ಸಮಿತಿ (ಸಿಡಿಸಿ) ಸೂಚಿಸಿದ ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್ ಧರಿಸಿ ವಿದ್ಯಾರ್ಥಿನಿಯರು ತರಗತಿ ಪ್ರವೇಶಿಸದಂತೆ ಸೂಚಿಸಿದೆ. ಹೀಗಾಗಿ, ಹಿಜಾಬ್ ಧರಿಸಿ ಬಂದವರು ಅದನ್ನು ತೆಗೆದು ತರಗತಿಗೆ ತೆರಳಲು ಅನುಕೂಲ ಆಗುವಂತೆ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಸ್ಥಳದ ವ್ಯವಸ್ಥೆ ಮಾಡಬೇಕು ಎಂದು ಎಲ್ಲ ಶಾಲಾ, ಕಾಲೇಜುಗಳಿಗೆ, ಶಿಕ್ಷಣ ಸಂಸ್ಥೆಗಳಿಗೆ ಇಲಾಖೆ ಸೂಚಿಸಿದೆ.

ಹಿಜಾಬ್ ಪ್ರಕರಣದ ವಿಚಾರಣೆ ನಡೆಸುತ್ತಿರುವ ಹೈಕೋರ್ಟ್ ಪೀಠವು ಜ. 10ರಂದು ಮಧ್ಯಂತರ ಆದೇಶ ನೀಡಿತ್ತು.

ಆಚರಣೆ-ಸಂಪ್ರದಾಯ ಭಿನ್ನಭಿನ್ನ

‘ಧಾರ್ಮಿಕವಾದ ಕಡ್ಡಾಯ ಆಚರಣೆಗಳಿಗೂ ಮತ್ತು ಧಾರ್ಮಿಕ ಸಂಪ್ರದಾಯಗಳಿಗೂ ವ್ಯತ್ಯಾಸವಿದೆ’ ಎಂದು ಶಿಕ್ಷಣ ಸಂಸ್ಥೆಗಳ ಪರ ವಾದ ಮಂಡಿಸಿದ ಹಿರಿಯ ವಕೀಲ ಎಸ್.ಎಸ್ ನಾಗಾನಂದ್ ಹೇಳಿದರು.

‘ಬ್ರಾಹ್ಮಣ ಸಮುದಾಯದ ಆಚರಣೆಗಳ ಪ್ರಕಾರ ದಿನದಲ್ಲಿ ಮೂರೂ ಹೊತ್ತು ಸಂಧ್ಯಾವಂದನೆ ಮಾಡಬೇಕು. ಇದನ್ನೇ ನೆಪವನ್ನಾಗಿಸಿಕೊಂಡು ನಾನು, ವಾದ ಮಾಡುವ ಸಮಯದಲ್ಲಿ ಸ್ವಾಮಿ, ಸಂಧ್ಯಾವಂದನೆ ಸಮಯವಾಯಿತು, ಮುಗಿಸಿಕೊಂಡು ಬಂದು ವಾದ ಮಾಡುತ್ತೇನೆ ತಡೆಯಿರಿ ಎಂದು ಹೇಳಬಹುದೇ, ಒಂದು ವೇಳೆ ನನ್ನ ಈ ಮನವಿಯನ್ನು ನ್ಯಾಯಾಲಯ ಒಪ್ಪಲಿಲ್ಲವೆಂದಾದರೆ ಅದು ನನ್ನ ಧಾರ್ಮಿಕ ಅಗತ್ಯ ಆಚರಣೆಯ ಹಕ್ಕನ್ನು ಉಲ್ಲಂಘನೆ ಎಂದು ವಾದಿಸಬಹುದೇ’ ಎಂದು ಪ್ರಶ್ನಿಸಿದರು.

‘ಹಿಂದೂ ಧರ್ಮದ ಕೆಲವು ಸಮುದಾಯದವರು ತಾಳಿಯನ್ನು ಬಳಸುವುದಿಲ್ಲ, ಮತ್ತೂ ಕೆಲವು ಕಡೆ ಕಾಲುಂಗುರ ಧರಿಸುವುದಿಲ್ಲ. ಇನ್ನೂ ಕೆಲವು ಸಮುದಾಯದ ಮದುವೆಗಳಲ್ಲಿ ಸಪ್ತಪದಿಯನ್ನೇ ತುಳಿಯುವುದಿಲ್ಲ. ಧಾರ್ಮಿಕ ಆಚರಣೆಗಳು ಹಾಗೂ ಸಂಪ್ರದಾಯಗಳನ್ನು ನಾವು ಗೌರವಿಸುತ್ತೇವೆ. ಹಾಗೆಂದು ಅವನ್ನು ಎಲ್ಲೆಡೆ ಆಚರಣೆ ಮಾಡುತ್ತೇವೆ ಎನ್ನುವುದು ಸರಿಯಲ್ಲ’ ಎಂದು ಪ್ರತಿಪಾದಿಸಿದರು.

ನ ಮುಂಹ್ ಚುಪಾಕೆ ಜೀಯೊ...!

ನಾವದಗಿ ಅವರು ತಮ್ಮ ವಾದ ಮುಕ್ತಾಯಗೊಳಿಸುವ ಮುನ್ನ 1970ರ ದಶಕದ ಬಾಲಿವುಡ್‌ನ ಹಿಂದಿ ಚಲನಚಿತ್ರ ‘ಹಮ್‌ರಾಜ್‌’ನ ಹಾಡಿನ ಸಾಲುಗಳನ್ನು ಭಾವುಕರಾಗಿ ಉದ್ಧರಿಸಿದರು.

ಸಾಹಿರ್ ಲೂಧಿಯಾನ್ವಿ ವಿರಚಿತ ಮತ್ತು ಖ್ಯಾತ ಗಾಯಕ ಮಹೇಂದ್ರ ಕಪೂರ್ ಹಾಡಿರುವ, ‘ನ ಮುಂಹ್ ಚುಪಾಕೆ ಜೀಯೊ, ಔರ್ ನ ಸರ್ ಝುಕಾ ಕೆ ಜೀಯೊ, ಗಮೋಂ ಕಾ ದೌರ್ ಭಿ ಆಯೇ ತೊ ಮುಸ್ಕುರಾ ಕೆ ಜೀಯೊ (ಮುಖ ಮುಚ್ಚಿಕೊಂಡು ಬದುಕಬೇಡ, ತಲೆತಗ್ಗಿಸಿ ಬದುಕಬೇಡ, ದುಃಖದ ಘಳಿಗೆಗಳು ಎದುರಾದರೂ ಹಸನ್ಮುಖಿಯಾಗಿಯೇ ಬದುಕು) ಎಂಬ ಸಾಲುಗಳನ್ನು ಹೇಳಿ ತಮ್ಮ ಆಸನದಲ್ಲಿ ಕುಳಿತರು.

ಹಂಪಿ ಕನ್ನಡ ವಿ.ವಿ ಕುಲಪತಿ ಅವಧಿ ಒಂದು ವರ್ಷ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಇಲ್ಲಿನ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಸ.ಚಿ.ರಮೇಶ ಅವರ ಅಧಿಕಾರದ ಅವಧಿಯನ್ನು ಒಂದು ವರ್ಷ ವಿಸ್ತರಿಸಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಆದೇಶ ಹೊರಡಿಸಿದ್ದಾರೆ.

ಪ್ರೊ.ಸ.ಚಿ. ರಮೇಶ

ಕನ್ನಡ ವಿಶ್ವವಿದ್ಯಾಲಯಕ್ಕೆ ಹೊಸ ಕುಲಪತಿ ನೇಮಕ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿಲ್ಲ. ಹಾಗಾಗಿ ರಮೇಶ ಅವರ ಅಧಿಕಾರದ ಅವಧಿ ವಿಸ್ತರಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಿದ್ದಾರೆ. ಫೆ.22ರಿಂದ ಜಾರಿಗೆ ಬರುವಂತೆ ಈ ಆದೇಶ ಜಾರಿಯಲ್ಲಿರುತ್ತದೆ ಎಂದೂ ತಿಳಿಸಿದ್ದಾರೆ.

ರಮೇಶ ಅವರ ಅವಧಿ ಫೆ.21ರಂದು ಕೊನೆಗೊಂಡಿತ್ತು. ವಿಶ್ವವಿದ್ಯಾಲಯದ ಸಿಬ್ಬಂದಿಯೇ ರಮೇಶ ವಿರುದ್ಧ ಭ್ರಷ್ಟಾಚಾರದ ಆರೋಪಗಳನ್ನು ಮಾಡಿದ್ದರು. ರಾಷ್ಟ್ರಪತಿ, ಪ್ರಧಾನಿ, ರಾಜ್ಯಪಾಲರು, ಮುಖ್ಯಮಂತ್ರಿಯವರಿಗೆ ಪತ್ರ ಬರೆದು, ರಮೇಶ ಅವರ ಅವಧಿ ವಿಸ್ತರಿಸದಂತೆ ಮನವಿ ಮಾಡಿದ್ದರು. ವಿಶ್ವವಿದ್ಯಾಲಯದಲ್ಲಿ ಧರಣಿ, ಸತ್ಯಾಗ್ರಹ ಕೂಡ ಮಾಡಿದ್ದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಹಿಜಾಬ್ ವಿದ್ಯಾರ್ಥಿನಿಯ ಪೋಷಕರ ಹೋಟೆಲ್‌ಗೆ ದಾಳಿ: ಅಣ್ಣನ ಮೇಲೆ ಹಲ್ಲೆ

ಒಂದನೇ ಪುಟದಿಂದ

ವಿದ್ಯಾರ್ಥಿನಿ ಟ್ವೀಟ್: ‘ಹಿಜಾಬ್‌ಗಾಗಿ ಹೋರಾಟ ನಡೆಸಿದ್ದಕ್ಕೆ ಕಿಡಿಗೇಡಿಗಳು ಅಣ್ಣನ ಮೇಲೆ ಹಲ್ಲೆ ನಡೆಸಿದ್ದಾರೆ. ಹೋಟೆಲ್ ಧ್ವಂಸಗೊಳಿಸಿದ್ದಾರೆ. ಹಕ್ಕಿಗಾಗಿ ದನಿ ಎತ್ತುವುದು ತಪ್ಪೇ? ದಾಳಿ ನಡೆಸಿದ ಗೂಂಡಾಗಳ ವಿರುದ್ಧ ಪೊಲೀಸರು ಕಠಿಣ ಕಾನೂನು ಕ್ರಮ ಜರುಗಿಸಬೇಕು’ ಎಂದು ವಿದ್ಯಾರ್ಥಿನಿ ಹಾಜ್ರಾ ಶಿಫಾ ಟ್ವೀಟ್ ಮಾಡಿದ್ದರು. ಹಿಜಾಬ್‌ಗಾಗಿ ಹೋರಾಟ ನಡೆಸುತ್ತಿರುವ ವಿದ್ಯಾರ್ಥಿನಿಯರೂ ಶಿಫಾಗೆ ಬೆಂಬಲ ಸೂಚಿಸಿ ಆರೋಪಿಗಳ ವಿರುದ್ಧ ಕ್ರಮಕ್ಕೆ ಒತ್ತಾಯಿಸಿದ್ದಾರೆ.

ಕಠಿಣ ಕ್ರಮಕ್ಕೆ ಎಸ್‌ಡಿಪಿಐ ಒತ್ತಾಯ: ‘ಶಿಫಾ ಅವರ ತಂದೆ ಹೈದರ್ ಅವರ ಹೋಟೆಲ್ ಮೇಲೆ ಸಂಘ ಪರಿವಾರದ ಗೂಂಡಾಗಳು ದಾಳಿ ನಡೆಸಿ, ಶಿಫಾಳ ಅಣ್ಣನ ಮೇಲೆ ಹಲ್ಲೆ ನಡೆಸಿರುವುದು ಖಂಡನೀಯ. ಕೃತ್ಯದಲ್ಲಿ ಭಾಗಿಯಾದವರನ್ನು ಬಂಧಿಸಬೇಕು, ದಾಳಿಯ ಹಿಂದಿರುವ ಬಿಜೆಪಿ ನಾಯಕರನ್ನು ತನಿಖೆಗೊಳಪಡಿಸಿ ಕಾನೂನು ಕ್ರಮ ಜರುಗಿಸಬೇಕು’ ಎಂದು ಎಸ್‌ಡಿಪಿಐ ಒತ್ತಾಯಿಸಿದೆ.

ದುಷ್ಕರ್ಮಿಗಳಿಂದ ಹಲ್ಲೆಗೊಳಗಾಗಿ ಉಡುಪಿಯ ಹೈಟೆಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸೈಫ್

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ವೈಯಕ್ತಿಕ ದ್ವೇಷದ ದಾಳಿ: ಹೋಟೆಲ್ ಮೇಲಿನ ದಾಳಿಗೆ ಹಾಗೂ ಸೈಫ್ ಎಂಬಾತನ ಮೇಲೆ ನಡೆದ ಹಲ್ಲೆಗೆ ವೈಯಕ್ತಿಕ ದ್ವೇಷ ಕಾರಣ ಇರಬಹುದು. ಹಿಜಾಬ್ ವಿಚಾರವಾಗಿ ನಡೆದ ದಾಳಿಯಲ್ಲ. ಸದ್ಯ ಅಧಿವೇಶನದಲ್ಲಿ ಭಾಗವಹಿಸಿದ್ದು, ದಾಳಿಯ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ ಎಂದು ಶಾಸಕ ಕೆ.ರಘುಪತಿ ಭಟ್ ಪ್ರತಿಕ್ರಿಯೆ ನೀಡಿದ್ದಾರೆ.

ಹಿಜಾಬ್: 12 ವಿಎಚ್‌ಪಿ ಕಾರ್ಯಕರ್ತರ ಬಂಧನ

ಸೂರತ್ (ಪಿಟಿಐ): ಸೂರತ್‌ನ ಶಾಲೆಯೊಂದರಲ್ಲಿ ಹಿಜಾಬ್ ಧರಿಸಿದ ಬಾಲಕಿಯರ ವಿರುದ್ಧ ಪ್ರತಿಭಟನೆ ನಡೆಸಿದ ವಿಶ್ವ ಹಿಂದೂ ಪರಿಷತ್‌ನ (ವಿಎಚ್‌ಪಿ) 12 ಕಾರ್ಯಕರ್ತರನ್ನು ಮಂಗಳವಾರ ಬಂಧಿಸಲಾಗಿದೆ ಎಂದು ಗುಜರಾತ್ ಪೊಲೀಸರು ಹೇಳಿದ್ದಾರೆ.

ಹಿಜಾಬ್ ಧರಿಸಿದ್ದ ಕೆಲವು ಬಾಲಕಿಯರ ವಿರುದ್ಧ ಪ್ರತಿಭಟಿಸಲು ಶಾಲೆಯ ಆವರಣದಲ್ಲಿ ಗುಂಪು ಸೇರಿದ್ದ ವಿಎಚ್‌ಪಿ ಕಾರ್ಯಕರ್ತರನ್ನು ಬಂಧಿಸಲಾಗಿದೆ ಎಂದು ಕಪೋದ್ರಾ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಎಂ.ಬಿ. ರಾಥೋಡ್ ಹೇಳಿದರು.

ಹಿಜಾಬ್ ಧರಿಸಿದ್ದ ಬಾಲಕಿಯರು ಶಾಲೆಯ ವಿದ್ಯಾರ್ಥಿಗಳಲ್ಲ. ಅವರು ಅಲ್ಲಿಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯಲು ತೆರಳಿದ್ದರು ಎಂದು ಅಧಿಕಾರಿ ಹೇಳಿದರು.

ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದರು. ಆಗ ಅಲ್ಲಿಗೆ ಬಂದ ಕೇಸರಿ ಶಾಲು ಧರಿಸಿದ ಕಾರ್ಯಕರ್ತರು ಶಾಂತಿಯುತವಾಗಿ ಶಾಲೆಯಲ್ಲಿ ಪ್ರತಿಭಟನೆ ನಡೆಸಿದರು. ಈ ಬಗ್ಗೆ ಪ್ರಾಂಶುಪಾಲರು ನೀಡಿದ ಮಾಹಿತಿ ಮೇರೆಗೆ ಅಲ್ಲಿಗೆ ಬಂದ ಪೊಲೀಸರು ಕಾರ್ಯಕರ್ತರನ್ನು ಬಂಧಿಸಿದರು ಎಂದು ಹೇಳಿದರು.

ಕಣಿವೆಗೆ ಪಿಕಪ್ ವಾಹನ ಬಿದ್ದು 14 ಸಾವು

ಡೆಹ್ರಾಡೂನ್ (ಪಿಟಿಐ): ಉತ್ತರಾಖಂಡದ ಚಂಪಾವತ್ ಜಿಲ್ಲೆಯಲ್ಲಿ ಸೋಮವಾರ ರಾತ್ರಿ ಮದುವೆ ಮುಗಿಸಿಕೊಂಡು ವಾಪಸ್ ತೆರಳುತ್ತಿದ್ದಾಗ ಪಿಕಪ್ ವಾಹನ ಆಳದ ಕಣಿವೆಗೆ ಬಿದ್ದು ಇಬ್ಬರು ಮಕ್ಕಳು, ಐವರು ಮಹಿಳೆಯರು ಸೇರಿ 14 ಮಂದಿ ಮೃತಪಟ್ಟಿದ್ದು, ಇಬ್ಬರು ಗಾಯಗೊಂಡಿದ್ದಾರೆ.

ಸುಖಿಧಾಂಗ್- ದಂಡಮಿನಾರ್ ರಸ್ತೆಯ ನಡುವೆ ಈ ದುರ್ಘಟನೆ ಸಂಭವಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಮೃತರ ಸಂಬಂಧಿಕರಿಗೆ ತಲಾ ₹ 2 ಲಕ್ಷ, ಗಾಯಾಳುಗಳಿಗೆ ತಲಾ ₹50,000 ಘೋಷಿಸಿದ್ದಾರೆ.

PUBLIC NOTICE

My client proposes to enter into a development agreement in respect of the land measuring an extent of about 31,581 square feet comprised in Municipal No.147/M (forming a part of Survey No.24/8A) of Jakkasandra Village, Begur Hobli, Bangalore South Taluk, now coming within the jurisdiction of BBMP and allotted PID No.68-187-147/M, more particularly described in the ‘Schedule’ hereinbelow and hereinafter referred to as the **“Schedule Property”** from its owners, **Mr. K.C. Sathyanarayana Reddy, Mr. K.S.Deepak Reddy, Mr. K.S. Sandeep and Mr. K.S.Dilip Reddy.**

If any person/s, entity, firm, institution (corporate or otherwise) has or claims any right, title, interest,pending litigation or demand of any nature in or upon the Schedule Property or any part thereof, the same may be brought to the notice of the undersigned in writing together with all details of the right, title, interest, claim, pending litigation or demand made together with supporting documents **within fifteen (15) days** from the date of this notice, failing which such claims shall be considered to have been waived and/or given up and my client shall proceed to complete the transaction in respect of the Schedule Property. Objections and/or claims received after the above period shall neither be entertained nor be binding on my client.

SCHEDULE PROPERTY

All that piece and parcel of land measuring an extent of about 31,581 square feet comprised in Municipal No.147/M (forming a part of Survey No.24/8A) of Jakkasandra Village, Begur Hobli, Bangalore South Taluk, now coming within the jurisdiction of BBMP and allotted PID No.68-187-147/M and bounded as follows:

East: BDA Road
West: Remaining portion of Survey No.24/8A
North: Remaining portion of Survey No.24/8A
South: Remaining portion of Survey No.24/8A

Arvind Raghavan
Advocate
No.48, Ishita, 2nd Main Road, Vyalikaval, Bangalore-560003
E: arvind_ncsr@yahoo.com
Place: Bangalore Date: 22/02/2022

ROUNAQH

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು - 560 001. ಫೋನ್ : 080-22265383, website: www.kiadb.in

ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ-ಇಪಿ-43/15614/2021-22 ದಿನಾಂಕ: 21.02.2022

ಟೆಂಡರ್ ಆಹ್ವಾನ ಪ್ರಕಟಣೆ

(ಜಿಒಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆ.ಐ.ಎ.ಡಿ.ಬಿಯು ಈ ಕೆಳಕಂಡ ಕಾಮಗಾರಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ ಹಾಗೂ ಇದೇ ರೀತಿಯ ಕಾಮಗಾರಿಯಲ್ಲಿ ಸಾಕಷ್ಟು ಅನುಭವ ಹೊಂದಿರುವ ಕೆಪಿಡಬ್ಲ್ಯೂಡಿ/ಕೆ.ಸಿ.ಇ.ಐ (ಸಿವಿಲ್/ವಿದ್ಯುತ್) ದರ್ಜೆ-2 ಮತ್ತು ಮೇಲಿನ ಪರವಾನಗಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಏಕ-ಲಕೋಟೆ ಪದ್ಧತಿಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ಟೆಂಡರ್ ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು	ವರ್ಗ
1	2	3
1	ತುಮಕೂರು ಜಿಲ್ಲೆ & ತಾಲ್ಲೂಕಿನ, ಕುಪ್ಪೂರು ಕೆರೆ ಬಂಡೆಗೆ ತಂತಿ ಬೇಲಿ ಕಲ್ಪಿಸುವ ಕಾಮಗಾರಿ.	ಪ.ಪಂ
2	ಮಂಡ್ಯ ಜಿಲ್ಲೆಯ ಗೆಜ್ಜಲಗೆರೆ, ಸೋಮನಹಳ್ಳಿ ಮತ್ತು ತೂಬಿನಕೆರೆ ಕೈಗಾರಿಕಾ ಪ್ರದೇಶಗಳ ಬೀದಿ ದೀಪಗಳ ದುರಸ್ಥಿ, ಅಭಿವೃದ್ಧಿ, ಕಾರ್ಯಾಚರಣೆ ಮತ್ತು ವಾರ್ಷಿಕ ನಿರ್ವಹಣೆ ಕಾಮಗಾರಿ.	ಇತರೆ
3	ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ಕೈಗಾರಿಕಾ ಪ್ರದೇಶದಲ್ಲಿನ ಹಾಲಿ ಇರುವ ಹೆಚ್.ಪಿ.ಎಸ್.ವಿ ಬೀದಿ ದೀಪಗಳ ಬದಲು ಎಲ್.ಇ.ಡಿ ರಸ್ತೆ ದೀಪಗಳನ್ನು ಅಳವಡಿಸುವ ಕಾಮಗಾರಿ.	ಪ.ಜಾ
4	ಬಳ್ಳಾರಿ ಜಿಲ್ಲೆಯ ಮುಂಡರಗಿ ಕೈಗಾರಿಕಾ ಪ್ರದೇಶ 4ನೇ ಹಂತ, ಸಂಕ್ಲಾಪುರ 1ನೇ ಮತ್ತು 2ನೇ ಹಂತ ಹಾಗೂ ಕುಷ್ಟಗಿ ಕೈಗಾರಿಕಾ ಪ್ರದೇಶಗಳ ಬೀದಿ ದೀಪಗಳ ದುರಸ್ಥಿ, ಮರು ಪರಿಶೀಲನೆ ಮತ್ತು ವಾರ್ಷಿಕ ನಿರ್ವಹಣೆ ಕಾಮಗಾರಿ.	ಇತರೆ
5	ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ, ಹೈ ಟೆಕ್ ಡಿಫೆನ್ಸ್ ಅಂಡ್ ಏರೋಸ್ಪೇಸ್ ಪಾರ್ಕಿನಲ್ಲಿರುವ ಬೀದಿ ದೀಪಗಳ ದುರಸ್ಥಿ, ಮರು ಪರಿಶೀಲನೆ ಮತ್ತು ವಾರ್ಷಿಕ ನಿರ್ವಹಣೆ ಕಾಮಗಾರಿ.	ಇತರೆ

ಅರ್ಜಿದಾರರು ಬಿಡ್ಡಿಂಗ್ ದಾಖಲೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್: https://eproc.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

- ಬಿಡ್ ಸಲ್ಲಿಸಲು ಕೊನೆಯ ದಿನಾಂಕ : 09.03.2022 ಸಂಜೆ 4.00 ಗಂಟೆಯವರೆಗೆ.

ಸಹಿ/-
ಮುಖ್ಯ ಅಭಿಯಂತರರು-1, ಕೆಐಎಡಿಬಿ, ಬೆಂಗಳೂರು

DIPR/DDU/Zen/R.O:3474/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ

ಕ್ರಮಾಂಕ:ಶಿಮನಪಾಶಿ:ಆವಿ:ಸಿಆರ್:68/2021-22 ದಿನಾಂಕ:19.02.2022

ಟೆಂಡರ್ ಪ್ರಕಟಣೆ (ಇ-ಪ್ರಕ್ಯೂರ್‌ಮೆಂಟ್ ಮುಖಾಂತರ)

ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಸೇವೆಯನ್ನು ಒದಗಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನ ನಿಯಮದನ್ವಯ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ದ್ವಿ-ಲಕೋಟೆ ಟೆಂಡರ್ ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವ ಸರಬರಾಜುದಾರರು ವಿವರಗಳನ್ನು ವೆಬ್‌ಸೈಟ್ **www.eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದು.

(1) ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : **14.03.2022.** (2) ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ತೆರೆಯುವ ದಿನಾಂಕ : **as per e-portal.** (3) ಹೆಚ್ಚಿನ ವಿವರಗಳನ್ನು ಇ-ಪೋರ್ಟಲ್ ಮುಖಾಂತರ ಪಡೆಯಬಹುದು ಮತ್ತು ಇತರೇ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. (4) ಅನುದಾನ : ಪಾಲಿಕೆಯ ಸಾಮಾನ್ಯ ನಿಧಿ.

ಕ್ರ. ಸಂ	ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ	ಇಂಡೆಂಟ್ ಸಂಖ್ಯೆ
1	Providing the services of outsource manpower for SWM vehicles (drivers) for office of Shivamogga Mahanagara Palike (65 Nos)	135.00	2,70,000.00	SCC/HEALTH/SWM/DRIVER/65 Nos/2021-22
2	Providing the services of outsource manpower for SWM vehicles (Drivers) for office of Shivamogga Mahanagara Palike (51 Nos)	106.00	2,12,000.00	SCC/HEALTH/SWM/DRIVER/2021-22
3	Providing the services of outsource SWM vehicles Operators (JCB) (14Nos), SWM vehicle cleaners (15 Nos) and Loaders (36 nos) to Shivamogga Mahanagara Palike	144.50	2,89,000.00	SCC/HEALTH/JCB/SWM/2021-22

ಸೂಚನೆ: ಯಾವುದೇ ತಿದ್ದುಪಡಿ ಅಥವಾ ಬದಲಾವಣೆಯನ್ನು ಇ-ಪ್ರಕ್ಯೂರ್‌ಮೆಂಟ್ ಮೂಲಕ ತಿಳಿಸಲಾಗುತ್ತದೆ.

ಸಹಿ/- ಕಾರ್ಯಪಾಲಕ ಅಭಿಯಂತರರು (ವಿಭಾಗ-1)
ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ.

ವಾ.ಸಾ.ಸಂ.ಇ./ಶಿ/ನಂ.149-02/ಝೇಂಕಾರ್/2021-22

ಅರಣ್ಯವಾಸಿಗಳ ಪರ ಪ್ರಮಾಣಪತ್ರ ಸಲ್ಲಿಸಲು ಸರ್ಕಾರ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಣ್ಯ ವಾಸಿಗಳಿಗೆ ಮನೆ ನಿವೇಶನದ ಮೇಲೆ ಹಕ್ಕು ನೀಡುವುದಕ್ಕೆ ಪೂರಕವಾಗಿ ಸುಪ್ರೀಂಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸುವ ತೀರ್ಮಾನವನ್ನು ಮಂಗಳವಾರ ನಡೆದ ಉನ್ನತಮಟ್ಟದ ಸಭೆಯಲ್ಲಿ ಕೈಗೊಳ್ಳಲಾಗಿದೆ.

ಸಚಿವರಾದ ಕೋಟ ಶ್ರೀನಿವಾಸ ಪೂಜಾರಿ, ಉಮೇಶ ಕತ್ತಿ, ಶಿವರಾಂ ಹೆಬ್ಬಾರ್, ಉತ್ತರ ಕನ್ನಡ ಜಿಲ್ಲೆಯ ಶಾಸಕರು, ರಾಜ್ಯ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆ ಪ್ರತಿನಿಧಿಗಳು ಮತ್ತು ಅರಣ್ಯ, ಸಮಾಜ ಕಲ್ಯಾಣ, ಪರಿಶಿಷ್ಟ ಪಂಗಡಗಳ ಕಲ್ಯಾಣ, ಕಂದಾಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಿರಿಯ ಅಧಿಕಾರಿಗಳ ಉಪಸ್ಥಿತಿಯಲ್ಲಿ ನಡೆದ ಸಭೆಯಲ್ಲಿ ಈ ತೀರ್ಮಾನಕ್ಕೆ ಬರಲಾಗಿದೆ.

ಈ ಕುರಿತು ಮಾಹಿತಿ ನೀಡಿದ ರಾಜ್ಯ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆ ಅಧ್ಯಕ್ಷ ರವೀಂದ್ರ ನಾಯ್ಕ, 'ಅರಣ್ಯ ವಾಸಿಗಳ ಪರವಾಗಿ ಸುಪ್ರೀಂಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸುವ ನಿರ್ಣಯವನ್ನು ಸಭೆಯಲ್ಲಿ ಕೈಗೊಳ್ಳಲಾಯಿತು. ಪ್ರತಿ ಸೋಮವಾರ ಅರಣ್ಯ ವಾಸಿಗಳನ್ನು ಒಕ್ಕಲೆಬ್ಬಿಸುವ ಕಾರ್ಯಾಚರಣೆ ಸ್ಥಗಿತಗೊಳಿಸುವ ನಿರ್ಧಾರವನ್ನೂ ಮಾಡಲಾಯಿತು' ಎಂದರು.

ಅರಣ್ಯ ಹಕ್ಕು ಕಾಯ್ದೆಯಡಿ ತಿರಸ್ಕೃತವಾಗಿರುವ ಅರ್ಜಿಗಳನ್ನು ಮರುಪರಿಶೀಲಿಸಿ ವಿಲೇವಾರಿ ಮಾಡಲು ತೀರ್ಮಾನಿಸಲಾಗಿದೆ. ಈಗಾಗಲೇ ಗ್ರಾಮ ಪಂಚಾಯಿತಿಗಳಿಂದ ಮನೆ ಸಂಖ್ಯೆ ಪಡೆದುಕೊಂಡಿರುವ ಕಟ್ಟಡಗಳು ಅತಿವೃಷ್ಟಿ, ಪ್ರವಾಹದಿಂದ ಹಾನಿಯಾದರೆ ಪುನರ್ ನಿರ್ಮಾಣಕ್ಕೆ ಅಡ್ಡಿಪಡಿಸಬಾರದು ಎಂಬ ನಿರ್ಣಯವನ್ನೂ ಕೈಗೊಳ್ಳಲಾಗಿದೆ ಎಂದು ವಿವರಿಸಿದರು.

'ಸಚಿವ ಶಿವರಾಂ ಹೆಬ್ಬಾರ್, ಶಾಸಕರಾದ ಆರ್.ವಿ. ದೇಶಪಾಂಡೆ ಸೇರಿದಂತೆ ಸಭೆಯಲ್ಲಿದ್ದ ಬಹುತೇಕರು ಅರಣ್ಯ ಇಲಾಖೆಯ ನಡೆಯನ್ನು ವಿರೋಧಿಸಿದರು. ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅವರೂ ನಮ್ಮ ಬೇಡಿಕೆಯನ್ನು ಬೆಂಬಲಿಸಿದರು. ಅರಣ್ಯ ವಾಸಿಗಳಿಗೆ ತೊಂದರೆಯಾಗದ ರೀತಿಯಲ್ಲಿ ಕ್ರಮ ವಹಿಸುವುದಾಗಿ ಅರಣ್ಯ ಸಚಿವ ಉಮೇಶ ಕತ್ತಿ ಭರವಸೆ ನೀಡಿದ್ದಾರೆ' ಎಂದು ಅವರು ಹೇಳಿದರು.

ಶಾಸಕ ಸುನೀಲ್ ನಾಯ್ಕ, ವಿಧಾನ ಪರಿಷತ್ ಸದಸ್ಯರಾದ ಗಣಪತಿ ಉಳ್ವೇಕರ್, ಶಾಂತಾರಾಮ ಸಿದ್ದಿ, ಎಸ್.ವಿ. ಸಂಕನೂರ, ಉತ್ತರ ಕನ್ನಡ ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್, ರಾಜ್ಯ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ಪ್ರಧಾನ ಸಂಚಾಲಕರಾದ ಜಿ.ಎಂ. ಶೆಟ್ಟಿ, ದಂಡು ಪಾಟೀಲ್ ಯಲ್ಲಾಪುರ, ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಡಾ.ಬೆಟಗೇರಿ ಕೃಷ್ಣಶರ್ಮ ಪ್ರಶಸ್ತಿಗೆ ಮೂವರ ಆಯ್ಕೆ


ಡಾ.ಸಿ.ಎನ್. ರಾಮಚಂದ್ರನ್

ಪದ್ಮರಾಜ ದಂಡಾವತಿ


ಡಾ.ಎನ್.ಆರ್. ನಾಯಕ್

ಬೆಳಗಾವಿ: ಇಲ್ಲಿನ ಡಾ. ಬೆಟಗೇರಿ ಕೃಷ್ಣಶರ್ಮ ಟ್ರಸ್ಟ್‌ನ 2021–22ನೇ ಸಾಲಿನ ವಿವಿಧ ಪ್ರಶಸ್ತಿಗಳಿಗೆ ಸಾಧಕರನ್ನು ಆಯ್ಕೆ ಮಾಡಲಾಗಿದೆ.

ವಿಮರ್ಶೆ-ಸಂಶೋಧನೆ, ಜಾನಪದ ಮತ್ತು ಪತ್ರಿಕೋದ್ಯಮ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದವರನ್ನು ಆಯ್ಕೆ ಮಾಡಲಾಗಿದೆ. ಡಾ.ಸಿ.ಎನ್. ರಾಮಚಂದ್ರನ್ (ವಿಮರ್ಶೆ- ಸಂಶೋಧನೆ), ಡಾ.ಎನ್.ಆರ್. ನಾಯಕ್ (ಜಾನಪದ) ಮತ್ತು ಪದ್ಮರಾಜ ದಂಡಾವತಿ (ಡಾ.ಬೆಟಗೇರಿ ಕೃಷ್ಣಶರ್ಮ ಪತ್ರಕರ್ತ ಪ್ರಶಸ್ತಿ) ಅವರಿಗೆ ನೀಡಲು ಟ್ರಸ್ಟ್ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಪ್ರಶಸ್ತಿಯು ತಲಾ ₹ 50 ಸಾವಿರ ನಗದು ಮತ್ತು ಫಲಕ ಒಳಗೊಂಡಿದೆ. ಪ್ರಶಸ್ತಿ ಪ್ರದಾನ ಸಮಾರಂಭವನ್ನು ಏಪ್ರಿಲ್‌ನಲ್ಲಿ ನಡೆಸಲಾಗುವುದು ಎಂದು ಟ್ರಸ್ಟ್ ಅಧ್ಯಕ್ಷ ಪ್ರೊ.ರಾಘವೇಂದ್ರ ಪಾಟೀಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಘದ ಪ್ರಮುಖರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಮಂಗಳವಾರ ಭೇಟಿ ಮಾಡಿ ಮನವಿ ಸಲ್ಲಿಸಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವ ಹಾಲಪ್ಪ ಆಚಾರ್ ಇದ್ದರು

ಸಿ.ಎಂ ಭರವಸೆ: ಅಂಗನವಾಡಿ ನೌಕರರ ಧರಣಿ ಅಂತ್ಯ

ಬೆಂಗಳೂರು: ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ನಡೆಸುತ್ತಿದ್ದ ಅನಿರ್ದಿಷ್ಟಾವಧಿ ಧರಣಿ ಮಂಗಳವಾರ ಅಂತ್ಯಗೊಂಡಿದೆ.

ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಘದ ನೇತೃತ್ವದಲ್ಲಿ ಸೋಮವಾರ ಧರಣಿ ಆರಂಭಿಸಲಾಗಿತ್ತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸ್ಥಳಕ್ಕೆ ಭೇಟಿ ನೀಡಿ, ಮನವಿ ಆಲಿಸಬೇಕೆಂದು ಪ್ರತಿಭಟನಕಾರರು ಪಟ್ಟು ಹಿಡಿದಿದ್ದರು.

'ಅಧಿವೇಶನ ನಡೆಯುತ್ತಿದ್ದು, ರಾಜ್ಯದಲ್ಲಿ ಸಾಕಷ್ಟು ಬೆಳವಣಿಗೆಗಳು ನಡೆಯುತ್ತಿವೆ. ಹೀಗಾಗಿ, ಪ್ರತಿಭಟನಾ ಸ್ಥಳಕ್ಕೆ ಬರಲು ಆಗುವುದಿಲ್ಲ. ನಿಯೋಗದಲ್ಲಿ ಬಂದು ಮನವಿ ನೀಡಿ' ಎಂದು ಮುಖ್ಯಮಂತ್ರಿ ಸಂದೇಶ ಕಳುಹಿಸಿದ್ದರು. ಮುಖಂಡರ ನಿಯೋಗವು ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿತು.

ಮನವಿ ಸ್ವೀಕರಿಸಿದ ಬೊಮ್ಮಾಯಿ, 'ಬೇಡಿಕೆಗಳು ನ್ಯಾಯಯುತವಾಗಿವೆ. ಬಜೆಟ್‌ನಲ್ಲಿ ಈಡೇರಿಸಲು ಕ್ರಮ ಕೈಗೊಳ್ಳುತ್ತೇನೆ' ಎಂದರು. ಅವರ ಭರವಸೆಗೆ ಮುಖಂಡರು ಒಪ್ಪಿದರು.

ತಮ್ಮೂರಿಗೆ ಹೊರಟರು: ಸ್ವಾತಂತ್ರ್ಯ ಉದ್ಯಾನಕ್ಕೆ ಬಂದ ಮುಖಂಡರು, ಧರಣಿ ಅಂತ್ಯಗೊಳಿಸುವುದಾಗಿ ಘೋಷಿಸಿದರು. ನಂತರ, ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ತಮ್ಮೂರಿನತ್ತ ಹೊರಟರು.

ನಿಧನವಾರ್ತೆ

ಆರ್.ಜೆ. ರಚನಾ

ಬೆಂಗಳೂರು: ರೇಡಿಯೊ ಜಾಕಿ ಆಗಿದ್ದ ರಚನಾ (39) ಮಂಗಳವಾರ ಹೃದಯಾಘಾತದಿಂದ ನಿಧನರಾದರು.

ತಮ್ಮ ಮಾತು, ಧ್ವನಿಯಿಂದ ಅಪಾರ ಕೇಳುಗರನ್ನು ಸಂಪಾದಿಸಿದ್ದ ಅವರು, ನಟ ರಕ್ಷಿತ್ ಶೆಟ್ಟಿ ಜೊತೆ 'ಸಿಂಪಲ್ಲಾಗಿ ಒಂದ್ ಲವ್ ಸ್ಟೋರಿ' ಚಿತ್ರದಲ್ಲೂ ಅಭಿನಯಿಸಿದ್ದರು. ಬೆಳಿಗ್ಗೆ ಅವರಿಗೆ ತೀವ್ರ ಎದೆ ನೋವು ಕಾಣಿಸಿಕೊಂಡಿತು. ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಮಾರ್ಗಮಧ್ಯೆ ಅಸುನೀಗಿದರು.

ರೇಡಿಯೊ ಜಾಕಿ ಆಗಿ ರೇಡಿಯೊ ಮಿರ್ಚಿ ಮತ್ತು ರೇಡಿಯೊ ಸಿಟಿ ಚಾನೆಲ್‌ಗಳಲ್ಲಿ ಕಾರ್ಯನಿರ್ವಹಿಸಿದ್ದರು. ಕೆಲವು ವರ್ಷಗಳ ಹಿಂದೆ ಕೆಲಸ ಬಿಟ್ಟಿದ್ದ ಅವರು, ಜೆ.ಪಿ. ನಗರದ ಫ್ಲ್ಯಾಟ್‌ನಲ್ಲಿ ವಾಸವಾಗಿದ್ದರು.

ರಚನಾ ಅಂಗಾಂಗಗಳನ್ನು ಆಸ್ಪತ್ರೆಗೆ ದಾನ ಮಾಡಲು ಅವರ ಪೋಷಕರು ನಿರ್ಧರಿಸಿದ್ದಾರೆ.

ICMR – National Institute of Traditional Medicine
Indian Council of Medical Research
Nehru Nagar, National Highway No. 4,
BELAGAVI - 590 010. Tel: 0831- 2475477

Applications are invited before closing date i.e. **11.03.2022 upto 05:00 p.m. for the posts of Consultant (Administration / Accounts) - 02 Posts** at **ICMR-NITM, Belagavi and Assistant (Multipurpose) - 01 Post** at **MRHRU, Sirwar Raichur** to be filled purely on temporary contract basis

For detailed advertisement please visit the **www.icmrnitm.res.in/about-us/Employment.html** and **www.icmr.nic.in** websites.

Date: 17.02.2022 Sd/-
Place: Belagavi **Director**

THE KARNATAKA STATE CRICKET ASSOCIATION
M. Chinnaswamy Stadium, Cubbon Road, Bangalore - 560 001.

Tender Notification

The Karnataka State Cricket Association, M.Chinnaswamy Stadium, Cubbon Road, Bangalore, invites sealed tenders from GST Compliant, registered class I and above KPWD/CPWD/Equivalent contractors who have completed similar work , for proposed interiors for Karnataka State Cricket Stadium at Autonagar, Belgaum
The details of issue/submission of tender document are as follows :-

1. Name of work :- Proposed interiors for Karnataka State Cricket Stadium at Autonagar, Belgaum
2. Estimated Cost :- Rs. 4.00 Crores
3. Earnest Money Deposit :- Rs. 4,00,000/- should be enclosed in the technical bid cover
4. Cost of tender form :- Rs.15,000/- plus GST (Non Refundable)
5. Date of issue of tender form :- 24/02/2022 to 15/3/2022
6. Pre bid meeting :- 19/03/2022
7. Last date of submission of filled tender form two covers bid system :- 25/03/2022 before 4.30 p.m (Technical & Commercial Separately)
8. Completion of work by :- 4(Four) months from the date of work order

Tender documents may be obtained from the Office of the KSCA, by submitting a requisition in the company's letter head between 11.00 a.m to 5.00 p.m on any working days. For any clarification please contact Mr.H.A.Venkatesprasad , AGM Civil Engineering Dept, Mobile No. 9945604515/8150900022
Hon. Secretary, KSCA

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಸಿ.ವಿ ರಾಮನ್ ನಗರ ವಿಭಾಗ, 8ನೇ ಅಡ್ಡರಸ್ತೆ, 12ನೇ ಎ ಮುಖ್ಯರಸ್ತೆ, ಹೆಚ್ಎಎಲ್ 2ನೆ ಹಂತ, ಇಂದಿರಾನಗರ, ಬೆಂಗಳೂರು–560038.
ಸಂ: ಕಾಪಾಅ/ಸಿವಿಆರ್/ಇ–ಪ್ರೊಕ್/25/2021–22 ದಿನಾಂಕ: 22.02.2022

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (ದ್ವಿಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು, ಸಿ.ವಿ ರಾಮನ್ ನಗರ ವಿಭಾಗ, ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ	ಕಾಮಗಾರಿಯ ವಿವರ	ಕಾಮಗಾರಿಯ ಅಂದಾಜು ಮೊತ್ತ (ರೂ.ಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
1	ವಾರ್ಡ್ ಸಂಖ್ಯೆ 50ರ ಕಸ್ತೂರಿನಗರ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ರಸ್ತೆ ಮತ್ತು ಒಳಚರಂಡಿಗಳ ಉಳಿದ ಸುಧಾರಣಾ ಕಾಮಗಾರಿಗಳು.	200.00	3,00,000/-
2	ವಾರ್ಡ್ ಸಂಖ್ಯೆ 50ರ ಸದಾನಂದನಗರ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ರಸ್ತೆ ಮತ್ತು ಒಳಚರಂಡಿಗಳ ಉಳಿದ ಸುಧಾರಣಾ ಕಾಮಗಾರಿಗಳು.	200.00	3,00,000/-

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ಬಗೆಗಿನ ಪ್ರಶ್ನೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 28.02.2022ರ ಬೆಳಿಗ್ಗೆ 11.00 ಗಂಟೆಗೆ. 3) ಪೂರ್ವಭಾವಿ ಸಭೆ ದಿನಾಂಕ: 28.02.2022 ರ ಸಂಜೆ 4.00 ಗಂಟೆಗೆ. 4) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 07.03.2022ರ ಸಂಜೆ 4.00 ಗಂಟೆಯವರೆಗೆ. 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 09.03.2022ರಂದು ಸಂಜೆ 4.00 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: www.eproc.karnataka.gov.in
ಸಹಿ/– ಕಾರ್ಯಪಾಲಕ ಅಭಿಯಂತರರು, ಸಿ.ವಿ ರಾಮನ್ ನಗರ ವಿಭಾಗ.

ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಇಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (http://eproc.karnataka.gov.in) ಮೂಲಕ ಮಾತ್ರ ಪ್ರಕಟಿಸಲಾಗುವುದು.
ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಮೈಸೂರು ವಿಭಾಗ, ಮೈಸೂರು.

ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ
ಆಡಳಿತ ವಿಭಾಗ, ಜ್ಞಾನ ಗಂಗಾ, ಕಲಬುರಗಿ–585 106
ಫೋನ್: (08472)263246
ಕ್ರ.ಸಂ: ಗುವಿಕ/ಕನಿವಿ/ಟೆಂಡರ/2021–22/1130 ದಿನಾಂಕ: 21.02.2022

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

(1) ಕಾಮಗಾರಿಯ ವಿವರ: ಗುಲಬರ್ಗಾ ವಿಶ್ವವಿದ್ಯಾಲಯ 01 ಕಾಮಗಾರಿಯ ಟೆಂಡರ್‌ನ್ನು ಆಹ್ವಾನಿಸಿ, e-Procurement portal ಮುಖಾಂತರ ಟೆಂಡರ್ ಪ್ರಕಟಿಸುವ ಬಗ್ಗೆ. Construction of Center of performing & visual art department building at GUK, (Balance Work) (2) ಟೆಂಡರಿಗಿಟ್ಟ ಮೊತ್ತ: ರೂ. 88,42,000/– (3) ಲೆಕ್ಕ ಶೀರ್ಷಿಕೆ: ರೂಸಾ ಅನುದಾನದಡಿಯಲ್ಲಿ (4) ಗುತ್ತಿಗೆದಾರರ ಅರ್ಹತೆ: ಟೆಂಡರ ಅಧಿಸೂಚನೆಯ ಪ್ರಕಾರ (5) ಟೆಂಡರ ಫಾರಂ ಪಡೆಯುವ ದಿನಾಂಕ: ಇ–ಪ್ರೊಕ್ಯೂರ್‌ಮೆಂಟ್ ಪ್ರಕಾರ (6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ: ಇ–ಪ್ರೊಕ್ಯೂರ್‌ಮೆಂಟ್ ಮತ್ತು ಟೆಂಡರ್ ಅಧಿಸೂಚನೆ ಪ್ರಕಾರ (7) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 08.03.2022 ಸಮಯ: 4.00 PM (8) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 10.03.2022 ಸಮಯ 11.00 AM (9) ಆರ್ಥಿಕ ಬಿಡ್ ತೆರೆಯುವ ದಿನಾಂಕ: 15.03.2022 ಸಮಯ 11.00 AM (10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕುಲಸಚಿವರು, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ (11) ಅಂತರಜಾಲ ತಾಣದ ವಿಳಾಸ:www.eproc.karnataka.gov.in
ಸಹಿ/– ಕುಲಸಚಿವರು, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ತು
ಬೆಂಗಳೂರು, ಕರ್ನಾಟಕ, ಭಾರತ
(ಕರ್ನಾಟಕ ಶುಶ್ರೂಷ ದಾದಿ ಹಾಗೂ ಆರೋಗ್ಯ ಸಂದರ್ಶಕಿಯರ ಕಾಯ್ದೆ 1961 ರನ್ವಯ ಸ್ಥಾಪಿತ)
ನಂ. 71, ನೈಟಿಂಗೇಲ್ ಟವರ್ಸ್, ಎ–ಸ್ಟ್ರೀಟ್, 6ನೇ ಅಡ್ಡರಸ್ತೆ, ಎ.ಆರ್. ಬಡಾವಣೆ, ಗಾಂಧಿನಗರ, ಬೆಂಗಳೂರು – 560009. ದೂರವಾಣಿ: 080–22383230 ಫ್ಯಾಕ್ಸ್: 080–41516486
ಇ–ಮೇಲ್: karnatakastatenursingcouncil@gmail.com ವೆಬ್‌ಸೈಟ್: www.ksnc.karnataka.gov.in

ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಚಿತ್ರದುರ್ಗ.
ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ಚಿತ್ರದುರ್ಗ
E-mail: zped_cta@yahoo.com, Ph: 08194-222372
ಸಂಖ್ಯೆ: ಕಾಇಂ/ಪಂರಾಇಂವಿ/ಚಿದು/ಜೆಇ/ಟೆಂಡರ್/2021–22 ದಿನಾಂಕ: 21.02.2022
ಟೆಂಡರ್ ಪ್ರಕಟಣೆ – 2ನೇ ಕರೆ
ಉಲ್ಲೇಖ: ಸಂ:ಕಾಇಂ/ಪಂರಾಜ್‌ಇಂವಿ/ಚಿದು/ಜೆಇ/ಟೆಂಡರ್/2021–22/2717, ದಿನಾಂಕ: 25.01.2022

ಮೃತ ಹರ್ಷ ಮನೆಗೆ ಗಣ್ಯರ ದಂಡು, ಸಾಂತ್ವನ • ಪ್ರಮುಖ ಬೀದಿಗಳಲ್ಲಿ ಆರ್‌ಎಎಫ್ ಪಥಸಂಚಲನ

ಅನುಮತಿ ಇಲ್ಲದೇ ಮೆರವಣಿಗೆ: ಪ್ರಕರಣ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಬಜರಂಗ ದಳದ ಕಾರ್ಯಕರ್ತ ಹರ್ಷ ಅವರ ಪಾರ್ಥಿವ ಶರೀರದ ಮೆರವಣಿಗೆಗೆ ಜಿಲ್ಲಾಡಳಿತ ಅನುಮತಿಯನ್ನೇ ನೀಡಿರಲಿಲ್ಲ ಎನ್ನುವ ವಿಷಯ ಹೊಸತಿರುವು ಪಡೆದಿದೆ. ಅನುಮತಿ ಇಲ್ಲದೇ ನಿಷೇಧಾಜ್ಞೆ ಉಲ್ಲಂಘಿಸಿ ಮೆರವಣಿಗೆ ನಡೆಸಿದ ಆರೋಪದ ಮೇಲೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪಾರ್ಥಿವ ಶರೀರದ ಮೆರವಣಿಗೆ ಸೋಮವಾರ ಸೀಗೆಹಟ್ಟಿಯಿಂದ ಆರಂಭವಾಗಿ ಕುಂಬಾರಬೀದಿ, ಸಿದ್ದ-ಯ್ಯರಸ್ತೆ, ಗಾಂಧಿ ಬಜಾರ್, ಬಿ.ಎಚ್. ರಸ್ತೆಯ ಮೂಲಕ ವಿದ್ಯಾನಗರದ ರೋಟರಿ ಚಿತಾಗಾರ ತಲುಪಿತ್ತು. ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ, ಸಂಸದ ಬಿ.ವೈ.ರಾಘವೇಂದ್ರ ಸೇರಿ ಬಿಜೆಪಿ, ಬಜರಂಗದಳ, ವಿಶ್ವ ಹಿಂದೂ ಪರಿಷತ್‌ನ ಹಲವು ಮುಖಂಡರು ಭಾಗವಹಿಸಿದ್ದರು. ಈ ಸಮಯದಲ್ಲಿ ದಾರಿಯುದ್ದಕ್ಕೂ ಸಿಕ್ಕ ಮನೆಗಳು, ವಾಣಿಜ್ಯ ಮಳಿಗೆಗಳ ಮೇಲೆ ಕಲ್ಲು ತೂರಾಟ ನಡೆದಿತ್ತು. ಅಂಗಡಿಗಳನ್ನು ಹಾಳುಗೆಡವ-ಲಾಗಿತ್ತು. ಬೈಕ್‌ಗಳು, ಆಟೊರಿ-ಕ್ಷಾಗಳಿಗೆ ಬೆಂಕಿ ಹಚ್ಚಲಾಗಿತ್ತು. ಕಾರುಗಳನ್ನು ಜಖಂಗೊಳಿಸಲಾಗಿತ್ತು. ಗಲಭೆಯಲ್ಲಿ 20ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು. ಈ ಸಂಬಂಧ ದೊಡ್ಡಪೇಟೆ, ಕೋಟೆ ಒಳಗೊಂಡಂತೆ ವಿವಿಧ ಠಾಣೆಗಳಲ್ಲಿ 13 ಪ್ರಕರಣಗಳು ದಾಖಲಾಗಿವೆ.

ಹರ್ಷ ಮನೆಗೆ ಗಣ್ಯರ ದಂಡು: ಮೃತ ಹರ್ಷ ಅವರ ಮನೆಗೆ ಮಂಗಳವಾರ ಹಲವು ಗಣ್ಯರು, ಮಠಾಧೀಶರು ಭೇಟಿ ನೀಡಿ ಅವರ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು.

ಬಿಜೆಪಿ ಮುಖಂಡರಾದ ಜೀವರಾಜ್, ಉಡುಪಿಯ ಯಶ್‌ಪಾಲ್ ಸುವರ್ಣ, ಬೆಜ್ಜುವಳ್ಳಿ ಮಠದ ಸಂತೋಷ್ ಗುರೂಜಿ, ಚಕ್ರವರ್ತಿ ಸೂಲಿಬೆಲೆ ಮತ್ತಿತರರು ಭೇಟಿ ನೀಡಿ ಆತ್ಮಸ್ಥೈರ್ಯ ತುಂಬಿದರು.

ಸಹಜ ಸ್ಥಿತಿಯತ್ತ ಶಿವಮೊಗ್ಗ: ಅಂತ್ಯಸಂಸ್ಕಾರದ ನಂತರ ರಾತ್ರಿ ಟಿಪ್ಪುನಗರ, ಕೊರಮರಕೇರಿ ಪ್ರದೇಶಗಳಲ್ಲಿ ನಿಲ್ಲಿಸಿದ್ದ ಮೂರು ಆಟೊರಿಕ್ಷಗಳು, ಎರಡು ಬೈಕ್‌ಗಳಿಗೆ ಬೆಂಕಿ ಹಚ್ಚಲಾಗಿತ್ತು. ನಂತರ ಯಾವುದೇ ಅಹಿತಕರ ಘಟನೆಗಳು ನಡೆದಿಲ್ಲ. ಹಳೇ ಶಿವಮೊಗ್ಗ ಭಾಗ ಸಂಪೂರ್ಣ ಬಂದ್ ಆಗಿತ್ತು. ಉಳಿದೆಡೆ ವ್ಯಾಪಾರ ವಹಿವಾಟು, ಜನ ಜೀವನ ಎಂದಿನಂತೆ ಇತ್ತು. ಬಸ್‌ಗಳ ಸಂಚಾರ ವಿರಳವಾಗಿತ್ತು. ಸೂಕ್ಷ್ಮ ಪ್ರದೇಶಗಳನ್ನು ಹೊರತುಪಡಿಸಿ ಉಳಿದೆಡೆ ಆಟೊರಿಕ್ಷಗಳ ಸೇವೆ ಲಭ್ಯವಿತ್ತು.

ಬಿಗಿ ಬಂದೋಬಸ್ತ್: ಪೂರ್ವವಲಯ ವ್ಯಾಪ್ತಿಯ ದಾವಣಗೆರೆ, ಚಿತ್ರದುರ್ಗ, ಹಾವೇರಿ ಜಿಲ್ಲೆಗಳಿಂದ ಹೆಚ್ಚುವರಿ ಪೊಲೀಸರು, ಭದ್ರಾವತಿಯಿಂದ ಕ್ಷಿಪ್ರ ಕಾರ್ಯಪಡೆಯ ತುಕಡಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಕರೆಸಿಕೊಳ್ಳಲಾಗಿದೆ. ಪ್ರಮುಖ ಬೀದಿಗಳಲ್ಲಿ ಪಥ ಸಂಚಲನ ನಡೆಸಲಾಯಿತು. ಸೂಕ್ಷ್ಮ ಪ್ರದೇಶಗಳಲ್ಲಿ ಅಧಿಕ ಪಡೆ ನಿಯೋಜಿಸಲಾಗಿದೆ. ರಾಜ್ಯದ ಪ್ರಮುಖ ಪೊಲೀಸ್ ಅಧಿಕಾರಿಗಳು ನಗರದಲ್ಲೇ ಬೀಡುಬಿಟ್ಟಿದ್ದು ಸ್ಥಳೀಯ ಪೊಲೀಸರಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ.

ಶಿವಮೊಗ್ಗದ ಸೂಕ್ಷ್ಮ ಪ್ರದೇಶಗಳಲ್ಲಿ ಮಂಗಳವಾರ ಕ್ಷಿಪ್ರ ಕಾರ್ಯ ಪಡೆ ನಿಯೋಜಿಸಲಾಗಿತ್ತು

–ಪ್ರಜಾವಾಣಿ ಚಿತ್ರ: ಶಿವಮೊಗ್ಗ ನಾಗರಾಜ್

ಶಿವಮೊಗ್ಗದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಲು ಎಲ್ಲ ರೀತಿಯ ಕ್ರಮ ಕೈಗೊಳ್ಳಲಾಗಿದೆ. ಸಮಾಜಘಾತುಕ ಶಕ್ತಿಗಳನ್ನು ಮಟ್ಟಹಾಕಲಾಗುವುದು.
ಪ್ರತಾಪ್ ರೆಡ್ಡಿ, ಎಡಿಜಿಪಿ, ರಾಜ್ಯ ಕಾನೂನು ಸುವ್ಯವಸ್ಥೆ

ಪಾರ್ಥಿವ ಶರೀರದ ಮೆರವಣಿಗೆಗೆ ಜಿಲ್ಲಾಡಳಿತ ಯಾವುದೇ ಅನುಮತಿ ನೀಡಿರಲಿಲ್ಲ. ಅನುಮತಿ ಪಡೆಯದೇ ಮೆರವಣಿಗೆ ನಡೆಸಲಾಗಿದೆ. ಈ ಸಂಬಂಧ ಪೊಲೀಸರು ಕ್ರಮ ಕೈಗೊಳ್ಳಲಿದ್ದಾರೆ.
ಡಾ.ಸೆಲ್ವಮಣಿ, ಜಿಲ್ಲಾಧಿಕಾರಿ

ಹಿಂದೂಗಳ ಮತ ಪಡೆದು ಆಯ್ಕೆಯಾಗಿರುವ ರಾಜ್ಯದ ಎಲ್ಲ ಶಾಸಕರು, ಸಂಸದರು ತಮ್ಮ ಒಂದು ದಿನದ ವೇತನವನ್ನು ಮೃತ ಹರ್ಷ ಅವರ ಕುಟುಂಬಕ್ಕೆ ನೀಡಬೇಕು. ಸಮಾಜದ ಋಣ ತೀರಿಸಬೇಕು.
ಸಂತೋಷ್ ಗುರೂಜಿ, ಬೆಜ್ಜುವಳ್ಳಿ ಮಠ

ಕಾಣದ ಕೈಗಳ ಕೈವಾಡ: ನಳಿನ್

ಮೂಡಿಗೆರೆ: 'ಶಿವಮೊಗ್ಗದಲ್ಲಿ ಬಜರಂಗ ದಳದ ಕಾರ್ಯಕರ್ತ ಹರ್ಷ ಹತ್ಯೆ ಹಿಂದೆ ಕಾಣದ ಕೈಗಳ ಕೈವಾಡವಿರುವ ಶಂಕೆ ಇದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದರು.

ಇಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ದೇಶದಲ್ಲಿ ಸಂವಿಧಾನ ಹಾಗೂ ಕಾನೂನು ಇದೆ. ಧರ್ಮ, ಸಂಸ್ಕೃತಿ ಪರಂಪರೆಯನ್ನು ಮನೆ, ಮಂದಿರದಲ್ಲಿ ಆಚರಿಸುವುದಕ್ಕೆ ವಿರೋಧವಿಲ್ಲ. ಆದರೆ, ಶಿಕ್ಷಣ ಕ್ಷೇತ್ರಕ್ಕೆ ತರುವುದು ಸರಿಯಲ್ಲ. ಶಾಲೆ, ಕಾಲೇಜುಗಳಲ್ಲಿ ಶ್ರೀಮಂತ, ಬಡವ, ಜಾತಿ, ಸೇರಿದಂತೆ ಯಾವುದೇ ಭೇದಭಾವ ಇರಬಾರದು ಎಂದು ಸಮವಸ್ತ್ರ ಮಾಡಲಾಗಿದೆ. ಅದನ್ನು ಪಾಲಿಸಬೇಕು. ವಿದ್ಯಾರ್ಥಿಗಳು ಹಿಜಾಬ್ ಮುಖ್ಯವೋ ಅಥವಾ ಶಿಕ್ಷಣ ಮುಖ್ಯವೋ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು' ಎಂದರು.

₹ 5 ಲಕ್ಷ ಘೋಷಣೆ

ಹೊನ್ನಾಳಿ: ಶಿವಮೊಗ್ಗದಲ್ಲಿ ಹತ್ಯೆಯಾದ ಬಜರಂಗದಳದ ಕಾರ್ಯಕರ್ತ ಹರ್ಷ ಅವರ ಕುಟುಂಬದವರಿಗೆ ವೈಯಕ್ತಿಕವಾಗಿ ₹ 5 ಲಕ್ಷ ನೀಡುವುದಾಗಿ ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಘೋಷಿಸಿದ್ದಾರೆ.

ಹೊನ್ನಾಳಿ ತಾಲ್ಲೂಕು ಬಿಜೆಪಿ ಮುಖಂಡರು ₹ 1 ಲಕ್ಷ ನೀಡಲಿದ್ದು, ಒಟ್ಟು ₹ 6 ಲಕ್ಷ ನೀಡಲಾಗುವುದು ಎಂದು ರೇಣುಕಾಚಾರ್ಯ ಅವರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಪೊಲೀಸರು ಸದಾ ದೂಷಿಸುತ್ತಿದ್ದರು'

'ಮಗನಿಗೆ ಬೆದರಿಕೆ ಇರುವ ಬಗ್ಗೆ ಎರಡು ವರ್ಷಗಳ ಹಿಂದೆಯೇ ಪೊಲೀಸರಿಗೆ ದೂರು ನೀಡಿದ್ದೆವು. ಅವರು ಯಾವುದೇ ರಕ್ಷಣೆ ನೀಡಿರಲಿಲ್ಲ. ಬದಲಿಗೆ ಎಂಥ ಮಗನಿಗೆ ಜನ್ಮ ನೀಡಿರುವೆ ಎಂದು ಸದಾ ದೂಷಿಸುತ್ತಿದ್ದರು' ಎಂದು ಮೃತ ಹರ್ಷನ ತಾಯಿ ಪದ್ಮ ಅಳಲು ತೋಡಿಕೊಂಡರು.

'ನಗರದಲ್ಲಿ ಎಲ್ಲಿ ಗಲಾಟೆಯಾದರೂ ಬೆಳಗಿನ ಜಾವ ಅವನನ್ನು ಹುಡುಕಿಕೊಂಡು ಬರುತ್ತಿದ್ದರು. ಎಂಥ ಮಗ ಇವನು, ಉದ್ಧಾರ ಆಗುವುದಿಲ್ಲ ಎಂದು ಬೈದು ಹೋಗುತ್ತಿದ್ದರು. ಆದರೂ ಮಗ ದೇಶಕ್ಕಾಗಿ ಇದೆಲ್ಲ ಮಾಡುತ್ತಿದ್ದಾನೆ ಎಂದು ಸುಮ್ಮನೆ ಇರುತ್ತಿದ್ದೆವು' ಎಂದು ಭಾವುಕರಾದರು.

ಬೆಜ್ಜುವಳ್ಳಿ ಮಠದ ಸಂತೋಷ್ ಗುರೂಜಿ ಹರ್ಷ ಕುಟುಂದವರಿಗೆ ಸಾಂತ್ವನ ಹೇಳಿದರು.

'ಅಪ್ಪ, ಅಮ್ಮನಿಗೆ ಒಳ್ಳೆಯ ಮಕ್ಕಳಾಗಿ'

ಶಿವಮೊಗ್ಗ: ಮೃತ ಹರ್ಷ ಅವರ ಸಹೋದರಿ ಅಶ್ವಿನಿ ಮಾಧ್ಯಮಗಳ ಮೂಲಕ ಯುವ ಜನರಿಗೆ ನೀಡಿದ ಹೇಳಿಕೆ ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚಿನ ಜನರು ಹಂಚಿಕೊಂಡಿದ್ದಾರೆ.



ಅಶ್ವಿನಿ

'ಹಿಂದೂ, ಹಿಂದುತ್ವ ಎಂದಿದ್ದಕ್ಕೆ ಇಂದು ನನ್ನ ತಮ್ಮನಿಗೆ ಇಂತಹ ಸ್ಥಿತಿ ಬಂದಿದೆ. ದಯವಿಟ್ಟು ಎಲ್ಲರೂ ಒಂದು ಸಲ ನೋಡಿ. ಎಲ್ಲ ನನ್ನ ಅಣ್ಣ–ತಮ್ಮಂದಿರಿಗೆ ಕೈಮುಗಿದು ಬೇಡಿಕೊಳ್ಳುತ್ತೇನೆ. ಹಿಂದೂಗಳು, ಮುಸ್ಲಿಮರಿಗೂ ಬೇಡಿ-ಕೊಳ್ಳುತ್ತೇನೆ. ನಿಮ್ಮ ಅಪ್ಪ– ಅಮ್ಮನಿಗೆ ಒಳ್ಳೆಯ ಮಕ್ಕಳಾಗಿರಿ. ಇದೆಲ್ಲ ಮಾಡಲು ಹೋಗಬೇಡಿ' ಎಂದು ಯುವ ಸಮೂಹಕ್ಕೆ ಅಶ್ವಿನಿ ಮನವಿ ಮಾಡಿದ್ದಾರೆ.

2 ದಿನ ಕರ್ಫ್ಯೂ; ಶಾಲೆ–ಕಾಲೇಜಿಗೆ ರಜೆ

ಪರಿಸ್ಥಿತಿ ಹತೋಟಿಯಲ್ಲಿದ್ದರೂ ಸೋಮವಾರ ರಾತ್ರಿ ಕಿಡಿಗೇಡಿಗಳು ಮತ್ತೆ ಐದು ವಾಹನಗಳಿಗೆ ಬೆಂಕಿ ಹಚ್ಚಿರುವ ಕಾರಣ ಶಿವಮೊಗ್ಗ ನಗರದಲ್ಲಿ ಫೆ.22ರ ರಾತ್ರಿಯಿಂದ ಫೆ.24ರ ಬೆಳಿಗ್ಗೆ 6ರವರೆಗೆ ಎರಡು ದಿನ ಕರ್ಫ್ಯೂ ಜಾರಿಗೊಳಿಸ-ಲಾಗಿದೆ ಎಂದು ಜಿಲ್ಲಾಧಿಕಾರಿ ಸೆಲ್ವಮಣಿ ಹೇಳಿದರು.

ಶಿವಮೊಗ್ಗ ಗಲಭೆ: ನ್ಯಾಯಾಂಗ ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಮೊಗ್ಗದಲ್ಲಿ ಹರ್ಷ ಎಂಬ ಯುವಕನ ಕೊಲೆ ಮತ್ತು ನಂತರ ದಲ್ಲಿ ನಡೆದ ಗಲಭೆಯ ಕುರಿತು ನ್ಯಾಯಾಂಗ ತನಿಖೆಗೆ ಆದೇಶಿಸಬೇಕು ಎಂದು ಜೆಡಿಎಸ್ ಸದಸ್ಯರು ವಿಧಾನ ಪರಿಷತ್‌ನಲ್ಲಿ ಮಂಗಳವಾರ ಒತ್ತಾಯಿಸಿದರು.

ಮಧ್ಯಾಹ್ನ ಕಲಾಪ ಆರಂಭವಾ-ಗುತ್ತಿದ್ದಂತೆಯೇ ಈ ಕುರಿತು ನಿಲುವಳಿ ಸೂಚನೆ ಮಂಡನೆಗೆ ಅವಕಾಶ ನೀಡುವಂತೆ ಜೆಡಿಎಸ್‌ನ ಕೆ.ಟಿ. ಶ್ರೀಕಂಠೇಗೌಡ ಮನವಿ ಮಾಡಿದರು. ಪ್ರ-ಸ್ತಾವಿಕವಾಗಿ ಮಾತನಾಡಲು ಸಭಾಪತಿ ಹೊರಟ್ಟಿ ಅವಕಾಶ ನೀಡಿದರು.

'ಸಮಾಜವಾದಿ ಚಳವಳಿಯ ತವರಾಗಿದ್ದ ಶಿವಮೊಗ್ಗ ಜಿಲ್ಲೆ ಈಗ ಕೋಮು ದಳ್ಳುರಿಯಲ್ಲಿ ಬೇಯುತ್ತಿದೆ. ಹರ್ಷನ ಕೊಲೆ ಮತ್ತು ನಂತರದಲ್ಲಿ ಸಾಮಾನ್ಯ ಜನರ ಮೇಲೆ ನಡೆದ ದಾಳಿ ಖಂಡನೀಯ. ಮೃತ ಯುವಕನಿಗೆ ಬೆದರಿಕೆ ಇದ್ದರೂ ಆತನಿಗೆ ರಕ್ಷಣೆ ನೀಡುವಲ್ಲಿ ಗೃಹ ಇಲಾಖೆ ಎಡವಿದೆ. ಸೋಮವಾರ ನಡೆದ ಗಲಭೆಯಲ್ಲಿ ನೂರಾರು ಮಂದಿ ನಲುಗಿದ್ದಾರೆ. ಇದೊಂದು ದೊಡ್ಡ ಘಟನೆ. ನ್ಯಾಯಾಂಗ ತನಿಖೆಗೆ ಆದೇಶಿಸಬೇಕು' ಎಂದರು.

ಬಿಜೆಪಿಯ ಆಯನೂರು ಮಂಜುನಾಥ್ ಮಾತನಾಡಿ, 'ಶಿವಮೊಗ್ಗ ಶಾಂತವಾಗಿತ್ತು. ಸಮಾಜ ದ್ರೋಹಿ ಸಂಘಟನೆಗಳ ಸದಸ್ಯರಿಂದ ಕೊಲೆ ನಡೆದಿದೆ. ಶಿವಮೊಗ್ಗ ನಗರದವರ ಜತೆಗೆ ಬೆಂಗಳೂರಿನಿಂದ ಬಂದವರೂ ಕೃತ್ಯದಲ್ಲಿ ಭಾಗಿಯಾಗಿದ್ದಾರೆ. ಎಸ್‌ಡಿಪಿಐ, ಪಿಎಫ್‌ಐ ಮತ್ತು ಸಿಎಫ್‌ಐ ಸಂಘಟನೆಗಳನ್ನು ನಿಷೇಧಿಸಬೇಕು. ರಾಜಕಾರಣದ ಉದ್ದೇಶಕ್ಕಾಗಿ ಜನರನ್ನು ಪ್ರಚೋದಿಸುವ ಹೇಳಿಕೆಗಳನ್ನು ಯಾರೂ ಮಾಡಬಾರದು' ಎಂದರು.

'ದಂಗೆಗೆ ಈಶ್ವರಪ್ಪ ಕಾರಣ': ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಮಾತನಾಡಿ, 'ಸೆಕ್ಷನ್ 144 ಜಾರಿಯಲ್ಲಿದ್ದಾಗಲೇ ಮಂತ್ರಿಯ ನೇತೃತ್ವದಲ್ಲೇ ಮೆರವಣಿಗೆ ನಡೆಸಲಾಗಿದೆ. ಅಮಾಯಕರ ಮೇಲೆ ಹಲ್ಲೆ ನಡೆಸಲಾಗಿದೆ. ಸಚಿವ ಈಶ್ವರಪ್ಪ ಅವರೇ ದಂಗೆ ಮಾಡಿಸಿದ್ದಾರೆ. ಅವರ ರಾಜೀನಾಮೆ ಪಡೆಯಿರಿ. ಸರ್ಕಾರಕ್ಕೆ ತಾಕತ್ತಿದ್ದರೆ ಎಸ್‌ಡಿಪಿಐ, ಪಿಎಫ್‌ಐ ನಿಷೇಧಿಸಿ' ಎಂದು ಸವಾಲು ಹಾಕಿದರು.

ಪರಿಸ್ಥಿತಿ ನಿಯಂತ್ರಣದಲ್ಲಿದೆ: ವಿಪಕ್ಷಗಳ ಟೀಕೆಗೆ ಉತ್ತರಿಸಿದ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, 'ಮೃತ ಯುವಕನಿಗೆ ರಕ್ಷಣೆ ಕೊಡಬೇಕಿತ್ತು ಎಂಬ ಟೀಕೆಗಳು ಬಂದಿವೆ. ಸಾಮಾನ್ಯವಾಗಿ ಎಲ್ಲರಿಗೂ ಆ ರೀತಿಯ ರಕ್ಷಣೆ ನೀಡುವುದು ಕಷ್ಟ. ಈ ರೀತಿಯ ಪರಿಸ್ಥಿತಿಯನ್ನು ನಿರೀಕ್ಷಿಸಿರಲಿಲ್ಲ. ಘಟನೆ ನಡೆದ ಬಳಿಕ ಪರಿಸ್ಥಿತಿ ಹದಗೆಡದಂತೆ ಸರ್ಕಾರ ನಿಯಂತ್ರಿಸಿದೆ.' ಎಂದರು.

ಉತ್ತರದಿಂದ ತೃಪ್ತರಾಗದ ಜೆಡಿಎಸ್ ಸದಸ್ಯರು ಸಭಾತ್ಯಾಗ ಮಾಡಿದರು. ಧರಣಿಯಲ್ಲಿದ್ದ ಕಾಂಗ್ರೆಸ್ ಸದಸ್ಯರು ಧಿಕ್ಕಾರ ಕೂಗಿದರು.

'ಅರುಣ್‌ಗೆ ಬೆದರಿಕೆ'

'ಕೊಲೆಯಾದ ಯುವಕನಿಗೆ ಸಂತಾಪ ಸೂಚಿಸಿ ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಹಾಕಿದ್ದ ವಿಧಾನ ಪರಿಷತ್ ಸದಸ್ಯ ಡಿ.ಎಸ್. ಅರುಣ್ ಅವರಿಗೆ ದುಷ್ಕರ್ಮಿಗಳಿಂದ ಬೆದರಿಕೆ ಬಂದಿದೆ. ಅರುಣ್ ಮತ್ತು ಅವರ ಕುಟುಂಬದ ಸದಸ್ಯರಿಗೆ ಕೊಲೆ ಬೆದರಿಕೆ ಹಾಕಿದ್ದಾರೆ' ಎಂದು ಬಿಜೆಪಿ ಸದಸ್ಯ ಆಯನೂರು ಮಂಜುನಾಥ್ ವಿಧಾನ ಪರಿಷತ್‌ನಲ್ಲಿ ಮಂಗಳವಾರ ತಿಳಿಸಿದರು.

3 ವರ್ಷಗಳಲ್ಲಿ 63 ಕೋಮು ಹಿಂಸಾಚಾರ

ಬೆಂಗಳೂರು: ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ 63 ಕೋಮು ಹಿಂಸಾಚಾರ ಪ್ರಕರಣಗಳು ನಡೆದಿದ್ದು, ಯಾವುದೇ ಪ್ರಕರಣದ-ಲ್ಲಿ ತಪ್ಪಿತಸ್ಥರಿಗೆ ಶಿಕ್ಷೆ ಆಗಿಲ್ಲ ಎಂದು ಸರ್ಕಾರ ಹೇಳಿದೆ. ಇವುಗಳಲ್ಲಿ ಬಹುಪಾಲು ಪ್ರಕರಣಗಳು ವಿವಿಧ ಹಂತದ ತನಿಖೆ ಮತ್ತು ನ್ಯಾಯಾಯ-ಲಯದಲ್ಲಿ ವಿಚಾರಣಾ ಹಂತದಲ್ಲಿವೆ ಎಂದು ವಿಧಾನಸಭೆಯಲ್ಲಿ ಚುಕ್ಕೆ ಗುರುತಿಲ್ಲದ ಪ್ರಶ್ನೆಗೆ ಗೃಹ ಸಚಿವ ಆರಗ ಜ್ಞಾನೇಂದ್ರ ಉತ್ತರಿಸಿದ್ದಾರೆ.

2019ರಲ್ಲಿ 12 ಪ್ರಕರಣಗಳು, 2020ರಲ್ಲಿ 21 ಪ್ರಕರಣಗಳು ಮತ್ತು 2021ರಲ್ಲಿ 23 ಪ್ರಕರಣಗಳು ನಡೆದಿವೆ. ಕಳೆದ ಎರಡು ತಿಂಗಳ ಅವಧಿಯಲ್ಲಿ ಏಳು ಪ್ರಕರಣಗಳು ವರದಿಯಾಗಿವೆ.

'ಬೇಜವಾಬ್ದಾರಿ ಹೇಳಿಕೆ ಸಹಿಸಲ್ಲ: ನಡ್ಡಾ

ನವದೆಹಲಿ: ಕೇಸರಿ ಧ್ವಜದ ವಿಚಾರವಾಗಿ ಕರ್ನಾಟಕದ ಸಚಿವ ಕೆ.ಎಸ್.ಈಶ್ವರಪ್ಪ ನೀಡಿರುವ ಹೇಳಿಕೆಯನ್ನು ಬಿಜೆಪಿ ಒಪ್ಪುವುದಿಲ್ಲ ಎಂದು ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹೇಳಿದ್ದಾರೆ.



ಅಂತಹ ಪದಗಳನ್ನು ಬಳಸಬಾರದು ಎಂದು ನಯವಾಗಿ ಈಶ್ವರಪ್ಪ ಅವರಿಗೆ ತಿಳಿಹೇಳಿದ್ದೇನೆ ಎಂಬುದಾಗಿಯೂ 'ಇಂಡಿಯಾ ಟುಡೇ'ಗೆ ನೀಡಿದ ಸಂದರ್ಶ-ನದಲ್ಲಿ ಅವರು ಹೇಳಿದ್ದಾರೆ. ತ್ರಿವರ್ಣ ಧ್ವಜ ರಾಷ್ಟ್ರೀಯ ಧ್ವಜವಾಗಿದ್ದು ಅದನ್ನು ಪ್ರತಿಯೊಬ್ಬರೂ ಗೌರವಿಸಬೇಕು ಎಂದು ನಡ್ಡಾ ಹೇಳಿದ್ದಾರೆ.

'ಇದು ಸಾಧ್ಯವಿಲ್ಲ... ನಾವು (ಬಿಜೆಪಿ) ರಾಷ್ಟ್ರೀಯವಾದಿಗಳು. ನಾವು ಸಂವಿಧಾನ ಮತ್ತು ಕಾನೂನನ್ನು ಗೌರವಿಸುತ್ತೇವೆ. ಸಚಿವರು ನೀಡುವ ಬೇಜವಾಬ್ದಾರಿ ಹೇಳಿಕೆಗಳನ್ನು ಬಿಜೆಪಿ ಸಹಿಸುವುದಿಲ್ಲ' ಎಂದು ಅವರು ಹೇಳಿದ್ದಾರೆ.

ಈಶ್ವರಪ್ಪಗೆ ನಡ್ಡಾ ಎಚ್ಚರಿಕೆ: ಡಿಕೆಶಿ

ಮಂಡ್ಯ: 'ಕೇಸರಿ ಧ್ವಜದ ಕುರಿತು ಹರಕಲು ಬಾಯಿ ಈಶ್ವರಪ್ಪ ನೀಡಿದ್ದ ಹೇಳಿಕೆ ವಿರುದ್ಧ ಕಾಂಗ್ರೆಸ್ ಐದು ದಿನ ವಿಧಾನಸೌಧದಲ್ಲಿ ಧರಣಿ ನಡೆಸಿದ ಬಳಿಕ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಈಶ್ವರಪ್ಪ ಅವರಿಗೆ ಕರೆ ಮಾಡಿ ಬೈದಿದ್ದು, ಬಾಯಿಮುಚ್ಚಿಕೊಂಡು ಸುಮ್ಮನಿರುವಂತೆ ಎಚ್ಚರಿಕೆ ನೀಡಿದ್ದಾರೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಂಗಳವಾರ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕೇಸರಿ ಧ್ವಜ ಅಲ್ಲ, ನಮಗೆ ರಾಷ್ಟ್ರ ಧ್ವಜ ಮುಖ್ಯ. ಬಿಜೆಪಿ ಮರ್ಯಾದೆ ತೆಗೆಯಬೇಡ ಎಂದು ನಡ್ಡಾ ಬೈದಿದ್ದಾರೆ' ಎಂದರು.

'ಕಾಂಗ್ರೆಸ್ ಪಕ್ಷ ಈ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟಿದೆ. ರಾಷ್ಟ್ರ ಧ್ವಜ, ಸಂವಿಧಾನ ಕೊಟ್ಟಿದೆ. ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಬಣ್ಣವನ್ನು ಬಿಜೆಪಿಯವರು ಹಾಕಿಕೊಳ್ಳಲು ಸಾಧ್ಯವೇ' ಎಂದು ಪ್ರಶ್ನಿಸಿದರು.

'ಶಿವಮೊಗ್ಗ ಹಿಂದೂ ಕಾರ್ಯಕರ್ತನ ಹತ್ಯೆ ವಿಚಾರದಲ್ಲಿ ಈಶ್ವರಪ್ಪ ಬಾಯಿಗೆ ಬಂದಂತೆ ಗಂಟೆಗೊಂದು ಹೇಳಿಕೆ ಕೊಟ್ಟು, ತಮ್ಮ ಮಾತೇ ಸರಿಯೆ-ನ್ನುತ್ತಿದ್ದಾರೆ. ಒಮ್ಮೆ, ಡಿ.ಕೆ.ಶಿವಕುಮಾರ್‌ನಿಂದಲೇ ಕೊಲೆ ಆಯ್ತು ಎನ್ನುತ್ತಾರೆ. ಮತ್ತೊಮ್ಮೆ ಹೊರಗಿನವರ ಸಂಚು ಎನ್ನುತ್ತಾರೆ. ಹತ್ಯೆಗೆ ಹಳೇ ವೈಷಮ್ಯ ಕಾರಣ ಎಂದು ಅಲ್ಲಿನ ಉಸ್ತುವಾರಿ ಸಚಿವರು, ಅಧಿ ಕಾರಿಗಳು ಹೇಳಿದ್ದಾರೆ. ಆ ಬಗ್ಗೆ ತನಿಖೆ ನಡೆಯಬೇಕು' ಎಂದರು.

'ಕಾಂಗ್ರೆಸ್‌ಗೆ ಬರುವವರ ಪಟ್ಟಿ ದೊಡ್ಡದು'

'ಗುಬ್ಬಿ ಶ್ರೀನಿವಾಸ್, ಜಿ.ಟಿ.ದೇವೇಗೌಡ, ತಿಪಟೂರಿನ ಜೆಡಿಎಸ್ ಮುಖಂಡರು ಸೇರಿ ಹಲವರು ಕಾಂಗ್ರೆಸ್‌ಗೆ ಬರುವುದಾಗಿ ತಿಳಿಸಿದ್ದಾರೆ. ಹಲವು ಶಾಸಕರು ಕಾಂಗ್ರೆಸ್ ಸೇರಲು ಮುಂದಾಗಿದ್ದಾರೆ. ಅವರ ಹೆಸರನ್ನು ಈಗ ಹೇಳುವುದಿಲ್ಲ. ಬಿಜೆಪಿ ಮುಖಂಡರೂ ಕಾಂಗ್ರೆಸ್‌ಗೆ ಬರುತ್ತಿದ್ದಾರೆ. ಬಿಜೆಪಿ ಬಿಟ್ಟು ಕಾಂಗ್ರೆಸ್ ಸೇರಿದ್ದ ಯುವ ಮುಖಂಡರೊಬ್ಬರು ಪಕ್ಷಕ್ಕೆ ರಾಜ್ಯದಲ್ಲೇ ಅತೀ ಹೆಚ್ಚು ಸದಸ್ಯತ್ವ ಮಾಡಿಸಿದ್ದಾರೆ' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಈಶ್ವರಪ್ಪ ವಜಾಕ್ಕೆ ಆಗ್ರಹ: ರಾಜ್ಯಪಾಲ ಥಾವರಚಂದ್ ಗೆಹಲೋತ್‌ಗೆ ಮನವಿ

ಬೆಂಗಳೂರು: 'ರಾಷ್ಟ್ರಧ್ವಜಕ್ಕೆ ಅಗೌರವ ತೋರಿರುವ ಸಚಿವ ಕೆ.ಎಸ್. ಈಶ್ವರಪ್ಪ ಅವರನ್ನು ಸಂಪುಟದಿಂದ ವಜಾ ಮಾಡಲು ಸರ್ಕಾರಕ್ಕೆ ನಿರ್ದೇಶನ ನೀಡಬೇಕು' ಎಂದು ಕಾಂಗ್ರೆಸ್ ಶಾಸಕರ ನಿಯೋಗ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಮಂಗಳವಾರ ಮನವಿ ಸಲ್ಲಿಸಿತು.

ಈಶ್ವರಪ್ಪ ಅವರ ವಜಾಕ್ಕೆ ಪಟ್ಟುಹಿಡಿದು ವಿಧಾನಮಂಡಲದ ಉಭಯ ಸದನಗಳಲ್ಲಿ ಕಾಂಗ್ರೆಸ್ ಸದಸ್ಯರು ಐದು ದಿನ ಅಹೋರಾತ್ರಿ ಧರಣಿ ನಡೆಸಿದರು. ಇದರಿಂದಾಗಿ, ಫೆ. 24ರವರೆಗೆ ನಿಗದಿಯಾಗಿದ್ದ ವಿಧಾನಮಂಡಲದ ಕಲಾಪ ಮಂಗಳವಾರವೇ ಕೊನೆಗೊಂಡಿತು.

ಸಚಿವರು, ಶಾಸಕರ ವೇತನ ಹೆಚ್ಚಳ

ಒಂದನೇ ಪುಟದಿಂದ

ಮಸೂದೆ ಮಂಡಿಸಿ ಮಾತನಾಡಿದ ಮಾಧುಸ್ವಾಮಿ, 2015 ರಿಂದ ವೇತನ ಮತ್ತು ಯಾವುದೇ ಭತ್ಯೆಗಳ ಪರಿಷ್ಕರಣೆ ಆಗಿರಲಿಲ್ಲ. ಎಲ್ಲ ಅಗತ್ಯ ವಸ್ತುಗಳ ಬೆಲೆ ಏರಿಕೆ ಆಗಿದೆ. ಸಾಕಷ್ಟು ಶಾಸಕರು ಸಂಕಷ್ಟ ಅನುಭವಿಸಿದ್ದಾರೆ. ಆದ್ದರಿಂದ ಈ ಮಸೂದೆ ಮಂಡಿಸಲಾಗಿದೆ ಎಂದರು.

ವಿಧಾನಸಭೆಯಲ್ಲಿ ಜೆಡಿಎಸ್ ಉಪನಾಯಕ ಬಂಡೆಪ್ಪ ಕಾಶೆಂಪೂರ ಅವರು, ಕೇವಲ ಮಂತ್ರಿಗಳ ವೇತನ ಹೆಚ್ಚಿಸಿದರೆ ಸಾಲದು. ಶಾಸಕರ ವೇತನವನ್ನೂ ಹೆಚ್ಚಿಸಬೇಕು ಎಂದರು. 'ಆ ಮಸೂದೆಯೂ ಬರಲಿದೆ' ಎಂದು ಸಮಾಧಾನ ಪಡಿಸಿದ ಮಾಧುಸ್ವಾಮಿ, ಶಾಸಕರ ವೇತನ ಮಸೂದೆ ಮಂಡಿಸಿದರು. ವಿರೋಧಪಕ್ಷದ ನಾಯಕರು, ಉಪಸಭಾಧ್ಯಕ್ಷ ಮತ್ತು ಉಪಸಭಾಪತಿ-ಯವರಿಗೆ ಆತಿಥ್ಯ ಭತ್ಯೆ ಲೆಕ್ಕದಲ್ಲಿ ವರ್ಷಕ್ಕೆ ₹ 2 ಲಕ್ಷ ನೀಡಲಾಗುತ್ತಿದ್ದು, ಅದನ್ನು ₹2.50 ಲಕ್ಷಕ್ಕೆ ಏರಿಸಲಾಗಿದೆ. ಶಾಸಕರು ನಿವೃತ್ತಿಯಾದ ಬಳಿಕ ತಿಂಗಳಿಗೆ ವೇತನ ಮತ್ತು ಭತ್ಯೆ ₹ 40 ಸಾವಿರ ನೀಡಲಾ-ಗುತ್ತಿತ್ತು, ₹50 ಸಾವಿರಕ್ಕೆ ಹೆಚ್ಚಿಸಲಾಗಿದೆ ಎಂದು ಮಸೂದೆ ಹೇಳಲಾಗಿದೆ.

ಶಾಸಕರಿಗೆ ಸಿಗುವುದೆಷ್ಟು?(ತಿಂಗಳಿಗೆ ₹ಗಳಲ್ಲಿ)

ಯಾವ ಭತ್ಯೆ	ಪ್ರಸ್ತುತ	ಪರಿಷ್ಕೃತ
ವೇತನ	25 ಸಾವಿರ	40 ಸಾವಿರ
ಕ್ಷೇತ್ರ ಪ್ರಯಾಣ ಭತ್ಯೆ	40 ಸಾವಿರ	60 ಸಾವಿರ
ಸಭೆಗೆ ಹಾಜರಾದರೆ ದಿನಭತ್ಯೆ*	2 ಸಾವಿರ	7 ಸಾವಿರ
ದೂರವಾಣಿ/ಮೊಬೈಲ್	20 ಸಾವಿರ	20 ಸಾವಿರ
ಅಂಚೆ ವೆಚ್ಚ	5 ಸಾವಿರ	5 ಸಾವಿರ
ಆಪ್ತ ಸಹಾಯಕರ ವೇತನ	20 ಸಾವಿರ	20 ಸಾವಿರ
ವಾರ್ಷಿಕ ಪ್ರಯಾಣ ಭತ್ಯೆ	2 ಲಕ್ಷ	2.50 ಲಕ್ಷ

* ದಿನ ಭತ್ಯೆ ವಿವಿಧ ಹಂತಗಳಲ್ಲಿ ₹ 2 ಸಾವಿರದಿಂದ ₹7 ಸಾವಿರದವರೆಗೆ ನಿಗದಿ

ಭತ್ಯೆ ಹೆಚ್ಚಳ (ತಿಂಗಳಿಗೆ ₹ಗಳಲ್ಲಿ)*

ಯಾವ ಭತ್ಯೆ	ಪ್ರಸ್ತುತ	ಪರಿಷ್ಕೃತ
ಮನೆ ಬಾಡಿಗೆ	80 ಸಾವಿರ	1.20 ಲಕ್ಷ
ಮನೆ ನಿರ್ವಹಣೆ	20 ಸಾವಿರ	30 ಸಾವಿರ
ಪೆಟ್ರೋಲ್	1 ಸಾವಿರ ಲೀಟರ್	2 ಸಾವಿರ ಲೀಟರ್ (ಸಮನಾದ ಭತ್ಯೆ)
ಆತಿಥ್ಯ	3ಲಕ್ಷ	4.50 ಲಕ್ಷ (ವರ್ಷಕ್ಕೆ)

*ಮುಖ್ಯಮಂತ್ರಿ, ಸಭಾಪತಿ, ಸಭಾಧ್ಯಕ್ಷರು ಮತ್ತು ಸಚಿವರಿಗೆ

'ಆಯುಷ್ ಸ್ಟಾರ್ಟ್ ಅಪ್ ಚಾಲೆಂಜ್'ಗೆ ಚಾಲನೆ

ನವದೆಹಲಿ (ಪಿಟಿಐ) : ಆಯುರ್ವೇದ ವಲಯದಲ್ಲಿ ಆವಿಷ್ಕಾರಗಳು ಮತ್ತು ಪರ್ಯಾಯ ಚಿಕಿತ್ಸೆಯಲ್ಲಿ ಕೆಲಸ ಮಾಡಲು ಆರಂಭಿಕ ಹಂತದ ಸ್ಟಾ-ರ್ಟ್‌ಅಪ್‌ಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ ಸ್ಟಾರ್ಟ್‌ಅಪ್ ಇಂಡಿಯಾದ ಸಹಯೋಗದೊಂದಿಗೆ ಅಖಿಲ ಭಾರತ ಆಯುರ್ವೇದ ಸಂಸ್ಥೆಯು (ಎಐಐಎ) 'ಆಯುಷ್ ಸ್ಟಾರ್ಟ್ ಅಪ್ ಚಾಲೆಂಜ್' ಅನ್ನು ಪ್ರಾರಂಭಿಸಿದೆ.

ಪ್ರಚೋದನಕಾರಿ ಬರಹ: ನಟ ಚೇತನ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಮಾಧ್ಯಮಗ-ಳಲ್ಲಿ ಪ್ರಚೋದನಕಾರಿ ಬರಹ ಪ್ರಕಟಿಸಿದ ಆರೋಪದಡಿ ನಟ ಎ. ಚೇತನ್ ಕುಮಾರ್ ಅವರನ್ನು ಶೇಷಾದ್ರಿಪುರ ಠಾಣೆ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

'ಹೈಕೋರ್ಟ್ ನ್ಯಾಯಮೂರ್ತಿ-ಯೊಬ್ಬರ ಹೆಸರು ಉಲ್ಲೇಖಿಸಿ ಚೇತನ್ ಕುಮಾರ್ ಇತ್ತೀಚೆಗೆ ಪ್ರಚೋದನಕಾರಿ ಬರಹ ಪ್ರಕಟಿಸಿದ್ದರು. ಅದನ್ನು ಆಧರಿಸಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು, ಅವರನ್ನು ಬಂಧಿಸಲಾಗಿದೆ' ಎಂದು ಕೇಂದ್ರ ವಿಭಾಗದ ಡಿಸಿಪಿ ಎಂ.ಎನ್. ಅನುಚೇತ್ ತಿಳಿಸಿದರು.

'ಜಾತಿ, ಧರ್ಮ ಹಾಗೂ ಎರಡು ಗುಂಪಿನ ನಡುವೆ ದ್ವೇಷ ಉಂಟು ಮಾಡುವ ಹೇಳಿಕೆ ಪ್ರಚುರಪಡಿಸಿದ (ಐಪಿಸಿ 505 (2) ಹಾಗೂ ಅಪರಾಧ ಕೃತ್ಯ ಕೈಗೊಳ್ಳಲು ಪ್ರಚೋದನೆ ನೀಡಿದ (ಐಪಿಸಿ 504) ಆರೋಪದಡಿ ಚೇತನ್‌ಕುಮಾರ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದರು.

ಪತ್ನಿ, ಸಂಘಟನೆಗಳ ಆಕ್ರೋಶ

ಚೇತನ್ ಅವರನ್ನು ಮನೆಯಲ್ಲಿ ವಶಕ್ಕೆ ಪಡೆದಿದ್ದ ಶೇಷಾದ್ರಿಪುರ ಪೊಲೀಸರು, ಅಜ್ಞಾತ ಸ್ಥಳಕ್ಕೆ ಕರೆದೊಯ್ದಿದ್ದರು. ಶೇಷಾದ್ರಿಪುರ ಠಾಣೆಗೆ ಹೋಗಿದ್ದ ಪತ್ನಿ ಮೇಘಾ, ಪತಿ ಬಗ್ಗೆ ವಿಚಾರಿಸಿದ್ದರು. ಸಿಬ್ಬಂದಿ ಮಾಹಿತಿ ನೀಡಿರಲಿಲ್ಲ.

ಈ ಬಗ್ಗೆ ವಿಡಿಯೊ ಹರಿಬಿಟ್ಟಿದ್ದ ಮೇಘಾ, 'ಪೊಲೀಸರೆಂದು ಹೇಳಿಕೊಂಡು ಮನೆಗೆ ಬಂದಿದ್ದ ಕೆಲವರು, ಚೇತನ್ ಅವರನ್ನು ಕರೆದೊಯ್ದಿದ್ದಾರೆ. ಅವರು ಈಗ ಎಲ್ಲಿದ್ದಾರೆಂಬುದನ್ನು ಹೇಳುತ್ತಿಲ್ಲ' ಎಂದು ಅಳಲು ತೋಡಿಕೊಂಡಿದ್ದರು.

'ಪ್ರಕರಣದ ಬಗ್ಗೆ ಪೊಲೀಸರು ಮಾಹಿತಿ ನೀಡಿಲ್ಲ. ಏಕಾಏಕಿ ಮನೆಗೆ ಬಂದು ಚೇತನ್ ಅವರನ್ನು ಕರೆದುಕೊಂಡು ಹೋಗಿದ್ದಾರೆ. ಪತಿ ಹಾಗೂ ಅಂಗರಕ್ಷಕನ ಮೊಬೈಲ್ ಸ್ವಿಚ್ ಆಫ್ ಆಗಿದೆ. ಅವರನ್ನು ಅಪಹರಣ ಮಾಡಲಾಗಿದೆ' ಎಂದು ಆರೋಪಿಸಿದ್ದರು. ಠಾಣೆ ಎದುರು ಸೇರಿದ್ದ ವಿವಿಧ ಸಂಘಟನೆಗಳ ಮುಖಂಡರು, ನಟನ ಬಗ್ಗೆ ಮಾಹಿತಿ ನೀಡುವಂತೆ ಒತ್ತಾಯಿಸಿದರು. ಕೆಲವರು ಕಮಿಷನರ್ ಕಮಲ್ ಪಂತ್ ಅವರನ್ನು ಭೇಟಿಯಾದರು.

ಹರಿದಾಡಿದ್ದ ಬರಹ: ಚೇತನ್ ಅವರು ಟ್ವಿಟರ್ ಹಾಗೂ ಫೇಸ್‌ಬುಕ್ ಪುಟದಲ್ಲಿ ಬರಹ ಪ್ರಕಟಿಸಿದ್ದರು. ಇದು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು.

ಹೈಕೋರ್ಟ್ ನ್ಯಾಯಮೂರ್ತಿಯೊಬ್ಬರು ಅತ್ಯಾಚಾರ ಪ್ರಕರಣದ ಆರೋಪಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿ, ಹೇಳಿಕೆಯೊಂದನ್ನು ನೀಡಿದ್ದರು. '21ನೆಯ ಶತಮಾನದಲ್ಲೂ ನ್ಯಾಯಮೂರ್ತಿಯವರ ಈ ಸ್ತ್ರೀ ದ್ವೇಷ ನಾಚಿಕೆಗೇಡಿನ ಸಂಗತಿ. ಇಂಥ ಅಸಹ್ಯಕರ ಹೇಳಿಕೆ ನೀಡಿದ್ದ ಅದೇ ನ್ಯಾಯಮೂರ್ತಿ, ಸರ್ಕಾರಿ ಶಾಲೆಗಳಲ್ಲಿ ಹಿಜಾಬ್ ಬೇಕೇ ? ಅಥವಾ ಬೇಡವೇ ಎಂಬುದರ ಬಗ್ಗೆ ಪರಿಶೀಲನೆ ನಡೆಸುತ್ತಿದ್ದಾರೆ. ಅವರಿಗೆ ಈ ಕುರಿತು ಬೇಕಾದ ಸ್ಪಷ್ಟತೆಯಿದೆಯೇ?' ಎಂಬುದಾಗಿ ಚೇತನ್ ಬರೆದುಕೊಂಡಿದ್ದರು.





ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಸಮಗ್ರ ದೇವಾಲಯ ನಿರ್ವಹಣಾ ವ್ಯವಸ್ಥೆ
(ITMS - Integrated Temple Management System)
ಲೋಕಾರ್ಪಣೆ
ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು ಇವರಿಂದ
ದಿನಾಂಕ: 23 ಫೆಬ್ರವರಿ, 2022
ಸ್ಥಳ: ಕೃಷ್ಣಾ, ಮುಖ್ಯಮಂತ್ರಿಗಳ ಗೃಹ ಕಛೇರಿ
ಸಮಯ: ಬೆಳಿಗ್ಗೆ 10.30 ಕ್ಕೆ

ITMS ನ ವೈಶಿಷ್ಟ್ಯಗಳು
- ಸಮಗ್ರ ವೆಬ್‌ಪೋರ್ಟಲ್
- ಪ್ರತಿ ದೇವಾಲಯವಾರು ಹೊಸ ಕಾರ್ಯಕ್ರಮಗಳ ಪ್ರಕಟಣೆ
- ದೇವಾಲಯ/ಉತ್ಸವಗಳ ಅನ್ವೇಷಣಾ ವ್ಯವಸ್ಥೆ
- ಮೊಬೈಲ್/ಟ್ಯಾಬ್‌ಗಳ ಮೂಲಕ ದೇವಾಲಯ ಪ್ರವೇಶ ಕಾಯ್ದಿರಿಸುವಿಕೆ
- ದೇವಾಲಯಗಳ ಸ್ಥಿರಾಸ್ತಿ/ಚರಾಸ್ತಿಗಳ ನಕಾಶೆ
- ಪ್ರತಿ ದೇವಾಲಯಕ್ಕೂ ಸಂವೇದನಾಶೀಲ ವೆಬ್‌ಸೈಟ್ ರಚನೆ
- ದೇವಾಲಯಗಳ ಪರ್ಯಟನೆ

ಮಾನ್ಯ ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವರಾದ ಶ್ರೀಮತಿ ಶಶಿಕಲಾ ಅ ಜೊಲ್ಲೆ ರವರು ದೇವಾಲಯಗಳ ಅಭಿವೃದ್ಧಿ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸುತ್ತಿರುವುದು

ITMS ತಂತ್ರಾಂಶದ ಬಗ್ಗೆ
1. ಒಂದೇ ವೆಬ್‌ಸೈಟ್‌ನಲ್ಲಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ದೇವಾಲಯಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು (ದೇವಾಲಯಗಳ ಇತಿಹಾಸ, ಲಭ್ಯವಿರುವ ಸೇವೆಗಳ/ ಪೂಜೆಗಳ ವಿವರ, ಲಭ್ಯವಿರುವ ಸೌಲಭ್ಯಗಳು, ಹತ್ತಿರದ ಸ್ಥಳಗಳು ಇತ್ಯಾಧಿ ವಿವರಗಳು) ವೀಕ್ಷಿಸಬಹುದಾಗಿದೆ.
2. ದೇವಾಲಯಗಳಲ್ಲಿ ಲಭ್ಯವಿರುವ ಸೇವೆಗಳನ್ನು ಆನ್‌ಲೈನ್ ಮೂಲಕ ಬುಕಿಂಗ್ ಮಾಡಬಹುದು
3. ದೇವಾಲಯಗಳಲ್ಲಿ ನಡೆಯುವ ಉತ್ಸವ, ಜಾತ್ರೆಗಳು, ಹಬ್ಬ ಹರಿದಿನಗಳ ವಿವರಗಳನ್ನು ಸಾರ್ವಜನಿಕರಿಗೆ / ಭಕ್ತಾದಿಗಳಿಗೆ ಪಡೆಯಲು ಅನುಕೂಲವಾಗುವಂತೆ ಐ ಟಿ ಎಂ ಎಸ್ ತಂತ್ರಾಂಶದಲ್ಲಿ ಸದರಿ ಮಾಹಿತಿಗಳನ್ನು ಅಪ್‌ಲೋಡ್ ಮಾಡುವ ವ್ಯವಸ್ಥೆಯಿದೆ
4. ದೇವಾಲಯಗಳ ಆಸ್ತಿಗಳ ವಿವರ ಮತ್ತು ಅವುಗಳ ವಹಿವಾಟಿನ ಮಾಹಿತಿಗಳು
5. ಜಗತ್ತಿನ ಯಾವುದೇ ಭಾಗದಿಂದ ಆನ್‌ಲೈನ್ ಮೂಲಕ ಕಾಣಿಕೆಯನ್ನು ಸಲ್ಲಿಸಬಹುದು
6. ಸರ್ಕಾರದ ಭೂ ದಾಖಲೆಗಳ ದತ್ತಾಂಶದೊಂದಿಗೆ (Bhoomi etc) ಸಂಯೋಜನೆ ಮಾಡಬಹುದು
7. ವಿವಿಧ ರೀತಿಯ MIS ವರದಿಗಳನ್ನು ಪಡೆಯಲು ಅವಕಾಶವಿರುತ್ತದೆ.

ತುಷಾರ್ ಗಿರಿನಾಥ್, ಭಾ. ಆ. ಸೇ.
ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ಇಲಾಖೆ)

ರೋಹಿಣಿ ಸಿಂಧೂರಿ ಭಾ. ಆ. ಸೇ.
ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ

ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಅವಧ್ ಪ್ರದೇಶದಲ್ಲಿ ಮತದಾನ: ಹೆಚ್ಚು ಕ್ಷೇತ್ರ ಗೆಲ್ಲುವ ನಿರೀಕ್ಷೆಯಲ್ಲಿ ಎಸ್‌ಪಿ, ಬಿಎಸ್‌ಪಿ

ನಾಲ್ಕನೇ ಹಂತ: ಎಲ್ಲ ಪಕ್ಷಗಳಿಗೂ ಸವಾಲು

• ಸಂಜಯ ಪಾಂಡೆ

ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಕೌಶಾಂಬಿಯಲ್ಲಿ ಮಂಗಳವಾರ ಚುನಾವಣಾ ಪ್ರಚಾರ ನಡೆಸಿದರು ಪಿಟಿಐ ಚಿತ್ರ

ಲಖನೌ: ಉತ್ತರ ಪ್ರದೇಶದ ಅವಧ್ ಪ್ರದೇಶದ 59 ವಿಧಾನಸಭಾ ಕ್ಷೇತ್ರಗಳಿಗೆ ಬುಧವಾರ ಮತದಾನ ನಡೆಯಲಿದೆ. ಲಖಿಂಪುರ ಖೇರಿಯಲ್ಲಿ ಜೀಪು ಹರಿಸಿ ನಾಲ್ವರು ರೈತರ ಹತ್ಯೆಯ ಆರೋಪ ಹೊತ್ತಿರುವ ಆಶಿಶ್ ಮಿಶ್ರಾ ಅವರ ತಂದೆ, ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಪ್ರಭಾವ ಎಷ್ಟಿದೆ ಎಂಬುದನ್ನು ಈ ಹಂತವು ಸ್ಪಷ್ಟಪಡಿಸಲಿದೆ. ಹತ್ಯೆ ಪ್ರಕರಣವು ರೈತರಲ್ಲಿ ಭಾರಿ ಆಕ್ರೋಶ ಉಂಟು ಮಾಡಿದೆ. ಕಾಂಗ್ರೆಸ್‌ಗೂ ಈ ಹಂತವು ಅಗ್ನಿಪರೀಕ್ಷೆಯಾಗಿದೆ. ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಪ್ರತಿನಿಧಿಸುವ ರಾಯಬರೇಲಿ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿಯೂ ಬುಧವಾರ ಮತದಾನ ಆಗಲಿದೆ.

ನಾಲ್ಕನೇ ಹಂತವು ಸಮಾಜವಾದಿ ಪಕ್ಷಕ್ಕೂ (ಎಸ್‌ಪಿ) ಮಹತ್ವದ್ದಾಗಿದೆ. 2017ರ ವಿಧಾನಸಭಾ ಚುನಾವಣೆಯಲ್ಲಿ ಎಸ್‌ಪಿಗೆ ಭಾರಿ ಹಿನ್ನಡೆ ಆಗಿತ್ತು. ಈ ಪ್ರದೇಶದಲ್ಲಿ ಎಸ್‌ಪಿ ಗೆದ್ದ ಸ್ಥಾನಗಳ ಸಂಖ್ಯೆ ಆರು ಮಾತ್ರ.

ಬಿಜೆಪಿಯ ಮುಂದೆ ಈ ಬಾರಿ ಹಲವು ಸವಾಲುಗಳು ಇವೆ. ಪಿಲಿಭಿತ್ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿಯೂ ನಾಲ್ಕನೇ ಹಂತದಲ್ಲಿ ಮತದಾನ ಆಗಲಿದೆ. ಈ ಕ್ಷೇತ್ರದ ಬಿಜೆಪಿ ಸಂಸದ ವರುಣ್ ಗಾಂಧಿ ಅವರು ಬಿಜೆಪಿಯ ಮುಂದಿರುವ ಸವಾಲುಗಳನ್ನು ಇನ್ನಷ್ಟು ಸಂಕೀರ್ಣಗೊಳಿಸುವ ಕೆಲಸ ಮಾಡುತ್ತಿದ್ದಾರೆ. ವರುಣ್ ಅವರು ಪಕ್ಷದ ವಿರುದ್ಧ ಮತ್ತು ಪಕ್ಷದ ನಾಯಕರ ವಿರುದ್ಧ ಹೇಳಿಕೆಗಳನ್ನು ನೀಡುತ್ತಲೇ ಇದ್ದಾರೆ. ಕನಿಷ್ಠ ಬೆಂಬಲ ಬೆಲೆಗೆ (ಎಂಎಸ್‌ಪಿ) ಕಾನೂನು ಮಾನ್ಯತೆ, ಕೇಂದ್ರ ಸಚಿವ ಅಜಯ್ ಮಿಶ್ರಾ ವಜಾ ವಿಚಾರದಲ್ಲಿ ವರುಣ್ ಅವರು ರೈತ ಸಂಘಟನೆಗಳ ಪರ ನಿಂತಿದ್ದಾರೆ.

ಬುಧವಾರ ಮತದಾನ ಆಗಲಿರುವ ಲಖಿಪುರ ಖೇರಿ, ಪಿಲಿಭಿತ್ ಮತ್ತು ಇತರ ಕೆಲವು ಜಿಲ್ಲೆಗಳಿಂದ ಸಿಕ್ಕ ಮಾಹಿತಿಯ ಪ್ರಕಾರ, ಎಂಎಸ್‌ಪಿಗೆ ಕಾನೂನು ಮಾನ್ಯತೆ ನೀಡದೇ ಇರುವುದು, ಅಜಯ್ ಮಿಶ್ರಾ ಅವರನ್ನು ವಜಾ ಮಾಡದಿರುವ ವಿಚಾರದಲ್ಲಿ ರೈತರಲ್ಲಿ ಭಾರಿ ಆಕ್ರೋಶ ಇದೆ. ಆಶಿಶ್ ಮಿಶ್ರಾ ಅವರು ಜಾಮೀನಿನಲ್ಲಿ ಹೊರಗೆ ಬಂದಿರುವುದು ರೈತರಲ್ಲಿರುವ ಆಕ್ರೋಶವನ್ನು ಇನ್ನಷ್ಟು ಹೆಚ್ಚಿಸಿದೆ.

ಲಖಿಂಪುರ ಖೇರಿಯಲ್ಲಿ ಬಿಜೆಪಿ ಹೆಚ್ಚು ಕ್ಷೇತ್ರಗಳನ್ನು ಗೆಲ್ಲುವುದು ಸಾಧ್ಯವಾಗದೇ ಇದ್ದರೆ ಅಜಯ್ ಮಿಶ್ರಾ ತಲೆದಂಡವಾಗಬಹುದು. ಹೆಚ್ಚು ಕ್ಷೇತ್ರಗಳನ್ನು ಗೆದ್ದರೆ ಬಿಜೆಪಿಯೊಳಗೆ ಅಜಯ್ ಮಿಶ್ರಾ ವರ್ಚಸ್ಸು ಇನ್ನಷ್ಟು ಹೆಚ್ಚಬಹುದು.

ಈ ಬಾರಿಯ ಚುನಾವಣೆಯಲ್ಲಿ ಮುಖ್ಯ ವಿಷಯವೇ ಆಗಿರುವ ಬೀಡಾಡಿ ಜಾನುವಾರು ಸಮಸ್ಯೆಯು ಬಿಜೆಪಿಗೆ ತೊಡಕಾಗಿ ಪರಿಣಮಿಸಬಹುದು. ವಿಶೇಷವಾಗಿ ಸೀತಾಪುರ ಮತ್ತು ಸುತ್ತಲಿನ ಕೆಲವು ಜಿಲ್ಲೆಗಳಲ್ಲಿ ಸಮಸ್ಯೆ ಆಗಬಹುದು ಎಂದು ರಾಜಕೀಯ ಪರಿಣತರು ಅಭಿಪ್ರಾಯಪಟ್ಟಿದ್ದಾರೆ.

ಬಿಜೆಪಿಯನ್ನು ಅಧಿಕಾರದಿಂದ ಇಳಿಸುವ ಹುರುಪಿನಲ್ಲಿ ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಇದ್ದಾರೆ. ಅದು ಸಾಧ್ಯವಾಗಬೇಕಿದ್ದರೆ ಈ ಪ್ರದೇಶದಲ್ಲಿ ಹೆಚ್ಚಿನ ಕ್ಷೇತ್ರಗಳನ್ನು ಎಸ್‌ಪಿ ಗೆಲ್ಲಬೇಕು. 'ಮುಂದಿನ ಸರ್ಕಾರವನ್ನು ನಾವು ರಚಿಸಬೇಕಿದ್ದರೆ ಈ ಭಾಗದಲ್ಲಿ ಗಣನೀಯ ಸಂಖ್ಯೆಯ ಕ್ಷೇತ್ರಗಳನ್ನು ಗೆಲ್ಲಬೇಕು' ಎಂದು ಎಸ್‌ಪಿಯ ಹಿರಿಯ ಮುಖಂಡರೊಬ್ಬರು ಹೇಳಿದ್ದಾರೆ.

ಈ ಭಾಗದಲ್ಲಿ 14 ಮೀಸಲು ಕ್ಷೇತ್ರಗಳಿವೆ. ಕಳೆದ ಚುನಾವಣೆಯಲ್ಲಿ ಮಾಯಾವತಿ ನೇತೃತ್ವದ ಬಿಎಸ್‌ಪಿ ಗೆದ್ದದ್ದು ಒಂದು ಕ್ಷೇತ್ರದಲ್ಲಿ ಮಾತ್ರ. ಈ ಬಾರಿ ಹೆಚ್ಚು ಕ್ಷೇತ್ರಗಳಲ್ಲಿ ಗೆಲ್ಲುವ ನಿರೀಕ್ಷೆ ಮಾಯಾವತಿ ಅವರಲ್ಲಿ ಇದೆ.

ಪ್ರಿಯಾಂಕಾ ಕಾರ್ಯತಂತ್ರಕ್ಕೆ ಪರೀಕ್ಷೆ

ಈ ಹಿಂದೆ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಹಲವು ಮುಖಂಡರು ಈ ಬಾರಿ ಬಿಜೆಪಿ ಸೇರಿ, ಆ ಪಕ್ಷದ ಟಿಕೆಟ್ ಪಡೆದುಕೊಂಡಿದ್ದಾರೆ. ಹಾಗಾಗಿ, ಕಾಂಗ್ರೆಸ್ ಪಕ್ಷವು ತಮ್ಮದೇ ಪಕ್ಷದ ಮುಖಂಡರ ವಿರುದ್ಧ ಸೆಣಸಬೇಕಾದ ಸ್ಥಿತಿ ನಿರ್ಮಾಣ ಆಗಿದೆ. ಸೋನಿಯಾ ಗಾಂಧಿ ಅವರು ಈ ಬಾರಿ ಪ್ರಚಾರಕ್ಕೆ ಹೋಗಿಲ್ಲ. ಹಾಗಿದ್ದರೂ ತಮ್ಮ ಕ್ಷೇತ್ರ ರಾಯಬರೇಲಿಯ ಮತದಾರರ ಜತೆಗೆ ವರ್ಚುವಲ್ ಸಭೆ ನಡೆಸಿ, ಮತ ಕೋರಿದ್ದಾರೆ.

ಹೊಸ ಮುಖಗಳು ಮತ್ತು ರಾಜಕೀಯದಿಂದ ಹೊರಗಿರುವ ವ್ಯಕ್ತಿಗಳಿಗೆ ಟಿಕೆಟ್ ನೀಡಿದ ಕಾರ್ಯತಂತ್ರವು ಪರೀಕ್ಷೆಗೆ ಒಳಪಡಲಿದೆ. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು ಈ ಬಾರಿ ಈ ಕಾರ್ಯತಂತ್ರ ಅನುಸರಿಸಿದ್ದಾರೆ. ಉನ್ನಾವೊ ಅತ್ಯಾಚಾರ ಸಂತ್ರಸ್ತೆಯ ತಾಯಿಯನ್ನು ಉನ್ನಾವೊ ಸದರ್ ಕ್ಷೇತ್ರದಿಂದ ಕಾಂಗ್ರೆಸ್ ಕಣಕ್ಕೆ ಇಳಿಸಿದೆ. ಇತರ ಕ್ಷೇತ್ರಗಳಲ್ಲಿಯೂ ಇಂತಹ ಪ್ರಯೋಗವನ್ನು ಕಾಂಗ್ರೆಸ್ ಮಾಡಿದೆ.

ಸಾಧನೆ ಪುನರಾವರ್ತನೆ ಸಾಧ್ಯವೇ?

2017ರ ಚುನಾವಣೆಯಲ್ಲಿ ಅವಧ್ ಪ್ರಾಂತ್ಯದಲ್ಲಿ ಬಿಜೆಪಿ 51 ಕ್ಷೇತ್ರಗಳಲ್ಲಿ ಗೆದ್ದಿತ್ತು. ಇದೇ ಸಾಧನೆಯ ಪುನರಾವರ್ತನೆ ಸಾಧ್ಯವೇ ಇಲ್ಲ ಎಂದು ಬಿಜೆಪಿಯ ಮುಖಂಡರೇ ಹೇಳುತ್ತಿದ್ದಾರೆ. ಲಖಿಂಪುರ ಖೇರಿ ಘಟನೆಯು ಅವಧ್ ಭಾಗದಲ್ಲಿ ದೊಡ್ಡ ಏಟು ಕೊಡಬಹುದು ಎಂಬ ಆತಂಕ ಬಿಜೆಪಿಯಲ್ಲಿ ಇದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ಜನಪ್ರಿಯತೆಯೂ ನಾಲ್ಕನೇ ಹಂತದ ಮತದಾನದಲ್ಲಿ ಪರೀಕ್ಷೆಗೆ ಒಳಪಡಲಿದೆ. ಲೋಕಸಭೆಯಲ್ಲಿ ಅವರು ಪ್ರತಿನಿಧಿಸುವ ಲಖನೌ ಕ್ಷೇತ್ರದ ವ್ಯಾಪ್ತಿಯಲ್ಲಿಯೂ ಇದೇ ಹಂತದಲ್ಲಿ ಮತದಾನ ಆಗಲಿದೆ. ಕಳೆದ ಚುನಾವಣೆಯಲ್ಲಿ ಇಲ್ಲಿನ 9 ಕ್ಷೇತ್ರಗಳ ಪೈಕಿ 8ರಲ್ಲಿ ಬಿಜೆಪಿ ಗೆದ್ದಿತ್ತು. ಆದರೆ, ಆ ಪರಿಸ್ಥಿತಿ ಈ ಬಾರಿ ಇದ್ದಂತಿಲ್ಲ. ಏಕೆಂದರೆ, ಪೌರತ್ವ ತಿದ್ದುಪಡಿ ಕಾಯ್ದೆಯ ವಿರುದ್ಧದ ಪ್ರತಿಭಟನೆ, ಅಭ್ಯರ್ಥಿ ಆಯ್ಕೆಯ ಬಗ್ಗೆ ಇರುವ ಅತೃಪ್ತಿ ಬಿಜೆಪಿಗೆ ತೊಡಕಾಗಬಹುದು.

ಚುನಾವಣಾ ಕಣದಲ್ಲಿ...

- **ಸೂದ್ ವಿರುದ್ಧ ಪ್ರಕರಣ:** ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಪ್ರಕರಣದಲ್ಲಿ ಪಂಜಾಬ್‌ನ ಮೋಗಾ ಜಿಲ್ಲಾಧಿಕಾರಿ ನೀಡಿದ್ದ ಆದೇಶವನ್ನು ಉಲ್ಲಂಘಿಸಿದ ಆರೋಪದ ಮೇಲೆ ನಟ ಸೋನು ಸೂದ್ ವಿರುದ್ಧ ಪ್ರಕರಣ ದಾಖಲಾಗಿದೆ. ಪಂಜಾಬ್ ವಿಧಾನಸಭೆಗೆ ಭಾನುವಾರ ಮತದಾನ ನಡೆದ ಸಂದರ್ಭದಲ್ಲಿ ಮತದಾರರ ಮೇಲೆ ಪ್ರಭಾವ ಬೀರುವ ಸಾಧ್ಯತೆಯಿದೆ ಎಂದು ಸೂದ್ ವಿರುದ್ಧ ದೂರು ನೀಡಲಾಗಿತ್ತು. ಹೀಗಾಗಿ ಮತಗಟ್ಟೆಗೆ ಭೇಟಿ ನೀಡದಂತೆ ಅವರಿಗೆ ಜಿಲ್ಲಾಧಿಕಾರಿ ನಿರ್ಬಂಧ ವಿಧಿಸಿದ್ದರು.
- **ಟಿಕಾಯತ್ ಪ್ರವಾಸ:** ಉತ್ತರ ಪ್ರದೇಶ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ರಾಕೇಶ್ ಟಿಕಾಯತ್ ಸೇರಿದಂತೆ ಸಂಯುಕ್ತ ಕಿಸಾನ್ ಮೋರ್ಚಾದ ಹಲವು ರೈತ ನಾಯಕರು ಪ್ರಯಾಗರಾಜ್, ಗೋರಖಪುರ, ವಾರಾಣಸಿಗೆ ಭೇಟಿ ನೀಡಲಿದ್ದಾರೆ.

ಯೋಗಿ ಪ್ರಚಾರ ಸ್ಥಳಕ್ಕೆ ಬೀಡಾಡಿ ದನಗಳು

ಯೋಗಿ ಆದಿತ್ಯನಾಥ ಅವರ ಭಾಷಣ ನಡೆಯುತ್ತಿದ್ದ ಸ್ಥಳದಲ್ಲಿ ಬಿಡಲಾಗಿದ್ದ ಬೀಡಾಡಿ ದನಗಳು —ವಿಡಿಯೊ ಸ್ಕ್ರೀನ್‌ಶಾಟ್ ಚಿತ್ರ

ಬಾರಾಬಂಕಿ: ಉತ್ತರ ಪ್ರದೇಶದ ಯೋಗಿ ಆದಿತ್ಯನಾಥ ಅವರ ಸರ್ಕಾರದ ಗೋಹತ್ಯೆ ನಿಷೇಧ ನೀತಿ ಮತ್ತು ಅದರಿಂದ ಉಂಟಾಗಿರುವ ಬೀಡಾಡಿ ದನಗಳ ಸಮಸ್ಯೆಯ ಬಗ್ಗೆ ಬಾರಾಬಂಕಿಯ ರೈತರು ವಿನೂತನವಾಗಿ ಪ್ರತಿಭಟನೆ ನಡೆಸಿದ್ದಾರೆ. ಯೋಗಿ ಅವರು ಇಲ್ಲಿ ಮಂಗಳವಾರ ಪ್ರಚಾರ ಭಾಷಣ ನಡೆಸುತ್ತಿದ್ದರು. ಆ ಮೈದಾನದ ಸುತ್ತ ರೈತರು ನೂರಾರು ಬೀಡಾಡಿ ದನಗಳನ್ನು ಬಿಟ್ಟಿದ್ದಾರೆ.

'ಐದು ವರ್ಷಗಳಿಂದ ಈ ಸಮಸ್ಯೆ ಬಿಗಡಾಯಿಸಿದೆ. ಬೀಡಾಡಿ ದನಗಳಿಂದ ರೈತರು ಬಹಳ ನಷ್ಟ ಅನುಭವಿಸಿದ್ದಾರೆ. ಈ ಬಗ್ಗೆ ಸರ್ಕಾರ ಗಮನ ಹರಿಸುತ್ತಿಲ್ಲ. ಇಲ್ಲಿ ಯೋಗಿ ಅವರ ಭಾಷಣ ನಿಗದಿಯಾಗಿತ್ತು. ಅಲ್ಲಿ ಬೀಡಾಡಿ ದನಗಳನ್ನು ಬಿಡಬೇಕು ಎಂದು ರೈತರು ನಿರ್ಧರಿಸಿದ್ದರು. ಹೀಗಾಗಿ ಈ ಪ್ರದೇಶದಲ್ಲಿ ಇರುವ ಎಲ್ಲಾ ಬೀಡಾಡಿ ದನಗಳನ್ನು ಒಂದೆಡೆ ಕೂಡಿ ಹಾಕಲಾಗಿತ್ತು. ಯೋಗಿ ಅವರ ಭಾಷಣ ನಡೆಯುತ್ತಿದ್ದ ವೇಳೆ, ಎಲ್ಲಾ ದನಗಳನ್ನು ಬಿಡಲಾಯಿತು' ಎಂದು ಇಲ್ಲಿನ ರೈತ ನಾಯಕ ರಮಣ್‌ದೀಪ್ ಸಿಂಗ್ ಮನ್ ಎಂಬುವವರು ಟ್ವೀಟ್ ಮಾಡಿದ್ದಾರೆ. ನೂರಾರು ಬೀಡಾಡಿ ದನಗಳು ಮೈದಾನವೊಂದರತ್ತ ನುಗ್ಗುತ್ತಿರುವ ವಿಡಿಯೊವನ್ನು ಅವರು ಟ್ವೀಟ್ ಮಾಡಿದ್ದಾರೆ.

ಈ ಘಟನೆ ಬಗ್ಗೆ ಯೋಗಿ ಆದಿತ್ಯನಾಥ ಅವರು ಪ್ರತಿಕ್ರಿಯೆ ನೀಡಿದ್ದಾರೆ. 'ಇದನ್ನು ನಾವು ಗಂಭೀರವಾಗಿ ಪರಿಗಣಿಸಿದ್ದೇವೆ. ಶೀಘ್ರವೇ ಸಮಸ್ಯೆಯನ್ನು ಪರಿಹರಿಸುತ್ತೇವೆ' ಎಂದು ಅವರು ಹೇಳಿದ್ದಾರೆ.

ಸ್ಥಳೀಯ ಸಂಸ್ಥೆ ಚುನಾವಣೆ: ಡಿಎಂಕೆ ಪಾರಮ್ಯ

ಚೆನ್ನೈ (ಪಿಟಿಐ): ತಮಿಳುನಾಡಿನ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಆಡಳಿತಾರೂಢ ಡಿಎಂಕೆ ಸ್ಪಷ್ಟ ಗೆಲುವಿನತ್ತ ಮುನ್ನಡೆದಿದೆ. ರಾಜ್ಯದ ಎಲ್ಲ 21 ನಗರಪಾಲಿಕೆಗಳು ಡಿಎಂಕೆ ಪಾಲಾಗಿವೆ. ಎಐಎಡಿಎಂಕೆ ಹೀನಾಯ ಸೋಲು ಅನುಭವಿಸಿದೆ. ಚೆನ್ನೈನ 24ಕ್ಕೂ ಹೆಚ್ಚು ವಾರ್ಡ್‌ಗಳಲ್ಲಿ ಎಐಎಡಿಎಂಕೆ ಅಭ್ಯರ್ಥಿಗಳು ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಿದೆ.

138 ಪುರಸಭೆಗಳ ಪೈಕಿ ಡಿಎಂಕೆ ಹಾಗೂ ಮಿತ್ರ ಪಕ್ಷಗಳು ಕನಿಷ್ಠ 125 ಪುರಸಭೆಗಳಲ್ಲಿ ಗೆಲ್ಲುವ ಸಾಧ್ಯತೆ ಇದೆ.

ಶೇ 85ರಷ್ಟು ವಾರ್ಡ್‌ಗಳನ್ನು ಡಿಎಂಕೆ ತನ್ನ ತೆಕ್ಕೆಗೆ ತೆಗೆದುಕೊಂಡಿದೆ. ಪ್ರತಿಪಕ್ಷ ಎಐಎಡಿಎಂಕೆಯ ಭದ್ರಕೋಟೆ ಎಂದು ಪರಿಗಣಿಸಲಾಗಿರುವ ರಾಜ್ಯದ ಪಶ್ಚಿಮ ಭಾಗದಲ್ಲೂ ಡಿಎಂಕೆ ತನ್ನ ಛಾಪು ಒತ್ತಿದೆ. 2021ರ ವಿಧಾನಸಭಾ ಚುನಾವಣೆಯ ಬಳಿಕ ಸಿಕ್ಕ ಮತ್ತೊಂದು ದೊಡ್ಡ ಗೆಲುವನ್ನು ಪಕ್ಷದ ಕಾರ್ಯಕರ್ತರು ಸಂಭ್ರಮಿಸಿದರು.

ಪ್ರತಿಪಕ್ಷ ಎಐಎಡಿಎಂಕೆ 494ರಲ್ಲಿ ಗೆಲುವು ಕಂಡಿದೆ. ಪಟ್ಟಣ ಪಂಚಾಯಿತಿಯ 7,621 ವಾರ್ಡ್‌ಗಳಲ್ಲಿ ಡಿಎಂಕೆ ಭಾರಿ ಸಾಧನೆ ಮಾಡಿದೆ. 4,261 ವಾರ್ಡ್‌ಗಳು ಪಕ್ಷದ ತೆಕ್ಕೆಗೆ ಸೇರಿದ್ದರೆ, ಎಐಎಡಿಎಂಕೆ ಗೆದ್ದಿರುವುದು 1,178ರಲ್ಲಿ ಮಾತ್ರ. ಪೂರ್ಣ ಫಲಿತಾಂಶ ಇನ್ನೂಪ್ರಕಟವಾಗಿಲ್ಲ. ರಾಜ್ಯದ ಪಶ್ಚಿಮ ಭಾಗದ ಮೇಲೆ ದೃಷ್ಟಿ ನೆಟ್ಟಿದ್ದ ಡಿಎಂಕೆ, ಸಚಿವ ವಿ. ಸೆಂಥಿಲ್ ಬಾಲಾಜಿ ಅವರಿಗೆ ಉಸ್ತುವಾರಿ ವಹಿಸಿತ್ತು. ಕೊಯಮತ್ತೂರು ಭಾಗದಲ್ಲಿ ಭರ್ಜರಿ ಗೆಲುವಿಗೆ ಕಾರಣರಾದ ಸೆಂಥಿಲ್ ಅವರನ್ನು ಸಾಮಾಜಿಕ ಜಾಲತಾಣಗಳಲ್ಲಿ ಪ್ರಶಂಸಿಸಲಾಗಿದೆ. ಎಐಎಡಿಎಂಕೆ ಪಕ್ಷದ ನೆಲೆ ಎಂದು ಪರಿಗಣಿತವಾಗಿದ್ದ ತೊಂಡಮುತ್ತೂರು ಪಟ್ಟಣ ಪಂಚಾಯಿತಿ ಹಾಗೂ ಗೋಬಿಚೆಟ್ಟಿಪಾಳ್ಯಂ ಪುರಸಭೆಯಲ್ಲೂ ಡಿಎಂಕೆ ಗೆದ್ದಿದೆ.

ಡಿಎಂಕೆ ಮುಖಂಡ ಹಾಗೂ ಪಕ್ಷದ ಪ್ರಧಾನ ಕಾರ್ಯದರ್ಶಿ ದೊರೈಮುರುಘನ್, ಸಂಸದರಾದ ಎ. ರಾಜಾ, ದಯಾನಿಧಿ ಮಾರನ್ ಮೊದಲಾದವರು ಸ್ಟಾಲಿನ್‌ಅವರನ್ನು ಭೇಟಿ ಮಾಡಿ ಅಭಿನಂದನೆ ತಿಳಿಸಿದರು.

ಗೆದ್ದ 'ಗೋಡ್ಸೆ ಅಭಿಮಾನಿ'

ನಾಥೂರಾಮ್ ಗೋಡ್ಸೆಯ ಹೆಮ್ಮೆಯ ಅಭಿಮಾನಿ ಎಂದು ಹೇಳಿಕೊಂಡಿದ್ದ ಉಮಾ ಆನಂದನ್ ಎಂಬುವರು 200 ಸದಸ್ಯಬಲದ ಗ್ರೇಟರ್ ಚೆನ್ನೈ ಮಹಾನಗರ ಪಾಲಿಕೆಯ ಏಕೈಕ ಬಿಜೆಪಿ ಸದಸ್ಯೆಯಾಗಿ ಚುನಾಯಿತರಾಗಿದ್ದಾರೆ. ದ್ರಾವಿಡ ಸಿದ್ಧಾಂತವನ್ನು ಪ್ರಬಲವಾಗಿ ವಿರೋಧಿಸುವ ಉಮಾ ಅವರು ತಮ್ಮನ್ನು ತಾವು 'ಗೋಡ್ಸೆಯವರ ಸೈದ್ಧಾಂತಿಕ ಮೊಮ್ಮಗಳು' ಎಂದು ಕರೆದುಕೊಂಡಿದ್ದರು. ವಿವಾದಾತ್ಮಕ ಹೇಳಿಕೆಗಳಿಂದ ಹಲವು ಬಾರಿ ಅವರು ಸುದ್ದಿಯಲ್ಲಿದ್ದರು.

ಖಾಸಗೀಕರಣದಿಂದ ಉದ್ಯೋಗ ನಷ್ಟ: ವರುಣ್ ಗಾಂಧಿ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಜೆಪಿ ಸಂಸದ ವರುಣ್ ಗಾಂಧಿ ಅವರು ಕೇಂದ್ರ ಸರ್ಕಾರದ ನೀತಿಗಳನ್ನು ಮತ್ತೊಮ್ಮೆ ಟೀಕಿಸಿದ್ದಾರೆ. 'ಜನರ ಕಲ್ಯಾಣವನ್ನು ಬಯಸುವ ಸರ್ಕಾರವು ಬಂಡವಾಳಶಾಹಿಯನ್ನು ಉತ್ತೇಜಿಸುವುದಿಲ್ಲ' ಎಂದು ವರುಣ್ ಗಾಂಧಿ ಅವರು ಮಂಗಳವಾರ ಟ್ವೀಟ್ ಮಾಡಿದ್ದಾರೆ.

'ಕೇವಲ ಬ್ಯಾಂಕ್ ಮತ್ತು ರೈಲ್ವೆಯ ಖಾಸಗೀಕರಣದಿಂದ 5 ಲಕ್ಷಕ್ಕೂ ಹೆಚ್ಚು ಜನರು ಒತ್ತಾಯಪೂರ್ವಕ ನಿವೃತ್ತಿ ತೆಗೆದುಕೊಂಡು, ನಿರುದ್ಯೋಗಿಗಳಾಗುತ್ತಾರೆ. ಹೀಗೆ ಕೆಲಸ ಕಳೆದುಕೊಳ್ಳುವ ಪ್ರತಿ ಉದ್ಯೋಗಿಯ ಕುಟುಂಬದ ಕನಸುಗಳೆಲ್ಲವೂ ಮುಗಿಯುತ್ತವೆ. ಲಕ್ಷಾಂತರ ಕುಟುಂಬಗಳು ಇದಕ್ಕೆ ಗುರಿಯಾಗುತ್ತವೆ' ಎಂದು ವರುಣ್ ಟ್ವೀಟ್ ಮಾಡಿದ್ದಾರೆ.

ಈಚಿನ ದಿನಗಳಲ್ಲಿ ವರುಣ್ ಅವರು ಕೇಂದ್ರ ಸರ್ಕಾರವನ್ನು ಪದೇ ಪದೇ ಟೀಕಿಸುತ್ತಿದ್ದಾರೆ. ನೂತನ ಕೃಷಿ ಕಾಯ್ದೆಗಳನ್ನು ಕೇಂದ್ರ ಸರ್ಕಾರವು ಹಿಂಪಡೆಯಬೇಕು ಎಂದು ಅವರು ಒತ್ತಾಯಿಸಿದ್ದರು. ಈ ಕಾಯ್ದೆಗಳ ವಿರುದ್ಧದ ಪ್ರತಿಭಟನೆ ವೇಳೆ ಮೃತಪಟ್ಟ ರೈತರ ಕುಟುಂಬಗಳಿಗೆ ಸರ್ಕಾರವು ಪರಿಹಾರ ನೀಡಬೇಕು ಎಂದು ಅವರು ಒತ್ತಾಯಿಸಿದ್ದರು. ಉತ್ತರ ಪ್ರದೇಶ ವಿಧಾನಸಭೆಯ ನಾಲ್ಕನೇ ಹಂತದ ಮತದಾನ ಬುಧವಾರ ನಡೆಯಲಿದೆ. ವರುಣ್ ಸಂಸತ್ತಿನಲ್ಲಿ ಪ್ರತಿನಿಧಿಸುವ ಪಿಲಿಭಿತ್ ಕ್ಷೇತ್ರ ವ್ಯಾಪ್ತಿಯಲ್ಲಿಯೂ ಮತದಾನ ನಡೆಯಲಿದೆ.

ರಾಜನಾಥ್ ಪ್ರಚಾರಕ್ಕೆ ಅಡ್ಡಿ

ಬಲಿಯಾ (ಉತ್ತರ ಪ್ರದೇಶ) (ಪಿಟಿಐ): ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಇಲ್ಲಿ ಬಿಜೆಪಿ ಪರವಾಗಿ ನಡೆಸುತ್ತಿದ್ದ ಪ್ರಚಾರ ಸಭೆಯ ವೇಳೆ, ಕೆಲವು ಯುವಕರು ಬಿಜೆಪಿ ವಿರುದ್ಧ ಘೋಷಣೆ ಕೂಗಿದ್ದಾರೆ. ಕಾರ್ಯಕ್ರಮದಲ್ಲಿ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಪರವಾಗಿ ಘೋಷಣೆ ಕೂಗಿದ ಯುವಕನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಇಲ್ಲಿನ ಬನ್ಸಿ ಬಜಾರ್‌ನಲ್ಲಿ ರಾಜನಾಥ್ ಅವರು ಭಾಷಣ ಮಾಡುತ್ತಿದ್ದರು. ಆಗ ಕೆಲವು ಯುವಕರು, ಅವರ ಭಾಷಣಕ್ಕೆ ಅಡ್ಡಿಪಡಿಸಿದರು. 'ಮೂರು ವರ್ಷಗಳಿಂದ ಸೇನೆಯ ನೇಮಕಾತಿ ನಡೆದಿಲ್ಲ. ಸರ್ಕಾರ ನೇಮಕಾತಿ ನಡೆಸುತ್ತಿಲ್ಲ' ಎಂದು ಘೋಷಣೆ ಕೂಗಿದರು.

ಆಗ ಅವರನ್ನು ರಾಜನಾಥ್ ಸಮಾಧಾನ ಪಡಿಸಲು ಯತ್ನಿಸಿದರು. ಆದರೆ ಯುವಕರು ಘೋಷಣೆ ಕೂಗುವುದನ್ನು ಮುಂದುವರಿಸಿದರು. ಅದರ ಮಧ್ಯೆಯೇ ರಾಜನಾಥ್ ಸಹ ಭಾಷಣ ಮುಂದುವರಿಸಿದರು.

ರಾಜನಾಥ್ ಅವರ ಭಾಷಣ ಇನ್ನೇನು ಮುಗಿಯುತ್ತಿದೆ ಎನ್ನುವಾಗ ಒಬ್ಬ ಯುವಕ ಎಂದು ನಿಂತು, 'ಬಡವರ ಆಪತ್ಬಾಂಧವ ಅಖಿಲೇಶ್ ಯಾದವ್ ಜಿಂದಾಬಾದ್' ಎಂದು ಘೋಷಣೆ ಕೂಗಿದ್ದಾರೆ. ಆ ಯುವಕನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.





ಕೃತಕ ಬುದ್ಧಿಮತ್ತೆಯಿಂದ ಲೇಖನ!

ಸುಧೀರ ಎಚ್. ಎಸ್.

ಇಸವಿ 2025; ಸಂಜೆ ಎಂಟಕ್ಕೆ ಇಸ್ರೋ ಮಾನವನನ್ನು ಯಶಸ್ವಿಯಾಗಿ ಬಾಹ್ಯಾಕಾಶಯಾನ ಮಾಡಿಸಿದ ನಂತರ ಚಂದ್ರನಲ್ಲಿಗೆ ಕರೆದೊಯ್ಯುವ ಯೋಜನೆಯನ್ನು ಘೋಷಣೆ ಮಾಡಿದೆ. ಪತ್ರಿಕೆಯ ಸಂಪಾದಕರು ಇದರ ಬಗ್ಗೆ ಒಂದು ವರದಿ ತಯಾರಿಸಿ ನಾಳಿನ ಸಂಚಿಕೆಯಲ್ಲಿ ಪ್ರಕಟಣೆ ಮಾಡಬೇಕೆಂದಿದ್ದಾರೆ. ಹೆಚ್ಚು ಕಾಲಾವಕಾಶ ಇಲ್ಲ. ಆದರೇನಂತೆ, ಕೃತಕ ಬುದ್ಧಿಮತ್ತೆಯಿಂದ ಲೇಖನ ತಯಾರಿಸುವಂತೆ ವರದಿಗಾರರಿಗೆ ಸೂಚಿಸುತ್ತಾರೆ.

> ಕೃತಕ ಬುದ್ಧಿಮತ್ತೆಯಿಂದ ಲೇಖನ ಬರೆಯುವುದು ಹೇಗೆ? ಇದು ಎಷ್ಟರ ಮಟ್ಟಿಗೆ ಸರಿಯಾಗಿರುತ್ತದೆ? ಕಂಪ್ಯೂಟರ್ ಮೂಲಕವೇ ಲೇಖನ ತಯಾರಿಸಿದರೆ ನಮಗೇನು ಕೆಲಸ?



ಇದೇನಿದು ಕೃತಕ ಬುದ್ಧಿಮತ್ತೆಯಿಂದ ಲೇಖನ? ಹಾಗಾದರೆ ನಾವು ಬರೆಯುವುದೇ ಬೇಡವೇ? ಇದು ಎಷ್ಟರ ಮಟ್ಟಿಗೆ ಸರಿಯಾಗಿರುತ್ತದೆ? ಕಂಪ್ಯೂಟರ್ ಮೂಲಕವೇ ಲೇಖನ ತಯಾರಿಸಿದರೆ ನಮಗೇನು ಕೆಲಸ? ಹೀಗೆಲ್ಲ ಹಲವಾರು ಪ್ರಶ್ನೆ ಮೂಡಿ ಬರುವುದು ಸಹಜ. ನಾವು ಯಾವುದೋ ಕಾಲ್ಪನಿಕ ಜಗತ್ತಿನಲ್ಲಿ ಇರುವೆವೋ ಎಂದೆನಿಸಲೂಬಹುದು. ಆದರೆ ಈಗಾಗಲೇ ಇಂಗ್ಲಿಷ್‌ಭಾಷೆಯಲ್ಲಿ ಕೃತಕ ಬುದ್ಧಿಮತ್ತೆ ಆಧರಿಸಿ ಯಂತ್ರಕಲಿಕೆಯ ಮಾಡೆಲ್‌ಗಳು ಅಂತರ್ಜಾಲದಲ್ಲಿ ಮುಕ್ತವಾಗಿ ಹೊರಬಂದಿದೆ. ಇನ್ನು ಹೆಚ್ಚು ನಿಖರವಾಗಿ ಫಲಿತಾಂಶವನ್ನು ನೀಡುವ ಕೆಲವು ಮಾಡೆಲ್‌ಗಳು ಮುಕ್ತವಾಗಿಲ್ಲ. ಆದರೆ ಅವುಗಳನ್ನು ಲೈಸೆನ್ಸ್ ಪಡೆದು ಬಳಸಬಹುದಾಗಿದೆ. ಇದನ್ನು ವಿಜ್ಞಾನಿಗಳು ಮತ್ತು ತಂತ್ರಜ್ಞರು ಯಶಸ್ವಿಯಾಗಿ ಪರೀಕ್ಷಿಸಿದ್ದಾರೆ.

ಯಂತ್ರಕಲಿಕೆ

ಯಂತ್ರಕಲಿಕೆಯು ಕೃತಕ ಬುದ್ಧಿಮತ್ತೆಯ ಒಂದು ಪ್ರಮುಖ ವಿಧಾನ. ಹಿಂದೆ ಸಂಖ್ಯಾಶಾಸ್ತ್ರೀಯ ವಿಶ್ಲೇಷಣೆ ಕೇವಲ ಸಂಖ್ಯೆಗಳನ್ನೇ ಆಧರಿಸಿ ಮತ್ತು ಅದರ ಸಂಭವನೀಯ ಮಾಡಲ್ ಮೂಲಕ ಮಾತ್ರ ವಿಶ್ಲೇಷಣೆ ಎಂದಿತ್ತು. ಆದರೆ ಈಗ ಸುಮಾರು ಎರಡು-ಮೂರು ದಶಕದಿಂದ ಕೇವಲ ಸಂಖ್ಯೆಗಳಲ್ಲದೇ ಪದಗಳನ್ನೂ ಆಧರಿಸಿ ವಿಶ್ಲೇಷಣೆ ಸಾಧ್ಯವಾಗಿದೆ. ಹೀಗಾಗಿ ಪದಗಳಿಂದ ಕೂಡಿದ ವಾಕ್ಯಗಳು, ವಾಕ್ಯಗಳಿಂದ ಕೂಡಿದ ಲೇಖನಗಳು, ಗದ್ಯ-ಪದ್ಯಗಳನ್ನೂ ಅರ್ಥೈಸಿಕೊಳ್ಳಬಹುದಾಗಿದೆ. ಅಷ್ಟೇಕೆ, ಶೇಕ್ಸ್‌ಪಿಯರ್‌ನ ರಚನೆಗಳನ್ನೆಲ್ಲಾ ಇಂತಹ ಯಂತ್ರಕಲಿಕಾ ಮಾಡೆಲ್‌ಗಳು ಈಗಾಗಲೇ 'ಕಲಿತಿವೆ'. ಇದರಿಂದ ನೀವೇನಾದರೂ ಶೇಕ್ಸ್‌ಪಿಯರ್ ಬರೆದ ಒಂದು ಪ್ರಸಿದ್ಧ ವಾಕ್ಯದ ಭಾಗ ಬರೆದರೆ ಮಾಡೆಲ್ ಮಿಕ್ಕ ಭಾಗವನ್ನು ಕ್ಷಣಾರ್ಧದಲ್ಲಿ ಪೂರ್ಣ ಮಾಡುತ್ತದೆ ಅಥವಾ ಶೇಕ್ಸ್‌ಪಿಯರ್‌ನ ರಚಿತ ಕೆಲವು ಪಾತ್ರಗಳನ್ನು ನೇಮಿಸಿ, ಮಾಡೆಲ್ ಅದೇ ಶೈಲಿಯಲ್ಲಿ ಕೃತಕ ಕಥೆಯನ್ನೇ ರಚಿಸಬಲ್ಲದು.

ಆದರೆ ನಾವು ಗೂಗಲ್‌ನಲ್ಲಿ ಯಾವುದಾದರು ಪದ / ವಿಷಯ ಹುಡುಕಿದಾಗ ಅದು ಬಿತ್ತರಿಸುವುದು ಅದರ ಸ್ಮರಣೆಯಲ್ಲಿ ಹುಡುಕಿದ ಪದಗಳಿಗೆ ಅನ್ವಯವಾಗುವ ವೆಬ್‌ಪೇಜ್ ಅಥವಾ ತಾಣಗಳು. ಇದು ಸಂಖ್ಯಾಶಾಸ್ತ್ರೀಯ ಮಾಡೆಲ್‌ನಿಂದ ರಚಿಸಿದ 'ಪೇಜ್ ರಾಂಕ್' ಎಂಬ ವಿಧಾನದಿಂದ ಸಾಧ್ಯವಾಗಿದೆ. ಇಲ್ಲಿ ಕೇವಲ ಅದರ ಸ್ಮರಣೆಯಲ್ಲಿರುವ ಮಾಹಿತಿಯನ್ನು ಮಾತ್ರ ಹೊರಹಾಕಬಲ್ಲದು. ಯಂತ್ರಕಲಿಕೆಯನ್ನು ಬಳಸಿ ಕೃತಕ ಬುದ್ಧಿಮತ್ತೆಯಲ್ಲಿ ಸ್ಮರಣೆಯ ಜೊತೆ ಅರ್ಥೈಸಿಕೊಳ್ಳುವ ಸಾಮರ್ಥ್ಯವಿದೆ. ಮಾನವರ ಬುದ್ಧಿಮತ್ತೆಯನ್ನೇ ನಕಲು ಮಾಡುವಂತೆ ವಿಜ್ಞಾನಿಗಳು ಕೃತಕ ಬುದ್ಧಿಮತ್ತೆಯುಳ್ಳ ಯಂತ್ರಕಲಿಕಾ ಮಾಡೆಲ್‌ಗಳನ್ನು ರಚಿಸಲು ಸಾಕಷ್ಟು ಅಧ್ಯಯನ ನಡೆಸಿದ್ದಾರೆ. ಒಂದು ಮಗುವು ತಾನು ಬೆಳೆದಂತೆ ತನ್ನ ಪರಿಸರದಲ್ಲಿ ಗ್ರಹಿಸುವ ಮತ್ತು ಅನುಭವಿಸುವ ವಿಷಯಗಳನ್ನು ಕಲಿಯುತ್ತದೆ. ಪ್ರಾರಂಭಿಕವಾಗಿ ರುಚಿ, ಬಣ್ಣಗಳು, ಪದಗಳು, ಪದಾರ್ಥಗಳು, ಸಂಖ್ಯೆಗಳು, ವಾಕ್ಯಗಳು – ಹೀಗೆ ಒಂದೊಂದಾಗಿ ಮಗು ಹೇಗೆ ಕಲಿಯುವುದೋ ಹಾಗೆಯೇ ವಿಜ್ಞಾನಿಗಳು ಒಂದೊಂದಾಗಿ ಕೃತಕವಾಗಿ ರಚಿಸಿದ ಮಾಡೆಲ್‌ಗಳಿಗೆ ಕಲಿಸಲು ಯಶಸ್ವಿಯಾಗಿದ್ದಾರೆ. ಈ ಬಗೆಯ ಕಲಿಕೆಯಲ್ಲಿ ಸ್ಮರಣೆಯ ಜೊತೆ ವಿಷಯದ ವಿಶ್ಲೇಷಣೆ ಕೂಡ ಸಾಧ್ಯವಾಗಿದೆ.

ಇದು ಸ್ವಾಭಾವಿಕ ಭಾಷೆ ಸಂಸ್ಕರಣೆ(ನ್ಯಾಚುರಲ್ ಲ್ಯಾಂಗ್ವೇಜ್ ಪ್ರೊಸೆಸ್ಸಿಂಗ್)ಯ ಒಂದು ಅಂಶ. ಇದಕ್ಕೆ ಇಂಗ್ಲಿಷಿನ ಲಕ್ಷಾಂತರ ಲೇಖನಗಳನ್ನು ಅರ್ಥೈಸಿಕೊಳ್ಳುವಂತೆ ಮಾಡೆಲ್‌ಗೆ ಕಲಿಸಿದ್ದಾರೆ. ಇವೆಲ್ಲವನ್ನು ಅರ್ಥೈಸಿಕೊಂಡ ಕೆಲವು ಮಾಡೆಲ್‌ಗಳನ್ನು ಸಂಶೋಧಕರ ತಂಡಗಳು ಸಿದ್ಧಗೊಳಿಸಿವೆ. ಅದರಲ್ಲಿ ಓಪನ್ ಎಐ ಎಂಬ ಸಂಸ್ಥೆಯಿಂದ ರಚಿತವಾಗ GPT-2 ಎಂಬುದು ಪ್ರಮುಖವಾದುದು. ಇದನ್ನು 2019ರಲ್ಲಿಯೇ ಮುಕ್ತವಾಗಿ ಬಿಡುಗಡೆ ಮಾಡಿದ್ದಾರೆ. ಇದನ್ನು ಬಳಸಿ ಸಾಕಷ್ಟು ಅಪ್ಲಿಕೇಷನ್‌ಗಳು ಬಂದಿವೆ. ಉದಾಹರಣೆಗೆ, ಒಂದು ವಾಕ್ಯವು ವ್ಯಾಕರಣಬದ್ಧವಾಗಿಲ್ಲದಿದ್ದರೆ ಅದನ್ನು ಇದರಿಂದ ಸರಿಪಡಿಸಬಹುದು ಅಥವಾ ಒಂದು ಕ್ಲಿಷ್ಟಕರ ಲೇಖನದ ಸಾರಾಂಶವನ್ನು ಒಬ್ಬ ಹತ್ತು ವರ್ಷದ ಮಗುವಿಗೆ ಅರ್ಥವಾಗುವಂತೆ GPT-2 ಬಳಸಿ ಸರಳಗೊಳ್ಳಿಸಬಹುದು; ಹಲವಾರು ವಿಷಯಗಳನ್ನು ಕೊಟ್ಟು ಅವನ್ನು ಸೂಕ್ತವಾಗಿ ವಿಂಗಡಿಸಬಹುದು. ಆದರೆ ಇದರ ಮುಂದುವರಿದ ಮತ್ತು ಇನ್ನು ಹೆಚ್ಚು ಪರಿಣಾಮಕಾರಿ ಮಾಡೆಲ್ ಆದ GPT-3 ಅನ್ನು ಮುಕ್ತವಾಗಿ ಪ್ರಕಟಿಸಿಲ್ಲ. ಇದನ್ನು ಅವರ ನಿರ್ದಿಷ್ಟ API ಮೂಲಕ ಮಾತ್ರ ಬಳಸಬಹುದು. GPT-3ಯನ್ನು ರಚಿಸಿದೆ ಎಂದು ತಿಳಿಸಿದ್ದಾರೆಯೇ ಹೊರತು ಇದರ ಬಳಕೆ ನಿಗದಿತವಾಗಿದೆ. ಏಕೆಂದರೆ, ಇದು ತಪ್ಪು ಕೈಸೇರಿದರೆ ಇದರಿಂದ ಆಗುವ ಅನಾಹುತ ಊಹೆಗೂ ನಿಲುಕದು.

ಇಂಗ್ಲಿಷ್ ಬದಲು ಚೀನಾದವರು ತಮ್ಮ ಭಾಷೆಯಲ್ಲಿ ಈ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲು ಮುಂದಾಗಿದ್ದಾರೆ. ಬಹುಭಾಷಾ ದೇಶವಾದ ನಮ್ಮ ದೇಶದಲ್ಲಿ ಇದರ ಪ್ರಯೋಗವಾಗಬೇಕಿದೆ. ಇತ್ತೀಚಿನ ಸಂಶೋಧನೆಯ ಹಾದಿಯನ್ನು ನೋಡಿದರೆ, 2025ರ ಊಹಿಸಿದ ಘಟನೆ ಕಾಲ್ಪನಿಕವಾಗಿದ್ದರೂ, ಇನ್ನೊಂದೆರಡು ವರ್ಷಗಳಲ್ಲಿಯೇ ಇದು ನಿಜವಾಗಬಹುದು. ಅಂದಹಾಗೆ ಈ ಲೇಖನವನ್ನು ಕೃತಕ ಬುದ್ಧಿಮತ್ತೆಯನ್ನು ಬಳಸಿ ರಚಿಸಿಲ್ಲ!

ಸೌಂದರ್ಯಕ್ಕೆ ರಿಂಗಾಟ...

ಪೃಥ್ವಿರಾಜ್

ಸುಂದರವಾಗಿ ಕಾಣಬೇಕೆಂದು ನಾವು ವಿವಿಧ ಸಾಧನಗಳನ್ನು, ಸೌಂದರ್ಯವರ್ಧಕಗಳನ್ನು ಬಳಸುತ್ತಿದ್ದೇವೆ. ನಿತ್ಯವೂ ಹಲವು ಉಪಕರಣಗಳು ಮಾರುಕಟ್ಟೆಗೆ ಬರುತ್ತಲೇ ಇವೆ. ಈಚೆಗೆ ಬಂದಿರುವಂಥ ಕೆಲವು ಉಪಕರಣಗಳ ಮಾಹಿತಿ ಇಲ್ಲಿದೆ.

ಚರ್ಮದ ಹೊಳಪಿಗೆ ರೋಲರ್

ಕಾಡಿಗೆ, ಐಲೈನರ್‌ಗಳಿಂದ ಕಣ್ಣುಗಳಿಗೆ ಹೊಳಪು ನೀಡಬಹುದು; ಲಿಪ್‌ಸ್ಟಿಕ್‌ಗಳಿಂದ ಅಧರಗಳ ಅಂದ ಹೆಚ್ಚಿಸಬಹುದು. ಆದರೆ ಲೇಪನಗಳಿಂದ ಚರ್ಮಕ್ಕೆ ಸದಾ ಹೊಳಪು ನೀಡಲು ಸಾಧ್ಯವಿಲ್ಲ; ಆರೋಗ್ಯ ಚೆನ್ನಾಗಿದ್ದರಷ್ಟೇ ಚರ್ಮ ಹೊಳೆಯುತ್ತದೆ. ಇದಕ್ಕಾಗಿ ವಿಶೇಷ ಕಾಳಜಿ ಅಗತ್ಯ. ಹೀಗೆ ವಿಶೇಷ ಶ್ರದ್ಧೆ ವಹಿಸಿ ಆರೋಗ್ಯಕರ ಆಕರ್ಷಕ ಚರ್ಮ ರೂಪಿಸಿಕೊಳ್ಳಲು ನೆರವಾಗುತ್ತದೆ ಸ್ಕಿನ್‌ಟೋನ್ ಲಿಫ್ಟ್ ಜೆರ್ಮೇನಿಯಂ ಕಾಂಟೌರಿಂಗ್ ಫೇಶಿಯಲ್ ರೌಲರ್. ಫಾರ್ವರ್ಡ್ ಥಿಂಕಿಂಗ್ ಟೆಕ್ನಾಲಜಿ ಅಳವಡಿಸಿರುವ ಈ ಸಾಧನವು ವಯಸ್ಸಿನೊಂದಿಗೆ ಬರುವ ಸುಕ್ಕುಗಟ್ಟುವ ಚರ್ಮವನ್ನು ಮರೆಮಾಡುತ್ತದೆಯಂತೆ. ಈ ಸಾಧನದ ಮೇಲ್ಭಾಗದಲ್ಲಿರುವ ಆಕ್ಯೂಪ್ರೆಶರ್ ಪಾಡ್ಸ್ ದೇಹದ ಕಣಗಳನ್ನು ಉತ್ತೇಜಿಸಲು ಕಡಿಮೆ ಪ್ರಮಾಣದ ಒತ್ತಡವನ್ನು ಸೃಷ್ಟಿಸುತ್ತದೆ. ಇದರಿಂದ ಚರ್ಮದ ಕಣಗಳು ಬಿಗಿಯಾಗಿ ಚರ್ಮಕ್ಕೆ ಹೊಳಪು ಸಿಗುತ್ತದೆ. 30ರಿಂದ 60 ಸೆಕಂಡುಗಳಷ್ಟು ಕ್ರಮತಪ್ಪದಂತೆ, ಕೆನ್ನೆ-ಹಣೆಗಳನ್ನು ಸೇರಿದಂತೆ ಶರೀರದ ವಿವಿಧ ಭಾಗಗಳಲ್ಲಿ ಉಜ್ಜಿಕೊಳ್ಳಬೇಕು. ನಂತರ ಉಗುರು ಬೆಚ್ಚಗಿನ ನೀರಿನಿಂದ ಆ ಭಾಗಗಳನ್ನು ತೊಳೆದುಕೊಂಡರೆ ಚರ್ಮದ ಅಂದ ಹೆಚ್ಚುತ್ತದೆ ಎಂದು ಸಂಸ್ಥೆ ಹೇಳಿಕೊಂಡಿದೆ.

ಸಪೂರ ದೇಹಕ್ಕೆ ರಿಂಗಾಟ

ದೇಹವನ್ನು ಸಪೂರವಾಗಿಸಿಕೊಂಡು ಅಂದ ಹೆಚ್ಚಿಸಿಕೊಳ್ಳಬೇಕೆಂಬ ಬಯಸುವವರು ಹಲವರು. ಹೂಲಾ ಹೂಪ್ ಆಟವು ಸಪೂರ ದೇಹಕ್ಕೆ ಸಹಕಾರಿಯಾಗುತ್ತದೆ ಎಂದು ಹೇಳುತ್ತಿದ್ದಾರೆ ತಜ್ಞರು. ಹೂಲಾ ಹೂಪ್ ಹೆಸರಿನ ವೃತ್ತಾಕಾರದ ರಿಂಗನ್ನು ಸೊಂಟದ ಭಾಗದಲ್ಲಿರಿಸಿಕೊಂಡು ದೇಹವನ್ನು ಅಲುಗಾಡಿಸದೆ ಸೊಂಟ ಮಾತ್ರ ಚಲಿಸುತ್ತ ರಿಂಗ್ ಕೆಳಗೆ ಬೀಳದಂತೆ ಆಡುವಂಥ ಆಟ ಇದು. ಇದು ಸ್ವಲ್ಪ ಕಷ್ಟ. ಈ ಕಷ್ಟವನ್ನು ತಪ್ಪಿಸಲೆಂದೇ ತಜ್ಞರು ಈ ರಿಂಗ್‌ಗೆ ತಂತ್ರಜ್ಞಾನದ ಸ್ಪರ್ಶವನ್ನು ನೀಡಿದ್ದಾರೆ. ಸೊಂಟ ತಿರುಗಿಸುವಾಗ ರಿಂಗ್ ಕೆಳಗೆ ಬೀಳದಂತೆ ವೈಟೆಡ್ ಹೂಲಾ ಸ್ಮಾರ್ಟ್ ಹೂಪ್ ಎಂಬ ಡಿವೈಸ್ ಅನ್ನು ಇದಕ್ಕೆ ಜೋಡಿಸಿದ್ದಾರೆ. ಈ ಸ್ಮಾರ್ಟ್ ರಿಂಗ್ 47.2 ಇಂಚುಗಳಷ್ಟು ವ್ಯಾಸವಿರುತ್ತದೆ. ಇದರಲ್ಲಿ ಒಟ್ಟು 16 ಮಸಾಜ್ ಹೆಡ್ಸ್‌ಗಳನ್ನು ಜೋಡಿಸಿಕೊಳ್ಳಬಹುದು. ಪ್ರತಿ ಹೆಡ್ 2.95 ಇಂಚುಗಳಷ್ಟು ಗಾತ್ರವಿರುತ್ತದೆ. ದೇಹಕ್ಕೆ ತಕ್ಕಂತೆ ಹಾಗೂ ಸೊಂಟದ ಗಾತ್ರಕ್ಕೆ ತಕ್ಕಂತೆ ಇವನ್ನು ಬಳಸಿ ರಿಂಗ್ ಜೋಡಿಸಿಕೊಳ್ಳಬಹುದು. ಅಂದರೆ ಎಷ್ಟು ಮಸಾಜ್ ಹೆಡ್ಸ್‌ಗಳನ್ನು ಜೋಡಿಸುತ್ತೇವೆಯೊ ಅಷ್ಟು ಗಾತ್ರದ ರಿಂಗ್ ತಯಾರಾಗುತ್ತದೆ. ಆದರೆ ಈ ರಿಂಗ್‌ಗೆ ನೀಳವಾದ ಪೈಪ್‌ಗೆ ಜೋಡಿಸಿರುವ ವೈಟ್ ಬಾಲ್ ಒಂದನ್ನು ಹೆಚ್ಚುವರಿಯಾಗಿ ಜೋಡಿಸಿಕೊಳ್ಳಬೇಕು. ಇದನ್ನು ಸೊಂಟಕ್ಕೆ ಅಳವಡಿಸಿಕೊಂಡು ತಿರುಗಿಸಿದಷ್ಟು ಹೊತ್ತು ವೈಟ್ ಬಾಲ್ 360 ಡಿಗ್ರಿ ತಿರುಗುತ್ತಲೇ ಇರುತ್ತದೆ. ಹೀಗೆ ತಿರುಗುವಾಗ ಪ್ರತಿ ಮಸಾಜ್ ಹೆಡ್ ಅನ್ನು ಒತ್ತುತ್ತಾ ಹೋಗುತ್ತದೆ. ಇದು ಸೊಂಟದ ಸುತ್ತಲೂ ಇರುವಂಥ ಕೊಬ್ಬನ್ನು ಕರಗಿಸಲು ನೆರವಾಗುತ್ತದೆ.

ಸುಂದರ ವದನಕ್ಕೆ

ಬ್ಲ್ಯಾಕ್ ಹೆಡ್ಸ್, ವೈಟ್ ಹೆಡ್ಸ್, ಮಚ್ಚೆಗಳು, ಮೊಡವೆಗಳು, ಮುಖ ಸುಕ್ಕುಗಟ್ಟುವುದು – ಹೀಗೆ ಹಲವು ಸಮಸ್ಯೆಗಳಿಗೆ ಪೋರ್ ವಾಕ್ಯೂಮ್ (ಬ್ಲಾ ಹೆಡ್ ರಿಮೂವರ್) ಉಪಕರಣ ಉತ್ತಮ ಪರಿಹಾರ. ವೈದ್ಯಕೀಯ ಪರೀಕ್ಷೆಗಳಲ್ಲಿ ಈ ಉಪಕರಣದ ಸಾಮರ್ಥ್ಯ ಸಾಬೀತಾಗಿದೆ. ಇದು ಚರ್ಮವನ್ನು ಶುದ್ಧಿ ಮಾಡುವುದರ ಜೊತೆಗೆ ಅದನ್ನು ಸುಕ್ಕುಗಟ್ಟುವುದರಿಂದಲೂ ತಪ್ಪಿಸಿ, ಮಚ್ಚೆಗಳು ಮೊಡವೆಗಳನ್ನು ಅಳಿಸಿ, ತಾರುಣ್ಯಮಯವಾಗಿಡುತ್ತದೆಯಂತೆ. ಚಾರ್ಜಿಂಗ್ ಮಾಡಿಕೊಂಡು ಸ್ಮಾರ್ಟ್‌ಫೋನ್‌ಗೆ ಜೋಡಿಸಿಕೊಂಡು ಬಳಸಬಹುದಾದ ಈ ಉಪಕರಣದಿಂದ ಉತ್ತಮ ಗುಣಮಟ್ಟದ ಫೇಶಿಯಲ್ ಮಾಡಿಕೊಳ್ಳಬಹುದು. ಇದರ ಮುಂಭಾಗದಲ್ಲಿ ಮೂರು ಲಕ್ಷ ಪಿಕ್ಸೆಲ್ ಹಾಗೂ 5.5 ಮೆಗಾ ಪಿಕ್ಸೆಲ್ ಗುಣಮಟ್ಟದ ಕ್ಯಾಮೆರಾವನ್ನು ಅಳವಡಿಸಲಾಗಿದೆ. ಇದು 20 ಪಟ್ಟು ಮೆಗ್ನಿಫೇಕಷನ್ ಡಿಸ್‌ಪ್ಲೇ ಹೈ ಡೆಫಿನೇಷನ್ ಲೆನ್ಸ್ ನೆರವಿನಿಂದ ಸ್ಕಿನ್ ಕ್ಲೀನಿಂಗ್ ಪರಿಶೀಲಿಸುತ್ತಾ ಸ್ಮಾರ್ಟ್‌ಫೋನ್‌ನಲ್ಲಿ ತೋರಿಸುತ್ತದೆ. ಇದರಲ್ಲಿ ಮೂರು ಹಂತಗಳಿದ್ದು, ಮೊದಲನೆಯದು ಸೆನ್ಸಿಟಿವ್ ಸ್ಕಿನ್, ಡ್ರೈ ಸ್ಕಿನ್‌ಗೆ ನೆರವಾಗುತ್ತದೆ. ಎರಡನೇ ಲೆವೆಲ್ ನ್ಯೂಟ್ರಲ್ ಸ್ಕಿನ್‌ಗೆ ಉಪಯೋಗವಾಗುತ್ತದೆ. ಮೂರನೆಯದ್ದು ಆಯಿಲ್ ಸ್ಕಿನ್‌ಗೆ ಉಪಯೋಗವಾಗುತ್ತದೆ. ಇದನ್ನು ಬಳಸುವ ಮುನ್ನ ಬಿಸಿ ನೀರಿನಲ್ಲಿ ಒದ್ದೆ ಮಾಡಿದ ಟವೆಲ್‌ನಿಂದ ಚರ್ಮವನ್ನು ಉಜ್ಜಿಕೊಳ್ಳಬೇಕು. ಮೂರು ಸೆಕೆಂಡುಗಳಿಗಿಂತ ಹೆಚ್ಚು ಹೊತ್ತು ಒಂದೇ ಕಡೆ ಇದನ್ನು ಇಟ್ಟುಕೊಳ್ಳಕೂಡದು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ನಿರ್ದೇಶಾಂಕ ರೇಖಾಗಣಿತ

ಅಧ್ಯಾಯ 7

ಗಣಿತ

ಪ್ರಮುಖಾಂಶಗಳು

- y – ಅಕ್ಷದಿಂದ ಬಿಂದುವಿಗಿರುವ ದೂರವನ್ನು ಅದರ x – ನಿರ್ದೇಶಾಂಕ ಅಥವಾ ಕ್ಷಿತಿಜ ದೂರ ಎನ್ನುತ್ತೇವೆ.
- x – ಅಕ್ಷದಿಂದ ಬಿಂದುವಿಗಿರುವ ದೂರವನ್ನು ಅದರ y – ನಿರ್ದೇಶಾಂಕ ಅಥವಾ ಲಂಬದೂರ ಎನ್ನುತ್ತೇವೆ.
- x – ಅಕ್ಷದ ಮೇಲಿರುವ ಒಂದು ಬಿಂದುವಿನ ನಿರ್ದೇಶಾಂಕಗಳು (x, 0) ರೂಪದಲ್ಲಿರುತ್ತವೆ.
- y – ಅಕ್ಷದ ಮೇಲಿರುವ ಬಿಂದುವಿನ ನಿರ್ದೇಶಾಂಕಗಳು (0, y) ರೂಪದಲ್ಲಿರುತ್ತವೆ.
- ದೂರಸೂತ್ರ : $P(x_1,y_1)$ ಮತ್ತು $Q(x_2,y_2)$ ಬಿಂದುಗಳ ನಡುವಿನ ದೂರವು $PQ=\sqrt{(x_2-x_1)^2+(y_2-y_1)^2}$
- ಭಾಗ ಪ್ರಮಾಣ ಸೂತ್ರ : $A(x_1,y_1)$ ಮತ್ತು $B(x_2,y_2)$ ಬಿಂದುಗಳನ್ನು ಸೇರಿಸುವ ರೇಖಾಖಂಡವನ್ನು ಆಂತರಿಕವಾಗಿ $m_1:m_2$ ಅನುಪಾತದಲ್ಲಿ ವಿಭಾಗಿಸುವ $P(x,y)$ ಬಿಂದುವಿನ ನಿರ್ದೇಶಾಂಕಗಳು $\left(\frac{m_1x_2+m_2x_1}{m_1+m_2},\frac{m_1y_2+m_2y_1}{m_1+m_2}\right)$
- $A(x_1,y_1)$ ಮತ್ತು $B(x_2,y_2)$ ಬಿಂದುಗಳನ್ನು ಸೇರಿಸುವ ರೇಖಾಖಂಡದ ಮಧ್ಯಬಿಂದು P ಯ ನಿರ್ದೇಶಾಂಕಗಳು $\left(\frac{x_1+x_2}{2},\frac{y_1+y_2}{2}\right)$
- ತ್ರಿಭುಜದ ವಿಸ್ತೀರ್ಣ: ತ್ರಿಭುಜದ ವಿಸ್ತೀರ್ಣ = $\frac{1}{2}$ X ಪಾದ X ಎತ್ತರ
- ತ್ರಾಪಿಜ್ಯದ ವಿಸ್ತೀರ್ಣ= $\frac{1}{2}$ (ಸಮಾಂತರ ಬಾಹುಗಳ ಮೊತ್ತ)(ಅವುಗಳ ನಡುವಿನ ಅಂತರ)
- $A(x_1,y_1)$, $B(x_2,y_2)$ ಮತ್ತು $C(x_3,y_3)$ ಶೃಂಗಗಳಾಗಿರುವಂತೆ ABC ತ್ರಿಭುಜದ ವಿಸ್ತೀರ್ಣ: $\frac{1}{2}\left[x_1(y_2-y_3)+x_2(y_3-y_1)+x_3(y_1-y_2)\right]$

ಪ್ರಶ್ನೋತ್ತರಗಳು

1. (p,q) ಬಿಂದುವಿನಿಂದ ಮೂಲಬಿಂದುವಿಗಿರುವ ದೂರವು

ಎ. $\sqrt{p-q}$ ಬಿ. $\sqrt{p^2+q^2}$ ಸಿ. $\sqrt{p^2-q^2}$ ಡಿ. $\sqrt{p+q}$

ಉತ್ತರ: ಬಿ. $\sqrt{p^2+q^2}$

2. (2, 3) ಮತ್ತು (4, 7) ಬಿಂದುಗಳನ್ನು ಸೇರಿಸುವ ರೇಖಾಖಂಡದ ಮಧ್ಯಬಿಂದುವಿನ ನಿರ್ದೇಶಾಂಕಗಳನ್ನು ಕಂಡುಹಿಡಿಯಿರಿ.

ಪರಿಹಾರ : $(x_1,y_1)=(2,3)$ ಮತ್ತು $(x_2,y_2)=(4,7)$

ಮಧ್ಯಬಿಂದುವಿನ ನಿರ್ದೇಶಾಂಕ = $\left(\frac{x_1+x_2}{2},\frac{y_1+y_2}{2}\right)=\left(\frac{2+4}{2},\frac{3+7}{2}\right)$

$=\left(\frac{6}{2},\frac{10}{2}\right)$

$=(3,5)$

3. (3,1) ಮತ್ತು (6,2) ಬಿಂದುಗಳಿಗೆ ಇರುವ ದೂರವನ್ನು ದೂರಸೂತ್ರವನ್ನು ಉಪಯೋಗಿಸಿ ಕಂಡುಹಿಡಿಯಿರಿ.

ಪರಿಹಾರ: A(3,1) ಮತ್ತು B(6,2) ದತ್ತ ಬಿಂದುಗಳಾಗಿರಲಿ.

$(x_1,y_1)=(3,1)$

$(x_2,y_2)=(6,2)$

ಬಿಂದುಗಳ ನಡುವಿನ ದೂರ $AB=\sqrt{(x_2-x_1)^2+(y_2-y_1)^2}$

$AB=\sqrt{(6-3)^2+(2-1)^2}$

$AB=\sqrt{(3)^2+(1)^2}$

$AB=\sqrt{9+1}$

$AB=\sqrt{10}$

4. ಶೃಂಗ ಬಿಂದುಗಳು $A(5,2)$, $B(4,4)$ ಮತ್ತು $C(-4,3)$ ಆಗಿರುವ ತ್ರಿಭುಜ ABC ಯ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

ಪರಿಹಾರ: $(x_1,y_1)=(5,2)$

$(x_2,y_2)=(4,4)$

$(x_3,y_3)=(-4,3)$

ΔABC ಯ ವಿಸ್ತೀರ್ಣ

$$=\frac{1}{2}\left[x_1(y_2-y_3)+x_2(y_3-y_1)+x_3(y_1-y_2)\right]$$

$$=\frac{1}{2}\left[5(4-3)+4(3-2)+(-4)(2-4)\right]$$

$$=\frac{1}{2}\left[5(1)+4(1)-4(-2)\right]$$

$$=\frac{1}{2}[5+4+8]$$

$$=\frac{1}{2}[17]$$

= 8.5 ಚದರ ಮಾನಗಳು

ಶ್ರೀನಿವಾಸ ಡಿ. ಶೆಟ್ಟಿ,
ಶಿಕ್ಷಣ ಸಂಯೋಜಕರು ಬಿಇಒ
ಕಚೇರಿ, ಅರಕಲಗೂಡು

ಪ್ರಜಾವಾಣಿ ನೋಡಿಯೊ
ಹತ್ತನೇ ತರಗತಿ ಗಣಿತಶಾಸ್ತ್ರದ 'ಕೋಆರ್ಡಿನೇಟ್ ಜಿಯೋಮೆಟ್ರಿ' ಅಧ್ಯಾಯಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾದರಿ ಪ್ರಶ್ನೋತ್ತರ

ಮಾತೃಕೆಗಳು

ಗಣಿತ

ಪಿಯುಸಿ

5) X = {1, 2, 3, 4, 5, 6, 7, 8, 9} ಎಂದಿರಲಿ. X ನ ಮೇಲೆ R_1 = {(x, y) : x - y, 3ರಿಂದ ಭಾಗಿಸಲ್ಪಡುತ್ತದೆ} ಮತ್ತು ಇನ್ನೊಂದು ಸಂಬಂಧ X ನ ಮೇಲೆ R_2 = {(x, y) : {x - y}⊂ {1,4,7} ಅಥವಾ {x, y} ⊂ {4, 5, 8} ಅಥವಾ {x, y} ⊂ {3,6,9} ಆಗಿರಲಿ. $R_1 = R_2$ ಎಂದು ತೋರಿಸಿ.

ಪರಿಹಾರ: ಗಣಗಳಾದ {1,4,7}, {2,5,8} ಮತ್ತು {3,6,9}ಗಳ ಯಾವುದೇ ಎರಡು ಗಣಾಂಶಗಳ ವ್ಯತ್ಯಾಸವು 3 ರಿಂದ ಭಾಗಿಸಲ್ಪಡುತ್ತದೆ ಹೀಗಾಗಿ (x, y) ∈ R_1 ⇒ x - y ಯು 3ರ ಗುಣಲಬ್ಧವಾಗಿದೆ. ⇒ {x, y}⊂ {1,4,7}. ಅಥವಾ
{x, y} ⊂ {2, 5, 8} ಅಥವಾ
{x, y} ⊂ {3, 6, 9} ⇒ {x, y}∈ R_2
ಆದ್ದರಿಂದ R_1 C R_2
ಇದೇ ರೀತಿ {x, y} ∈ R_2 ⇒ {x, y} ⊂ {1,4,7} ಅಥವಾ {x, y} ⊂ {2, 5, 8} ಅಥವಾ {x, y} ⊂ {3, 6, 9} ⇒ x - y ಯು 3ರಿಂದ ಭಾಗಿಸಲ್ಪಡುತ್ತದೆ ⇒ {x, y} ∈ R_1 ⇒ R_2 ⊂ R_1 ಎಂದು ತೋರಿಸುತ್ತದೆ.
ಆದ್ದರಿಂದ $R_1 = R_2$ ಆಗುತ್ತದೆ.

6) $\frac{-3\pi}{2} < x < \frac{\pi}{2}$ ಆದಾಗ, $\tan^{-1}\left(\frac{\cos x}{1-\sin x}\right)$ನ್ನು ಸರಳೀಕರಿಸಿ.

ಪರಿಹಾರ:

$$\tan^{-1}\left(\frac{\cos x}{1-\sin x}\right)=\tan^{-1}\left[\frac{\cos^2\frac{x}{2}-\sin^2\frac{x}{2}}{\cos^2\frac{x}{2}+\sin^2\frac{x}{2}-2\sin\frac{x}{2}\cos\frac{x}{2}}\right]$$

$$=\tan^{-1}\left[\frac{\left(\cos\frac{x}{2}+\sin\frac{x}{2}\right)\left(\cos\frac{x}{2}-\sin\frac{x}{2}\right)}{\left(\cos\frac{x}{2}-\sin\frac{x}{2}\right)^2}\right]$$

$$=\tan^{-1}\left[\frac{\cos\frac{x}{2}+\sin\frac{x}{2}}{\cos\frac{x}{2}-\sin\frac{x}{2}}\right]$$

$$=\tan^{-1}\left[\frac{1+\tan\frac{x}{2}}{1-\tan\frac{x}{2}}\right]=\tan^{-1}\left[\tan\left(\frac{\pi}{4}+\frac{x}{2}\right)\right]=\frac{\pi}{4}+\frac{x}{2}$$

ಪ್ರಜಾವಾಣಿ ನೋಡಿಯೊ
ದ್ವಿತೀಯ ಪಿಯುಸಿ ಗಣಿತಶಾಸ್ತ್ರದ 'ಮ್ಯಾಟ್ರಿಕ್ಸ್' ವಿಷಯದ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

7) ಗಣ {1, 2, 3}ದ ಮೇಲೆ ಕ್ರಮಯುಗ್ಮ (1,2) ಮತ್ತು (2,1)ಗಳುಳ್ಳ ಸಮತ್ವ ಸಂಬಂಧಗಳ ಸಂಖ್ಯೆ ಎರಡು ಎಂದು ತೋರಿಸಿ.

ಪರಿಹಾರ: ಕ್ರಮಯುಗ್ಮ (1,2) ಮತ್ತು (2,1)ಗಳನ್ನೊಳಗೊಂಡ ಅತಿ ಚಿಕ್ಕ ಸಮತ್ವ ಸಂಬಂಧವು R_1 = {(1, 1), (2, 2), (3, 3), (1, 2), (2, 1)} ಗಳನ್ನೊಳಗೊಂಡಿದೆ. ಈಗ ನಮ್ಮಲ್ಲಿ 4 ಯುಗ್ಮಗಳು ಉಳಿದಿವೆ. ಅವುಗಳೆಂದರೆ (2,3), (3,2), (1,3) ಮತ್ತು (3, 1) ನಾವು ಯಾವುದಾದರೊಂದು ಯುಗ್ಮ ಉದಾಹರಣೆಗಾಗಿ (2, 3)ಯನ್ನು R_1 ಗೆ ಸೇರಿಸಲು, ಸಮಾಂಗತೆಗಾಗಿ (3, 2) ಕೂಡ ಸೇರಿಸಬೇಕಾಗುತ್ತದೆ ಹಾಗೂ ಉದಾಹರಣೆಗಾಗಿ (1, 3) ಮತ್ತು (3, 1)ಗಳನ್ನು ಸೇರಿಸುವ ಒತ್ತಡಕ್ಕೆ ಒಳಗಾಗುತ್ತೇವೆ. ಆದ್ದರಿಂದ R_1 ಗಿಂತದೊಡ್ಡ ಸಮತ್ವ ಸಂಬಂಧವು ವಿಶ್ವ ಸಂಬಂಧವಾಗಿದೆ. ಹೀಗಾಗಿ ಇದರಿಂದ ತಿಳಿಯುವುದೇನೆಂದರೆ (1, 2) ಮತ್ತು (2, 1) ಗಳನ್ನು ಹೊಂದಿರುವ ಸಮತ್ವ ಸಂಬಂಧಗಳ ಸಂಖ್ಯೆ ಎರಡು ಆಗಿದೆ.

8) $\begin{vmatrix} b+c & a & a \\ b & c+a & b \\ c & c & a+b \end{vmatrix}=4abc$ ಎಂದು ಸಾಧಿಸಿ.

ಪರಿಹಾರ:–

$$\Delta=\begin{vmatrix} b+c & a & a \\ b & c+a & b \\ c & c & a+b \end{vmatrix}$$

ಕ್ರಿಯೆ $R_1 \to R_1 - R_2 - R_3$, ಉಪಯೋಗಿಸಿದಾಗ ನಮಗೆ

$$\Delta=\begin{vmatrix} 0 & -2c & -2b \\ b & c+a & b \\ c & c & a+b \end{vmatrix}$$

R_1 ಮೂಲಕ ವಿಸ್ತರಿಸಿದಾಗ ನಮಗೆ

$$\Delta=0\begin{vmatrix} c+a & b \\ c & a+b \end{vmatrix}-(-2c)\begin{vmatrix} b & b \\ c & a+b \end{vmatrix}+(-2b)\begin{vmatrix} b & c+a \\ c & c \end{vmatrix}$$

$= 2c\,(ab + b^2 - bc) - 2b\,(bc - c^2 - ac)$

$= 2abc + 2cb^2 - 2bc^2 - 2\,b^2c + 2\,bc^2 + 2\,abc = 4\,abc$

9) ಈ ನಿರ್ಧಾರಕದಲ್ಲಿ $\begin{vmatrix} 1 & -2 \\ 4 & 3 \end{vmatrix}$ ಲಾಘವಗಳು ಮತ್ತು ಸಹಾಪವರ್ತನಗಳನ್ನು ಕಂಡುಹಿಡಿಯಿರಿ.

ಪರಿಹಾರ: aij ನ ಲಾಘವವು Mij ಆಗಿರಲಿ

a11 = 1. ಆದ್ದರಿಂದ M11 = a11 ನ ಲಾಘವ = 3

M12 = a12 ನ ಲಾಘವ = 4

M21 = a21 ನ ಲಾಘವ = –2

M22 = a22 ನ ಲಾಘವ = 1

(ಈಗ aij ನ ಸಹಾಪವರ್ತನ Aij ಆಗಿರಲಿ)

ಈಗ aij ನ ಸಹಾಪವರ್ತನ Aij ಆಗಿರಲಿ

A11 = (–1)1 + 1 M11 = (–1)2 (3) = 3

A12 = (–1)1 + 2 M12 = (–1)3 (4) = – 4

A21 = (–1)2 + 1 M21 = (–1)3 (–2) = 2

A22 = (–1)2 + 2 M22 = (–1)4 (1) = 1

10) ಪ್ರತಿಯೊಂದು ಬಹುಪದಿ ಉತ್ಪನ್ನವು ಅವಿಚ್ಛಿನ್ನವಾಗಿರುತ್ತದೆಂದು ತೋರಿಸಿ.

ಪರಿಹಾರ: ಒಂದು ಉತ್ಪನ್ನ p ಎಂಬುದು ಬಹುಪದಿ ಉತ್ಪನ್ನ ಎಂದು ಹೇಳಬೇಕಾದರೆ ಅದನ್ನು ಕೆಳಗಿನಂತೆ ವ್ಯಾಖ್ಯಾನಿಸಬೇಕಾಗುತ್ತದೆ.

$p(x) = a_0 + a_1 x + ... + a_n x_n$ ಎಂಬುದು ಸ್ವಾಭಾವಿಕ ಸಂಖ್ಯೆ $a_n \neq 0$ ಮತ್ತು $a_i \in R$ ಸ್ಪಷ್ಟವಾಗಿ ಈ ಉತ್ಪನ್ನವು ಎಲ್ಲಾ ವಾಸ್ತವ ಸಂಖ್ಯೆಗಳಲ್ಲಿ ವ್ಯಾಖ್ಯಾನಿಸಲ್ಪಟ್ಟಿದೆ c ಎಂಬುದೊಂದು ನಿರ್ದಿಷ್ಟ ವಾಸ್ತವ ಸಂಖ್ಯೆಯಾದರೆ $\lim_{x\to c} p(x)=p(c)$ ವ್ಯಾಖ್ಯೆ ಪ್ರಕಾರ p ಎಂಬುದು c ಬಿಂದುವಿನಲ್ಲಿ ಅವಿಚ್ಛಿನ್ನವಾಗಿರುತ್ತದೆ. ಈಗ c ಎಂಬುದು ಯಾವುದಾದರೂ ವಾಸ್ತವ ಸಂಖ್ಯೆಯಾಗಿರುವುದರಿಂದ p(x) ಉತ್ಪನ್ನವು ಎಲ್ಲಾ ವಾಸ್ತವ ಸಂಖ್ಯೆಗಳಲ್ಲಿ ಅವಿಚ್ಛಿನ್ನವಾಗಿರುವ ಕಾರಣ p ಎಂಬುದು ಅವಿಚ್ಛಿನ್ನ ಉತ್ಪನ್ನ.

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ಸುಭಾಷಿತ

ನಡೆಯಲರಿಯದೆ, ನುಡಿಯಲರಿಯದೆ ಲಿಂಗವ ಪೂಜಿಸಿ ಫಲವೇನು? -ಬಸವಣ್ಣ

ಶಾಂತಿ ಕದಡುವ ಮಾತು ಸಲ್ಲದು ಸೌಹಾರ್ದದ ಮಾದರಿಗಳು ಬೇಕು

ಬಜರಂಗ ದಳದ ಕಾರ್ಯಕರ್ತ ಹರ್ಷ ಅವರ ಹತ್ಯೆಯ ಬಳಿಕ ಶಿವಮೊಗ್ಗ ನಗರದಲ್ಲಿ ನಡೆದ ಹಿಂಸಾಚಾರ ಹಾಗೂ ಅದಕ್ಕೆ ಕುಮ್ಮಕ್ಕು ನೀಡುವಂತೆ ವರ್ತಿಸಿದ ರಾಜಕೀಯ ನಾಯಕರ ನಡವಳಿಕೆ ಖಂಡನೀಯ. ಕೋಮು ರಾಜಕಾರಣದಲ್ಲಿ ಯುವಕನೊಬ್ಬ ಜೀವ ಕಳೆದುಕೊಳ್ಳುವುದು ನಾಗರಿಕ ಸಮಾಜ ಪಾಪಪ್ರಜ್ಞೆಯಿಂದ ತಲೆತಗ್ಗಿಸಬೇಕಾದ ಘಟನೆ. ಆ ಅನಾಗರಿಕ ಕ್ರೌರ್ಯವನ್ನು ಮತ್ತೂ ಹೆಚ್ಚಿಸುವಂತೆ ಸಾವಿನ ನಂತರ ವ್ಯಾಪಕ ಹಿಂಸಾಚಾರ ನಡೆದಿದೆ. ಪಾರ್ಥಿವ ಶರೀರದ ಮೆರವಣಿಗೆಯ ಸಂದರ್ಭದಲ್ಲಿ ಉದ್ರಿಕ್ತರ ಗುಂಪು ಮಸೀದಿಗಳ ಮೇಲೆ ಕಲ್ಲು ತೂರಾಟಕ್ಕೆ ಪ್ರಯತ್ನಿಸಿದೆ. ದಾರಿಯುದ್ದಕ್ಕೂ ಪೊಲೀಸರ ಸಮ್ಮುಖದಲ್ಲೇ ಪುಂಡರು ಅಟ್ಟಹಾಸ ಮೆರೆದಿದ್ದಾರೆ. ಗಲಭೆ ದೃಶ್ಯಗಳನ್ನು ಚಿತ್ರೀಕರಿಸಲು ಮುಂದಾದ ಮಾಧ್ಯಮದವರ ಕ್ಯಾಮೆರಾ, ಮೊಬೈಲ್‌ಗಳನ್ನೂ ನಾಶಗೊಳಿಸಲಾಗಿದೆ. ಹಲವರ ಮೇಲೆ ಹಲ್ಲೆಯೂ ನಡೆದಿದೆ. ಪ್ರಚೋದನೆಗೆ ಒಳಗಾದ ಮತ್ತೊಂದು ಕೋಮಿನ ಯುವಕರು ಮೆರವಣಿಗೆಯ ಮೇಲೆ ಕಲ್ಲುತೂರಿದ್ದಾರೆ. ಬೀದಿ ವ್ಯಾಪಾರಿಗಳು, ಹಣ್ಣು- ತರಕಾರಿ ಮಾರುವವರು ಗಲಭೆಯಲ್ಲಿ ಕಷ್ಟ-ನಷ್ಟ ಅನುಭವಿಸಿದ್ದಾರೆ. ಕೆಲವೆಡೆ ಪೊಲೀಸರ ಕಣ್ಣೆದುರೇ ಲೂಟಿ ನಡೆದರೂ ಅವರು ನಿರ್ಲಿಪ್ತರಾಗಿದ್ದರು ಎಂದು ವರದಿಯಾಗಿದೆ. ಇದು ನಿಜವೇ ಆಗಿದ್ದಲ್ಲಿ ಕರ್ತವ್ಯಲೋಪ ಅಷ್ಟೇ ಅಲ್ಲ, ಅಮಾನವೀಯ ಕೂಡ. ಸಿಆರ್‌ಪಿಸಿಯ ಸೆಕ್ಷನ್ 144ರ ಅನ್ವಯ ನಿಷೇಧಾಜ್ಞೆ ಜಾರಿಯಲ್ಲಿದ್ದರೂ ಸಚಿವ ಕೆ.ಎಸ್. ಈಶ್ವರಪ್ಪ ಹಾಗೂ ಸಂಸದ ಬಿ.ವೈ. ರಾಘವೇಂದ್ರ ಅವರು ಮೆರವಣಿಗೆಯಲ್ಲಿ ಭಾಗವಹಿಸಿದ್ದು ಕಾನೂನಿನ ಸ್ಪಷ್ಟ ಉಲ್ಲಂಘನೆ. ಇವರ ವಿರುದ್ಧ ಪ್ರಕರಣ ದಾಖಲಿಸಬೇಕು. ಸಮುದಾಯಗಳ ನಡುವೆ ಸಂಘರ್ಷ ಉಂಟಾಗಬಹುದಾದ ಸೂಕ್ಷ್ಮ ಸನ್ನಿವೇಶಗಳನ್ನು ರಾಜಕಾರಣಿಗಳು ತಾಳ್ಮೆಯ ಮೂಲಕ ನಿಭಾಯಿಸಬೇಕು. ಆದರೆ, ಬಜರಂಗ ದಳದ ಕಾರ್ಯಕರ್ತನ ಹತ್ಯೆಯ ಸಂದರ್ಭದಲ್ಲಿ ಸಚಿವ ಈಶ್ವರಪ್ಪನವರು ನಡೆದುಕೊಂಡ ರೀತಿ ಹಿರಿಯ ರಾಜಕಾರಣಿಯಿಂದ ನಿರೀಕ್ಷಿಸುವಂತಹದ್ದಲ್ಲ. 'ಮುಸ್ಲಿಂ ಗೂಂಡಾಗಳಿಂದ ಈ ಕೊಲೆ ನಡೆದಿದೆ' ಎಂದು ಹತ್ಯೆ ನಡೆದ ಬೆನ್ನಿಗೇ ಈಶ್ವರಪ್ಪನವರು ಹೇಳಿದ್ದು ಯಾವ ರೀತಿಯಿಂದಲೂ ಸಮರ್ಥನೀಯವಲ್ಲ. ಇಂತಹ ಪ್ರಕರಣಗಳನ್ನು ಯಾವುದೇ ಪಕ್ಷವು ರಾಜಕೀಯ ಲಾಭಕ್ಕೆ ಬಳಸಿಕೊಳ್ಳಬಾರದು. ವಿರೋಧ ಪಕ್ಷಗಳ ಮುಖಂಡರು ಕೂಡ ಸಂಯಮ ಕಾಯ್ದುಕೊಳ್ಳಬೇಕು. ಕೊಲೆ ಮಾಡಿದವರನ್ನು ಆರೋಪಿಗಳನ್ನಾಗಿ ಗುರುತಿಸುವುದು, ತನಿಖೆ ನಡೆಸುವುದು ಪೊಲೀಸರ ಕೆಲಸ. ಸಚಿವರೊಬ್ಬರು ತಾವೇ ನ್ಯಾಯಾಧೀಶರಂತೆ ಮಾತನಾಡುವುದು ಜವಾಬ್ದಾರಿಯುತ ನಡವಳಿಕೆ ಅಲ್ಲ. ಸಮಾಜಘಾತುಕ ವ್ಯಕ್ತಿಗಳನ್ನು ಜಾತಿ, ಸಮುದಾಯದ ಹೆಸರಿನಲ್ಲಿ ಗುರುತಿಸುವುದೂ ಸರಿಯಲ್ಲ. ಸೂಕ್ಷ್ಮ ಪರಿಸ್ಥಿತಿಯ ಲಾಭ ಪಡೆಯಲು ವಿಚ್ಛಿದ್ರಕಾರಿ ಶಕ್ತಿಗಳು ಹವಣಿಸುತ್ತಿರುತ್ತವೆ. ಅಂಥ ರಾಕ್ಷಸಿ ಶಕ್ತಿಗಳು ವಿಜೃಂಭಿಸಲು ಒಂದು ಒಡಕು ಮಾತು ಸಾಕಾಗುತ್ತದೆ. 'ಕೊಲೆಗೀಡಾದ ಯುವಕ ನಮ್ಮ ಸಂಘಟನೆಯ ಕಾರ್ಯಕರ್ತ' ಎಂದು ಹೇಳಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮಾತು ಕೂಡ ಅನಪೇಕ್ಷಿತವಾಗಿದ್ದ ಹೇಳಿಕೆ. ಬಜರಂಗ ದಳವನ್ನು 'ನಮ್ಮ ಸಂಘಟನೆ' ಎಂದು ಮುಖ್ಯಮಂತ್ರಿ ಹೇಳುವುದಾದರೆ, ಆ ಸಂಘಟನೆಯ ಮುಖಂಡರ ಮಾತು ಮತ್ತು ಕ್ರಿಯೆಗಳ ಹೊಣೆಗಾರಿಕೆಯನ್ನೂ ಅವರು ಹೊರಬೇಕಾಗುತ್ತದೆ.



ಮಾತಿನ ಚಪಲಕ್ಕೆ ರಾಜಕಾರಣಿಗಳು ಸ್ವಯಂ ಕಡಿವಾಣ ಹಾಕಿಕೊಳ್ಳದೇ ಹೋದರೆ, ಕಿವಿ ಹಿಂಡುವ ಕೆಲಸವನ್ನು ಪಕ್ಷಗಳಾದರೂ ಮಾಡಬೇಕು

ಕೋಮುಸೌಹಾರ್ದ ಕದಡುವಂತಹ ಘಟನೆಗಳು ನಡೆದಾಗ ರಾಜಕೀಯ ಮುಖಂಡರು ಸಮಾಜದಲ್ಲಿ ಶಾಂತಿ ಕದಡುವಂತಹ ಸಾಧ್ಯತೆಗಳಿಗೆ ತಮ್ಮ ಮಾತು-ಕೃತಿ ಅವಕಾಶ ಕಲ್ಪಿಸದಂತೆ ಎಚ್ಚರಿಕೆ ವಹಿಸಬೇಕು. ಸರ್ಕಾರದ ಭಾಗವಾದ ಪ್ರಜಾಪ್ರತಿನಿಧಿಗಳು ತಮ್ಮನ್ನು ನಿರ್ದಿಷ್ಟ ಸಮುದಾಯದೊಂದಿಗೆ ಗುರುತಿಸಿಕೊಳ್ಳುವುದು ಸಲ್ಲದು. ಅವರ ನಿಷ್ಠೆ ಮತ್ತು ಬದ್ಧತೆ ಸಂವಿಧಾನಕ್ಕೇ ಹೊರತು ಸಮುದಾಯಗಳಿಗಲ್ಲ. ಸಂಘರ್ಷದ ಸಂದರ್ಭಗಳಲ್ಲಿ ಯಾವುದೇ ವ್ಯಕ್ತಿ-ಸಂಘಟನೆಯ ಜೊತೆಗೆ ಗುರುತಿಸಿಕೊಳ್ಳದೆ, ಕಾನೂನಿನ ಮೂಲಕವೇ ಬಿಕ್ಕಟ್ಟಿಗೆ ಉತ್ತರ ಕಂಡುಕೊಳ್ಳಲು ಪ್ರಯತ್ನಿಸಬೇಕು. ತಪ್ಪು ಯಾರೇ ಮಾಡಿದ್ದರೂ ಅವರ ಮೇಲೆ ಕಾನೂನು ಕ್ರಮ ಜರುಗಿಸುವುದು ಸರ್ಕಾರದ ಕರ್ತವ್ಯ. ಬಜರಂಗ ದಳದ ಕಾರ್ಯಕರ್ತನ ಕೊಲೆ ಪ್ರಕರಣದಲ್ಲಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗುವಂತೆ ಸರ್ಕಾರ ನೋಡಿಕೊಳ್ಳಬೇಕು. ಅದೇ ರೀತಿ, ಸಾವಿನ ನಂತರದ ಗಲಭೆ-ಹಿಂಸಾಚಾರಕ್ಕೆ ಕಾರಣರಾದವರ ಮೇಲೂ ಮೊಕದ್ದಮೆ ದಾಖಲಿಸಿ ಶಿಕ್ಷೆಗೊಳಪಡಿಸಬೇಕು. ಇತ್ತೀಚಿನ ದಿನಗಳಲ್ಲಿ ಕೋಮುಸಾಮರಸ್ಯ ಕದಡುವಂತಹ ಘಟನೆಗಳು ರಾಜ್ಯದಲ್ಲಿ ಮತ್ತೆ ಮತ್ತೆ ನಡೆಯುತ್ತಿದ್ದು, ಆ ಸಂಘರ್ಷಗಳ ಬೆಂಕಿಗೆ ತುಪ್ಪ ಸುರಿಯುವಂತೆ ರಾಜಕೀಯ ಪಕ್ಷಗಳ ಮುಖಂಡರು ಪ್ರತಿಕ್ರಿಯಿಸುತ್ತಿದ್ದಾರೆ. ತಮ್ಮ ಮಾತುಗಳಿಂದ ಸಾಮಾಜಿಕ ಶಾಂತಿ ಕದಡುವುದರ ಜೊತೆಗೆ, ಸರ್ವಧರ್ಮ ಸಮನ್ವಯಕ್ಕೆ ಹೆಸರಾದ ನಾಡಿನ ವರ್ಚಸ್ಸು ಜಗತ್ತಿನೆದುರು ಮುಕ್ಕಾಗುತ್ತದೆ ಎನ್ನುವುದನ್ನು ಅವರು ಅರಿಯಬೇಕು. ಮಾತಿನ ಚಪಲಕ್ಕೆ ಸ್ವಯಂ ಕಡಿವಾಣ ಹಾಕಿಕೊಳ್ಳುವ ವಿವೇಕವನ್ನು ರಾಜಕಾರಣಿಗಳು ಪ್ರದರ್ಶಿಸದೇ ಹೋದರೆ, ಕಿವಿ ಹಿಂಡುವ ಕೆಲಸವನ್ನು ಪಕ್ಷಗಳಾದರೂ ಮಾಡಬೇಕು.

ದಿನದ ಟ್ವೀಟ್

ವಿರೋಧಾಭಾಸದ ನಡೆ

ಅಕ್ರಮದ ಕಾರಣಕ್ಕೆ ಸುಪ್ರೀಂ ಕೋರ್ಟ್ ರದ್ದುಪಡಿಸಿದ ಕೆಪಿಎಸ್‌ಸಿ ಆಯ್ಕೆಪಟ್ಟಿಯನ್ನು ಸಕ್ರಮಗೊಳಿಸಲು ಸರ್ಕಾರ ತರಾತುರಿ ತೋರುತ್ತದೆ. ಇನ್ನೊಂದೆಡೆ, ನ್ಯಾಯವಾಗಿ ದಕ್ಕಬೇಕಾದ ಗೌರವಧನ ಮತ್ತು ಇತರ ಹಕ್ಕುಗಳನ್ನು ಪಡೆಯಲು ಅಂಗನವಾಡಿ ಕಾರ್ಯಕರ್ತೆಯರು ಸರ್ಕಾರದ ಮುಂದೆ ಅಂಗಲಾಚುವಂತೆ ಮಾಡುತ್ತದೆ. ಇದು ಸರ್ಕಾರದ ಆದ್ಯತೆ & ಕಾರ್ಯವೈಖರಿಗೆ ಹಿಡಿದ ಕೈಗನ್ನಡಿ!

ಕೆ.ಬಿ.ಕೆ. ಸ್ವಾಮಿ, ವಕೀಲ

ಕಿಡಿನುಡಿ

ಇಂಥ ಆರ್ಥಿಕ ಸಂಕಷ್ಟದ ಸಂದರ್ಭದಲ್ಲೂ ನಮ್ಮ ಕಡುಬಡ ಶಾಸಕರು ಸಂಬಳ, ಭತ್ಯೆಗಳನ್ನು ಹೆಚ್ಚಿಸಿಕೊಂಡಿದ್ದು ಅತ್ಯಂತ ಜನಪರ ಬೆಳವಣಿಗೆ!

ಡಾ. ಜೆ.ಎಸ್.ಪಾಟೀಲ್, ಪ್ರಾಚಾರ್ಯ

25 ವರ್ಷಗಳ ಹಿಂದೆ

ಭಾನುವಾರ, 23-2-1997

- **ಬಜೆಟ್ ಅಧಿವೇಶನ ನಂತರ ಸಚಿವ ಸಂಪುಟ ಪುನರ್‌ರಚನೆ**

ಹುಬ್ಬಳ್ಳಿ, ಫೆ. 22– ಬಜೆಟ್ ಅಧಿವೇಶನದ ನಂತರ ರಾಜ್ಯ ಸಂಪುಟವನ್ನು ಪುನರ್ ರಚಿಸುವುದಾಗಿ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಇಂದು ಪ್ರಕಟಿಸಿದರು.

ಹಾನಗಲ್ ಪಟ್ಟಣದಲ್ಲಿ ಸಾವಿತ್ರಮ್ಮ ಉದಾಸಿ ಕಲ್ಯಾಣ ಮಂಟಪವನ್ನು ಉದ್ಘಾಟಿಸಲು ಆಗಮಿಸಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡುತ್ತಾ, ಬರುವ ಪುನರ್‌ರಚನೆಯಲ್ಲಿ ಸಂಪುಟದ ಗಾತ್ರ ಕಡಿಮೆಯಾಗಲಿದೆ ಎಂದು ನುಡಿದರು.

ತಮ್ಮ ಸಚಿವ ಸಂಪುಟದ ಗಾತ್ರದ ಬಗ್ಗೆ ಹಲವಾರು ಪ್ರತಿನಿಧಿಗಳು ಕೆಂಗಣ್ಣಿನಿಂದ ನೋಡುತ್ತಿದ್ದಾರೆ. ಆದ್ದರಿಂದ ಶೀಘ್ರದಲ್ಲಿಯೇ ಈ ಟೀಕೆಗಳಿಗೆ ಸಂಪುಟ ಪುನರ್‌ರಚನೆಯ ನಂತರ ಉತ್ತರ ಸಿಗಬಹುದಾಗಿದೆ ಎಂದು ವ್ಯಂಗ್ಯವಾಗಿ ನುಡಿದರು.

- **'ರಾಜ್ಯದಲ್ಲಿ ಜೂನ್‌ನಿಂದ ಭಾಗಶಃ ಪಾನ ನಿಷೇಧ'**

ಹುಬ್ಬಳ್ಳಿ, ಫೆ. 22– ರಾಜ್ಯದಲ್ಲಿ ಬರುವ ಜೂನ್ ತಿಂಗಳಿಂದ ಭಾಗಶಃ ಪಾನ ನಿಷೇಧವನ್ನು ಜಾರಿಗೆ ತರಲು ರಾಜ್ಯ ಸರ್ಕಾರ ನಿರ್ಧರಿಸಿದೆ ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಇಂದು ತಿಳಿಸಿದರು.

ಹಾನಗಲ್ ಪಟ್ಟಣಕ್ಕೆ ಒಂದು ದಿನದ ಭೇಟಿ ನೀಡಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡುತ್ತಾ, ಈ ನಿಷೇಧ ಸಾರಾಯಿಗೆ ಮಾತ್ರ ಅನ್ವಯಿಸುತ್ತದೆ. ಇನ್ನುಳಿದ ಹೆಚ್ಚಿನ ಬೆಲೆಯ ಮದ್ಯ ಮಾರಾಟಕ್ಕೆ ನಿಷೇಧವನ್ನು ಸದ್ಯಕ್ಕೆ ವಿಧಿಸುವ ಯೋಚನೆ ಇಲ್ಲವೆಂದರು.

50 ವರ್ಷಗಳ ಹಿಂದೆ

ಬುಧವಾರ, 23-2-1972

- **'ಒಪ್ಪಿಗೆ ದೊರೆಯದಿದ್ದ' ಕಾವೇರಿ ಯೋಜನೆಗೆ ಕೇಂದ್ರ ಸರ್ಕಾರದ ನೆರವು**

ನವದೆಹಲಿ, ಫೆ. 22– ಒಪ್ಪಿಗೆ ದೊರೆಯದಿದ್ದ ಮೈಸೂರಿನ ಕಾವೇರಿ ಯೋಜನೆಗಳಿಗೆ 1972–73ರಲ್ಲಿ ರಾಜ್ಯದ ಯೋಜನಾ ಮಿತಿ ಹೊರಗಡೆ ಹಣಕಾಸು ನೆರವು ನೀಡಿಕೆ ಮುಂದುವರಿಯುವುದು.

ಮೈಸೂರು ರಾಜ್ಯಪಾಲ ಮೋಹನ್ ಲಾಲ್ ಸುಖಾಡಿಯಾ ಹಾಗೂ ಕೇಂದ್ರ ಯೋಜನಾ ಸಚಿವ ಶ್ರೀ ಸಿ. ಸುಬ್ರಹ್ಮಣ್ಯಂ ಅವರ ನಡುವೆ ಇಂದು ನಡೆದ ಮಾತುಕತೆಯಲ್ಲಿ ಈ ಬಗ್ಗೆ ಒಪ್ಪಂದವಾಯಿತು.

- **ದೆಹಲಿಯಿಂದ ಹೊರಟ ಜರ್ಮನ್ ವಿಮಾನ ಏಡನ್‌ಗೆ ಅಪಹರಣ: 172 ಪ್ರಯಾಣಿಕರ ಬಿಡುಗಡೆ**

ಏಡನ್, ಫೆ. 22– ಪಶ್ಚಿಮ ಜರ್ಮನಿಯ ಅಪಹೃತ ಲುಫ್ತಾನ್ಸಾ ಜಂಬೋಜೆಟ್ ವಿಮಾನದಲ್ಲಿದ್ದ ಎಲ್ಲ 172 ಪ್ರಯಾಣಿಕರೂ ಬಿಡುಗಡೆಯಾಗಿರುವುದಾಗಿ ಏಡನ್ ವಿಮಾನ ನಿಲ್ದಾಣದ ಡೈರೆಕ್ಟರ್ ಇಂದು ತಿಳಿಸಿದರು.

ಆದರೆ, ವಿಮಾನ ಅಪಹರಿಸಿದವರು ತಮ್ಮ ಒತ್ತಾಯಗಳ ಪೂರೈಕೆಯಾಗುವವರೆಗೆ ಚಾಲಕ ವರ್ಗದ 16 ಜನರನ್ನು ವಶದಲ್ಲಿಟ್ಟುಕೊಂಡಿರುತ್ತಾರೆ ಎಂದು ಅವರು ಅಧಿಕೃತ ಹೇಳಿಕೆಯೊಂದರಲ್ಲಿ ಪ್ರಕಟಿಸಿದರು.

ಬಿಡುಗಡೆಯಾದವರಲ್ಲಿ ದಿವಂಗತ ಸೆನೆಟರ್ ರಾಬರ್ಟ್ ಕೆನಡಿ ಅವರ 19 ವರ್ಷದ ಮಗ ಜೋಸೆಫ್ ಕೆನಡಿ ಅವರೂ ಒಬ್ಬರು.

ಅಥೆನ್ಸ್‌ಗೆ ಹೋಗಬೇಕಾಗಿದ್ದ ವಿಮಾನವು ನವದೆಹಲಿಯಿಂದ ಪ್ರಯಾಣ ಮಾಡಿದ ನಲವತ್ತು ನಿಮಿಷಗಳ ನಂತರ ಬಲಾತ್ಕಾರ ಅಪಹರಣಕ್ಕೊಳಗಾಗಿ ಇಂದು ಬೆಳಿಗ್ಗೆ 9 ಗಂಟೆಗೆ ಏಡನ್‌ನಲ್ಲಿ ಸುರಕ್ಷಿತವಾಗಿ ಇಳಿಯಿತು.

ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದಾಗಿ 'ವಿಚಾರಗಳ ಬರ' ಎದುರಾಗಿದೆಯೇ?

ಈಗ 'ರಾಜಕೀಯ ವೈರಸ್' ಸರದಿ

ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

ಕೋವಿಡ್-19ರ ಮೂರನೇ ಅಲೆಯ ತೀವ್ರತೆ ಕಡಿಮೆಯಾಗುತ್ತಿರುವಂತೆಯೇ ರಾಜಕೀಯ ವೈರಸ್‌ವೊಂದು ರಾಜ್ಯದ ಉದ್ದಗಲಕ್ಕೆ ಹರಡುತ್ತಿರುವಂತೆ ಭಾಸವಾಗುತ್ತಿದೆ. ರಾಷ್ಟ್ರ ಮಟ್ಟದಲ್ಲಿ ಅದು ದೊಡ್ಡದಾಗಿ ಪ್ರತಿಧ್ವನಿಸುತ್ತಿದೆ. ಕಳೆದ ತಿಂಗಳ ಎರಡು ಪ್ರಮುಖ ಬೆಳವಣಿಗೆಗಳು ಹಾಗೂ ರಾಜ್ಯ ರಾಜಕಾರಣದಲ್ಲಿ ಅದರ ವಿಸ್ತೃತ ಧ್ವನಿತಾರ್ಥಗಳನ್ನು ಈ ಲೇಖನ ವಿಶ್ಲೇಷಿಸಲಿದೆ.

ಸ್ವಲ್ಪ ಹಿಂದೆ ನಡೆದ ಘಟನೆಯಿಂದ ಆರಂಭಿಸಿ ನಂತರ ಇತ್ತೀಚಿನದಕ್ಕೆ ಬರೋಣ. ಸಾಂಕ್ರಾಮಿಕದ ಮೂರನೇ ಅಲೆ ಸಂದರ್ಭದಲ್ಲಿನ ಪ್ರಮುಖ ರಾಜಕೀಯ ವಿದ್ಯಮಾನ ಎಂದರೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಮ್ಮಿಕೊಂಡ ಪಾದಯಾತ್ರೆ. ತಮಿಳುನಾಡು ಹಾಗೂ ಕರ್ನಾಟಕದ ಮಧ್ಯೆ ಇರುವ ಜಲ ವಿವಾದದ ಹಿನ್ನೆಲೆಯಲ್ಲಿ ಮೇಕೆದಾಟು ಪಾದಯಾತ್ರೆಯನ್ನು 'ನೀರಿಗಾಗಿ ನಡಿಗೆ' ಎಂದು ಕರೆಯಲಾಗುತ್ತದೆ. ರಾಜ್ಯದಲ್ಲಿ 'ಪಾದಯಾತ್ರೆ ರಾಜಕೀಯ'ದ ಇತಿಹಾಸವನ್ನು ಗಮನಿಸಿದಲ್ಲಿ, ಸರ್ಕಾರವನ್ನು ತುದಿಗಾಲಲ್ಲಿ ನಿಲ್ಲಿಸುವ ಸುವರ್ಣಾವಕಾಶವನ್ನು ಕೆಪಿಸಿಸಿ ಅಧ್ಯಕ್ಷರು ಕಂಡುಕೊಂಡರು. ಈ ಪ್ರಕ್ರಿಯೆಯಲ್ಲಿ, ರಾಜ್ಯದಲ್ಲಿ ಚುನಾವಣೆ ನಡೆಯಲು ಇನ್ನೂ ಒಂದೂಕಾಲು ವರ್ಷ ಇರುವಾಗಲೇ ರಾಜಕೀಯ ಉಪಕ್ರಮಕ್ಕೆ ನಾಂದಿ ಹಾಡಿದರು.

ಸಾಂಕ್ರಾಮಿಕದ ಮೂರನೇ ಅಲೆ ಇದ್ದಾಗ ರಾಜ್ಯದಾದ್ಯಂತ ಹಲವು ದಿನಗಳ ಅವಧಿಗೆ ವಿಸ್ತರಿಸಿಕೊಂಡ ಸಾರ್ವಜನಿಕ ಕಾರ್ಯಕ್ರಮವೊಂದನ್ನು ನಡೆಸುವುದು ಸೂಕ್ತವೇ ಎಂಬ ಬಗ್ಗೆ ಮೊದಲ ದಿನದಿಂದಲೇ ಪ್ರಶ್ನೆಗಳನ್ನು ಎತ್ತಲಾಗಿತ್ತು. ಅಂತಹ ಕಾರ್ಯಕ್ರಮಗಳ ಬಗ್ಗೆ ಏನೇ ಮುಂಜಾಗ್ರತೆ ತೆಗೆದುಕೊಂಡರೂ ಆ ಸಂದರ್ಭದ ನಡಿಗೆ, ಅದರಲ್ಲಿ ತೊಡಗಿಕೊಂಡವರು ಹಾಗೂ ಭಾಗವಹಿಸಿದವರ ಆರೋಗ್ಯದ ಮೇಲೆ ಉಂಟುಮಾಡುವ ಪ್ರತಿಕೂಲ ಪರಿಣಾಮಗಳ ಸಾಧ್ಯತೆಗಳನ್ನೂ ಗಮನದಲ್ಲಿ ಇರಿಸಿಕೊಳ್ಳಬೇಕು.

ನಿರೀಕ್ಷಿಸಿದಂತೆಯೇ, ಈ ಪಾದಯಾತ್ರೆಯು ಬಹಳಷ್ಟು ರಾಜಕೀಯ ವಿವಾದವನ್ನು ಸೃಷ್ಟಿಸಿತು. ಸಾಂಕ್ರಾಮಿಕ ಹಾಗೂ ಅದರ ಪರಿಣಾಮವನ್ನು ಕೆಪಿಸಿಸಿ ಅಧ್ಯಕ್ಷರು ಹಗುರವಾಗಿ ತೆಗೆದುಕೊಂಡರು. ಸರ್ಕಾರದ ಅಧಿಕಾರಿಗಳು ಮನವಿ ಮಾಡಿದರೂ ಆರ್‌ಟಿಪಿಸಿಆರ್ ಪರೀಕ್ಷೆ ಮಾಡಿಸಿಕೊಳ್ಳಲು ಅವರು ತಿರಸ್ಕರಿಸಿದರು. ಅವರ ಜೊತೆ ಪಾದಯಾತ್ರೆಯಲ್ಲಿ ಭಾಗವಹಿಸಿದ ಕೆಲವರು ಕೋವಿಡ್ ಸೋಂಕಿತರಾಗಿ ಪಾದಯಾತ್ರೆಯಿಂದ ದೂರ ಉಳಿದರು. ಅಂತಿಮವಾಗಿ, ಕೋವಿಡ್- 19 ಸಂಬಂಧಿತ ಪ್ರಕರಣಗಳ ಏರಿಕೆಯ ಹಿನ್ನೆಲೆಯಲ್ಲಿ ಕ್ರಮ ಕೈಗೊಳ್ಳಲು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಲು ಕರ್ನಾಟಕ ಹೈಕೋರ್ಟ್ ಮಧ್ಯಪ್ರವೇಶ ಅಗತ್ಯವಾಯಿತು. ಪಾದಯಾತ್ರೆಯನ್ನು ಇಚ್ಛೆಯಿಲ್ಲದೇ ತಾತ್ಕಾಲಿಕವಾಗಿ ನಿಲ್ಲಿಸಿದ ಕಾಂಗ್ರೆಸ್, ಆರೋಗ್ಯ ಸ್ಥಿತಿ ಸುಧಾರಿಸಿದ ಮೇಲೆ ಮತ್ತೆ ಮುಂದುವರಿಸುವುದಾಗಿ ಹೇಳಿತು. ಎರಡನೇ ಹಂತದ ಐದು ದಿನಗಳ ಅವಧಿಯ ಪಾದಯಾತ್ರೆಗೆ ಈ ತಿಂಗಳ 27ರಿಂದ ಚಾಲನೆ ದೊರೆಯಲಿದೆ ಎಂದು ಸಂಘಟಕರು ಈಗ ಪ್ರಕಟಿಸಿದ್ದಾರೆ.

ಕೆಪಿಸಿಸಿ ಅಧ್ಯಕ್ಷರ ನೇತೃತ್ವದ ಪಾದಯಾತ್ರೆ ಎರಡು ಉದ್ದೇಶಗಳನ್ನು ಸಾಧಿಸಿತು ಎಂಬುದರಲ್ಲಿ ಅನುಮಾನವಿಲ್ಲ. ಮೊದಲನೆಯದು, ಪಕ್ಷದ ಕಾರ್ಯಕರ್ತರಿಗೆ ಹುರುಪು ತುಂಬಿದಂತೆ ಕಾಣುತ್ತದೆ. ರಾಜ್ಯದಲ್ಲಿ ಪ್ರಮುಖ ವಿರೋಧ ಪಕ್ಷವಾಗಿದ್ದುಕೊಂಡೂ ವಾಸ್ತವವಾಗಿ ಹೆಚ್ಚಿನ ರಾಜಕೀಯ ಚಟುವಟಿಕೆಗಳು ಕಂಡುಬರುತ್ತಿರಲಿಲ್ಲ. ಪಾದಯಾತ್ರೆಯು, ಅದು ಮುಂದುವರಿದ ಸಮಯದುದ್ದಕ್ಕೂ ಪಕ್ಷದ ಕಾರ್ಯಕರ್ತರ ಶಕ್ತಿಗೆ ಬಲ ತುಂಬಿ ಅವರ ಉತ್ಸಾಹವನ್ನು ಪುನರುಜ್ಜೀವಗೊಳಿಸಿತು.

ಕರ್ನಾಟಕದಲ್ಲಿ ಆಡಳಿತಾರೂಢ ಬಿಜೆಪಿಯು ಕಾರ್ಯಸೂಚಿ ಮುಂದಿಡುತ್ತಿತ್ತು. ಕಾಂಗ್ರೆಸ್ಸಿನ ಕಸರತ್ತು ಅದಕ್ಕೆ ಪ್ರತಿಕ್ರಿಯೆ ರೂಪದಲ್ಲಿತ್ತು. ದೀರ್ಘ ಅವಧಿಗೆ ಅಂತಹ ಅವಕಾಶವನ್ನು ಕಾಂಗ್ರೆಸ್ ಮಾಡಿಕೊಟ್ಟಿತ್ತು. ಆ ಅರ್ಥದಲ್ಲಿ ಈ ಪಾದಯಾತ್ರೆಯು ರಾಜ್ಯದಾದ್ಯಂತ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಹೊಸ ಹುರುಪು ತುಂಬಲು ನೆರವಾಯಿತು.

ಎರಡನೆಯದಾಗಿ, ರಾಜ್ಯದಲ್ಲಿ ಪಕ್ಷದ ಇಬ್ಬರು ಪ್ರಮುಖ ನಾಯಕರಾದ ಕೆಪಿಸಿಸಿ ಅಧ್ಯಕ್ಷ ಶಿವಕುಮಾರ್, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಂದಾಗಿ ಮುನ್ನಡೆಯುವುದನ್ನೂ ಈ ಪಾದಯಾತ್ರೆ ಕಂಡಿತು. ಪಕ್ಷದ ನಾಯಕತ್ವವು ಪ್ರದರ್ಶಿಸಿದ ಈ ಏಕತೆ, ತನ್ನ ರಾಜಕೀಯ ಹಾಜರಿಯನ್ನು ಪ್ರತಿಪಾದಿಸಿಕೊಳ್ಳಲು ಪಕ್ಷಕ್ಕೆ ಬಲ ತುಂಬಿದಂತಾಯಿತು. ಈಗ, ಮತ್ತೊಂದು ವಿವಾದವು ಕೇಂದ್ರ ಸ್ಥಾನಕ್ಕೆ ಬರುವುದರೊಂದಿಗೆ ಪಾದಯಾತ್ರೆಯ ವಿಚಾರವು ಹಿನ್ನೆಲೆಗೆ ಸರಿದಿದೆ.

ಉಡುಪಿಯ ಶೈಕ್ಷಣಿಕ ಸಂಸ್ಥೆಯೊಂದರಲ್ಲಿ ಶುರುವಾದ ಹಿಜಾಬ್ ವಿವಾದವು ರಾಜ್ಯದಾದ್ಯಂತ ಪರಿಣಾಮ ಬೀರಿದೆ. ಇದು ರಾಷ್ಟ್ರ ಮಟ್ಟದಲ್ಲೂ ಸುದ್ದಿಯಾಗಿ ಗಮನ ಸೆಳೆದುಕೊಂಡಿದೆ. ಮೊಳಕೆಯಲ್ಲೇ ಚಿವುಟಬಹುದಾಗಿದ್ದಂತಹ ವಾಕ್ಸಮರವಿದು. ಪ್ರಕರಣಕ್ಕೆ ಸಂಬಂಧಿಸಿದ ಗುಂಪುಗಳು ಒಟ್ಟಾಗಿ ಕೂತು ಸಂಧಾನ ಮಾಡಿಕೊಂಡಿದ್ದಿದ್ದರೆ ವಿವಾದವು ಪರಿಹಾರವಾಗಿರುತ್ತಿತ್ತು. ಬದಲಾಗಿ, ಈ ವಿವಾದದಿಂದ ಗರಿಷ್ಠ ರಾಜಕೀಯ ಲಾಭ ದಕ್ಕಿಸಿಕೊಳ್ಳಲು ಒಂದು ಅವಕಾಶವಾಗಿ ಇದನ್ನು ರಾಜಕೀಯ ನಾಯಕರು ಕಂಡರು. ಅಲ್ಪಾವಧಿ ಗಳಿಕೆಗಳಿಗಾಗಿ, ದೀರ್ಘಾವಧಿಯ ಸಾಮಾಜಿಕ ಸೌಹಾರ್ದವನ್ನು ರಾಜಕೀಯ ವರ್ಗ ಬಿಟ್ಟುಕೊಟ್ಟಿತು.

ಸೂಕ್ಷ್ಮವಾದ ಸಾಮಾಜಿಕ ವಿವಾದಗಳಿಗೆ ಸಂಬಂಧಿಸಿದಂತೆ ಈ ಹಿಂದೆ ಆಗಿರುವಂತೆಯೇ, ಕೋರ್ಟ್ ಅಂಗಳಕ್ಕೆ ಈ ವಿವಾದವನ್ನು ತಳ್ಳುವುದು ಅನುಕೂಲಕರ ಎಂಬುದನ್ನು ರಾಜಕೀಯ ನಾಯಕರು ಕಂಡುಕೊಂಡರು. ನ್ಯಾಯಾಲಯದ ನಿರ್ಧಾರಕ್ಕಾಗಿ ಈಗ ಕಾಯಲಾಗುತ್ತಿದ್ದು, ಕೋರ್ಟ್ ತೀರ್ಪಿನಿಂದ ನಿರ್ಬಂಧಿತರಾಗಿರುವ ಸಾರ್ವಜನಿಕ ನಿಲುವನ್ನು ಎಲ್ಲ ರಾಜಕೀಯ ನಾಯಕರೂ ತಾಳುತ್ತಿದ್ದಾರೆ.

ಹೀಗಾಗಿ, ಚರ್ಚಿಸಲಾದ ಈ ಎರಡೂ ಪ್ರಕರಣಗಳಲ್ಲಿ ವಿವಾದದ ಚೆಂಡನ್ನು ನ್ಯಾಯಾಂಗದ ಅಂಗಳಕ್ಕೆ ಸರಿಸುವುದನ್ನು ರಾಜಕೀಯ ನೇತಾರರು ಆಯ್ಕೆ ಮಾಡಿಕೊಂಡಿದ್ದಾರೆ.

ನ್ಯಾಯಾಂಗದ ನಿರ್ದೇಶನಗಳನ್ನಷ್ಟೇ ಜಾರಿಗೊಳಿಸುತ್ತಿರುವುದಾಗಿ ಸಮರ್ಥಿಸಿಕೊಳ್ಳುತ್ತಾ ನ್ಯಾಯಾಂಗದ ತೀರ್ಪಿನ ಒಳಸುಳಿಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಈ ಮೂಲಕ ಯತ್ನಿಸುತ್ತಿದ್ದಾರೆ.

ರಾಜ್ಯ ವಿಧಾನಸಭೆ ಚುನಾವಣೆಗೆ ಒಂದೂಕಾಲು ವರ್ಷ ಬಾಕಿ ಇರುವ ಈ ಹಂತದಲ್ಲಿ ಕೇಳಬೇಕಾದ ಪ್ರಶ್ನೆ ಏನೆಂದರೆ, ಜನರ ನಿಜವಾದ ವಿಚಾರಗಳನ್ನು ರಾಜಕೀಯ ವರ್ಗವು ಪಕ್ಕಕ್ಕೆ ಸರಿಸಿಬಿಡುತ್ತಿದೆಯೇ?

ರಾಜ್ಯದಲ್ಲಿ ಜನರ ಮನಸ್ಸುಗಳ ಮೇಲೆ ಪರಿಣಾಮ ಬೀರುತ್ತಿರುವ ಎರಡು ಪ್ರಮುಖ ವಿಚಾರಗಳೆಂದರೆ ನಿರುದ್ಯೋಗ ಹಾಗೂ ಬೆಲೆ ಏರಿಕೆ ಎಂಬುದನ್ನು ಒಂದಾದ ಮೇಲೆ ಒಂದು ಸಮೀಕ್ಷೆಗಳು ತೋರಿವೆ. ಇದನ್ನು ಆಡಳಿತ ಹಾಗೂ ವಿರೋಧ ಪಕ್ಷಗಳು ತಮ್ಮ ಗಮನದ ಕೇಂದ್ರಬಿಂದು ಆಗಿಸಿಕೊಳ್ಳುತ್ತಿವೆಯೇ ಅಥವಾ ಜನರನ್ನು ಬಾಧಿಸುತ್ತಿರುವ ವಿಚಾರಗಳ ಬಗ್ಗೆ ಗಮನಹರಿಸಲು ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದಾಗಿ 'ವಿಚಾರಗಳ ಬರ'ವನ್ನು ಕಾಣುತ್ತಿದ್ದೇವೆಯೇ?

ಮುಂದಿನ ವರ್ಷ ಚುನಾವಣೆಗೆ ಸಿದ್ಧವಾಗುತ್ತಿರುವಂತೆಯೇ ಕಾಂಗ್ರೆಸ್ ಹಾಗೂ ಬಿಜೆಪಿಗೆ ಇರುವ ಸವಾಲು ಎಂದರೆ, ತಮ್ಮ ಪಕ್ಷಗಳನ್ನು ಏಕತೆಯ ರಂಗವಾಗಿ ಬಿಂಬಿಸುವುದು. ಭಿನ್ನ ದಿಕ್ಕುಗಳಿಗೆ ಎಳೆಯುವ ಬಣ ನಾಯಕರ ಗುಂಪುಗಳು ತಾವಲ್ಲ ಎಂಬುದನ್ನು ತೋರಿಸಿಕೊಳ್ಳಬೇಕಿದೆ. ಇಂತಹದೊಂದು ಒಗ್ಗಟ್ಟು ಪ್ರದರ್ಶನದ ದಿಕ್ಕಿನಲ್ಲಿ ಮುಂದೆ ಸಾಗಲು ಪಾದಯಾತ್ರೆಯು ಕಾಂಗ್ರೆಸ್‌ಗೆ ಸ್ವಲ್ಪಮಟ್ಟಿಗೆ ನೆರವಾಯಿತು.

2023ರ ಚುನಾವಣೆಯ ಪರೀಕ್ಷೆಯು ಏಕತೆ ಹಾಗೂ ನಾಯಕತ್ವದ ಪರೀಕ್ಷೆಯಾಗಿರುತ್ತದೆ. ರಾಜ್ಯ ಮಟ್ಟದಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿಯನ್ನು ಪ್ರತಿನಿಧಿಸುವವರ ನಾಯಕತ್ವ ಕೌಶಲವನ್ನು ಕರ್ನಾಟಕದ ಮತದಾರರು ಹೇಗೆ ಪರಿಭಾವಿಸುತ್ತಾರೆ? ಹಾಗೂ ಪ್ರತಿಯೊಂದು ಪಕ್ಷವೂ ಪ್ರದರ್ಶಿಸುವ ಏಕತೆಯು ಮುಖ್ಯವಾಗಿರುತ್ತದೆಯೇ?

1989ರಿಂದಲೂ ಕಂಡುಬರುತ್ತಿರುವಂತಹ, ಆಡಳಿತ ಪಕ್ಷವು ಹಿನ್ನಡೆ ಎದುರಿಸುವಂತಹ ಪ್ರವೃತ್ತಿಯನ್ನೇ ರಾಜ್ಯದ ಮತದಾರರು ಪುನರ್ ಪ್ರತಿಪಾದಿಸುವರೇ? ಅಥವಾ ಈ ಪ್ರವೃತ್ತಿಯನ್ನು ಬದಲಿಸುವರೇ ಎಂಬುದು ಈ ಮುಖ್ಯ ಅಂಶದಿಂದ ನಿರ್ಧಾರವಾಗಲಿದೆ.

ಚುರುಮುರಿ

ವರಿಷ್ಠ ವ್ರತ

• ಮಣ್ಣೆರಾಜು

'ಸಂಕ್ರಾಂತಿ ಮುಗಿದು ಶಿವರಾತ್ರಿ ಬರುತ್ತಿದ್ದರೂ ಸಚಿವ ಸಂಪುಟ ಪುನರ್‌ರಚನೆಯಾಗಲಿಲ್ಲ, ನಾನು ಮಂತ್ರಿಯಾಗಲಿಲ್ಲ...' ಶಾಸಕರು ಮಮ್ಮಲ ಮರುಗಿದರು.

'ಸಮಾಧಾನ ಮಾಡ್ಕೊಳ್ಳಿ, ಸಂಕ್ರಾಂತಿಯ ಎಳ್ಳು ಬೆಲ್ಲ ಮಿಸ್ಸಾದ್ರೂ ಯುಗಾದಿಯ ಬೇವು ಬೆಲ್ಲ ಸಿಗುತ್ತೆ ಅಂತ ಫ್ಯಾಮಿಲಿ ಜ್ಯೋತಿಷಿ ಹೇಳಿದ್ದಾರೆ' ಶಾಸಕರಿಗೆ ಪತ್ನಿ ಸಾಂತ್ವನ ಹೇಳಿದರು.

'ಪೂಜೆ-ಪುನಸ್ಕಾರ ಮಾಡಬೇಕಂತಾ?'

'ಹೌದು, ವರಿಷ್ಠ ವ್ರತ ಆಚರಿಸಿದರೆ ನಿಮಗಿರುವ ಶತ್ರು ಕಾಟ, ಪೈಪೋಟಿ ಪೀಡೆ, ಕುರ್ಚಿಭಂಗ ದೋಷಗಳು ಪರಿಹಾರವಾಗಿ, ಯುಗಾದಿ ವೇಳೆಗೆ ನೀವು ಮಂತ್ರಿಯಾಗಿ ಮನೆ ಮುಂದೆ ಗೂಟದ ಕಾರು ನಿಂತಿರುತ್ತದೆ. ನಾವು ಆನಂದವಾಗಿ ಯುಗಾದಿ ಆಚರಿಸಬಹುದು ಎಂದು ಜ್ಯೋತಿಷಿ ಹೇಳಿದ್ದಾರೆ. ನಾನು ನೇಮ, ನಿಷ್ಠೆಯಿಂದ ವರಿಷ್ಠ ವ್ರತ ಮಾಡುತ್ತಿದ್ದೇನೆ...'

'ಮಾಡು, ನಾನೂ ನಿತ್ಯ ವರಿಷ್ಠರ ಸ್ಮರಣೆ, ಭಜನೆ ಮಾಡ್ತೀನಿ' ಶಾಸಕರು ಖುಷಿಯಾದರು.

'ತಪ್ಪದೇ ಮಾಡಿ, ಹಾಗೇ ದೆಹಲಿಗೆ ಹೋಗಿ ವರಿಷ್ಠರ ದರ್ಶನ ಮಾಡಿ, ಅಡ್ಡಬಿದ್ದು ಬೇಡಿಕೊಂಡರೆ ಶೀಘ್ರ ಕಾರ್ಯಸಿದ್ಧಿಯಾಗುವುದಂತೆ. ದರ್ಶನ ದೊರೆಯದಿದ್ದರೆ ಅವರ ಮನೆ ಬಾಗಿಲಿಗೆ ಕೈ ಮುಗಿದು, ಕಾಯಿ ಒಡೆದು ಬಂದರೂ ಪುಣ್ಯ ಲಭಿಸುವುದಂತೆ. ವಿರೋಧಿಗಳ ಚಾಡಿ ಮಾತನ್ನು ಕಿವಿ ತುಂಬಿಕೊಂಡು ವರಿಷ್ಠರು ಕೋಪಗೊಂಡಿದ್ದಾರಂತೆ. ನೀವು ಪಕ್ಷನಿಷ್ಠೆ, ಅಭಿವೃದ್ಧಿ ಮಂತ್ರ ಜಪಿಸಿದರೆ ಅವರು ಶಾಂತರಾಗಿ ವರ ನೀಡುತ್ತಾರೆ ಎಂದು ಜ್ಯೋತಿಷಿ ಹೇಳಿದ್ದಾರೆ'.

'ವ್ರತ, ಜಪ ಮಾಡಿಯೂ ವರಿಷ್ಠರು ಮಂತ್ರಿ ಕುರ್ಚಿಯ ಕೃಪೆ ಮಾಡದಿದ್ದರೆ ಏನು ಮಾಡೋದು?' ಶಾಸಕರಿಗೆ ಆತಂಕ.

'ಇಷ್ಟೆಲ್ಲ ಮಾಡಿಯೂ ವರಿಷ್ಠರು ಒಲಿಯದಿದ್ದರೆ ಬೇರೆ ದಾರಿ ನೋಡಿಕೊಳ್ಳಬೇಕಷ್ಟೇ...'

'ಬೇರೆ ದಾರಿ ಯಾವುದಿದೆ?'

'ಇದೆ... ನೀವು ಪಕ್ಷ ಚೇಂಜ್ ಮಾಡಿ, ನಾನು ನಮ್ಮ ಫ್ಯಾಮಿಲಿ ಜ್ಯೋತಿಷಿಯನ್ನು ಚೇಂಜ್ ಮಾಡ್ತೀನಿ...' ಶಾಸಕರ ಪತ್ನಿ ಸಿಟ್ಟಿನಿಂದ ಹೇಳಿದರು.

ಸಂಗತ

ಅರಿಯುವ ಮುನ್ನ... ಕಲಿಸುವುದೇನನ್ನ?

ಅಧ್ಯಾಪಕರು ಸಂಶೋಧನಾ ಪ್ರಬಂಧಗಳ ಪ್ರಕಟಣೆಗೆ ತೋರುವ ಆಸಕ್ತಿಯನ್ನು ವಿದ್ಯಾರ್ಥಿಗಳನ್ನು ಅರಿಯಲೂ ತೋರುವಂತೆ ಮಾಡುವುದು ಈ ಹೊತ್ತಿನ ಅನಿವಾರ್ಯ

• ಎಚ್.ಕೆ.ಶರತ್

ಎಂಜಿನಿಯರಿಂಗ್ ಕಾಲೇಜೊಂದರ ವಾಹನ ನಿಲುಗಡೆ ತಾಣದಲ್ಲಿ ಮೂರ್ನಾಲ್ಕು ಮಂದಿ ಪ್ರಾಧ್ಯಾಪಕರು ಮಾತುಕತೆ ನಡೆಸುತ್ತಿದ್ದರು. ಒಬ್ಬರು, 'ಈ ದಡ್ಡರಿಗೆ ಹೇಗೆ ಪಾಠ ಮಾಡಿದ್ರೂ ಅರ್ಥ ಆಗಲ್ಲ. ಇವುಕ್ಕೆ ಹೇಗೆ ಹೇಳ್ಕೊಡೋದೊ ನಂಗಂತೂ ಗೊತ್ತಿಲ್ಲ' ಅಂತ ವಿದ್ಯಾರ್ಥಿಗಳ ಮೇಲೆ ತಮ್ಮ ಅಸಮಾಧಾನ ಹೊರಹಾಕತೊಡಗಿದರು. ಆ ಸಂದರ್ಭದಲ್ಲಿ ಅವರ ಸಮೀಪವೇ ಹಾದುಹೋದ ವಿದ್ಯಾರ್ಥಿನಿಯೊಬ್ಬಳು ತನ್ನ ಮುಖಭಾವದಲ್ಲೇ ಈ ಪ್ರಾಧ್ಯಾಪಕರ ಕುರಿತು ಅಸಮಾಧಾನ ಹೊರಹಾಕಿದಳು.

ಶಿಕ್ಷಕರಿಗೆ ತಮ್ಮ ವಿದ್ಯಾರ್ಥಿಗಳು ದಡ್ಡರಾಗಿಯೂ ವಿದ್ಯಾರ್ಥಿಗಳಿಗೆ ತಮ್ಮ ಶಿಕ್ಷಕರು ಕಲಿಸಲು ಅಸಮರ್ಥರಾಗಿಯೂ ತೋರತೊಡಗಿದರೆ ಕಲಿಕೆ ಎಂಬುದು ಮರೀಚಿಕೆಯಾಗುವುದರಲ್ಲಿ ಅನುಮಾನವಿದೆಯೇ? ತಪ್ಪನ್ನು ಮತ್ತೊಬ್ಬರ ಮೇಲೆ ಹೇರುವ ಮನೋಭಾವ ಗಾಢವಾಗಿ ಬೇರೂರಿರುವ ಸಮಾಜದ ಭಾಗವೇ ಆಗಿರುವ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಕೂಡ ಪರಸ್ಪರ ದೂರುವ ಪೈಪೋಟಿಯಲ್ಲಿ ನಿರತರಾಗಿರುವುದು ಪದವಿ ಹಂತದ ಕಾಲೇಜುಗಳಲ್ಲಿ ಸರ್ವೇಸಾಮಾನ್ಯವಾಗಿದೆ.

ಎಸ್‌ಎಸ್‌ಎಲ್‌ಸಿ ಹಾಗೂ ಪಿಯು ಹಂತದಲ್ಲಿ ಹೇಗಾದರೂ ಸರಿ ವಿದ್ಯಾರ್ಥಿಗಳು ಹೆಚ್ಚು ಅಂಕ ಗಳಿಸುವಂತೆ ನೋಡಿಕೊಳ್ಳುವಲ್ಲಿ ತಮ್ಮ ಹಿತ ಅಡಗಿದೆ ಎನ್ನುವ ಧೋರಣೆಗೆ ಶಿಕ್ಷಕರು ಶರಣಾಗಿರುತ್ತಾರೆ. ಅಂತಹವರು ವಿದ್ಯಾರ್ಥಿಗಳ ಮೇಲೆ ಅತಿಯಾದ ಒತ್ತಡ ಹೇರಿ, ಅವರು ಅತ್ಯಧಿಕ ಅಂಕಗಳನ್ನು ಪಡೆಯುವ ರೀತಿಯಲ್ಲಿ ತಯಾರು ಮಾಡುತ್ತಿರುವುದು ಗುಟ್ಟಿನ ವಿಷಯವೇನಲ್ಲ. ಎಸ್‌ಎಸ್‌ಎಲ್‌ಸಿ ಹಾಗೂ ಪಿಯುವಿನಲ್ಲಿ ಉನ್ನತ ಶ್ರೇಣಿ ಪಡೆಯುವ ಎಷ್ಟೋ ವಿದ್ಯಾರ್ಥಿಗಳು ಪದವಿಯಲ್ಲಿ ಪಾಸಾಗಲು ಕೂಡ ಪರದಾಡುತ್ತಿದ್ದಾರೆ.

ಎಸ್‌ಎಸ್‌ಎಲ್‌ಸಿಯಿಂದ ಪಿಯುವರೆಗಿನ ಹಂತದಲ್ಲಿ ಸಹಜ ಕಲಿಕೆಗೆ ಬೆನ್ನು ತೋರಿ ಅಂಕಗಳು ಹಾಗೂ ಪ್ರವೇಶ ಪರೀಕ್ಷೆಗಳ ರ‍್ಯಾಂಕುಗಳ ಹಿಂದೆ ಬೀಳುವ ವಿದ್ಯಾರ್ಥಿಗಳಿಗೆ ಶಿಕ್ಷಣದ ಮಹತ್ವ ಮತ್ತು ಅಸಲಿಗೂ ಕಲಿಕೆ ಎಂದರೆ ಏನು ಮತ್ತು ಅದು ಸಾಧ್ಯವಾಗುವುದು ಹೇಗೆ ಎಂದು ಮನದಟ್ಟು ಮಾಡಿಸುವ ಗುರುತರ ಜವಾಬ್ದಾರಿ ಪದವಿ ಹಂತದ ಶಿಕ್ಷಕರ ಹೆಗಲೇರಿದೆ. 'ಪಾಠ ಮಾಡುವುದು ನಮ್ಮ ಜವಾಬ್ದಾರಿ. ಕಲಿಯುವುದು ಬಿಡುವುದು ಅವರಿಗೆ ಬಿಟ್ಟಿದ್ದು. ಪದವಿ ಹಂತ ತಲುಪಿದರೂ ಓದಿನೆಡೆಗೆ ಆಸಕ್ತಿ ಇಲ್ಲ ಅಂದ್ರೆ ನಾವೇನು ಮಾಡೋಕಾಗುತ್ತೆ' ಎಂಬ ಮನೋಭಾವ ಬದಲಿಸಿಕೊಳ್ಳಲು ಎಷ್ಟೋ ಪ್ರಾಧ್ಯಾಪಕರು ತಯಾರಿಲ್ಲ. ಅಂತಹವರು 'ಈ ದಡ್ಡರಿಗೆ ಕಲ್ಸೋಕೆ ನಮ್ಮಿಂದಂತೂ ಸಾಧ್ಯವಿಲ್ಲ' ಎನ್ನುವ ಹೊಣೆಗೇಡಿ ನಿಲುವಿಗೆ ಜೋತುಬೀಳತೊಡಗಿದ್ದಾರೆ.

ಕಲಿಕೆಯ ಗುಣಮಟ್ಟ ಸುಧಾರಣೆಗೆ ಶಿಕ್ಷಕರು ಅಳವಡಿಸಿಕೊಳ್ಳಬೇಕಿರುವ ಬೋಧನಾ ವಿಧಾನ ಮತ್ತು ನಡೆಸಬೇಕಿರುವ ಪೂರ್ವತಯಾರಿ ಕುರಿತ ತರಬೇತಿಗೆ ಮುಕ್ತ ಮನಸ್ಸಿನಿಂದ ತಮ್ಮನ್ನು ಒಡ್ಡಿ ಕೊಳ್ಳಲು ಸಹ ಬಹಳಷ್ಟು ಪ್ರಾಧ್ಯಾಪಕರು ಸಿದ್ಧರಿಲ್ಲ. ಬೋಧಿಸಲು ವಿಷಯಜ್ಞಾನ ಮತ್ತು ತಕ್ಕಮಟ್ಟಿನ ಸಂವಹನ ಕೌಶಲವಷ್ಟೇ ಇದ್ದರೆ ಸಾಕು, ಉಳಿದದ್ದೆಲ್ಲವೂ ಕೆಲಸಕ್ಕೆ ಬಾರದ ಕಸರತ್ತು ಎನ್ನುವ ಧೋರಣೆಗೆ ಜೋತು ಬಿದ್ದಿದ್ದಾರೆ.

'ವಿದ್ಯಾರ್ಥಿಗಳನ್ನು ಅರಿಯಲು ಸಾಧ್ಯವಾಗದಿದ್ದರೆ, ಅವರಿಗೆ ಪರಿಣಾಮಕಾರಿಯಾಗಿ ಕಲಿಸಲೂ ಸಾಧ್ಯವಾಗದು. ಶಿಕ್ಷಕನಾದವನು ತನ್ನ ವಿದ್ಯಾರ್ಥಿಯನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಬೇಕು' ಎಂಬ ಪಾಠ ಶಿಕ್ಷಕರ ತರಬೇತಿ ಕಾರ್ಯಾಗಾರಗಳಲ್ಲಿ ಮೇಲಿಂದ ಮೇಲೆ ಕಿವಿಗೆ ಬಿದ್ದರೂ ಅದನ್ನು ನಮ್ಮ ಪದವಿ ಹಂತದ ಶಿಕ್ಷಣ ಸಂಸ್ಥೆಗಳಲ್ಲಿನ ಪ್ರಾಧ್ಯಾಪಕರು ಎಷ್ಟು ಗಂಭೀರವಾಗಿ ಪರಿಗಣಿಸಿದ್ದಾರೆ ಎಂಬುದು ಪ್ರಶ್ನಾರ್ಹ.

ಶಿಕ್ಷಕರ ಕುರಿತ ಚರ್ಚೆಗಳು ಬಹುತೇಕ ಸಂದರ್ಭಗಳಲ್ಲಿ ನೌಕರಿಯ ಕಾಯಮಾತಿ, ವೇತನ ತಾರತಮ್ಯದ ಕುರಿತೇ ಕೇಂದ್ರಿತವಾಗಿರುತ್ತವೆಯೇ ವಿನಾ ಗುಣಮಟ್ಟದ ಶಿಕ್ಷಕರನ್ನು ರೂಪಿಸಲು ನಮ್ಮ ಶೈಕ್ಷಣಿಕ ವ್ಯವಸ್ಥೆಗೆ ಸಾಧ್ಯವಾಗುತ್ತಿದೆಯೇ ಎಂಬ ಪ್ರಶ್ನೆ ಸಮಾಜವನ್ನು ಬಾಧಿಸುತ್ತಿರುವಂತೆ ತೋರುತ್ತಿಲ್ಲ. ವಿದ್ಯಾರ್ಥಿಗಳಿಗೆ ದಡ್ಡರ ಹಣೆಪಟ್ಟಿ ಅಂಟಿಸಿ ತಮ್ಮ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವ ಪ್ರಾಧ್ಯಾಪಕರಿಗೆ ಮೊದಲು ಬೋಧನೆ-ಕಲಿಕೆಯ ಪ್ರಾಥಮಿಕ ಪಾಠಗಳನ್ನು ಬೋಧಿಸುವುದು ಆದ್ಯತೆಯಾಗ ಬೇಕಲ್ಲವೇ? ಬೋಧನೆಯ ಜೊತೆಗೆ ಸಂಶೋಧನಾ ಚಟುವಟಿಕೆಗಳಲ್ಲೂ ಹೆಚ್ಚಾಗಿ ತೊಡಗಿಸಿಕೊಳ್ಳಬೇಕಿರುವ ಬಾಹ್ಯ ಒತ್ತಡಕ್ಕೆ ಒಳಗಾಗುತ್ತಿರುವ ಅಧ್ಯಾಪಕರು, ವೃತ್ತಿ ಬದುಕಿನಲ್ಲಿ ಮೇಲೇರಲು ಅಗತ್ಯವಿರುವ ಸಂಶೋಧನಾ ಪ್ರಬಂಧಗಳ ಪ್ರಕಟಣೆಗೆ ತೋರುವ ಆಸಕ್ತಿಯನ್ನು ವಿದ್ಯಾರ್ಥಿಗಳನ್ನು ಅರಿಯಲೂ ತೋರುವಂತೆ ಮಾಡುವುದು ಈ ಹೊತ್ತಿನ ಅನಿವಾರ್ಯವೂ ಹೌದು.

ಕೊರೊನಾ ಕಾರಣಕ್ಕೆ ಎರಡು ವರ್ಷಗಳಿಂದ ಸರಿಯಾಗಿ ಶಾಲಾ-ಕಾಲೇಜುಗಳಿಗೆ ಹಾಜರಾಗದಿದ್ದ ವಿದ್ಯಾರ್ಥಿಗಳು ಇತ್ತೀಚೆಗಿನ ಹಿಜಾಬ್ ವಿವಾದದಿಂದ ಮತ್ತಷ್ಟು ದಿಕ್ಕು ತಪ್ಪಿದ್ದಾರೆ. ಕಲಿಕೆಗೆ ಬೆನ್ನು ತೋರಲು ವಿದ್ಯಾರ್ಥಿಗಳನ್ನು ಪ್ರಚೋದಿಸುವ ಅಂಶಗಳೇ ಸಮಾಜದಲ್ಲಿ ಬೇರೂರಿವೆ. ಆರ್ಥಿಕ, ಸಾಮಾಜಿಕ, ಕೌಟುಂಬಿಕ, ಮಾನಸಿಕ ಸಮಸ್ಯೆಗಳೆಲ್ಲವೂ ತೀವ್ರವಾಗಿರುವ ಇಂತಹ ಸಂದರ್ಭದಲ್ಲಿ ವಿದ್ಯಾರ್ಥಿಗಳು ಮುಕ್ತ ಮನಸ್ಸಿನಿಂದ ಕಲಿಕೆಯಲ್ಲಿ ತೊಡಗಿಕೊಳ್ಳುವುದು ಹೇಗೆ ಸಾಧ್ಯ?

ಈ ಸವಾಲು ಮೆಟ್ಟಿ ನಿಲ್ಲುವ ಬದ್ಧತೆ ಮತ್ತು ಸಿದ್ಧತೆ ನಮ್ಮ ಶಿಕ್ಷಕರ ವಲಯದಲ್ಲಿ ಇದೆಯೇ? ಕಣ್ಣೆದುರಿನ ವಾಸ್ತವವು ನಿರಾಶೆಯ ನೆರಳನ್ನೇ ಹೊದಿಸುತ್ತಿಲ್ಲವೇ?

ವಾಚಕರ ವಾಣಿ

ಪಾಸ್‌ಪೋರ್ಟ್ ಕೇಂದ್ರ ವ್ಯಾಪಾರದ ಸ್ಥಳವೇ?

ನನ್ನ ಮತ್ತು ನನ್ನ ಮಗಳ ಪಾಸ್‌ಪೋರ್ಟ್ ಅವಧಿ ಮುಗಿದಿತ್ತು. ಅವನ್ನು ನವೀಕರಿಸಲು ಇತ್ತೀಚೆಗೆ ಮಧ್ಯಾಹ್ನ ನಿಗದಿಯಂತೆ ಬೆಂಗಳೂರಿನ ಲಾಲ್‌ಬಾಗ್ ಹತ್ತಿರದ ಪಾಸ್‌ಪೋರ್ಟ್ ಕಚೇರಿಗೆ ಹೋದೆವು. ಮೊದಲ ಕೌಂಟರಿಗೆ ಹೋಗಿ ಕುಳಿತು ಪ್ರಕ್ರಿಯೆ ಮುಗಿಯುವ ಹೊತ್ತಿಗೆ 'ನಿಮಗೆ ಪಾಸ್‌ಪೋರ್ಟ್ ಕವರ್ ಬೇಕಾ?' ಎಂದು ಕೇಳಿದರು. ಅವರೇ ಕೆಲವು ಚಿತ್ರಗಳನ್ನು ತೋರಿಸಿ, 'ಯಾವುದು ಬೇಕು?' ಎಂದು ಕೇಳಿ, ಇವಕ್ಕೆ ಇಂತಿಷ್ಟು ಎಂದು ಹೇಳಿದರು. 'ಒಳ್ಳೆಯ ಕವರಿಗೆ 500 ರೂಪಾಯಿ' ಎಂದರು. ಸರಿ ಎಂದು ಒಪ್ಪಿದೆವು. ನಂತರ 'ನಿಮಗೆ ಪಾಸ್‌ಪೋರ್ಟ್ ಯಾವಾಗ ಬರುತ್ತದೆ' ಎಂದು ಇ- ಮೇಲ್‌ನಲ್ಲಿ ಸಂದೇಶ ಬರಬೇಕಾದರೆ 50 ರೂಪಾಯಿ ಎಂದರು. ಅನಿವಾರ್ಯವಾಗಿ ಒಪ್ಪಿದೆವು. ಎರಡು ದಿನ ಆದ ಮೇಲೆ ಪಾಸ್‌ಪೋರ್ಟ್ ಬಂತು. ನಾಲ್ಕು ದಿನ ಆದ ಮೇಲೆ ಕವರ್‌ಗಳು ಬಂದವು.

ಕಚೇರಿಯಲ್ಲೇ ಇರುವ ಜೆರಾಕ್ಸ್ ಮಾಡಿಕೊಡುವ ಹುಡುಗಿಯು ಚಿಲ್ಲರೆ ಕೊಡದೆ 'ಆಮೇಲೆ ಪಡೆದುಕೊಳ್ಳಿ' ಎಂದು ಕಳಿಸುತ್ತಿದ್ದುದನ್ನು, ಕೆಲವರು ಚಿಲ್ಲರೆ ಕೊಡಿ ಎಂದು ಜಗಳವಾಡುತ್ತಿದ್ದುದನ್ನು ಕಂಡೆ. ಎಂಥ ವ್ಯಾಪಾರದ ತಾಣವಾಗಿದೆ ಪಾಸ್‌ಪೋರ್ಟ್ ಕೇಂದ್ರ ಎನಿಸಿತು. ಸಾವಿರಾರು ಜನ ಬರುವ ಆ ಕೇಂದ್ರದಲ್ಲಿ ಈ ರೀತಿ ದುಡ್ಡು ಪೀಕುವ ಕೆಲಸ ಎಗ್ಗಿಲ್ಲದೇ ನಡೆಯುತ್ತಿದೆ. ಬರುವ ಗ್ರಾಹಕರಿಗೆ ಚಿಲ್ಲರೆ ದುಡ್ಡು ಲೆಕ್ಕಕ್ಕೆ ಸಿಗುವುದಿಲ್ಲ. ನೂರೋ ಐವತ್ತೋ ನೋಟು ಕೊಟ್ಟವರು ನೆನಪು ಬಂದರೆ ಕೇಳುತ್ತಿದ್ದರು. ಕೆಲವರಿಗೆ ಸದ್ಯ ಕೆಲಸ ಆದರೆ ಸಾಕು ಎಂಬ ಮನಃಸ್ಥಿತಿ ಇರುತ್ತದೆ. ಗ್ರಾಹಕರ ಇಂತಹ ಮನಃಸ್ಥಿತಿಯನ್ನು ಚೆನ್ನಾಗಿ ಬಲ್ಲ ಅಲ್ಲಿನವರು ಅವ್ಯಾಹತವಾಗಿ ವ್ಯಾಪಾರದಲ್ಲಿ ತೊಡಗಿದ್ದಾರೆ. ಸಂಬಂಧಪಟ್ಟವರು ಇತ್ತ ಗಮನಹರಿಸಿ ಸರಿಪಡಿಸುವ ಪ್ರಯತ್ನ ನಡೆಸಲಿ.

ಮಲ್ಲತ್ತಹಳ್ಳಿ ಡಾ. ಎಚ್.ತುಕಾರಾಂ, ಬೆಂಗಳೂರು

ತೆರಿಗೆ ಹಣದ ಸ್ಥಿತಿಗತಿ ಜನರಿಗೆ ತಿಳಿಯಲಿ

ಒಂದು ದಿನದ ಕಲಾಪಕ್ಕೆ ಕೋಟಿಗಟ್ಟಲೆ ಹಣ ಖರ್ಚಾಗುತ್ತದೆ ಎಂಬುದು ನನ್ನಂಥ ಸಾಮಾನ್ಯರಿಗೆ ಇತ್ತೀಚೆಗಷ್ಟೇ ಮಾಧ್ಯಮಗಳ ಮುಖಾಂತರ ತಿಳಿದಾಗ, ನಮ್ಮ ತೆರಿಗೆ ಹಣವನ್ನು ಸರ್ಕಾರ ಎಷ್ಟು ಜವಾಬ್ದಾರಿಯುತವಾಗಿ ನಿರ್ವಹಣೆ ಮಾಡಬಹುದು ಎಂದು ತಿಳಿದುಕೊಳ್ಳುವ ಕುತೂಹಲ ಸಹಜವಾಗಿ ಶುರುವಾಗಿದೆ. ವಿಧಾನ ಮಂಡಲದ ಕಲಾಪವು ಐದು ದಿನಗಳಿಂದ ಸುಸೂತ್ರವಾಗಿ ನಡೆಯದೇ ಇದ್ದುದರಿಂದ ನಮ್ಮ ತೆರಿಗೆ ಹಣ ಉಳಿತಾಯ ಆಗಿದೆಯೋ ಅಥವಾ ನಷ್ಟವಾಗಿದೆಯೋ ಎಂದು ಜನಸಾಮಾನ್ಯರಿಗೆ ತಿಳಿಸುವ ಜವಾಬ್ದಾರಿ ಯಾರದು?

ಸಾಮಾನ್ಯವಾಗಿ ಮತದಾರನ ಆಶಯಗಳಿಗೆ ಅನುಗುಣವಾಗಿ ಸದನದ ಕಲಾಪ ನಡೆದರೆ ಅದು ಲಾಭ, ಉಳಿದಂತೆ ಸುಸೂತ್ರವಾಗಿ ನಡೆಯದ ಕಲಾಪವು ಕೋಟಿಗಟ್ಟಲೆ ತೆರಿಗೆ ಹಣದ ನಷ್ಟಕ್ಕೆ ಕಾರಣವಾಗುವುದಲ್ಲದೆ ಮತದಾರನ ಆಶಯಗಳಿಗೆ ವಿರುದ್ಧವಾದ ನಡೆಯಾಗುತ್ತದೆ. ಆದ್ದರಿಂದ ಮತದಾರನ ಪರವಾಗಿ ಸದನದಲ್ಲಿರುವ ಜನಪ್ರತಿನಿಧಿಗಳು ಸುಸೂತ್ರವಾಗಿ ನಡೆಯದ ಕಲಾಪಗಳಿಗೆ ಕಾರಣವಾಗುವ ಅಂಶಗಳನ್ನು ತಡೆಯುವ ಮೂಲಕ ಜನಹಿತ ಮನೋಭಾವ ತೋರುವಂತಾಗಬೇಕು. ಈ ದಿಸೆಯಲ್ಲಿ ಸರ್ವ ಪಕ್ಷಗಳೂ ಚಿಂತನೆ ನಡೆಸಲಿ.

ಡಾ. ಜಿ.ಬೈರೇಗೌಡ, ಬೆಂಗಳೂರು

ಅನು(ರಕ್ತ)!

ಪ್ರೇಮಿಗಳ ದಿನದಂದು (ಫೆ. 14)
ನಡೆಯಿತು ಅನೇಕ ಕಡೆ
ರಕ್ತದಾನ ಕಾರ್ಯಕ್ರಮ!
ಆಶ್ಚರ್ಯವೇನು?
ಅನುರಕ್ತರಿಂದ
ರಕ್ತದಾನ!

ಸಿ.ಪಿ.ಕೆ., ಮೈಸೂರು

ಕಸಾಪ: ಸದಸ್ಯರ ವಿಂಗಡಣೆ ತರವೇ?

ಕನ್ನಡ ಸಾಹಿತ್ಯ ಪರಿಷತ್ತಿನ ಉಪ ನಿಯಮಗಳಿಗೆ ತಿದ್ದುಪಡಿ ತರಲು ಮುಂದಾಗಿರುವ ಪರಿಷತ್ತಿನ ನೂತನ ಅಧ್ಯಕ್ಷರ ಆತುರದ ನಡೆ ಪೂರ್ವಗ್ರಹಪೀಡಿತವೆಂಬುದು ಅವರ ಕಾರ್ಯಸೂಚಿಯಲ್ಲೇ ಬಯಲುಗೊಂಡಿದೆ. ಪರಿಷತ್ತು ಎಂದರೆ ಕೇವಲ ಸದಸ್ಯರಲ್ಲ. ಅದರಲ್ಲೂ ಸದಸ್ಯರನ್ನು ಅಕ್ಷರಸ್ಥರು, ಅನಕ್ಷರಸ್ಥರೆಂದು ವಿಂಗಡಿಸುವುದರ ಹಿಂದಿನ ಘನ ಉದ್ದೇಶವಾದರೂ ಏನು? ಪರಿಷತ್ತಿಗೆ ಸಾಂಸ್ಥಿಕ ನೆಲೆಗಟ್ಟು ತಂದುಕೊಟ್ಟ ಅನಕ್ಷರಸ್ಥ ಜನಪದರ ಕೊಡುಗೆ ಹಿರಿದು. ಉದ್ದೇಶಿತ ತಿದ್ದುಪಡಿಗಳು ಸದಸ್ಯರ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸಿ ಅಧಿಕಾರ ಕೇಂದ್ರೀಕರಣಕ್ಕೆ ಕಾರಣವಾಗುವ ಸಾಧ್ಯತೆಯಿದೆ. ಹೀಗಾಗಿ ಕರಡು ಪ್ರತಿಯನ್ನು ಸರ್ವಸದಸ್ಯರ ಮಹಾಸಭೆಯಲ್ಲಿ ಮಂಡಿಸಿ, ಕಾನೂನಾತ್ಮಕವಾಗಿದ್ದರೆ ಅನುಮೋದನೆ ಪಡೆದು ಮುಂದುವರಿಯಬೇಕು.

ವೈ.ನರೇಶ ಬಾಬು, ಶಿರಾ

ಸಂದರ್ಶನದ ಅಂಕ ಇಳಿಕೆ ಸ್ವಾಗತಾರ್ಹ

ಕರ್ನಾಟಕ ಲೋಕಸೇವಾ ಆಯೋಗ ತನ್ನ ಅನೇಕ ಹಗರಣಗಳ ಮೂಲಕ ನಾಡಿನ ಜನರ ವಿಶ್ವಾಸವನ್ನೇ ಕಳೆದುಕೊಂಡು ತನ್ನ ಘನತೆಯನ್ನು ಇಲ್ಲವಾಗಿಸಿಕೊಂಡ ಈ ಸಂದಿಗ್ಧ ಸಮಯದಲ್ಲಿ, ಸಂದರ್ಶನದ ಅಂಕಗಳನ್ನು ಸರ್ಕಾರವು 25ಕ್ಕೆ ಇಳಿಸಲು ನಿರ್ಧರಿಸಿರುವುದು ಸ್ವಾಗತಾರ್ಹ ಮತ್ತು ಶ್ಲಾಘನೀಯ!

ಈ ಮೊದಲು ಈ ವ್ಯಕ್ತಿತ್ವ ಪರೀಕ್ಷೆಗೆ 200 ಅಂಕ ಇತ್ತು. ಆ ಸಮಯದಲ್ಲಿ ಲಿಖಿತ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಅಭ್ಯರ್ಥಿ ಮೌಖಿಕ ಪರೀಕ್ಷೆಯಲ್ಲಿ ಕನಿಷ್ಠ ಅಂಕ ಪಡೆದು ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಾದ ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ಹುದ್ದೆಗಳಿಂದ ವಂಚಿತರಾಗುತ್ತಿದ್ದರು. ಅಲ್ಲದೆ ಲಿಖಿತ ಪರೀಕ್ಷೆಯಲ್ಲಿ ಕಡಿಮೆ ಅಂಕ ಪಡೆದ ಅಭ್ಯರ್ಥಿ ವ್ಯಕ್ತಿತ್ವ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದು ಗೆಜೆಟೆಡ್ ಹುದ್ದೆಗೆ ಏರುತ್ತಿದ್ದರು! ಆ ಸಮಯದಲ್ಲಿ ಪ್ರಭಾವ ಮತ್ತು ಹಣದ ಕಾಣದ ಕೈಗಳು ಕೆಲಸ ಮಾಡುತ್ತಿದ್ದವು. ಇದನ್ನು ಅನೇಕರು ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟ ಬಳಿಕ 200 ಅಂಕಗಳ ಮೌಖಿಕ ಪರೀಕ್ಷೆಯನ್ನು 50 ಅಂಕಗಳಿಗೆ ಇಳಿಸಲಾಗಿತ್ತು. ಆ ಸಂದರ್ಭದಲ್ಲಿಯೂ ಹಣ ಹಾಗೂ ಪ್ರಭಾವ ಕೆಲಸ ಮಾಡುತ್ತಲೇ ಇದ್ದವು. ಆದರೆ ಮೊದಲಿಗಿಂತ ಹಾವಳಿ ಕಡಿಮೆಯಾಯಿತು. ಈಗ ಸರ್ಕಾರ ಈ ಅಂಕವನ್ನು ಇನ್ನಷ್ಟು ಇಳಿಸುವ ಮೂಲಕ ಪ್ರಭಾವ ಮತ್ತು ಹಣದ ಕೈಚಳಕಕ್ಕೆ ಹೆಚ್ಚಿನ ಕಡಿವಾಣ ಹಾಕಿದಂತಾಗಿದೆ.

ಮೌಖಿಕ ಪರೀಕ್ಷೆಯಲ್ಲಿ ಅಭ್ಯರ್ಥಿ ಪ್ರತಿಶತ 80 ಅಂಕಗಳಿಗಿಂತ ಹೆಚ್ಚು ಮತ್ತು ಪ್ರತಿಶತ 20 ಅಂಕಗಳಿಗಿಂತ ಕಡಿಮೆ ಅಂಕ ಗಳಿಸಿದಲ್ಲಿ ಸಂದರ್ಶನ ಮಂಡಳಿಯ ಸದಸ್ಯರು ಕಾರಣಗಳನ್ನು ದಾಖಲಿಸಬೇಕೆಂಬ ನಿಯಮ ತಂದಿರುವುದು ಸಹ ಮತ್ತೊಂದು ಪ್ರಶಂಸನೀಯ ಕಾರ್ಯ. ಆಯ್ಕೆಯಲ್ಲಿ ಸಂಪೂರ್ಣ ಪಾರದರ್ಶಕತೆಯನ್ನು ತರಬೇಕೆಂದರೆ ಪಿಎಸ್‌ಐ ಪರೀಕ್ಷೆಯಲ್ಲಿ ಹೊಸ ನಿಯಮ ತಂದಂತೆ ಮೌಖಿಕ ಪರೀಕ್ಷೆಯನ್ನೇ ಇಲ್ಲದಂತೆ ಮಾಡಬೇಕು.

ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಜ್ಯ ಸರ್ಕಾರದ ಎಸ್‌ಸಿ, ಎಸ್‌ಟಿ, ಅಹಿಂಸಾ ನೌಕರರ ಮುಂಬಡ್ತಿ ನೀತಿ

ಬಡ್ತಿ ಮೀಸಲು ಕಗ್ಗಂಟು

• ರಾಜೇಶ್ ರೈ ಚಟ್ಲ

ರಾಜ್ಯ ಸರ್ಕಾರಿ ನೌಕರರ ಬಡ್ತಿ ಮೀಸಲು ವಿವಾದ ಮತ್ತೆ ಮುನ್ನೆಲೆಗೆ ಬಂದಿದೆ. ಈ ವಿಷಯಕ್ಕೆ ಸಂಬಂಧಿಸಿದ ವ್ಯಾಜ್ಯಗಳು 30 ವರ್ಷಗಳಿಂದ ವಿವಿಧ ನ್ಯಾಯಾಲಯಗಳಲ್ಲಿವೆ. ತೀರ್ಪುಗಳು ಬಂದಾಗಲೆಲ್ಲ ಪರಿಶಿಷ್ಟ ಜಾತಿ (ಎಸ್‌ಸಿ), ಪರಿಶಿಷ್ಟ ವರ್ಗ (ಎಸ್‌ಟಿ), ಅಲ್ಪಸಂಖ್ಯಾತ, ಹಿಂದುಳಿದ, ಸಾಮಾನ್ಯ (ಅಹಿಂಸಾ) ವರ್ಗದ ನೌಕರರ ನಡುವೆ ಸಂಚಲನ ಉಂಟಾಗುತ್ತಿದೆ. ನ್ಯಾಯಮೂರ್ತಿ ಎಲ್. ನಾಗೇಶ್ವರರಾವ್ ನೇತೃತ್ವದ ಸಂಜೀವ್ ಖನ್ನಾ ಮತ್ತು ಬಿ.ಆರ್. ಗವಾಯಿ ಅವರನ್ನೊಳಗೊಂಡ ತ್ರಿಸದಸ್ಯ ಪೀಠವು ಜ. 28ರಂದು ನೀಡಿದ ಮಧ್ಯಂತರ ಆದೇಶ, ಬಡ್ತಿ ಮೀಸಲು ನೀತಿಗೆ ಹೊಸ ವ್ಯಾಖ್ಯೆ ನೀಡಿದೆ.

ಎಸ್‌ಸಿ, ಎಸ್‌ಟಿ ನೌಕರರಿಗೆ ಸರ್ಕಾರಿ ನೌಕರಿಯಲ್ಲಿ ಬಡ್ತಿ ಮೀಸಲು ನೀಡಲು ಮಾನದಂಡ ರೂಪಿಸಬೇಕೆಂಬ ಕೋರಿಕೆಯನ್ನು ಪೀಠವು ತಿರಸ್ಕರಿಸಿದೆ. 'ಈ ಸಮುದಾಯಗಳ ನೌಕರರಿಗೆ ಅಗತ್ಯ ಪ್ರಾತಿನಿಧ್ಯ ಇಲ್ಲ ಎಂಬುದನ್ನು ದತ್ತಾಂಶಗಳ ಮೂಲಕ ರಾಜ್ಯ ಸರ್ಕಾರವೇ ಸ್ಥಾಪಿಸಬೇಕು' ಎಂದಿದೆ. ಎಸ್‌ಸಿ, ಎಸ್‌ಟಿ ಸಮುದಾಯದ ನೌಕರರಿಗೆ ಅಗತ್ಯ ಪ್ರಾತಿನಿಧ್ಯ ಇಲ್ಲ ಎಂಬುದನ್ನು ಇಡೀ ಸೇವೆಯಲ್ಲಿ ಅಥವಾ ವರ್ಗದಲ್ಲಿರುವ ಪ್ರಾತಿನಿಧ್ಯದ ಆಧಾರದಲ್ಲಿ ನಿರ್ಧರಿಸುವಂತಿಲ್ಲ. ಯಾವ ಶ್ರೇಣಿ ಅಥವಾ ಹುದ್ದೆಯ ವರ್ಗಕ್ಕೆ ಬಡ್ತಿ ಕೇಳಲಾಗಿದೆಯೋ ಆ ಶ್ರೇಣಿ ಅಥವಾ ಹುದ್ದೆ ವರ್ಗದಲ್ಲಿ ಪ್ರಾತಿನಿಧ್ಯ ಎಷ್ಟಿದೆ ಎಂಬುದನ್ನು ನೋಡಿಕೊಂಡು ನಿರ್ಧರಿಸಬೇಕು ಎಂದು ಪೀಠವು ಆದೇಶಿಸಿದೆ. ಈ ಆದೇಶವು ಸದ್ಯ ಜಾರಿಯಲ್ಲಿರುವ ಬಡ್ತಿ ಮೀಸಲಾತಿ ನೀತಿಯನ್ನೇ ಪ್ರಶ್ನಿಸುವಂತಿದೆ.

'ಮೀಸಲಾತಿ ಪ್ರಮಾಣವು ಶೇಕಡಾ 50ರಷ್ಟನ್ನು ಮೀರಬಾರದು. ಬ್ಯಾಕ್‌ಲಾಗ್ ಹುದ್ದೆಗಳನ್ನು ಹಿಂದಿನ ಅವಧಿಯಿಂದ ನೀಡುವ ಅಗತ್ಯ ಇಲ್ಲ. ಒಟ್ಟು ವೃಂದವನ್ನು ಗಣನೆಗೆ ತೆಗೆದುಕೊಂಡು ಮಾದರಿ ಪದ್ಧತಿ ಅನುಸರಿಸಿ ಬಡ್ತಿ ಮೀಸಲಾತಿ ನೀಡಬೇಕು ಎಂದು ರತ್ನಪ್ರಭಾ ಸಮಿತಿ ವರದಿ ಸಲ್ಲಿಸಿತ್ತು. ಈ ವರದಿಯ ಆಧಾರದಲ್ಲಿ, ಸುಪ್ರೀಂ ಕೋರ್ಟ್ ಬಿ.ಕೆ. ಪವಿತ್ರ- 2 ತೀರ್ಪು ನೀಡಿರುವುದನ್ನು ಮರು ಪರಿಶೀಲಿಸಬೇಕು. ಹುದ್ದೆ ಆಧಾರಿತ ಪ್ರಾತಿನಿಧ್ಯ ಗುರುತಿಸಬೇಕು. ಯಾವುದೇ ಮಾರ್ಗದಿಂದ ಹುದ್ದೆಗೆ ಸೇರಿದ್ದರೂ ಎಸ್‌ಸಿ, ಎಸ್‌ಟಿ ಪ್ರಾತಿನಿಧ್ಯವನ್ನು ಕ್ರಮವಾಗಿ ಶೇ 15 ಮತ್ತು ಶೇ 3ಕ್ಕೆ ಸೀಮಿತಗೊಳಿಸಬೇಕು' ಎಂದು ಪೀಠ ಹೇಳಿದೆ.

ಎಸ್‌ಸಿ, ಎಸ್‌ಟಿ ನೌಕರರಿಗೆ ಬಡ್ತಿಯಲ್ಲಿ ಮೀಸಲಾತಿ ನೀಡಬೇಕು ಎಂಬುದನ್ನು ಸಂವಿಧಾನದ ಅನುಚ್ಛೇದ 16(4)(ಎ)ಯಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ರಾಜ್ಯ ಸರ್ಕಾರ 1978 ಏ. 27ರ ಆದೇಶದಲ್ಲಿ ಎಸ್‌ಸಿ, ಎಸ್‌ಟಿ ನೌಕರರಿಗೆ ಮುಂಬಡ್ತಿಯಲ್ಲಿ ಕ್ರಮವಾಗಿ ಶೇ 15 ಮತ್ತು ಶೇ 3ರಷ್ಟು ಹುದ್ದೆ ಆಧಾರಿತ ಮೀಸಲಾತಿ ಜಾರಿಗೊಳಿಸಿದೆ. 1978ರಲ್ಲೇ ಬಡ್ತಿ ಮೀಸಲು ಸಂಘರ್ಷ ಆರಂಭವಾಗಿದೆ. 1995ರಲ್ಲಿ ಬಡಪ್ಪನವರ್ ಪ್ರಕರಣದಿಂದ ತೀವ್ರ ಸ್ವರೂಪ ಪಡೆದುಕೊಂಡಿತ್ತು. ಬಳಿಕ ಎಂ. ನಾಗರಾಜ್ ಮತ್ತು ಬಿ.ಕೆ. ಪವಿತ್ರ ಪ್ರಕರಣದವರೆಗೂ ಹಿಗ್ಗಿಕೊಂಡು ಬಂದಿದೆ. ಬಿ.ಕೆ.ಪವಿತ್ರ ಮತ್ತು ಇತರರು ಹಾಗೂ ಭಾರತ ಸರ್ಕಾರದ ನಡುವಣ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ (2017ರ ಫೆ. 9) ರಾಜ್ಯ ಸರ್ಕಾರದ 'ಬಡ್ತಿ ಮೀಸಲಾತಿ ಕಾಯ್ದೆ- 2002' ಅನ್ನು ರದ್ದುಗೊಳಿಸಿ ತೀರ್ಪು ನೀಡಿತ್ತು. ಈ ತೀರ್ಪು ಪ್ರಕಟವಾಗುತ್ತಿದ್ದಂತೆ ಪರಿಶಿಷ್ಟ ನೌಕರರ ಬಡ್ತಿ ಭವಿಷ್ಯ ಡೋಲಾಯಮಾನವಾಯಿತು. ಹೊಸ ಜ್ಯೇಷ್ಠತಾ ಪಟ್ಟಿ ಸಿದ್ಧಪಡಿಸಿ, 3,750ಕ್ಕೂ ಹೆಚ್ಚು ಪರಿಶಿಷ್ಟ ನೌಕರರಿಗೆ ಹಿಂಬಡ್ತಿ ನೀಡಲಾಗಿತ್ತು.

ಈ ವರ್ಗಗಳ (ಎಸ್‌ಸಿ, ಎಸ್‌ಟಿ) ಹಿಂದುಳಿದಿರುವಿಕೆ, ಸೇವಾದಕ್ಷತೆ ಮತ್ತು ಪ್ರಾತಿನಿಧ್ಯದ ಕೊರತೆಗೆ ಸಂಬಂಧಿಸಿದ ದಾಖಲೆಗಳನ್ನು ರಾಜ್ಯ ಸರ್ಕಾರ ಸಂಗ್ರಹಿಸಿಲ್ಲ ಎಂಬುದು ಕಾಯ್ದೆಯನ್ನು ರದ್ದುಗೊಳಿಸಲು ನ್ಯಾಯಾಲಯ ನೀಡಿದ್ದ ಕಾರಣ. ಎಸ್‌ಸಿ, ಎಸ್‌ಟಿ ನೌಕರರು ಮತ್ತು ಇತರ ಸಂಘಟನೆಗಳು ಹೋರಾಟ ನಡೆಸಿದ್ದರಿಂದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರತ್ನಪ್ರಭಾ ನೇತೃತ್ವದಲ್ಲಿ ಅಂದಿನ ಸರ್ಕಾರ ಸಮಿತಿ ರಚಿಸಿತ್ತು. ಈ ಸಮಿತಿಯ ವರದಿ ಆಧರಿಸಿ 'ಮೀಸಲು ಆಧಾರದಲ್ಲಿ ಬಡ್ತಿ ಪಡೆದ ಅಧಿಕಾರಿಗಳಿಗೆ ತತ್ಪರಿಣಾಮ ಜ್ಯೇಷ್ಠತೆ ವಿಸ್ತರಣೆ ಕಾಯ್ದೆ -2017' ಅನ್ನು ಸರ್ಕಾರ ರೂಪಿಸಿತು. ಅದಕ್ಕೆ ರಾಷ್ಟ್ರಪತಿ ಅಂಕಿತ ಹಾಕಿದ್ದಾರೆ. ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದ ಪ್ರಮಾಣಪತ್ರದಲ್ಲಿ ಈ ಕಾಯ್ದೆಯ ಸಾಂವಿಧಾನಿಕ ಸಿಂಧುತ್ವವನ್ನು ಸರ್ಕಾರ ಸಮರ್ಥಿಸಿಕೊಂಡಿತ್ತು. 'ಈ ಕಾನೂನಿನಿಂದ ಈವರೆಗೆ ನೀಡಿದ್ದ ಬಡ್ತಿ ಮೀಸಲಾತಿಗೆ ಧಕ್ಕೆ ಆಗದು. ಇಷ್ಟರವರೆಗೆ, 'ಖಾಲಿ ಹುದ್ದೆ'ಗಳ ಆಧಾರದಲ್ಲಿ ಬಡ್ತಿ ನೀಡಲಾಗುತ್ತಿತ್ತು. ಇನ್ನು ಮುಂದೆ 'ಹುದ್ದೆ ಆಧಾರ'ದಲ್ಲಿ ಮೀಸಲು ನೀಡಲಾಗುವುದು' ಎಂದು ಹೇಳಿತ್ತು. ಪವಿತ್ರ- 2 ಪ್ರಕರಣದಲ್ಲಿ ಈ ಕಾಯ್ದೆಯನ್ನು (2019ರ ಮೇ 10) ಸುಪ್ರೀಂ ಕೋರ್ಟ್ ಸಿಂಧುಗೊಳಿಸಿದೆ.

'ಬಡ್ತಿ ಹೊಂದಿದ ಎಸ್‌ಸಿ, ಎಸ್‌ಟಿ ನೌಕರರು ತತ್ಪರಿಣಾಮದ ಜ್ಯೇಷ್ಠತೆಗೆ ಹಕ್ಕು ಉಳ್ಳವರಾಗಿರತಕ್ಕದ್ದು, ಜ್ಯೇಷ್ಠತೆಯನ್ನು ಒಂದು ವೃಂದದಲ್ಲಿ ಸಲ್ಲಿಸಿದ ಸೇವಾವಧಿ ಆಧರಿಸಿ ನಿರ್ಧರಿಸತಕ್ಕದ್ದು' ಎಂದು ಈ ಕಾಯ್ದೆಯು ತಿಳಿಸಿದೆ. ಅಲ್ಲದೆ, '1978 ರ ಏ. 27ರ ನಂತರ ಬಡ್ತಿ ಹೊಂದಿದ ಎಸ್‌ಸಿ, ಎಸ್‌ಟಿ ನೌಕರರಿಗೆ ಈಗಾಗಲೇ ನೀಡಿರುವ ತತ್ಪರಿಣಾಮ ಜ್ಯೇಷ್ಠತೆ ಸಿಂಧುವಾಗಿರತಕ್ಕದ್ದು, ಅದನ್ನು ಸಂರಕ್ಷಿಸತಕ್ಕದ್ದು ಮತ್ತು ಭಂಗಗೊಳಿಸತಕ್ಕದ್ದಲ್ಲ' ಎಂದೂ ಸ್ಪಷ್ಟಪಡಿಸಿದೆ. ಕಾಯ್ದೆಯನ್ನು ಜಾರಿಗೊಳಿಸಿ 2019ರ ಮೇ 15ರಂದು ಸರ್ಕಾರ ಆದೇಶ ಹೊರಡಿಸಿದೆ. ಪರಿಣಾಮ, ಹಿಂಬಡ್ತಿಗೊಳಗಾಗಿದ್ದ ಪರಿಶಿಷ್ಟ ನೌಕರರ ಜ್ಯೇಷ್ಠತೆ ಸಂರಕ್ಷಣೆಗೆ ಒಳಗಾಗಿ, ಮತ್ತೆ ಹಳೆ ಹುದ್ದೆಗೆ ಮರಳುವ ಸ್ಥಿತಿ ಬಂದಿತ್ತು.

ಇದೀಗ, ಜರ್ನೈಲ್ ಸಿಂಗ್ ವಿರುದ್ಧ ಲಚ್ಚಿಮಿ ನೈಯಾನ್ ಗುಪ್ತಾ ಮತ್ತು ಇತರರ ಪ್ರಕರಣದಲ್ಲಿ ನೀಡಿರುವ ಮಧ್ಯಂತರ ಆದೇಶವು ಬಡ್ತಿ ಮೀಸಲು ನೀತಿಯ ವಿಷಯದಲ್ಲಿ ಹಲವು ಕಾನೂನು ಪ್ರಶ್ನೆಗಳನ್ನು ಎತ್ತಿದೆ. ಆ ಆದೇಶವನ್ನು ಜಾರಿಗೊಳಿಸಬೇಕು ಎಂದು 'ಅಹಿಂಸಾ' (ಅಲ್ಪಸಂಖ್ಯಾತ, ಹಿಂದುಳಿದ, ಸಾಮಾನ್ಯ) ಸಂಘಟನೆ ರಾಜ್ಯ ಸರ್ಕಾರದ ಮುಂದೆ ಬೇಡಿಕೆ ಇಟ್ಟಿದೆ. ಅದೇ ವೇಳೆ, ಕರ್ನಾಟಕಕ್ಕೆ ಸಂಬಂಧವಿಲ್ಲದ ಈ ತೀರ್ಪು ಅನ್ನು ಜಾರಿ ಮಾಡಬಾರದು ಎಂದು ಎಸ್‌ಸಿ, ಎಸ್‌ಟಿ ಸರ್ಕಾರಿ ನೌಕರರ ಸಂಘ ಒತ್ತಾಯಿಸಿದೆ. ಪರಿಣಾಮ, ಸರ್ಕಾರ ಮೀಸಲಾತಿ ಬಲೆಯಲ್ಲಿ ಸಿಲುಕಿದೆ.

ಬಡ್ತಿ ಮೀಸಲಾತಿಗೆ ಒತ್ತಾಯಿಸಿ ನಡೆದಿದ್ದ ಜಾಥಾ —ಸಂಗ್ರಹ ಚಿತ್ರ

ಸರ್ಕಾರಿ ಒಟ್ಟು ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಪ್ರಾತಿನಿಧ್ಯ (2019 ಮಾರ್ಚ್ 31ಕ್ಕೆ)

ಗುಂಪು	ಮಂಜೂರಾದ ಹುದ್ದೆ	ಎಸ್‌ಸಿ	ಶೇ	ಎಸ್‌ಟಿ	ಶೇ
ಎ	30,949	3,749	12.11	909	2.93
ಬಿ	57,286	7,020	12.25	1,754	3.06
ಸಿ	5,76,834	66,274	11.48	18,209	3.15
ಡಿ	1,09,393	10,221	9.34	3,261	2.98
ಒಟ್ಟು	7,74,462	87,264	11.26	24,133	3.11
ಸರ್ಕಾರಿ ಒಟ್ಟು ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಪ್ರಾತಿನಿಧ್ಯ (2020 ಮಾರ್ಚ್ 31ಕ್ಕೆ)					
ಎ	30,908	4,058	13.13	1,009	3.26
ಬಿ	56,969	6,717	11.79	1,755	3.08
ಸಿ	5,74,247	65,858	11.47	18,386	3.20
ಡಿ	1,07,995	9,918	9.18	3,310	3.06
ಒಟ್ಟು	7,70,119	86,551	11.24	24,460	3.18

ಲೋಕೋಪಯೋಗಿ ಇಲಾಖೆಯಲ್ಲಿ ಸಿಬ್ಬಂದಿ ಪ್ರಾತಿನಿಧ್ಯ (2021 ಅ. 2ಕ್ಕೆ)

ವೃಂದ	ವೃಂದ ಬಲ	ಹಾಲಿ ಬಲ	ಸಾಮಾನ್ಯ	ಶೇ	ಎಸ್‌ಸಿ	ಶೇ	ಎಸ್‌ಟಿ	ಶೇ
ಎಸ್‌ಇ	33	42	2	4.76	38	90.48	2	4.76
ಇಇ	136	294	217	73.81	57	19.39	20	6.80
ಎಇಇ-1	444	758	444	58.58	281	37.07	33	4.35
ಎಇಇ-2	110	285	220	77.19	50	17.90	15	5.26
ಜಲಸಂಪನ್ಮೂಲ ಇಲಾಖೆಯಲ್ಲಿ ಸಿಬ್ಬಂದಿ ಪ್ರಾತಿನಿಧ್ಯ (2021 ಅ. 2ಕ್ಕೆ)								
ಎಸ್‌ಇ	57	44	-	0	40	90.1	04	9.9
ಇಇ	182	174	119	68.4	34	19.6	21	12
ಎಇಇ-1	799	792	515	65	236	29.8	41	5.2
ಎಇಇ-2	170	170	134	78.8	30	17.6	6	3.6

ರಾಜ್ಯದ 'ಬಡ್ತಿ ಮೀಸಲು' ಹೀಗಿದೆ...

ರಾಜ್ಯ ಸರ್ಕಾರ 1978 ಏ. 27ರ ಆದೇಶದಲ್ಲಿ ಮುಂಬಡ್ತಿಯಲ್ಲಿ ಎಸ್‌ಸಿ ಮತ್ತು ಎಸ್‌ಟಿ ನೌಕರರಿಗೆ ಕ್ರಮವಾಗಿ ಶೇ 15 ಮತ್ತು ಶೇ 3 ಮೀಸಲಾತಿ ಜಾರಿಗೊಳಿಸಿದೆ. 33 ಹುದ್ದೆಗಳನ್ನು ಒಂದು ವೃತ್ತವೆಂದು ಪರಿಗಣಿಸಿ, 1,7,14, 21, 27ನೇ ಹುದ್ದೆಗಳನ್ನು ಎಸ್‌ಸಿ ಹಾಗೂ 2ನೇ ಹುದ್ದೆಯನ್ನು ಪರಿಶಿಷ್ಟ ಪಂಗಡದವರಿಗೆ ನೀಡಲಾಗುತ್ತದೆ. 99 ಹುದ್ದೆಗಳಲ್ಲಿ ಎಸ್‌ಸಿಗೆ 15, ಎಸ್‌ಟಿಗೆ 3 ಹುದ್ದೆಗಳನ್ನು ನೀಡಬೇಕು. ಈ ಬಡ್ತಿ ಮೀಸಲಾತಿ ಆದೇಶದಂತೆ ಈ ಹುದ್ದೆಗೆ ಎದುರಾಗಿ ಎಸ್‌ಸಿ, ಎಸ್‌ಟಿಯವರು ಲಭ್ಯವಿಲ್ಲದಿದ್ದಾಗ ಆ ಹುದ್ದೆಯನ್ನು ಸಾಮಾನ್ಯ ವರ್ಗದವರಿಗೆ ನೀಡಬಾರದು. ಎಸ್‌ಸಿ, ಎಸ್‌ಟಿಗಳಿಗೆ ಬ್ಯಾಕ್‌ಲಾಗ್ ಹುದ್ದೆಗಳಾಗಿ ಉಳಿಸಿಕೊಳ್ಳಲಾಗುತ್ತದೆ. ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಸರ್ಕಾರ 1997ರ ಜೂನ್ 24ರಂದು ಆದೇಶ ಹೊರಡಿಸಿದೆ. ಆ ಆದೇಶವನ್ನು 2015ರಲ್ಲಿ ಬದಲಿಸಲಾಗಿದ್ದು, ಅದರ ಪ್ರಕಾರ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬುವ ಸಂದರ್ಭದಲ್ಲಿ ಆ ಹುದ್ದೆಗಳಿಗೆ ಸೀಮಿತಗೊಳಿಸಿ ಅರ್ಹ ನೌಕರರ ಲಭ್ಯತೆ ಅನುಸರಿಸಿ ಒಂದು ಮೀಸಲು ವೃತ್ತದಲ್ಲಿ ಎಸ್‌ಸಿಗೆ ಗರಿಷ್ಠ 9, ಎಸ್‌ಟಿಗೆ 1 ಹುದ್ದೆ ಹೆಚ್ಚುವರಿ ನೀಡಲಾಗಿದೆ.

ಎಸ್‌ಸಿ, ಎಸ್‌ಟಿ, ಪ್ರಾತಿನಿಧ್ಯ ಮಿತಿ ಮೀರುವುದು ಹೇಗೆ?

- ಸ್ವಂತ ಅರ್ಹತೆಯಲ್ಲಿ ನೇಮಕವಾದಾಗ
- ಸಾಮಾನ್ಯ ಜ್ಯೇಷ್ಠತೆಯಲ್ಲಿ ಸಾಮಾನ್ಯ ಹುದ್ದೆಯಲ್ಲಿ ಮುಂಬಡ್ತಿ ಪಡೆದಾಗ
- ಬ್ಯಾಗ್‌ಲಾಗ್ ಹುದ್ದೆಗಳಿಗೆ ಎಸ್‌ಸಿ, ಎಸ್‌ಟಿ ನೇಮಕವಾದಾಗ ಮತ್ತು ಮುಂಬಡ್ತಿ ಪಡೆದಾಗ. ಅನುಕಂಪದ ಹುದ್ದೆಗಳಲ್ಲಿ ನೇಮಕವಾದಾಗ.
- ಜ್ಯೇಷ್ಠತೆಯಲ್ಲಿ ಮೇಲಿರುವ ಸಾಮಾನ್ಯ ವರ್ಗದವರು ಮುಂದಿನ ವೃಂದಕ್ಕೆ ಬಡ್ತಿ ಪಡೆದಾಗ, ನಿವೃತ್ತಿಯಾದಾಗ, ಮರಣ ಹೊಂದಿದಾಗ

'ಬಡ್ತಿ ಮೀಸಲು ನೀತಿ ಪರಿಷ್ಕರಿಸುವ ಅಗತ್ಯ ಇಲ್ಲ'

ರಾಜ್ಯದಲ್ಲಿ ರಿಕ್ತ ಸ್ಥಾನ ಆಧಾರಿತವಾಗಿ ಮೀಸಲಾತಿ ನೀಡುವುದರಿಂದ ಎಸ್‌ಸಿ ,ಎಸ್‌ಟಿ ಮೀಸಲಾತಿಯು ಕ್ರಮವಾಗಿ ಶೇ 15, ಶೇ 3ರಷ್ಟನ್ನು ಮೀರುವುದಿಲ್ಲ. ಸುಪ್ರೀಂ ಕೋರ್ಟ್ ಪೀಠ, ಜ. 28ರ ಆದೇಶದಲ್ಲಿ ವೃಂದ ಆಧಾರಿತ ಮೀಸಲಾತಿ ನೀಡಬೇಕೆಂಬ ಅಂಶವನ್ನು ಚರ್ಚೆ ಮಾಡಿದೆ. ವಿಚಾರಣೆಯನ್ನು ಫೆ. 24ಕ್ಕೆ ಮುಂದೂಡಿದ್ದರೂ, ಈ ಅಂಶವನ್ನೇ ಆಧಾರವಾಗಿಟ್ಟು ಅಹಿಂಸಾ ಸಂಘಟನೆ ಗೊಂದಲ ಉಂಟು ಮಾಡುತ್ತಿದೆ. ಸಾಮಾನ್ಯ ಅರ್ಹತೆಯಲ್ಲಿ ನೇಮಕ ಆದವರು ಮತ್ತು ಮುಂಬಡ್ತಿ ಪಡೆದವರನ್ನು ಮೀಸಲಾತಿ ಕೋಟಾದಲ್ಲಿ ಪರಿಗಣಿಸಬಾರದೆಂದು ಹಲವು ಕೋರ್ಟ್‌ಗಳು ತೀರ್ಪು ನೀಡಿವೆ. ಹೀಗಾಗಿ, ಯಾವುದೇ ಮೂಲದಿಂದ ನೇಮಕ, ಬಡ್ತಿ ಪಡೆದವರನ್ನು ಎಸ್‌ಸಿ, ಎಸ್‌ಟಿ ಕೋಟಾದಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಬೇಕೆಂಬ ಬೇಡಿಕೆ ಸರಿಯಲ್ಲ. ರಾಜ್ಯದಲ್ಲಿ ಜ್ಯೇಷ್ಠತೆ ಸಂರಕ್ಷಣೆ ಕಾಯ್ದೆ ಜಾರಿಯಲ್ಲಿರುವುದರಿಂದ ಜ. 28ರ ಮಧ್ಯಂತರ ಆದೇಶದಂತೆ ಕ್ರಮ ವಹಿಸಬೇಕಾದ ಅಗತ್ಯ ಉದ್ಭವಿಸುವುದಿಲ್ಲ.

ಡಿ. ಚಂದ್ರಶೇಖರಯ್ಯ, ಅಧ್ಯಕ್ಷ, ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘ

'ಬಡ್ತಿ ಮೀಸಲು ನೀತಿ ಪರಿಷ್ಕರಿಸಬೇಕು'



ಜ. 28ರ ಆದೇಶದ ಅನ್ವಯ ಬಡ್ತಿ ಮೀಸಲು ನೀತಿ ಪರಿಷ್ಕರಿಸಿ, ವೃಂದವಾರು ಪ್ರಾತಿನಿಧ್ಯ ನೀಡಬೇಕಾಗಿದೆ. ಎಸ್‌ಸಿ, ಎಸ್‌ಟಿ ವರ್ಗಕ್ಕೆ ಕ್ರಮವಾಗಿ ಶೇ 15 ಮತ್ತು ಶೇ 3ರಷ್ಟು ಪ್ರಾತಿನಿಧ್ಯ ನೀಡಬೇಕಿದೆ. ಈಗ ಹಲವು ಇಲಾಖೆಗಳಲ್ಲಿ ಶೇ 18ಕ್ಕಿಂತಲೂ ಹೆಚ್ಚು ಇದೆ. ಇದರಿಂದಾಗಿ ಸಾಮಾನ್ಯ ವರ್ಗದ ಅರ್ಹ ನೌಕರರು ಬಡ್ತಿಯಿಂದ ವಂಚಿತರಾಗುತ್ತಿದ್ದಾರೆ. ಅಹಿಂಸಾ ವರ್ಗದವರಿಗೆ ಮತ್ತು ಪರಿಶಿಷ್ಟ ವರ್ಗದವರಿಗೆ 16 (1) ಹಾಗೂ 16 (4) ಎ ಪ್ರಕಾರ ಪ್ರಾತಿನಿಧ್ಯ ನೀಡಬೇಕಾದುದು ಸರ್ಕಾರದ ಕರ್ತವ್ಯ. ಎರಡೂ ವರ್ಗಕ್ಕೆ ಅವರವರ ಪ್ರಾತಿನಿಧ್ಯಕ್ಕೆ ತಕ್ಕಂತೆ ಬಡ್ತಿಗಳನ್ನು ನೀಡಿದ್ದೇ ಆಗಿದ್ದರೆ ಎರಡೂ ವರ್ಗಗಳ ಸಿಬ್ಬಂದಿ ಸಾಮರಸ್ಯದಿಂದ ಕೆಲಸ ಮಾಡಲು ಸಾಧ್ಯ ಆಗುತ್ತಿತ್ತು. ಈಗ ಇದಕ್ಕೆ ಸೂಕ್ತ ಸಮಯ ಬಂದಿದೆ. ಸರ್ಕಾರ ಜ್ಯೇಷ್ಠತೆ ಸಂರಕ್ಷಣೆ ಕಾಯ್ದೆ ವಾಪಸು ಪಡೆದು, ಎರಡೂ ವರ್ಗದವರಿಗೂ ಪ್ರಾತಿನಿಧ್ಯ ಸಿಗುವಂತೆ ನೀತಿ ರೂಪಿಸಿದರೆ ಸಮಸ್ಯೆಗೆ ಅಂತ್ಯ ಹಾಡಬಹುದು.

ಎಂ. ನಾಗರಾಜ್, ಅಧ್ಯಕ್ಷ, 'ಅಹಿಂಸಾ' ಸಂಘಟನೆ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 52

ಯೋಗಿಗಿಂತ ಸಮಾಧಿನಿಷ್ಠ ಶ್ರೇಷ್ಠ

'ಎಲೈ ಮುನಿಗಳೇ! ಜಿತೇಂದ್ರಿಯರಲ್ಲದ ಸಾಮಾನ್ಯರು ಮುಕ್ತಿ ಪಡೆಯಲು ಅನುಸರಿಸಬೇಕಾದ ಶ್ರದ್ಧಾಕ್ರಮವನ್ನು ಹೇಳುವೆನು ಕೇಳಿರಿ!' ಅಂತ ಸೂತಮುನಿ ಶಿವಪೂಜಾ ಮಹಾತ್ಮೆಯನ್ನ ಮುಂದುವರೆಸುತ್ತಾನೆ.

'ನಮಃ' ಪದವು ಕೊನೆಯಲ್ಲಿರುವ ಪಂಚಾಕ್ಷರೀಮಂತ್ರದ ಉಪದೇಶವನ್ನು ಜನಸಾಮಾನ್ಯರು ಗುರುವರ್ಯರಿಂದ ಪಡೆಯಬೇಕು. ನಂತರ 'ಶಿವಾಯ ನಮಃ' ಎಂದು ಐದು ಲಕ್ಷ ಬಾರಿ ಜಪವನ್ನು ಮಾಡಬೇಕು. ಅದರಿಂದ ಆಯುಸ್ಸು ಹೆಚ್ಚು ತ್ತದೆ. ಸ್ತ್ರೀಯರು ಐದು ಲಕ್ಷ ಪಂಚಾಕ್ಷರಜಪವನ್ನು ಮಾಡ ಬೇಕು. ಕ್ಷತ್ರಿಯನು ಐದು ಲಕ್ಷ ಜಪಗಳನ್ನು ಮಾಡಬೇಕು. ಅವನು ಮತ್ತೆ ಮತ್ತೆ ಜಪಿಸಿದರೆ ಮಂತ್ರಸಿದ್ಧಿ ಪಡೆದು ಜೀವನ್ಮುಕ್ತನಾಗುವನು. ವೈಶ್ಯನು ಐದು ಲಕ್ಷ ಜಪಗಳನ್ನು ಮಾಡಬೇಕು. ಶೂದ್ರನೂ 'ನಮಃ' ಪದಾಂತವಾದ ಪಂಚಾಕ್ಷರಮಂತ್ರವನ್ನು ಜಪಿಸಬೇಕು.

ಸ್ತ್ರೀಯಾಗಲೀ ಪುರುಷನಾಗಲೀ ಯಾವುದೇ ವರ್ಗದವರಾಗಲೀ 'ನಮಃ' ಪದವನ್ನು ಪೂರ್ವದಲ್ಲಿಯಾಗಲೀ ಕೊನೆಯಲ್ಲಾಗಲೀ ಉಚ್ಚರಿಸಿ ಸದಾ ಜಪಿಸಬೇಕು. ವಿವಾಹಿತಸ್ತ್ರೀಯರಿಗೂ ಅದರಂತೆಯೇ ಗುರುವಾದವನು ನಿರ್ದೇಶಿಸ ಬೇಕು. ಐದು ಲಕ್ಷ ಜಪದ ಕೊನೆಯಲ್ಲಿ ಸಾಧಕನು ಶಿವನ ಪ್ರೀತಿಗಾಗಿ ಮಹಾಭಿ ಷೇಕ ಮತ್ತು ನೈವೇದ್ಯಗಳನ್ನು ಮಾಡಿದ ಬಳಿಕ ಶಿವಭಕ್ತರನ್ನು ಪೂಜಿಸಬೇಕು. ಶಿವಭಕ್ತನನ್ನು ಪೂಜಿಸಿದರೆ, ಶಿವನು ಸುಪ್ರೀತನಾಗುವನು. ಶಿವನಭಕ್ತನಿಗೂ ಶಿವನಿಗೂ ಭೇದವಿಲ್ಲ. ಶಿವಭಕ್ತನು ಶಿವಸ್ವರೂಪನು.

ಶಿವನ ಸ್ವರೂಪವಾದ ಪಂಚಾಕ್ಷರೀಮಂತ್ರವನ್ನು ಶಿವಭಕ್ತನು ಹೃದಯದಲ್ಲಿ ಧರಿಸುವುದರಿಂದ ಅವನು ಶಿವನೇ ಆಗುವನು. ಏಕೆಂದರೆ ಮಂಗಳರೂಪ ನಾದ ಶಿವಭಕ್ತನ ಶರೀರದಲ್ಲಿ ಶಿವನು (ಅವನ ರಕ್ಷಣೆಗಾಗಿ) ನೆಲೆಸಿರುತ್ತಾನೆ. ಶಿವಭಕ್ತರು ಲೌಕಿಕ ಮತ್ತು ವೈದಿಕ ಕ್ರಿಯೆಗಳೆಲ್ಲವನ್ನೂ ಬಲ್ಲವರು. ಎಲ್ಲಿಯ ವರೆಗೆ ಶಿವಪಂಚಾಕ್ಷರೀಮಂತ್ರವನ್ನು ಜಪಿಸುವರೋ, ಅಲ್ಲಿಯವರೆಗೂ ಶಿವ ಭಕ್ತರ ಶರೀರದಲ್ಲಿ ಶಿವ ನೆಲೆಸಿರುತ್ತಾನೆ. ಶಿವಭಕ್ತಳಾದ ಸ್ತ್ರೀಯ ಸ್ವರೂಪವು ದೇವೀರೂಪವಾದುದು. ಶಿವಪಂಚಾಕ್ಷರೀಮಂತ್ರವನ್ನು ಜಪಿಸುವವರೆಗೆ ದೇವಿಯು ಶಿವಭಕ್ತಳ ಶರೀರದಲ್ಲಿ ನೆಲೆಸಿರುತ್ತಾಳೆ.

ಶಿವನ ಶಬ್ದ (ಶಿವೋಽಹಂ ಎಂಬ ಶಬ್ದ) ಮತ್ತು ರೂಪಗಳನ್ನು ಧರಿಸಿ ತಾನೂ ಶಿವನಾಗಿ (ಶಿವನೆಂದು ತಿಳಿದುಕೊಂಡು) ಪರಾಶಕ್ತಿಯನ್ನು ಪೂಜಿಸಬೇಕು. ಶಕ್ತಿ, ಮೂರ್ತಿ, ಲಿಂಗ, ಇವುಗಳನ್ನು ಬರೆದು ನಿಷ್ಕಪಟವಾಗಿ ಪೂಜಿಸಬೇಕು. ಶಿವಲಿಂಗವು ಶಿವಸ್ವರೂಪವೆಂದು, ತಾನು ಶಕ್ತಿರೂಪನೆಂದು ತಿಳಿಯಬೇಕು. ನಾದರೂಪದ ಶಿವಲಿಂಗವನ್ನೂ, ಬಿಂದುರೂಪದ ಶಕ್ತಿಲಿಂಗವನ್ನೂ ಪ್ರಧಾನ ಮತ್ತು ಅಪ್ರಧಾನ (ಶಿವಲಿಂಗವು ಪ್ರಧಾನವಾದರೆ, ಶಕ್ತಿಲಿಂಗವು ಅಪ್ರಧಾನ) ಎಂದು ಭಾವಿಸಿ, ಶಿವ ಮತ್ತು ಶಕ್ತಿಯನ್ನೂ ಪೂಜಿಸಬೇಕು. ಶಿವಮಂತ್ರಸ್ವರೂಪರೂ ಮತ್ತು ಶಿವಸ್ವರೂಪರೂ ಆದಂತಹ ಶಿವಭಕ್ತರನ್ನು ಷೋಡಶೋಪಚಾರಗಳಿಂದ ಪೂಜಿಸಬೇಕು. ಅದರಿಂದ ಇಷ್ಟಾರ್ಥ ಸಿದ್ಧಿಸುತ್ತದೆ.

ನಾಭಿಯ ಕೆಳಗಿನ ಭಾಗವು ಬ್ರಹ್ಮಸ್ವರೂಪವಾದರೆ, ನಾಭಿಯಿಂದ ಕತ್ತಿನವರೆಗಿನ ಭಾಗವು ವಿಷ್ಣುಸ್ವರೂಪ. ಮುಖವು ಶಿವಸ್ವರೂಪವಾದರೆ, ಶಿವಭಕ್ತನ ಶರೀರವು ತ್ರಿಮೂರ್ತಿ ಸ್ವರೂಪ. ದಹನಸಂಸ್ಕಾರವನ್ನು ಪಡೆದ ಮತ್ತು ದಹನಾದಿಸಂಸ್ಕಾರ ಪಡೆಯದೆ ಮೃತರಾದಂತಹ ಮಾತಾ-ಪಿತೃಗಳ ಆತ್ಮಶಾಂತಿಗಾಗಿ ಜಗತ್ತಿಗೆ ಆದಿಪಿತೃವಾದ ಶಿವ ಮತ್ತು ಆದಿಮಾತೆಯಾದ ದೇವಿಯನ್ನು ಪೂಜಿಸಬೇಕು. ಶಿವ-ಪಾರ್ವತಿಯರ ಪೂಜೆ ನಂತರ ಶಿವಭಕ್ತರನ್ನೂ ಸಹ ಪೂಜಿಸಬೇಕು. ಇದರಿಂದ ಮೃತರು ಪಿತೃಲೋಕವನ್ನು ಸೇರಿ ಮುಕ್ತಿಯನ್ನು ಪಡೆಯುವರು. ಶಿವಭಕ್ತರಲ್ಲಿ ಕರ್ಮನಿಷ್ಠರಾದ ಹತ್ತು ಯೋಗಿಗಳಿ ಗಿಂತಲೂ ತಪೋನಿಷ್ಠನಾದ ಒಬ್ಬ ಯೋಗಿಯೇ ಶ್ರೇಷ್ಠ. ಶಿವಭಕ್ತರಲ್ಲಿ ತಪೋ ನಿಷ್ಠರಾದ ನೂರು ಯೋಗಿಗಳಿಗಿಂತಲೂ ಒಬ್ಬ ಜಪನಿಷ್ಠ ಶ್ರೇಷ್ಠ. ಸಾವಿರ ಜಪಯುಕ್ತರಿಗಿಂತಲೂ ಓರ್ವ ಶಿವಜ್ಞಾನಿ ಶ್ರೇಷ್ಠ. ಲಕ್ಷ ಶಿವಜ್ಞಾನಿಗಳಿಗಿಂತಲೂ ಓರ್ವ ಧ್ಯಾನನಿಷ್ಠನೇ ಶ್ರೇಷ್ಠ. ಧ್ಯಾನನಿಷ್ಠರಾದ ಕೋಟಿ ಯೋಗಿಗಳಿಗಿಂತಲೂ ಓರ್ವ ಸಮಾಧಿನಿಷ್ಠನೇ ಶ್ರೇಷ್ಠ.

ಶಿವ, ಶಕ್ತಿ ಮತ್ತು ಶಿವಭಕ್ತರ ಪೂಜೆಯನ್ನು ನಿತ್ಯವೂ ಯಾರು ಭಕ್ತಿಯಿಂದ ಮಾಡುವರೋ, ಅವರು ಶಿವಸ್ವರೂಪವನ್ನು ಪಡೆದು ಮಂಗಳವನ್ನು ಪಡೆಯು ವರು. ವೇದದಂತೆ ಪವಿತ್ರವಾದ ಈ ಅಧ್ಯಾಯವನ್ನು ಯಾವ ಪುರುಷನು ಅರ್ಥವತ್ತಾಗಿ ಪಠಿಸುವನೋ, ಅವನು ಶಿವಜ್ಞಾನಿಯಾಗಿ ಶಿವನೊಡನೆ ವಿಹರಿ ಸುವನು. ಈ ಅಧ್ಯಾಯವನ್ನು ಜನರಿಗೆ ತಿಳಿಸಿದವರಿಗೆ ಶಿವನ ಅನುಗ್ರಹ ದೊರೆವುದು ಅಂತ ಸೂತಮುನಿ ಹೇಳುವುದರೊಂದಿಗೆ ಶ್ರೀ ಶಿವಪುರಾಣದ ವಿದ್ಯೇಶ್ವರ ಸಂಹಿತೆಯ ಹದಿನೇಳನೇ ಅಧ್ಯಾಯ ಮುಗಿಯುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಬುರ್ಖಾಧಾರಿ ಯುವಕರನ್ನು ಪೊಲೀಸರು ಬಂಧಿಸಿರುವ ವಿಡಿಯೊವೊಂದು ಜಾಲತಾಣಗಳಲ್ಲಿ ವೈರಲ್ ಆಗಿದೆ. ಹಿಜಾಬ್ ಸಂಬಂಧಿ ಗಲಾಟೆಯ ಸಂಬಂಧ ಈ ಬಂಧನ ಆಗಿದೆ. ಕಲ್ಲು ತೂರಾಟದಲ್ಲಿ ತೊಡಗಿದ್ದವರನ್ನು ವಶಕ್ಕೆ ತೆಗೆದುಕೊಂಡ ಪೊಲೀಸರು, ಬುರ್ಖಾ ತೆಗೆಯುವಂತೆ ಅವರಿಗೆ ಹೇಳಿದರು. ಬುರ್ಖಾ ತೆಗೆದಾಗ ಅವರು ಗಂಡಸರು ಎಂಬುದು ತಿಳಿಯಿತು ಎಂಬಂತೆ ವಿಡಿಯೊದಲ್ಲಿ ಬಿಂಬಿಸಲಾಗಿದೆ.

ಈ ವಿಡಿಯೊ ಈಗಿನದ್ದಲ್ಲ ಎಂದು ದಿ ಲಾಜಿಕಲ್ ಇಂಡಿಯನ್ ವೇದಿಕೆ ವರದಿ ಮಾಡಿದೆ. ಈ ವಿಡಿಯೊ 2020ರ ಆಗಸ್ಟ್‌ನದ್ದು. ಆಂಧ್ರ ಪ್ರದೇಶದ ಕರ್ನೂಲ್ ಜಿಲ್ಲೆಯಲ್ಲಿ ಬುರ್ಖಾ ಧರಿಸಿ ಮದ್ಯ ಕಳ್ಳಸಾಗಾಣೆ ಮಾಡುತ್ತಿದ್ದವರನ್ನು ಬಂಧಿಸಲಾಗಿತ್ತು. ಈ ವಿಡಿಯೊಗೂ ಸದ್ಯದ ಹಿಜಾಬ್ ವಿವಾದಕ್ಕೂ ಸಂಬಂಧವಿಲ್ಲ ಎಂದು ವರದಿಯಲ್ಲಿ ಹೇಳಲಾಗಿದೆ. ಈ ಘಟನೆಗೆ ಸಂಬಂಧಿಸಿದ ವಿಡಿಯೊ 2020ರ ಆ.8ರಂದು ಈಟಿವಿ ಭಾರತ್ ಸುದ್ದಿ ವಾಹಿನಿಯೊಂದರಲ್ಲಿ ಪ್ರಸಾರವಾಗಿತ್ತು. ಬಂಧಿತರು ತೆಲಂಗಾಣದಿಂದ ಆಂಧ್ರ ಪ್ರದೇಶಕ್ಕೆ ಅಕ್ರಮವಾಗಿ ಮದ್ಯ ರವಾನೆ ಮಾಡುತ್ತಿದ್ದರು ಎಂದು ಈಟಿವಿ ಭಾರತ್ ವರದಿಯಲ್ಲಿ ಹೇಳಲಾಗಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ದೈವದ ಕರಣ

ವಕ್ತ್ರವುಂಟೆಲ್ಲರಿಗೆ, ವರ್ಚಸೋರೊರ್ವಂಗೆ |
ಕತ್ತಿ ಪುಣ್ಯದೊಳುಂಟು, ಶಕ್ತಿ ಸಹಜದಲಿ ||
ವ್ಯಕ್ತಿಪ್ರಭಾವವೀ ಲೋಕಚರಿತೆಯ ಕೀಲು |
ಹಸ್ತವದು ದೈವಕೆಲೊ – ಮಂಕುತಿಮ್ಮ || 570 ||

ಪದ-ಅರ್ಥ: ವಕ್ತ್ರವುಂಟೆಲ್ಲರಿಗೆ = ವಕ್ತ್ರ(ಮುಖ) + ಉಂಟು + ಎಲ್ಲರಿಗೆ, ವರ್ಚಸೋರೊರ್ವಂಗೆ = ವರ್ಚಸು(ಮುಖದ ಕಾಂತಿ) + ಓರೋರ್ವಂಗೆ(ಒಬ್ಬೊಬ್ಬರಿಗೆ), ಪುಣ್ಯ = ಹಣ, ದೈವಕೆಲೊ = ದೈವಕೆ + ಎಲೊ.

ವಾಚ್ಯಾರ್ಥ: ಎಲ್ಲರಿಗೂ ಮುಖವಿದೆ ಆದರೆ ಕೆಲವರಿಗೆ ಮಾತ್ರ ವರ್ಚಸ್ಸು ಇದೆ. ಕತ್ತಿಯನ್ನು ಹಣದಿಂದ ಕೊಳ್ಳಬಹುದು ಆದರೆ ಶಕ್ತಿ ಸಹಜವಾದದ್ದು. ವ್ಯಕ್ತಿಗಳ ಪ್ರಭಾವವೇ ಲೋಕಚರಿತ್ರೆಯ ಕೀಲು. ಅದೇ ದೈವದ ಕೈ.

ವಿವರಣೆ: ನೆಪೋಲಿಯನ್ ಬೋನಾಪಾರ್ಟೆ ಫ್ರೆಂಚ್ ಮಿಲಿಟರಿ ಮತ್ತು ರಾಜಕೀಯ ನಾಯಕನಾಗಿದ್ದವನು. ಹತ್ತು ವರ್ಷಗಳ ಕಾಲ ಫ್ರೆಂಚ್ ಚಕ್ರವರ್ತಿಯಾಗಿದ್ದವನು. ಮುಂದೆ ವಾಟರ್‌ಲೂ ಕದನದಲ್ಲಿ ಸೋತ. ಅವನನ್ನು ಸೇಂಟ್ ಹೆಲೆನಾ ದ್ವೀಪಕ್ಕೆ ಗಡಿಪಾರು ಮಾಡಲಾಯಿತು. ಅಲ್ಲಿ ನೆಪೋಲಿಯನ್ ಏಕಾಂಗಿ. ಅವನನ್ನು ಕಾಯಲು ಸೈನಿಕರ, ಅಧಿಕಾರಿಗಳ ದಂಡೇ ಇತ್ತು. ಆತ ದ್ವೀಪದಲ್ಲಿ ತಿರುಗಾಡುತ್ತಿದ್ದಾಗ ಅವನು ಹತ್ತಿರ ಬಂದೊಡನೆ ಕಾಯಲು ನಿಯೋಜಿತರಾಗಿದ್ದ ಸೈನಿಕರು ಎದ್ದು ನಿಂತು ಅವನಿಗೆ ಸೆಲ್ಯೂಟ್ ಮಾಡುತ್ತಿದ್ದರಂತೆ. ಒಂದು ಸಲ ಅವರು ಯೋಚಿಸಿದರು. ನೆಪೋಲಿಯನ್ ಒಬ್ಬ ಕೈದಿ. ಅವನನ್ನು ಕಾಯುವವರು ನಾವು. ನಾವೇಕೆ ಅವನು ಬಂದಾಗ ಎದ್ದು ನಿಂತು ಗೌರವ ತೋರಿಸಬೇಕು? ಇನ್ನು ಮೇಲೆ ಹಾಗೆ ಮಾಡುವುದು ಬೇಡ. ಅವನು ತಿರುಗಾಡುತ್ತ ಹೋಗಲಿ. ಅವನನ್ನು ಕಾಣದವರಂತೆ ಇದ್ದುಬಿಡಬೇಕು ಎಂದು ತೀರ್ಮಾನ ಮಾಡಿಕೊಂಡರು. ಸಂಜೆಗೆ ಮತ್ತೆ ನೆಪೋಲಿಯನ್ ಬಂದ. ಇವರು ಗಟ್ಟಿಯಾಗಿ ಕೂತಿದ್ದರು. ಆತ ಹತ್ತಿರ ಬರುತ್ತಿದ್ದಂತೆ ಇವರ ಎದೆಬಡಿತ ಜೋರಾಯಿತು. ಆತ ಇನ್ನೂ ಹತ್ತಿರ ಬರುತ್ತಿದ್ದಂತೆ ಇವರು ಥಟ್ಟನೇ ಮೇಲೆದ್ದು ಸೆಲ್ಯೂಟ್ ಮಾಡಿ ನಿಂತರು! ನಂತರ ತಾವು ಹಾಗೆ ಮಾಡಿದ್ದೇಕೆ ಎಂದು ಚಿಂತಿಸಿದರು. ಅವರಲ್ಲೊಬ್ಬ ಹೇಳಿದ, 'ಏನು ಮಾಡುವುದು, ನೆಪೋಲಿಯನ್ ಮುಖದ ಮೇಲಿನ ವರ್ಚಸ್ಸೇ ಹಾಗಿದೆ. ಅವನು ಕೈದಿಯಾಗಿದ್ದರೂ ಅವನ ವರ್ಚಸ್ಸು ಚಕ್ರವರ್ತಿಯದೇ'.

ಈ ಮಾತನ್ನು ಕಗ್ಗ ವಿವರಿಸುತ್ತದೆ. ಎಲ್ಲರಿಗೂ ಮುಖ ಇದ್ದೇ ಇರುತ್ತದೆ. ಆದರೆ ಕೆಲವೇ ಜನರ ಮುಖದ ಮೇಲೆ ವರ್ಚಸ್ಸು, ಕಾಂತಿ ಇರುತ್ತದೆ. ಅದನ್ನು ಕಂಡೊಡನೆ ಗೌರವ ನೀಡಬೇಕು ಎನ್ನಿಸುತ್ತದೆ. ಅದೇ ರೀತಿ ಒಳ್ಳೊಳ್ಳೆಯ ಖಡ್ಗಗಳು ಹಣ ಕೊಟ್ಟರೆ ದೊರಕುತ್ತವೆ. ಆದರೆ ಅದನ್ನು ಸಮರ್ಥವಾಗಿ ಬಳಸುವ ಶಕ್ತಿಯನ್ನು ಪರಿಶ್ರಮದಿಂದ ಸಂಪಾದಿಸಬೇಕಾಗುತ್ತದೆ. ಬರೀ ಮುಖದಿಂದ, ಬರೀ ಖಡ್ಗದಿಂದ ಏನೂ ಆಗುವುದಿಲ್ಲ. ಅದಕ್ಕೆ ವರ್ಚಸ್ಸು, ಶಕ್ತಿ ಬೇಕು. ಹಾಗೆ ಅವುಗಳನ್ನು ಪಡೆದುಕೊಂಡವರೇ ಲೋಕಚರಿತ್ರೆಯನ್ನು ನಿರ್ಮಿಸಿದವರು. ಇವರೇ ವಿಶ್ವಚರಿತ್ರೆಯ ಕೀಲುಗಳು. ಇಂಗ್ಲೀಷಿನಲ್ಲಿ ಮಾತೊಂದಿದೆ. "History is the record of the lives of successful people" (ಇತಿಹಾಸ, ಯಶಸ್ವಿನ ಜನರ ಜೀವನಗಳ ದಾಖಲೆ). ಆ ವ್ಯಕ್ತಿಗಳ ಜೀವನ ಪ್ರಭಾವ, ಪ್ರಪಂಚದ ಇತಿಹಾಸದ ಮೈಲಿಗಲ್ಲುಗಳು. ಇವರೇ ದೈವದ ಕರಣವಾಗಿ ಬಂದು ಬದುಕನ್ನು ಮುನ್ನಡೆಸಿದವರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಫೆಬ್ರುವರಿ 23, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ –ಶಿಶಿರ ಋತು ಕುಂಭ ಮಾಸದ 11 ನೇ ದಿನ ತಿಥಿ: (ಮಾಘ ಕೃಷ್ಣ) ಸಪ್ತಮಿ ಗಂ. 16-57 ನಕ್ಷತ್ರ: ವಿಶಾಖ ಗಂ. 14-41 ಯೋಗ: ಧ್ರುವ ಗಂ. 08-25, ವ್ಯಾಘಾತ ಗಂ 29-47 ಕರಣ: ಬವ ಗಂ. 16-57. ರಾಹುಕಾಲ : ಮಧ್ಯಾಹ್ನ 12:00 –01:30 ಸೂರ್ಯೋದಯ : 06-53 ಸೂರ್ಯಾಸ್ತ : 06-34
ಮುಸ್ಲಿಂ ದಿನಾಂಕ : 21 ರಜಬ್ ಅದೃಷ್ಟ ಸಂಖ್ಯೆ: 2, 4

ಮೇಷ: ಆಪ್ತರ ಸಲಹೆ ತೆಗೆದುಕೊಂಡು ಮಾಡಿದ ಕೆಲಸ ಸಮಸ್ಯೆ ಇಲ್ಲದೆ ಮುಕ್ತಾಯ ಹಂತ ತಲುಪುವುದು. ವ್ಯಾಪಾರದಲ್ಲಿ ಲಾಭ ನಷ್ಟದ ಮಿಶ್ರಫಲ. ಕೃಷಿಗೆ ಸಂಬಂಧಪಟ್ಟ ಕಾರ್ಯಗಳು ಬಿಡುವಿಲ್ಲದೆ ನಡೆಸುವುದು ಉತ್ತಮ.

ವೃಷಭ: ನಿಮ್ಮಲ್ಲಿರುವ ಪಾರಮಾರ್ಥಿಕತೆಯಿಂದಾಗಿ ದೇವರ ರಕ್ಷಣೆ ಸದಾಕಾಲ ದೊರೆಯುವುದು. ಸರ್ಕಾರಿ ಕಚೇರಿಗಳಲ್ಲಿನ ಕೆಲಸಕ್ಕೆ ಹೆಚ್ಚು ಅಲೆದಾಡುವಂತಾಗಲಿದೆ. ನಿಧಾನಗತಿಯ ಕೆಲಸ ಕಾರ್ಯಗಳು ಚುರುಕಾಗಿ ಮನಸ್ಸಿಗೆ ನೆಮ್ಮದಿ.

ಮಿಥುನ: ಮುಕ್ತ ಮಾತುಕತೆ ಮೂಲಕ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಇರುವ ಅವಕಾಶಗಳನ್ನು ಮುಂದುವರಿಸುವಿರಿ. ಪೆಟ್ರೋಲ್ ವ್ಯಾಪಾರದಲ್ಲಿ ಮಾರಾಟ ಉತ್ತಮವಾಗಿರುವುದು..

ಕರ್ಕಾಟಕ: ರಾಜಕೀಯ ವ್ಯವಹಾರಗಳ ಪ್ರಬಲ ಆಕಾಂಕ್ಷಿಯಾಗಿರುವ ನೀವು ಇನ್ನಷ್ಟು ಚುರುಕಾಗಬೇಕಾಗಿದೆ. ಲೇವಾದೇವಿ ವ್ಯವಹಾರದವರಿಗೆ ನಂಬಿಕೆದ್ರೋಹದ ಘಟನೆ ನಡೆಯಬಹುದು.

ಸಿಂಹ: ವೃತ್ತಿರಂಗದಲ್ಲಿ ಅಭಿವೃದ್ಧಿ ತೋರಿ ಬಂದರೂ ವಿಘ್ನ ಭೀತಿ. ಒಳಗೊಳಗೆ ಅಸೂಯೆ ಪಡುವ ಸಂಬಂಧಿಗಳು ನಿಮ್ಮ ಸಾಧನೆಗೆ ಅಡ್ಡಿ ತಂದಾರು. ರೈತರಿಗೆ ತಮ್ಮ ಬೆಳೆಗಳಿಗೆ ಉತ್ತಮ ಬೆಲೆ ದೊರೆಯುವ ಸಂಭವವಿದೆ.

ಕನ್ಯಾ: ಸಂಗಾತಿಯ ಸಲಹೆಗಳಿಗೆ ಗಮನ ಕೊಡಿ. ಸ್ನೇಹಿತರಲ್ಲಿ ಮನಸ್ತಾಪ ಬರದಂತೆ ಜಾಗರೂಕರಾಗಿರಿ. ಮಕ್ಕಳ ಮಾತುಗಳು ಗೊಂದಲಗಳನ್ನು ಸೃಷ್ಟಿಸಬಹುದು. ವಿಳಂಬವಾಗಿದ್ದ ವಿವಾಹ ವಿಷಯ ಮುಂದುವರಿಯಲಿದೆ.

ತುಲಾ: ಬುದ್ಧಿವಂತಿಕೆಯಿಂದ ಬೆಟ್ಟದಂತಹ ಸಮಸ್ಯೆಗಳು ಪರಿಹಾರ ಕಾಣಲಿವೆ. ಪತ್ರಿಕೆಯವರ ಸಹಕಾರದಿಂದ ನಿಮ್ಮ ಕೆಲಸಕ್ಕೆ ಹೆಚ್ಚಿನ ಪ್ರಚಾರ ಲಭಿಸುವುದು. ಹಣ ಉಳಿತಾಯದ ಸನ್ಮಾರ್ಗಗಳನ್ನು ಕಂಡುಕೊಳ್ಳುವಿರಿ.

ವೃಶ್ಚಿಕ: ಅಸೂಯೆ ಪಡುವ ಸಹೋದ್ಯೋಗಿ ಯಾರೆಂಬುವುದು ತಿಳಿಯುವುದು. ಕಾರ್ಯರಂಗದಲ್ಲಿ ನಿಮ್ಮ ಶ್ರದ್ಧೆ ಮತ್ತು ಶ್ರಮಕ್ಕೆ ತಕ್ಕ ಫಲವನ್ನು ನಿರೀಕ್ಷಿಸಬಹುದು. ನಿರುದ್ಯೋಗಿಗಳಿಗೆ ಉದ್ಯೋಗದ ಭರವಸೆ ದೇವತಾನುಗ್ರಹದಿಂದ ಸಿಗಲಿದೆ.

ಧನು: ಈ ದಿನ ನಿಮ್ಮ ವಚನದಲ್ಲಿ ಹಿಡಿತವಿರಲಿ. ಮಾತುಕತೆಯಿಂದ ಕಟ್ಟುಬೀಳುವ ಪರಿಸ್ಥಿತಿ. ರಾಜಕೀಯ ವ್ಯಕ್ತಿಗಳಿಗೆ ಅಧಿಕಾರ ತಪ್ಪುವ ಭೀತಿ. ಸತ್ಫಲಗಳಿಗಾಗಿ ಶಾರದೆಯನ್ನು ದರ್ಶಿಸುವುದು ಅಥವಾ ಸ್ಮರಿಸುವುದು ಒಳ್ಳೆಯದು.

ಮಕರ: ಆರಕ್ಷಕ ಸಿಬ್ಬಂದಿಗೆ ಕೆಲಸದ ಒತ್ತಡ ಅಥವಾ ಕೆಲಸದ ಸಮಯ ಹೆಚ್ಚಲಿದೆ. ಇತರರ ಮಾತಿಗೆ ಕಿವಿಗೊಡದೆ ನಿಮ್ಮಂತೆ ಇರುವುದು ಉತ್ತಮವಾಗಿರುತ್ತದೆ. ಮನೆಯಲ್ಲಿ ಮಕ್ಕಳಿಂದ ಸಂಭ್ರಮದ ವಾತಾವರಣ ಮೂಡುವುದು.

ಕುಂಭ: ಕೆಲವು ವಿಷಯಗಳಲ್ಲಿ ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳುವುದಕ್ಕಿಂತ ಇತರರ ಸಲಹೆ ಪಡೆಯುವುದು ಕೊನೇಪಕ್ಷ ಕಾಲ ಅವಕಾಶವನ್ನು ತೆಗೆದುಕೊಂಡು ಯೋಚಿಸಿ ಉತ್ತರ ನೀಡುವುದು ಉತ್ತಮ.

ಮೀನ: ಪಾಲುದಾರಿಕೆ ವ್ಯವಹಾರದಲ್ಲಿ ಲಾಭ. ಮಹಿಳೆಯರಿಗೆ ಆಭರಣ ಕೊಳ್ಳುವಂತಹ ಇಷ್ಟಾರ್ಥ ಸಿದ್ಧಿ. ಆಕಸ್ಮಿಕ ಪ್ರಯಾಣದ ಸಾಧ್ಯತೆಯಿದೆ. ಯಾವುದೇ ಸಮಸ್ಯೆಗಳಿಗಾದರೂ ಸುಲಭವಾಗಿ ಉತ್ತರ ಸಿಗುವುದು.

ಪದಬಂಧ 4878

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ತಪ್ಪು ಉದ್ದೇಶಕ್ಕೆ ಬಳಸುವುದು (5)
3.ಪಾಂಡಿತ್ಯ ಹೊಂದಿದವನು (3)
5.ಇದು ಮಿತಿಗೆ ಒಳಪಟ್ಟಿದ್ದು (4)
8.ಹೀಗೆ ತಿಳಿಸುವಿಕೆ (5)
11.ಹಣಕ್ಕಾಗಿ ನಡೆದ ಗೊಂದಲ! (4)
13.ಮಾಲು ತರುವಾಗ ತಲೆಗೆ ಸುತ್ತಿಕೊಂಡಿರುವ ಬಟ್ಟೆ! (3)
14.ಊಟದ ಸಮಾರಂಭ (5)

ಮೇಲಿಂದ ಕೆಳಕ್ಕೆ
1.ಕೆಟ್ಟ ಚಿಹ್ನೆ (4)
2.ಏರ್ಪಾಟು ಅಥವಾ ವ್ಯವಸ್ಥೆ (3)
4.ಈ ತರ ತಮ್ಮನಿಗೆ ತೋರಿದ ಭೇದ ಭಾವ! (4)
6.ತಿರುಗಿ ನಿಂತು ಆಡಿದ ಬೇಟೆ! (3)
7.ಪಡಸಾಲೆ ಇಲ್ಲಿ ಕಾಣುತ್ತಿದೆ (3)
8.ಸರ ಕೊಟ್ಟಿದ್ದಕ್ಕೇ ಇಷ್ಟೊಂದು ಆದರ! (3)
9.ಮಹಾಜನರು ಸೇರಿ ಮಾಡಿದ ಪಂಚನಾಮೆ (4)
10.ಪೇಚಾಟವನ್ನು ಹೀಗೆನ್ನಿ (4)
12.ಧಾನ್ಯವನ್ನು ಒಕ್ಕುವ ಸ್ಥಳ (3)

1			2		■	3		4
	■	■		■	■	■	■	
	■	■		■	5	6		
	■	■	■	7	■		■	
■	■	8					■	■
9	■		■		■	■	■	10
11				■	12	■	■	
	■	■	■	■		■	■	
13			■	14				

4877ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪರಕಾಯ3 ಅಂಗಾರಕ 5.ಮಡಿಕೆ6.ತಿಲಕ8.ಮರಣ 9.ತಾತಾ10.ವಜ್ರ11.ವಸನ12.ಕೆಲಸ 14.ಕಂಬನಿ16.ರಸಾಭಾಸ 17.ಹಾಲಾಹಲ

ಮೇಲಿಂದ ಕೆಳಕ್ಕೆ: 1.ಪದಾತಿ 2.ಯಮ3.ಅಂಕೆ4.ಕಲ್ಯಾಣ 7.ಕರತಾಡನ8.ಮನವರಿಕೆ 11.ವಕ್ತಾರ13.ಸತ್ಕುಲ14ಕಂಸ 15.ನಿಹಾ

ಸುಡೊಕು 5264

3	9		2		5		6	
			4			8		5
	4	5			9		3	
4	6		9		7			
				4		1		6
8		7	5		6		4	9
		4			2			7
7						6		3
	8		7			2		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5263 ಸುಡೊಕು

6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,206
ಇಂದಿನ ಅಂತ್ಯ	17,092
▼	114
ದಿನದ ಗರಿಷ್ಠ	17,148

ವಿನಿಮಯ ದರ

$ ಡಾಲರ್	74.86
£ ಪೌಂಡ್	101.67
€ ಯುರೊ	84.75
¥ ಯೆನ್ (100ಕ್ಕೆ)	64.94

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹415
ಮೈಸೂರು
12 ಮೊಟ್ಟೆಗೆ ₹58
100 ಮೊಟ್ಟೆಗೆ ₹415

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1425 (-)
ಸೋಯಾ (ರಿಫೈನ್ಡ್)	₹1390 (-)
ಸೂರ್ಯಕಾಂತಿ (ರಿಫೈನ್ಡ್)	₹1390 (-)
ಪಾಮೋಲಿನ್	₹1327 (-)

ಬೆಂಗಳೂರು ಈರುಳ್ಳಿ ಧಾರಣೆ

ಕ್ವಿಂಟಲ್‌ಗೆ

ದೊಡ್ಡ	₹2500-3400
ಮಧ್ಯಮ	₹1800-2500
ಸಣ್ಣ	₹1000-1800

ಕೊಬ್ಬರಿ ಧಾರಣೆ

ಪುತ್ತೂರು (ಇತರ)	₹11000-26000
ಕೆ.ಆರ್‌.ಪೇಟೆ (ಇತರ)	₹9000-9000
ತುರುವೇಕೆರೆ	₹17800-17800

ಇಂದು ವಿಚಾರಣೆ

ನವದೆಹಲಿ (ಪಿಟಿಐ): ಸಿಬಿಎಸ್‌ಇ ನಡೆಸಲಿರುವ 10 ಮತ್ತು 12ನೇ ತರಗತಿಗಳ ಆಫ್‌ಲೈನ್ ಪರೀಕ್ಷೆಗಳನ್ನು ರದ್ದುಗೊಳಿಸುವಂತೆ ಕೋರಿರುವ ಅರ್ಜಿಯ ವಿಚಾರಣೆ ಬುಧವಾರ ಸುಪ್ರೀಂಕೋರ್ಟ್‌ನಲ್ಲಿ ನಡೆಯಲಿದೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಆರಾಧ್ಯ, ಹುಲಿಕೆರೆ

- **ಪ್ರಶ್ನೆ: ನಾನು ಕೇಂದ್ರ ಸರ್ಕಾರದ ನಿವೃತ್ತ ನೌಕರ. ನನಗೆ ಮಾಸಿಕ ₹ 28,000 ಪಿಂಚಣಿ ಬರುತ್ತಿದೆ. ನಾನು ಐ.ಟಿ. ರಿಟರ್ನ್ಸ್ ಪ್ರತಿ ವರ್ಷ ಸಲ್ಲಿಸುತ್ತಿದ್ದೇನೆ. ನನಗೆ ಮತ್ತು ನನ್ನ ಶ್ರೀಮತಿಗೆ ಒಟ್ಟು ಐದು ಎಕರೆ ಕೃಷಿ ಜಮೀನು ಇದೆ. ನಾನು ಸೇವೆಯಲ್ಲಿದ್ದಾಗ ಕೃಷಿ ಆದಾಯ ತೋರಿಸಿರಲಿಲ್ಲ. ಈಗ ಕೃಷಿ ಆದಾಯವನ್ನು ರಿಟರ್ನ್ಸ್ ಸಲ್ಲಿಸುವಾಗ ತೋರಿಸಬಹುದೇ? ನಾನು ಸರ್ಕಾರಿ ನೌಕರರ ಗೃಹ ನಿರ್ಮಾಣ ಸಂಘದಲ್ಲಿ ನಿವೇಶನಕ್ಕಾಗಿ ₹ 1.75 ಲಕ್ಷದ ಕಂತು ಜಮಾ ಮಾಡುತ್ತಿದ್ದೇನೆ. ಒಟ್ಟು ಕಂತುಗಳು ಐದು ಇರಬಹುದು. ಇದಕ್ಕೇನಾದರೂ ತೆರಿಗೆ ರಿಯಾಯಿತಿ ಇದೆಯೇ?**

ಉತ್ತರ: ನೀವು ಪ್ರಶ್ನೆಯಲ್ಲಿ ಉಲ್ಲೇಖಿಸಿರುವಂತೆ ಮಾಸಿಕವಾಗಿ ₹ 28,000 ಪಿಂಚಣಿ ಪಡೆಯುತ್ತಿದ್ದೀರಿ. ಇದು ವಾರ್ಷಿಕವಾಗಿ ₹ 3.36 ಲಕ್ಷ. ಈ ಮೊತ್ತ ತೆರಿಗೆ ವಿನಾಯಿತಿಯ ಗರಿಷ್ಠ ಮಿತಿಗಿಂತ ಅಧಿಕ. ಆದಾಯ ತೆರಿಗೆ ಕಾಯ್ದೆ–1961ರ ಸೆಕ್ಷನ್ 10(1)ರ ಅಡಿಯಲ್ಲಿ ಕೃಷಿ ಆದಾಯಕ್ಕೆ ಆದಾಯ ತೆರಿಗೆಯಿಂದ ವಿನಾಯಿತಿ ಇದೆ. ಆದರೂ, ಆದಾಯ ತೆರಿಗೆ ಹೊಣೆಗಾರಿಕೆಯನ್ನು ಲೆಕ್ಕಾಚಾರ ಮಾಡುವಲ್ಲಿ ದರ ನಿರ್ಣಯದ ಉದ್ದೇಶಗಳಿಗಾಗಿ, ಕೆಳಗಿನ ಎರಡು ಷರತ್ತುಗಳನ್ನು ಒಟ್ಟಾಗಿ ಪೂರೈಸಿದರೆ, ಅಂದರೆ ನಿಮ್ಮ ಕೃಷಿ ಆದಾಯವು ₹ 5,000 ಮೀರಿದ್ದರೆ ಮತ್ತು ಒಟ್ಟು ಆದಾಯ, ನಿಮ್ಮ ಕೃಷಿ ಆದಾಯವನ್ನು ಹೊರತುಪಡಿಸಿ, ತೆರಿಗೆ ವಿನಾಯಿತಿಯ ಗರಿಷ್ಠ ಮಿತಿಯನ್ನು ಮೀರಿದ್ದರೆ ಆಗ ಬರುವ ತೆರಿಗೆ ಮೊತ್ತಕ್ಕೆ ವಿನಾಯಿತಿ ಇದೆ. ನಿಮ್ಮ ಪ್ರಸ್ತುತ ಕೃಷಿ ಆದಾಯದ ನಿರೀಕ್ಷಿತ ಮೊತ್ತವನ್ನು ನಿಮ್ಮ ಪ್ರಶ್ನೆಯಲ್ಲಿ ನಮೂದಿಸಿಲ್ಲ. ಆದರೂ ಇರುವ ಮಾಹಿತಿಯಂತೆ ಉತ್ತರಿಸುವುದಾದರೆ, ಮುಂದಿನ ವರ್ಷಗಳಲ್ಲಿ ಕೃಷಿ ಆದಾಯ ವಾರ್ಷಿಕವಾಗಿ ₹ 5 ಸಾವಿರಕ್ಕಿಂತ ಅಧಿಕವಿದ್ದರೆ, ನಿಮ್ಮ ಒಟ್ಟು ಕೃಷಿ ಆದಾಯವನ್ನು ಪಿಂಚಣಿ ಆದಾಯದೊಡನೆ ಸೇರಿಸಿ ತೆರಿಗೆ ಲೆಕ್ಕ ಹಾಕಬೇಕು. ಅದೇ ರೀತಿ ಕೃಷಿ ಆದಾಯದೊಡನೆ ನಿಮ್ಮ ವಯಸ್ಸಿಗೆ ಅನ್ವಯವಾಗುವ ತೆರಿಗೆ ವಿನಾಯಿತಿಯ ಗರಿಷ್ಠ ಮೊತ್ತದೊಡನೆ ಸೇರಿಸಿ ತೆರಿಗೆ ಲೆಕ್ಕ ಹಾಕಬೇಕು. ಮೊದಲ ಹಂತದಲ್ಲಿ ಲೆಕ್ಕ ಹಾಕಲಾದ ಕೃಷಿ ಆದಾಯದ ಮೇಲಣ ತೆರಿಗೆ ಮೊತ್ತವನ್ನು ಎರಡನೆಯ ಹಂತದಲ್ಲಿ ಲೆಕ್ಕ ಹಾಕಲಾದ ತೆರಿಗೆ ಮೊತ್ತದಿಂದ ಕಳೆದಾಗ ಉಳಿದ ಮೊತ್ತದ ಮೇಲಷ್ಟೇ ನೀವು ತೆರಿಗೆ ಕಟ್ಟಬೇಕು . ಇನ್ನೂ ಹೆಚ್ಚಿನ ನೆರವಿಗೆ, ಪೂರ್ಣ ಮಾಹಿತಿಯೊಂದಿಗೆ ನಿಮ್ಮ ಆಪ್ತ ತೆರಿಗೆ ಸಲಹೆದಾರರನ್ನು ಸಂಪರ್ಕಿಸಿ.

ಮುಂದಿನ ಪ್ರಶ್ನೆಯಲ್ಲಿ, ನೀವು ಸರ್ಕಾರಿ ನೌಕರರ ಗೃಹ ನಿರ್ಮಾಣ ಸಂಘದಲ್ಲಿ ನಿವೇಶನಕ್ಕಾಗಿ ಹಣ ಜಮಾ ಮಾಡುತ್ತಿದ್ದೀರಿ ಎಂದು ತಿಳಿಸಿರುವಿರಿ. ಪ್ರಸ್ತುತ ಆದಾಯ ತೆರಿಗೆ ನಿಯಮದ ಅಡಿ ಗೃಹ ಸಾಲದ ಅಸಲು ಮೊತ್ತ ಹಾಗೂ ಬಡ್ಡಿ ಮೊತ್ತದ ಪಾವತಿಗಷ್ಟೇ ತೆರಿಗೆ ವಿನಾಯಿತಿ ಇದೆ. ನಗದು ರೂಪದಲ್ಲಿ ಮನೆ, ಖಾಲಿ ಭೂಮಿ ಅಥವಾ ನಿವೇಶನ ಖರೀದಿಸಿದಾಗ ಯಾವುದೇ ರೀತಿಯ ರಿಯಾಯಿತಿ ಇರುವುದಿಲ್ಲ.

ಅವಿನಾಶ್ ಶರ್ಮಾ, ಕನ್ಯಾನ, ದ.ಕ.ಜಿಲ್ಲೆ

- **ಪ್ರಶ್ನೆ: ಮ್ಯೂಚುವಲ್ ಫಂಡ್ ಹೂಡಿಕೆಯ ಬಗ್ಗೆ ಕೇಳಿರುತ್ತೇನೆ. ಇವುಗಳೆಲ್ಲ ಹೂಡಿಕೆಯ ದೃಷ್ಟಿಯಲ್ಲಿ ಭದ್ರತೆ ಹೊಂದಿವೆಯೇ? ನಮ್ಮ ಹಣ ಅದರಲ್ಲಿ ಸುರಕ್ಷಿತವೇ? ಇದರ ಲಾಭ-ನಷ್ಟದ ಮೇಲೆ ಬರುವ ತೆರಿಗೆಯ ಬಗ್ಗೆಯೂ ತಿಳಿಸಿ.**

ಉತ್ತರ: ಮ್ಯೂಚುವಲ್ ಫಂಡ್ ಎನ್ನುವುದು ವೃತ್ತಿಪರವಾಗಿ ನಿರ್ವಹಿಸಲಾಗುವ ಹೂಡಿಕೆ ನಿಧಿ. ಅದು ಅನೇಕ ಹೂಡಿಕೆದಾರರಿಂದ ಹಣವನ್ನು ಸಂಗ್ರಹಿಸಿ, ಆಯಾ ಫಂಡ್‌ನ ಒಟ್ಟು ಆಶಯಕ್ಕೆ ಅನುಗುಣವಾಗಿ ವಿವಿಧ ಕಂಪನಿಯ ಷೇರು, ಬಾಂಡ್ ಮತ್ತು ಅಲ್ಪಾವಧಿಯ ಭದ್ರತಾ ಸಾಲಗಳಲ್ಲಿ ಹೂಡಿಕೆ ಮಾಡುವ ವ್ಯವಸ್ಥೆ. ಯಾವುದೇ ಮ್ಯೂಚುವಲ್ ಫಂಡ್‌ನಲ್ಲಿ ವ್ಯಕ್ತಿಯೊಬ್ಬ ಹೂಡಿಕೆ ಮಾಡಿದಾಗ, ಆ ಮೊತ್ತವನ್ನು ಆಯಾ ಆಸ್ತಿ ನಿರ್ವಹಣೆ ಕಂಪನಿಯು ಪ್ರತಿ ಫಂಡ್‌ನಲ್ಲಿ ಇರಬಹುದಾದ ಆರ್ಥಿಕ ಅಪಾಯಗಳನ್ನು ಹೂಡಿಕೆದಾರರಿಗೆ ತಿಳಿಸುವ ಕಡತ (fact sheet) ಬಿಡುಗಡೆಗೊಳಿಸುತ್ತದೆ. ಪ್ರತಿ ಹೂಡಿಕೆದಾರನೂ ಇದನ್ನು ಮೊದಲೇ ಓದಿ ಹೂಡಿಕೆ ಮಾಡುವುದು ಹಣದ ಭದ್ರತೆಯ ದೃಷ್ಟಿಯಲ್ಲಿ ಅನಿವಾರ್ಯ. ಅದರಲ್ಲಿನ ಮಾಹಿತಿ ಅರಿಯುವುದು ಹೂಡಿಕೆದಾರನ ಜವಾಬ್ದಾರಿ. ಉಂಟಾಗುವ ನಷ್ಟಕ್ಕೆ ಹೂಡಿಕೆದಾರನೇ ಹೊಣೆಗಾರ.

ಮ್ಯೂಚುವಲ್ ಫಂಡ್ ಕಂಪನಿಗಳು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಮತ್ತು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಮೇಲ್ವಿಚಾರಣೆಯಲ್ಲಿರುತ್ತವೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಮ್ಯೂಚುವಲ್ ಫಂಡ್ ಕಂಪನಿಗಳು ಬ್ಯಾಂಕಿನಷ್ಟೇ ಸುರಕ್ಷಿತ. ಆದರೂ, ನೀವು ಹೂಡಿಕೆ ಮಾಡುತ್ತಿರುವ ಕಂಪನಿಗಳ ವ್ಯಾವಹಾರಿಕ ಮಾಹಿತಿ ತಿಳಿಯುತ್ತಿರಲು ಪ್ರಯತ್ನಿಸಿ.

ಮ್ಯೂಚುವಲ್ ಫಂಡ್‌ಗಳಿಂದ ಬರುವ ಡಿವಿಡೆಂಡ್, ಆಯಾ ವ್ಯಕ್ತಿಯ ವೈಯಕ್ತಿಕ ತೆರಿಗೆ ದರಕ್ಕೆ ಅನ್ವಯವಾಗಿರುತ್ತದೆ. ಬಂಡವಾಳ ಲಾಭದ ತೆರಿಗೆ ದರವು ಹೂಡಿಕೆಯ ಅವಧಿ ಮತ್ತು ಮ್ಯೂಚುವಲ್ ಫಂಡ್‌ನ ಪ್ರಕಾರವನ್ನು ಅವಲಂಬಿಸಿರುತ್ತದೆ. ಹೂಡಿಕೆಗೆ ಅನುಗುಣವಾಗಿ ತೆರಿಗೆಯ ದರವು ಶೇ 10, ಶೇ 15, ಶೇ 20ರಷ್ಟು ಇರುತ್ತದೆ. ಪ್ರತಿ ಫಂಡ್ ಕೂಡ ತೆರಿಗೆ ದೃಷ್ಟಿಯಿಂದ ತುಸು ಬೇರೆ ಬೇರೆ ಆಗಿರುವುದರಿಂದ ನಿರ್ದಿಷ್ಟ ಮಾಹಿತಿಗೆ ನಿಮ್ಮ ತೆರಿಗೆ ಸಲಹೆದಾರರನ್ನು ಸಂಪರ್ಕಿಸಿ. •

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001. ಇ–ಮೇಲ್: businessdesk@prajavani.co.in

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	430- 450
ನಡುಗೋಲು	50 0-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750 - 800
ಹೆರಕಿದ್ದು	1,100-1,150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1,200-1,250
ಕಾಳು ಮೆಣಸು	510

ಅಡಿಕೆ, ಬಂಟ್ವಾಳ

ಕೋಕ	12500-25000
ಹೊಸತು	27500-45000
ಹಳತು	46000-53000

ಚನ್ನಗಿರಿ

ರಾಶಿ	44899-46500

ಚಿತ್ರದುರ್ಗ

ಆಪಿ	45619-46029
ಬೆಟ್ಟೆ	36349-36789
ಕೆಂಪುಗೋಟು	30909-31310
ರಾಶಿ	45139-45569

ಕುಂದಾಪುರ

ಹಳೆಚಾಲಿ	51500-52500
ಹೊಸಚಾಲಿ	43500-44500

ಮಂಗಳೂರು

ಕೋಕ	29000-50216

ಪುತ್ತೂರು

ಕೋಕ	1000- 26000
ಹೊಸತು	27500- 45000

ಸಾಗರ

ಬಿಳಿಗೋಟು	24899-27929
ಚಾಲಿ	32099-37299
ಕೋಕ	26969-28799
ಕೆಂಪುಗೋಟು	27899-37689
ರಾಶಿ	41606-46999
ಸಿಪ್ಪೆಗೋಟು	5390-20009

ಸಿದ್ದಾಪುರ

ಬಿಳಿಗೋಟು	22899-32399
ಚಾಲಿ	43711-45999
ಕೋಕ	20871-28599
ಹೊಸಚಾಲಿ	35099-40599
ಕೆಂಪುಗೋಟು	28809-32789
ರಾಶಿ	43379-46809
ತಟ್ಟಿಬೆಟ್ಟೆ	37689-43869

ಶಿರಸಿ

ಬೆಟ್ಟೆ	26719-44399
ಬಿಳಿಗೋಟು	21919-34099
ಚಾಲಿ	32160-42461
ರಾಶಿ	36009-46989

ತುಮಕೂರು

ರಾಶಿ	45400-46300

ಯಲ್ಲಾಪುರ

ಆಪಿ	53170-54629
ಬಿಳಿಗೋಟು	26899-32009
ಕೋಕ	9022-0212
ಹಳೆಚಾಲಿ	44000- 47409
ಹೊಸಚಾಲಿ	34506-41800
ಕೆಂಪುಗೋಟ	28919-36399
ರಾಶಿ	45799-52039
ತಟ್ಟಿಬೆಟ್ಟೆ	38199- 45380

ರೇಷ್ಮೆಗೂಡು ಮಾರುಕಟ್ಟೆ
ರಾಮನಗರ

ಮಿಶ್ರ ತಳಿ:	200-744
ದ್ವಿತಳಿ;	425 -875

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16000	15900	16050	—
ಎಸಿ	7810	7400	8000	
ಆರ್‌ಪಿ	8000	7800	8100	
ಆರ್‌ಸಿ	4100	3950	4050	2256 ಡಾಲರ್ಸ್

ಎಲ್‌ಐಸಿ: ಸರ್ಕಾರಿ ನಿಯಂತ್ರಣಕ್ಕೆ ಹೂಡಿಕೆದಾರರ ಕಳವಳ

ಮುಂಬೈ (ರಾಯಿಟರ್ಸ್): ಸರ್ಕಾರ ನಿಗದಿ ಮಾಡುವ ಗುರಿಗಳನ್ನು ತಲುಪುವ ಭರದಲ್ಲಿ ಹೂಡಿಕೆದಾರರ ಹಿತಾಸಕ್ತಿಗಳನ್ನು ಬಲಿಕೊಡುವುದಿಲ್ಲ ಎಂಬ ಭರವಸೆ ನೀಡುವಂತೆ ಭಾರತೀಯ ಜೀವ ವಿಮಾ ನಿಗಮದಲ್ಲಿ (ಎಲ್‌ಐಸಿ) ಹೂಡಿಕೆ ಮಾಡುವ ಆಲೋಚನೆಯಲ್ಲಿರುವ ಕೆಲವರು ಆಗ್ರಹಿಸಿದ್ದಾರೆ. ಎಲ್‌ಐಸಿಯು ಐಪಿಒ (ಆರಂಭಿಕ ಸಾರ್ವಜನಿಕ ಕೊಡುಗೆ) ಮೂಲಕ ತನ್ನ ಶೇಕಡ 5ರಷ್ಟು ಷೇರುಗಳನ್ನು ಮಾರಾಟ ಮಾಡಲಿದೆ.

ಷೇರು ಮಾರಾಟದ ಮೂಲಕ ಅಂದಾಜು ₹ 60 ಸಾವಿರ ಕೋಟಿ ಸಂಗ್ರಹಿಸಲಿದೆ. ಷೇರು ಮಾರಾಟದ ನಂತರದಲ್ಲಿ ಕೇಂದ್ರ ಸರ್ಕಾರವು ಎಲ್‌ಐಸಿಯ ಬಹುಪಾಲು ಷೇರುಗಳನ್ನು (ಶೇ 95ರಷ್ಟು) ಹೊಂದಿರಲಿದೆ.

ದೇಶದಲ್ಲಿ ಇದುವರೆಗೆ ನಡೆದಿರುವ ಎಲ್ಲ ಐಪಿಒಗಳ ಪೈಕಿ ಎಲ್‌ಐಸಿ ಐಪಿಒ ಅತಿದೊಡ್ಡದಾಗಿರಲಿದೆ. ಇದರ ಭಾಗವಾಗಿ ವರ್ಚುವಲ್ ಆಗಿ ರೋಡ್‌ಶೋಗಳು ನಡೆಯುತ್ತಿವೆ. ಇದರಲ್ಲಿ ಪಾಲ್ಗೊಂಡಿದ್ದವರು, ಎಲ್‌ಐಸಿಯ ಹಿಂದೆ ಮಾಡಿದ್ದ ಹೂಡಿಕೆಗಳು ಹಾಗೂ ಅವು ಈಗ ಎಷ್ಟು ಲಾಭದಾಯಕವಾಗಿವೆ ಎಂಬುದರ ಬಗ್ಗೆ ಕಟು ಪ್ರಶ್ನೆಗಳನ್ನು ಕೇಳಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕೇಂದ್ರ ಸರ್ಕಾರದ ಕೆಲವು ಕಂಪನಿಗಳ ಷೇರುಗಳನ್ನು ಎಲ್‌ಐಸಿ ಈಚಿನ ವರ್ಷಗಳಲ್ಲಿ ಖರೀದಿಸಿದೆ. ಬಿಕ್ಕಟ್ಟಿಗೆ ಸಿಲುಕಿದ ಹಣಕಾಸು ಸಂಸ್ಥೆಗಳನ್ನು ಉಳಿಸಲು ಕೂಡ ಎಲ್‌ಐಸಿ ಯನ್ನು ಬಳಸಿಕೊಂಡ ನಿದರ್ಶನ ಇದೆ.

‘ಕೇಂದ್ರ ಸರ್ಕಾರದ ಸಚಿವಾಲಯಗಳು ಎಲ್‌ಐಸಿ ಪೂರ್ತಿಯಾಗಿ ತಮ್ಮ ಅಧೀನದಲ್ಲಿ ಇದೆ ಎಂದು ಭಾವಿಸಬಹುದು. ಅಲ್ಲದೆ, ತಮಗೆ ಅಗತ್ಯ ಕಂಡಾಗಲೆಲ್ಲ ಇದು ತಮ್ಮದೇ ಕಂಪನಿ ಎಂಬಂತೆ ಒತ್ತಡ ಹೇರಬಹುದು. ಇದು ಹೂಡಿಕೆದಾರರಲ್ಲಿ ಕಳವಳಕ್ಕೆ ಕಾರಣ’ ಎಂದು ಹೂಡಿಕೆದಾರರಿಗೆ ಸಲಹೆ ನೀಡುವ ಇನ್‌ಗವರ್ನ್ ಸಂಸ್ಥೆಯ ಶ್ರೀರಾಮ್ ಸುಬ್ರಮಣಿಯನ್ ಪ್ರತಿಕ್ರಿಯೆ ನೀಡಿದ್ದಾರೆ. ಈ ಬಗ್ಗೆ ಪ್ರತಿಕ್ರಿಯೆ ನೀಡಲು ಎಲ್‌ಐಸಿ ನಿರಾಕರಿಸಿದೆ. ಕೇಂದ್ರ ಹಣಕಾಸು ಸಚಿವಾಲಯದಿಂದ ಪ್ರತಿಕ್ರಿಯೆ ದೊರೆತಿಲ್ಲ.

ಚುನಾವಣೆ ನಂತರ ತೈಲ ಬೆಲೆ ಹೆಚ್ಚಳ?

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 100 ಡಾಲರ್ ಸಮೀಪಕ್ಕೆ ಬಂದಿದ್ದು, ಈಗ ಜಾರಿಯಲ್ಲಿ ಇರುವ ವಿಧಾನಸಭಾ ಚುನಾವಣೆಗಳ ನಂತರ ದೇಶಿ ಮಾರುಕಟ್ಟೆಯಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಆಗುವ ಸಾಧ್ಯತೆ ಇದೆ.

ರಷ್ಯಾ–ಉಕ್ರೇನ್ ಬಿಕ್ಕಟ್ಟು ಇನ್ನಷ್ಟು ತೀವ್ರವಾದರೆ ತೈಲ ಪೂರೈಕೆಗೆ ಅಡಚಣೆ ಉಂಟಾಗಬಹುದು ಎಂಬ ಭೀತಿಯಿಂದ, ಏಪ್ರಿಲ್‌ನಲ್ಲಿ ಪೂರೈಕೆಯಾಗಬೇಕಿರುವ ಬ್ರೆಂಟ್ ಕಚ್ಚಾ ತೈಲದ ಬೆಲೆಯು 98 ಡಾಲರ್ ದಾಟಿದೆ. ಜಾಗತಿಕ ಕಚ್ಚಾ ತೈಲ ಮಾರುಕಟ್ಟೆಯಲ್ಲಿ ರಷ್ಯಾ ಶೇಕಡ 10ರಷ್ಟು ಪಾಲು ಹೊಂದಿದೆ.

ಭಾರತದ ಕಚ್ಚಾ ತೈಲದ ಒಟ್ಟು ಆಮದಿನಲ್ಲಿ ಶೇ 1ರಷ್ಟು, ಕಲ್ಲಿದ್ದಲಿನ ಒಟ್ಟು ಆಮದಿನಲ್ಲಿ ಶೇ 1.3ರಷ್ಟು ರಷ್ಯಾದಿಂದ ಬರುತ್ತವೆ. ರಷ್ಯಾದ ಗ್ಯಾಜ್‌ಪ್ರಾಂ ಕಂಪನಿಯಿಂದ ಭಾರತವು ಪ್ರತಿವರ್ಷ 25 ಲಕ್ಷ ಟನ್ ನೈಸರ್ಗಿಕ ಅನಿಲ ಖರೀದಿಸುತ್ತದೆ.

ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಪೆಟ್ರೋಲ್, ಡೀಸೆಲ್ ಬೆಲೆಯನ್ನು 110 ದಿನಗಳಿಂದ ಹೆಚ್ಚಿಸಿಲ್ಲ. ಈಗಿನ ದರವು, ಕಚ್ಚಾ ತೈಲದ ಬೆಲೆ 82–83 ಡಾಲರ್‌ಗೆ ಸರಿಹೊಂದುವಂತೆ ಇದೆ. ಹಾಗಾಗಿ, ಚುನಾವಣೆ ಮುಗಿದ ತಕ್ಷಣ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳವಾಗುವುದು ಖಚಿತ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ
22-2-2022

ಜಾವಾ 70/80(ಹೊಸ)	10250-10300
ಜಾವಾ 80/90(ಹೊಸ)	9850-9900
ದಪ್ಪ ಮಧ್ಯಪ್ರದೇಶ(ಹೊಸ)	9500-9600
ದಪ್ಪ ಗುಜರಾತ್(ಹೊಸ)	8400-8500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1435 (-)
ಒಂದು ವಾರದ ಡೆಲಿವರಿ	1430 (-)
ಸೋಯಾ ಕಚ್ಚಾ	1380 (-)
ಪಾಮ್ ವಾರದ ಡೆಲಿವರಿ	1325 (-)
ಸೂರ್ಯಕಾಂತಿ ಎಣ್ಣೆ ಕಚ್ಚಾ	1330 (-)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	49,930 (-)
ಬೆಳ್ಳಿ ಕೆ.ಜಿ	64,370 (-)

ಸೆನ್ಸೆಕ್ಸ್, ನಿಫ್ಟಿ ಕುಸಿತ

ಮುಂಬೈ (ಪಿಟಿಐ): ರಷ್ಯಾ–ಉಕ್ರೇನ್ ಸಂಘರ್ಷ ತೀವ್ರಗೊಂಡ ಕಾರಣ ದೇಶದ ಷೇರು ಮಾರುಕಟ್ಟೆಗಳು ಕುಸಿತ ಕಂಡವು. ದಿನದ ಆರಂಭದಲ್ಲಿ ಸರಿಸುಮಾರು 1,300 ಅಂಶಗಳಷ್ಟು ಇಳಿಕೆ ಕಂಡಿದ್ದ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್, ದಿನದ ಕೊನೆಯಲ್ಲಿ 382 ಅಂಶ ಇಳಿಕೆಯೊಂದಿಗೆ ವಹಿವಾಟು ಅಂತ್ಯಗೊಳಿಸಿತು.

ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 114 ಅಂಶ ಇಳಿಕೆ ದಾಖಲಿಸಿತು. ‘ಬಿಕ್ಕಟ್ಟು ತೀವ್ರಗೊಂಡಿರುವುದರ ಆರ್ಥಿಕ ಪರಿಣಾಮಗಳು ಈಗಾಗಲೇ ಕಾಣಿಸುತ್ತಿವೆ. ಕಚ್ಚಾ ತೈಲ ಹಾಗೂ ಚಿನ್ನದ ಬೆಲೆ ಹೆಚ್ಚಾಗಿದೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

‘ಜಗತ್ತಿನ ಅರ್ಥ ವ್ಯವಸ್ಥೆಯು ಸಹಜ ಸ್ಥಿತಿಗೆ ಬರುತ್ತಿದ್ದ ಹೊತ್ತಿನಲ್ಲಿ ರಷ್ಯಾ ದೇಶವು, ಉಕ್ರೇನ್‌ನ ಪ್ರತ್ಯೇಕತಾವಾದಿಗಳ ಪ್ರದೇಶಗಳು ಸ್ವತಂತ್ರವೆಂದು ಪರಿಗಣಿಸಿದೆ. ಆ ಮೂಲಕ ಕಠಿಣ ನಿರ್ಬಂಧಗಳಿಗೆ ಗುರಿಯಾಗುವ ಸಾಧ್ಯತೆ ಇದೆ’ ಎಂದು ಎಲ್‌ಕೆಪಿ ಸೆಕ್ಯುರಿಟೀಸ್‌ನ ಸಂಶೋಧನಾ ಮುಖ್ಯಸ್ಥ ಎಸ್. ರಂಗನಾಥನ್ ಹೇಳಿದ್ದಾರೆ.

9 ಲಕ್ಷ ಷೇರು ಉಡುಗೊರೆ ನೀಡಿದ ಐಡಿಎಫ್‌ಸಿ ಫಸ್ಟ್ ಸಿಇಒ

ನವದೆಹಲಿ (ಪಿಟಿಐ): ಐಡಿಎಫ್‌ಸಿ ಫಸ್ಟ್ ಬ್ಯಾಂಕ್‌ನ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ವಿ. ವೈದ್ಯನಾಥನ್ ಅವರು ತಮ್ಮ ಬಳಿ ಇದ್ದ, ಬ್ಯಾಂಕ್‌ನ 9 ಲಕ್ಷ ಷೇರುಗಳನ್ನು ತಮ್ಮ ತರಬೇತುದಾರ, ಮನೆಯ ಸಹಾಯಕ, ಚಾಲಕ ಸೇರಿದಂತೆ ಒಟ್ಟು ಐವರಿಗೆ ಉಡುಗೊರೆಯಾಗಿ ನೀಡಿದ್ದಾರೆ. ಇಷ್ಟು ಷೇರುಗಳ ಮೌಲ್ಯವು ₹ 3.95 ಕೋಟಿಗಿಂತ ಹೆಚ್ಚು.

ಐದೂ ಜನ ವೈದ್ಯನಾಥನ್ ಅವರ ಸಂಬಂಧಿಗಳಲ್ಲ. ಅವರಿಗೆ ಮನೆ ಖರೀದಿಗೆ ನೆರವಾಗಲಿ ಎಂಬ ಉದ್ದೇಶದಿಂದ ಷೇರುಗಳನ್ನು ಉಡುಗೊರೆಯಾಗಿ ನೀಡಿದ್ದಾರೆ. ವೈದ್ಯನಾಥನ್ ಅವರು ಈ ಹಿಂದೆಯೂ ಇದೇ ರೀತಿ ಷೇರು ಉಡುಗೊರೆ ನೀಡಿದ್ದರು.

ಪೆಗಾಸಸ್ ಪ್ರಕರಣ ಶುಕ್ರವಾರ ವಿಚಾರಣೆ

ನವದೆಹಲಿ (ಪಿಟಿಐ): ಇಸ್ರೇಲ್‌ನ ಬೇಹುಗಾರಿಕೆ ಕುತಂತ್ರಾಂಶವಾದ ಪೆಗಾಸಸ್ ಬಳಸಿ ಭಾರತದಲ್ಲಿ ಬೇಹುಗಾರಿಕೆ ನಡೆಸಲಾಗಿದೆ ಎಂಬ ಆರೋಪದ ಕುರಿತು ತನಿಖೆಗೆ ಕೋರಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆಯನ್ನು ಬುಧವಾರದ ಬದಲಿಗೆ ಶುಕ್ರವಾರ ನಡೆಸುವುದಾಗಿ ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ಈ ಪ್ರಕರಣದಲ್ಲಿ ಕೇಂದ್ರ ದ ಪರ ವಾದ ಮಾಡಬೇಕಿರುವ ಸಾಲಿಸಿಟರ್ ಜನರಲ್ ಅವರು ಮತ್ತೊಂದು ಪೀಠದ ಮುಂದೆ, ಅಕ್ರಮ ಹಣಕಾಸು ವ್ಯವಹಾರಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ವಾದ ಮಂಡಿಸುವುದರಲ್ಲಿ ತೊಡಗಿದ್ದಾರೆ. ಹಾಗಾಗಿ ವಿಚಾರಣೆಯನ್ನು ಶುಕ್ರವಾರ ನಡೆಸುವುದಾಗಿ ಸುಪ್ರೀಂ ಕೋರ್ಟ್ ತಿಳಿಸಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

✓ TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

✓ ಕಂಪನಿಗಳಿಗೆ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC, PUC, Degree ಯವರು ITIನವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,100-56,000/- ವಸತಿಯೂಟದೊಂದಿಗೆ. 7899778278, 9611715755

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹೋಂನರ್ಸಗಳು ಹುಡುಗಿಯರು ಬೇಕಾಗಿದ್ದಾರೆ. ಊಟವಸತಿವಿದೆ. 10.000 - 15,000. 8951315839, 9880545002

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155/ 8139988588

✓ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 16,600- 62000/- (ಮನೆಯಲ್ಲಿಯೇಕೆಲಸ) ವಸತಿಯೂಟದೊಂದಿಗೆ 9035363706, 9035364696

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC, Degree ಸಂಬಳ:15000 to 28000 ಸಂಪರ್ಕಿಸಿರಿ 9980814578, 9980812378

Hotel

ಸಹಾಯಕರು ಬೇಕಾಗಿದ್ದಾರೆ (ಪುರುಷರು) ರಾಮನಗರದ ಬಳಿಯಿರುವ ರೆಸಾರ್ಟ್‌ನಲ್ಲಿ ಕೆಲಸ ಮಾಡಲು, ಊಟ, ವಸತಿಯೊಂದಿಗೆ ಆಕರ್ಷಕ ಸಂಬಳ. 9353191972/ 8867338388

Hospital & Medical Jobs

ತಕ್ಷಣ ಬೇಕಾಗಿದ್ದಾರೆ SSLC, PUC ಪಾಸ್/ ಫೇಲ್ ಆದವರಿಗೆ ಹೊಂನರ್ಸಿಂಗ್ ತರಬೇತಿಯೊಂದಿಗೆ ಕೆಲಸ ಲಭ್ಯವಿದೆ. ಸಂಬಳ: 11,000 ರಿಂದ 22,000 ದವರೆಗೆ ಊಟ ವಸತಿ ಉಚಿತ (ಸರ್ಕಾರಿ ನೊಂದಾಯಿತ ಸಂಸ್ಥೆ) 9742892222, 9742270055, 9743135666

Part-Time Jobs

✓ ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Drivers

HAEID REQUIRES Experienced Educated 4WH Automatic car Driver at Rajajinagar Bangalore. Attractive package& immediate placement Contact +91 6366443134.

ಉಬರ್ ಮತ್ತು ಓಲಾಗೆ ಚಾಲಕರು ಬೇಕಾಗಿದ್ದಾರೆ! ಪ್ರತಿ ತಿಂಗಳು ರೂ.30000/- ವರೆಗೆ ಗಳಿಸಬಹುದು. ಎವರೆಸ್ಟ್ ಫ್ಲೀಟ್: 080-47179009 ಅನ್ನು ಸಂಪರ್ಕಿಸಿ .

Cook

ಬೆಂಗಳೂರಿನ ಹತ್ತಿರ ಹೊಸೂರು ರಸ್ತೆಯಲ್ಲಿರುವ ವೃದ್ಧಾಶ್ರಮಕ್ಕೆ ಅನುಭವ ಇರುವ ಸಸ್ಯಾಹಾರಿ ಅಡುಗೆಯವರು ಬೇಕಾಗಿದ್ದಾರೆ. ಊಟ, ವಸತಿ ಉಚಿತ. ಉತ್ತಮ ಸಂಬಳ. 9880855005

ಬೆಂಗಳೂರಿನ ಕೋರಮಂಗಲದಲ್ಲಿರುವ ಮನೆಗೆ ಅನುಭವ ಇರುವ ಸಸ್ಯಾಹಾರಿ ಅಡುಗೆಯವರು ಬೇಕಾಗಿದೆ. ಊಟ, ವಸತಿ ಉಚಿತ, ಉತ್ತಮ ಸಂಬಳ. 9880855005

Multiple Vacancy

ವಿಕಲಚೇತನರಿಗಾಗಿ ಉದ್ಯೋಗ ಮೇಳ: ಸಮರ್ಥನಂ ಅಂಗವಿಕಲರ ಸಂಸ್ಥೆ ವತಿಯಿಂದ ವಿಕಲಚೇತನರಿಗಾಗಿ ದಿನಾಂಕ: 25-02-2022ರಂದು ಬೆಂಗಳೂರಿನ ಮೆಜೆಸ್ಟಿಕ್ ಹತ್ತಿರದ ಮ್ಯಾನ್‌ಫೋ ಬೆಲ್ ಹೋಟೆಲ್ ಅಂಡ್ ಕನ್ವೆನ್‌ಷನ್ ಸೆಂಟರ್‌ನಲ್ಲಿ ಉದ್ಯೋಗ ಮೇಳ ಆಯೋಜಿಸಲಾಗಿದೆ. ಎಸ್.ಎಸ್.ಎಲ್.ಸಿ ಉತ್ತೀರ್ಣ. ಹೆಚ್ಚಿನ ಮಾಹಿತಿಗೆ ದೂ.: 080-68333999, 6364867795, 9449864693 ಸಂಪರ್ಕಿಸಬಹುದು.

ಪ್ರವಾಸ

Travel

ಕಾಶಿ, ಪ್ರಯಾಗ, ಗಯಾ, ನೈಮಿಶಾರಣ್ಯ, ಅಯೋಧ್ಯ 24.03.2022,11.04.2022 ರಿಂದ 7 ದಿನಗಳು/ ಉಜ್ಜಯಿನಿ, ಓಂಕಾರೇಶ್ವರ್, ಮಾತ್ರಗಯಾ ಸೋಮನಾಥ್, ದ್ವಾರಕಾ 21.03.2022 ರಿಂದ 10 ದಿನಗಳು/ ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದರಿನಾಥ್, ಕಾಶಿ.,ಗಯಾ 27.04.2022,29.04.2022, 06.05.2022 ರಿಂದ 14/18 ದಿನಗಳು. ಸಂಪರ್ಕಿಸಿ: 26508925, 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ, ಬೆಂಗಳೂರು-18

ಊಟ ಎಸಿ ರೂಂ ನೊಂದಿಗೆ *ವಿಮಾನ ಪ್ರವಾಸ*22-3-2022 ಗುಜರಾತ್ 7ದಿನ, 8-5-22 ವೈಷ್ಣೋದೇವಿ 8 ದಿನ, 28-5-22 ಮೂರು ಜ್ಯೋತಿರ್ಲಿಂಗ 7ದಿನ *ಬಸ್ ಪ್ರವಾಸ* 9-3-22 ತಮಿಳುನಾಡು 4ದಿನ 27-4-22 ಹೈದರಾಬಾದ್, ಮಂತ್ರಾಲಯ, ಶ್ರೀ ಶೈಲ 5ದಿನ 8496044942 ಮಲ್ಲಿಕಾರ್ಜುನ ಟೂರ್ಸ್

18.04.2022, 11ದಿನಗಳ ಕಾಶಿಯಾತ್ರೆ. 07.04.2022, 11ದಿನಗಳ ನೇಪಾಳ. ಪೊಖ್ರಾ, ಮುಕ್ತಿನಾಥ್,ಕಾಶಿ. 21.04.2022, 12ದಿನಗಳ ವೈಷ್ಣೋದೇವಿ, ಕುಲುಮನಾಲಿ, ಪಂಚಶಕ್ತಿಪೀಠಗಳು. 04.05.2022,18.05.2022, 15ದಿನಗಳ ಚಾರ್‌ಧಾಮ್‌ಯಾತ್ರೆ. ಸಂಪರ್ಕಿಸಿ: ವಿಷ್ಣು ಟೂರ್ಸ್ ಅಂಡ್ ಟ್ರಾವಲ್ಸ್, ತ್ಯಾಗರಾಜನಗರ, ಬೆಂಗಳೂರು-70. 9342287551, 8050629305

ವ್ಯಾಪಾರ

Business Offers

Finance

COMPANY PROVIDES All Types of Loan Personal, Property, Project & Business. ROI 4% (Per Annum) Required Agents & DSA, 55000/- Salary & 4% Commission: 7495037212

Machinery & Tools

START YOUR Own Business. Paper Plates, Paper Cups. Fully Automatic Machines Manufactured in Bangalore. 'Guru Enterprises': 9845049816

ಭವಿಷ್ಯ

Astrology

'ವಿಶ್ವಖ್ಯಾತಿಯ ದಕ್ಷಿಣಕನ್ನಡ' ಕೇರಳಿಯ ದೈವಸಂಭೂತ ಜ್ಯೋತಿಷ್ಯ,ವಾಸ್ತುಗುರು ಶ್ರೀದೇವಾನಂದನ್ ರವರಿಂದ ಜೀವನದ ಸರ್ವತೋಮುಖ ಅಭಿವೃದ್ಧಿ,ಸುಖಶಾಂತಿ, ನೆಮ್ಮದಿಗಾಗಿ,ಸರ್ವಮನಇಚ್ಛ, ಮಹಾವಶೀಕರಣ,ಆಕರ್ಷಣಾ, ಸಂಮೋಹನ ಮತ್ತು ಶತ್ರು ಸಂಬಂಧಿತ,ದುಷ್ಟಶಕ್ತಿ ಮಾಯಾವಿಗಳ ಇಂದೇ ಪರಿಹಾರಕ್ಕಾಗಿ.9845005009

ಸ್ತ್ರೀ-ವಶೀಕರಣ, ಪುರುಷ - ವಶೀಕರಣ, ಮಾಟ-ಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಉಚಿತ-ಭವಿಷ್ಯ, ಖಚಿತ- ಪರಿಹಾರ. ರೈತರ ಸಮಸ್ಯೆಗಳಿಗೆ ತಾಯತ ಮಾಡಿಕೊಡುತ್ತಾರೆ. ಸಂಪರ್ಕಿಸಿ : ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	60	85	70	115

CD Per Sqcm	Single Col	Double Col	Multi Col
	430	450	475

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

*condition apply

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form



When Love has filled the Heart,
It has really been Transformed into Divinity.
For, God is Love and Love is God.
- Bhagawan Sri Sathya Sai Baba

Sri Yadalam N Gangadhara Setty garu
Attained the Lotus Feet of Bhagawan on 22nd February 2022.
Deeply Mourned by Yadalam Family
Ramkumar Mills Pvt. Ltd • Sumangala Properties

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರೊ ಕಬಡ್ಡಿ ಲೀಗ್: ಮೂರನೇ ಫೈನಲ್ ಮೇಲೆ ಬುಲ್ಸ್ ಕಣ್ಣು

ಡೆಲ್ಲಿಗೆ ‘ಪವನಶಕ್ತಿ’ ಸವಾಲು

ಪ್ರಜಾವಾಣಿ ವಾರ್ತೆ



ಪವನ್ ಕುಮಾರ್ ಶೆರಾವತ್

ಬೆಂಗಳೂರು: ನಾಯಕ ಪವನ್ ಶೆರಾವತ್ ಪರಾಕ್ರಮದಲ್ಲಿ ಮಿನುಗುತ್ತಿರುವ ಬೆಂಗಳೂರು ಬುಲ್ಸ್ ತಂಡವು ಎಂಟನೇ ಆವೃತ್ತಿಯ ಪ್ರೊ ಕಬಡ್ಡಿ ಲೀಗ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಬುಧವಾರ ದಬಂಗ್ ಡೆಲ್ಲಿ ಸವಾಲು ಎದುರಿಸಲಿದೆ. ನಾಲ್ಕರ ಘಟ್ಟದ ಇನ್ನೊಂದು ಹಣಾಹಣಿಯಲ್ಲಿ ಪಟ್ನಾ ಪೈರೇಟ್ಸ್ ತಂಡವು ಯುಪಿ ಯೋಧಾ ತಂಡಕ್ಕೆ ಮುಖಾಮುಖಿಯಾಗಲಿದೆ.

ಸೆಮಿಫೈನಲ್‌ನಲ್ಲಿ ಜಯಿಸಿದ ಎರಡೂ ತಂಡಗಳು ಶೆರಟನ್ ಗ್ರ್ಯಾಂಡ್ ಹೋಟೆಲ್ ಆವರಣದಲ್ಲಿ ಇದೇ 25ರಂದು ನಡೆಯಲಿರುವ ಫೈನಲ್‌ನಲ್ಲಿ ಪ್ರಶಸ್ತಿಗಾಗಿ ಸೆಣಸಲಿವೆ.

2018ರಲ್ಲಿ ನಡೆದ ಆರನೇ ಆವೃತ್ತಿಯಲ್ಲಿ ಚಾಂಪಿಯನ್ ಆಗಿದ್ದ ಬುಲ್ಸ್ ತಂಡವು 2015ರ ಎರಡನೇ ಆವೃತ್ತಿಯಲ್ಲಿ ರನ್ನರ್ ಅಪ್ ಸ್ಥಾನ ಗಳಿಸಿತ್ತು.

ನಾಯಕನಾಗಿ ಮತ್ತು ಶ್ರೇಷ್ಠ ರೇಡರ್ ಆಗಿ ತಂಡವನ್ನು ಈ ಬಾರಿ ಸೆಮಿಫೈನಲ್‌ವರೆಗೆ ಕೊಂಡೊಯ್ದಿರುವ ಪವನ್ ಶೆರಾವತ್ ಬುಲ್ಸ್‌ನ ಪ್ರಮುಖ ಅಸ್ತ್ರವಾಗಿದ್ದಾರೆ. ಉಳಿದ ರೇಡರ್‌ಗಳು ಮತ್ತು ಡಿಫೆಂಡರ್‌ಗಳು ಉತ್ತಮ ಸಾಮರ್ಥ್ಯ ತೋರುತ್ತಿರುವುದು ತಂಡದ ಶಕ್ತಿ ಹೆಚ್ಚುವಂತೆ ಮಾಡಿದೆ. ಚಂದ್ರನ್ ರಂಜೀತ್ ಮತ್ತು ವಿಜಯ್ ಅವರು ಪವನ್ ಅವರಿಗೆ ಬೆಂಬಲವಾಗಿದ್ದಾರೆ. ಡಿಫೆನ್ಸ್‌ನಲ್ಲಿ ಸೌರಭ್ ನಂದಾಲ್ ಮತ್ತು ಅಮನ್ ಕೂಡ ಉತ್ತಮ ಲಯದಲ್ಲಿದ್ದಾರೆ.

ಎದುರಾಳಿ ಡೆಲ್ಲಿ ತಂಡವು ರೇಡರ್ ಮಂಜೀತ್ ಚಿಲ್ಲಾರ್ ಮತ್ತು ಆಲ್‌ರೌಂಡರ್ ಸಂದೀಪ್ ನರ್ವಾಲ್ ಅವರ ಮೇಲೆ ಹೆಚ್ಚು ಅವಲಂಬಿತವಾಗಿದೆ. ತಾರಾವರ್ಚಸ್ಸಿನ ರೇಡರ್ ನವೀನ್ ಕುಮಾರ್ ಅವರ ಫಿಟ್‌ನೆಸ್ ಕೊರತೆಯು ಕಳವಳದ ಸಂಗತಿಯಾಗಿದೆ. ಲೀಗ್ ಹಂತದಲ್ಲಿ ಎರಡನೇ ಸ್ಥಾನ ಗಳಿಸುವ ಮೂಲಕ ಡೆಲ್ಲಿ ಸೆಮಿಗೆ ನೇರ ಅರ್ಹತೆ ಗಳಿಸಿತ್ತು. ಲೀಗ್‌ನಲ್ಲಿ ಉಭಯ ತಂಡಗಳು ಎರಡು ಬಾರಿ ಮುಖಾಮುಖಿಯಾಗಿದ್ದು, ಬೆಂಗಳೂರು ಒಂದರಲ್ಲಿ ಗೆಲುವು ಸಾಧಿಸಿದರೆ, ಮತ್ತೊಂದರಲ್ಲಿ ಟೈ ಮಾಡಿಕೊಂಡಿತ್ತು.

ಯೋಧಾ–ಪೈರೇಟ್ಸ್ ಮುಖಾಮುಖಿ: ನಾಲ್ಕರ ಘಟ್ಟದ ಇನ್ನೊಂದು ಪಂದ್ಯದಲ್ಲಿ ಲೀಗ್ ಹಂತದಲ್ಲಿ ಮೊದಲ ಸ್ಥಾನ ಗಳಿಸಿರುವ ಪಟ್ನಾ ಪೈರೇಟ್ಸ್ ತಂಡವು ಯುಪಿ ಯೋಧಾ ಸವಾಲಿಗೆ ಸಜ್ಜಾಗಿದೆ. ಯೋಧಾ ತಂಡದ ರೇಡರ್ ಪ್ರದೀಪ್ ನರ್ವಾಲ್ ಭರ್ಜರಿ ಲಯದಲ್ಲಿದ್ದು, ತಮ್ಮ ಹಳೆಯ ತಂಡವನ್ನು ಮಣಿಸುವ ವಿಶ್ವಾಸದಲ್ಲಿದ್ದಾರೆ.

ಇರಾನ್ ಮೂಲದ ಮೊಹಮ್ಮದ್‌ರೆಜಾ ಶಾದ್ಲೊಯಿ ಅವರು ಪಟ್ನಾ ತಂಡಕ್ಕೆ ಡಿಫೆನ್ಸ್ ಶಕ್ತಿಯಾಗಿದ್ದಾರೆ. ಪ್ರದೀಪ್ ಅವರನ್ನು ಹೆಚ್ಚು ನಿಯಂತ್ರಿಸಿದರೆ ಪಟ್ನಾ ಫೈನಲ್ ಕನಸು ನನಸಾಗಬಹುದು.

ಈ ಆವೃತ್ತಿಯಲ್ಲಿ ಪವನ್ ಶೆರಾವತ್	
ತಂಡ	ಬೆಂಗಳೂರು ಬುಲ್ಸ್
ಆಡಿದ ಪಂದ್ಯ	23
ಗಳಿಸಿದ ಒಟ್ಟು ಪಾಯಿಂಟ್ಸ್	302
ರೇಡ್ ಪಾಯಿಂಟ್ಸ್	286

ಈ ಆವೃತ್ತಿಯಲ್ಲಿ ಸಂದೀಪ್ ನರ್ವಾಲ್	
ತಂಡ	ದಬಂಗ್ ಡೆಲ್ಲಿ
ಆಡಿದ ಪಂದ್ಯ	22
ಗಳಿಸಿದ ಒಟ್ಟು ಪಾಯಿಂಟ್ಸ್	59
ರೇಡ್ ಪಾಯಿಂಟ್ಸ್	25
ಟ್ಯಾಕಲ್ ಪಾಯಿಂಟ್ಸ್	34

ಸೆಮಿಫೈನಲ್ ಪಂದ್ಯಗಳು	
ಪಟ್ನಾ ಪೈರೇಟ್ಸ್– ಯುಪಿ ಯೋಧಾ	
ಆರಂಭ	ರಾತ್ರಿ 7.30
ದಬಂಗ್ ಡೆಲ್ಲಿ– ಬೆಂಗಳೂರು ಬುಲ್ಸ್	
ಆರಂಭ	ರಾತ್ರಿ 8.30
ಸ್ಥಳ: ಶೆರಟನ್ ಗ್ರ್ಯಾಂಡ್ ಹೋಟೆಲ್, ಬೆಂಗಳೂರು	

ಸಹಾ ಪ್ರಕರಣ: ಪತ್ರಕರ್ತನ ವಿರುದ್ಧ ಕ್ರಮಕ್ಕೆ ಐಸಿಎ ಆಗ್ರಹ

ನವದೆಹಲಿ(ಪಿಟಿಐ): ಭಾರತ ತಂಡದ ವಿಕೆಟ್‌ಕೀಪರ್ ವೃದ್ಧಿಮಾನ್ ಸಹಾ ಅವರಿಗೆ ಪತ್ರಕರ್ತನೊಬ್ಬ ಬೆದರಿಕೆ ಸಂದೇಶ ಕಳಿಸಿರುವುದನ್ನು ಭಾರತೀಯ ಕ್ರಿಕೆಟಿಗರ ಸಂಘಟನೆ (ಐಸಿಎ) ಖಂಡಿಸಿದೆ. ಪತ್ರಕರ್ತನ ಕುರಿತು ತನಿಖೆ ನಡೆಸಲು ಮುಂದಾಗಿರುವ ಬಿಸಿಸಿಐ ಕ್ರಮವನ್ನೂ ಸ್ವಾಗತಿಸಿದೆ.

‘ಕ್ರಿಕೆಟ್ ಮತ್ತು ಕ್ರಿಕೆಟಿಗರ ಬೆಳವಣಿಗೆಯಲ್ಲಿ ಮಾಧ್ಯಮದವರ ಪಾತ್ರ ಬಹಳ ದೊಡ್ಡದು. ಅದಕ್ಕಾಗಿ ಅವರನ್ನು ಗೌರವಿಸುತ್ತೇವೆ. ಆದರೆ ಎಲ್ಲದಕ್ಕೂ ಒಂದು ನಿಯಂತ್ರಣ ರೇಖೆ ಇರುತ್ತದೆ. ಆ ಮಿತಿಯನ್ನು ಯಾರೂ ದಾಟಬಾರದು. ಅದು ಸ್ವೀಕಾರಾರ್ಹವಲ್ಲ. ಪತ್ರಕರ್ತರೊಬ್ಬರು ಸಹಾಗೆ ಬೆದರಿಕೆ ಒಡ್ಡಿರುವುದನ್ನು ಗಂಭೀರವಾಗಿ ಪರಿಗಣಿಸಿ, ದಿಟ್ಟ ಕ್ರಮ ಕೈಗೊಳ್ಳಬೇಕು’ ಎಂದು ಐಸಿಎ ಮುಖ್ಯಸ್ಥ ಅಶೋಕ್ ಮಲ್ಹೋತ್ರಾ ಹೇಳಿದ್ದಾರೆ.

‘ಈ ಪ್ರಕರಣವನ್ನು ಪತ್ರಿಕಾ ಸಂಘಟನೆಗಳೂ ಗಂಭೀರವಾಗಿ ಪರಿಗಣಿಸಬೇಕು. ಆ ಪತ್ರಕರ್ತನ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದ್ದಾರೆ.

‘ನಮ್ಮ ಸಂಸ್ಥೆಯು ಸಹಾ ಅವರನ್ನು ಸಂಪೂರ್ಣವಾಗಿ ಬೆಂಬಲಿಸುತ್ತಿದೆ. ಆ ಪತ್ರಕರ್ತನ ಹೆಸರನ್ನು ಸಹಾ ಬಹಿರಂಗಪಡಿಸಬೇಕು. ಬಿಸಿಸಿಐ ಈ ಮಾಧ್ಯಮ ಪ್ರತಿನಿಧಿಯ ಮಾನ್ಯತೆಯನ್ನು ರದ್ದುಗೊಳಿಸಬೇಕು. ಬಿಸಿಸಿಐ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳಲ್ಲಿ ಪಾಲ್ಗೊಳ್ಳದಂತೆ ಪ್ರವೇಶ ನಿರ್ಬಂಧಿಸಬೇಕು’ ಎಂದು ಅಶೋಕ್ ಒತ್ತಾಯಿಸಿದ್ದಾರೆ. ಭಾರತ ತಂಡದಲ್ಲಿ ಆಯ್ಕೆಯ ಕುರಿತು ಈಚೆಗೆ ಕ್ರಿಕೆಟ್ ಪತ್ರಕರ್ತನೊಬ್ಬ ತಮಗೆ ಬೆದರಿಕೆಯ ಟ್ವೀಟ್ ಮಾಡಿರುವುದಾಗಿ ಸಹಾ ಹೇಳಿದ್ದರು.

‘ಪತ್ರಕರ್ತನ ಹೆಸರು ಬಹಿರಂಗವಿಲ್ಲ’

ನವದೆಹಲಿ (ಪಿಟಿಐ): ತಮಗೆ ಬೆದರಿಕೆಯ ಸಂದೇಶ ಕಳುಹಿಸಿದ್ದ ಪತ್ರಕರ್ತನ ಹೆಸರನ್ನು ಬಹಿರಂಗಪಡಿಸದಿರಲು ವೃದ್ಧಿಮಾನ್ ಸಹಾ ನಿರ್ಧರಿಸಿದ್ದಾರೆ.

‘ನನಗೆ ನೋವಾಗಿದೆ. ಇಂತಹ ನಿಂದನೆ, ಬೆದರಿಕೆಗಳಿಗೆ ಬೇರೆಯವರು ಒಳಗಾಗದಂತೆ ಜಾಗೃತಿ ಮೂಡಿಸಬೇಕಿತ್ತು. ಆದ್ದರಿಂದ ಬೆದರಿಕೆಯ ಸಂದೇಶವನ್ನು ಬಹಿರಂಗಗೊಳಿಸಲು ನಿರ್ಧರಿಸಿದೆ. ಆದರೆ ಆ ವ್ಯಕ್ತಿಯ ಹೆಸರನ್ನು ಬಹಿರಂಗ ಮಾಡುವುದಿಲ್ಲ. ಮಾನವೀಯ ನೆಲೆಯಲ್ಲಿ ಈ ನಿರ್ಧಾರ ಮಾಡಿದ್ದೇನೆ’ ಎಂದು ಸಹಾ ಅವರು ಟ್ವೀಟ್ ಮಾಡಿದ್ದಾರೆ.

ಲಖನೌನಲ್ಲಿ ಮಂಗಳವಾರ ಭಾರತ ಕ್ರಿಕೆಟ್ ತಂಡದ ಬೌಲರ್ ಭುವನೇಶ್ವರ್ ಕುಮಾರ್ ಅಭ್ಯಾಸ ಮಾಡಿದರು. ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಮತ್ತಿತರರು ಹಾಜರಿದ್ದರು– ಬಿಸಿಸಿಐ ಟ್ವಿಟರ್ ಚಿತ್ರ

ಐಪಿಎಲ್‌ನತ್ತ ಕಮಿನ್ಸ್ ಚಿತ್ತ

ಮೆಲ್ಬರ್ನ್ (ರಾಯಿಟರ್ಸ್): ಮುಂದಿನ ತಿಂಗಳು ಪಾಕಿಸ್ತಾನದ ಆತಿಥ್ಯದಲ್ಲಿ ನಡೆಯಲಿರುವ ಏಕದಿನ ಮತ್ತು ಟಿ20 ಸರಣಿಗಳಲ್ಲಿ ಆಸ್ಟ್ರೇಲಿಯಾ ತಂಡದ ಬ್ಯಾಟರ್ ಡೇವಿಡ್ ವಾರ್ನರ್ ಮತ್ತು ನಾಯಕ ಪ್ಯಾಟ್ ಕಮಿನ್ಸ್ ಅವರು ಗೈರುಹಾಜರಾಗುವ ಸಾಧ್ಯತೆ ಇದೆ. ಅದೇ ವೇಳೆ ಭಾರತದಲ್ಲಿ ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಅವರು ಆಡಲಿದ್ದಾರೆನ್ನಲಾಗಿದೆ. ಕಮಿನ್ಸ್, ವಾರ್ನರ್ ಜೊತೆಗೆ ಬೌಲರ್‌ಗಳಾದ ಮಿಚೆಲ್ ಸ್ಟಾರ್ಕ್, ಜೋಶ್ ಹ್ಯಾಜಲ್‌ವುಡ್ ಪಾಕ್ ಎದುರಿನ ಟೆಸ್ಟ್ ಸರಣಿಯ ತಂಡದಲ್ಲಿದ್ದಾರೆ.

ಕಮಿನ್ಸ್, ವಾರ್ನರ್, ಹ್ಯಾಜಲ್‌ವುಡ್ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ ಅವರು ಐಪಿಎಲ್‌ನ ವಿವಿಧ ತಂಡಗಳಲ್ಲಿದ್ದಾರೆ.

ಪ್ರೊ ಲೀಗ್ ಹಾಕಿ: ಭಾರತ ತಂಡಕ್ಕೆ ಸುಖಜೀತ್ ಆಯ್ಕೆ

ಮನಪ್ರೀತ್

ನವದೆಹಲಿ (ಪಿಟಿಐ): ಭರವಸೆಯ ಫಾರ್ವರ್ಡ್ ಆಟಗಾರ ಸುಖಜೀತ್ ಸಿಂಗ್ ಅವರನ್ನು ಭಾರತ ಹಾಕಿ ತಂಡಕ್ಕೆ ಆಯ್ಕೆ ಮಾಡಲಾಗಿದೆ.

ಇದೇ 26 ಮತ್ತು 27ರಂದು ಭುವನೇಶ್ವರದಲ್ಲಿ ನಡೆಯಲಿರುವ ಎಫ್‌ಐಎಚ್ ಪ್ರೊ ಲೀಗ್ ಹಾಕಿ ಟೂರ್ನಿಯಲ್ಲಿ ಭಾರತ ಮತ್ತು ಸ್ಪೇನ್ ತಂಡಗಳು ಮುಖಾಮುಖಿಯಾಗಲಿವೆ. ಈ ಟೂರ್ನಿಯಲ್ಲಿ ಆಡಲಿರುವ ಮನಪ್ರೀತ್ ಸಿಂಗ್ ನಾಯಕತ್ವದ 20 ಆಟಗಾರರ ತಂಡವನ್ನು ಮಂಗಳವಾರ ಪ್ರಕಟಿಸಲಾಗಿದೆ. ಅದರಲ್ಲಿ 25 ವರ್ಷದ ಸುಖಜೀತ್ ಸ್ಥಾನ ಗಳಿಸಿದ್ದಾರೆ.

‘ಅತ್ಯಂತ ಸಮತೋಲನದಿಂದ ಕೂಡಿದ ತಂಡವನ್ನು ಆಯ್ಕೆ ಮಾಡಿದ್ದೇವೆ. ಸುಖಜೀತ್ ಸಿಂಗ್ ಪದಾರ್ಪಣೆ ಮಾಡುವ ಸಾಧ್ಯತೆ ಇದೆ‘ ಎಂದು ಮುಖ್ಯ ಕೋಚ್ ಗ್ರಹಾಂ ರೀಡ್ ಹೇಳಿದ್ದಾರೆ.

ತಂಡ: ಮಿಡ್‌ಫೀಲ್ಡರ್ಸ್: ಮನ್‌ಪ್ರೀತ್ ಸಿಂಗ್ (ನಾಯಕ), ವಿವೇಕ್ ಸಾಗರ್ ಪ್ರಸಾದ್, ಹಾರ್ದಿಕ್ ಸಿಂಗ್, ಜಸ್ಕರಣ್ ಸಿಂಗ್, ಶಂಶೇರ್ ಸಿಂಗ್, ನೀಲಕಂಠ ಶರ್ಮಾ, ಅಕ್ಷದೀಪ್ ಸಿಂಗ್. ಡಿಫೆಂಡರ್ಸ್: ಹರ್ಮನ್‌ಪ್ರೀತ್ ಸಿಂಗ್ (ಉಪನಾಯಕ), ಮನದೀಪ್ ಮೋರ್, ಸುರೇಂದರ್ ಕುಮಾರ್, ವರುಣಕುಮಾರ್, ಜರ್ಮನ್‌ಪ್ರೀತ್ ಸಿಂಗ್, ದಿಪ್ಸನ್ ಟಿರ್ಕಿ. ಫಾರ್ವರ್ಡ್ಸ್: ಮನದೀಪ್ ಸಿಂಗ್, ಲಲಿತಕುಮಾರ್ ಉಪಾಧ್ಯಾಯ, ಶಿಲಾನಂದ ಲಾಕ್ರ, ಸುಖಜೀತ್ ಸಿಂಗ್, ಅಭಿಷೇಕ್. ಮೀಸಲು: ಕೃಷನ್ ಬಹಾದ್ದೂರ್ ಪಾಠಕ್, ಅಮಿತ್ ರೋಹಿದಾಸ್, ರಾಜಕುಮಾರ್ ಪಾಲ್, ಮೊಯರಂಗ್ತೆಮ್ ರವಿಚಂದ್ರ ಸಿಂಗ್, ದಿಲ್‌ಪ್ರೀತ್ ಸಿಂಗ್.

ಬಾಲಕನ ಚಿಕಿತ್ಸೆಗೆ ₹ 31 ಲಕ್ಷ ದೇಣಿಗೆ ನೀಡಿದ ರಾಹುಲ್

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆಟಗಾರ ಕೆ.ಎಲ್. ರಾಹುಲ್ ಅವರು 11 ವರ್ಷದ ಉದಯೋನ್ಮುಖ ಕ್ರಿಕೆಟಿಗ ವರದ್ ನಾಲವಡೆಯ ಚಿಕಿತ್ಸೆಗಾಗಿ ₹31 ಲಕ್ಷ ಸಹಾಯ ನೀಡಿದ್ದಾರೆ.

ಬೋನ್ ಮ್ಯಾರೊ ಟ್ರಾನ್ಸ್‌ಪ್ಲಾಂಟ್ (ಬಿಎಂಟಿ) ಚಿಕಿತ್ಸೆ ಪಡೆಯುತ್ತಿರುವ ವರದ್ ಎಂಬ ಬಾಲಕನಿಗೆ ರಾಹುಲ್ ಸಹಾಯಹಸ್ತ ಚಾಚಿದ್ದಾರೆ. ಹೋದ ಡಿಸೆಂಬರ್‌ನಲ್ಲಿ ವಿಮಾ ಪ್ರತಿನಿಧಿಯಾಗಿರುವ ಸಚಿನ್ ಮತ್ತು ಅವರ ಪತ್ನಿ ಸ್ವಪ್ನಾ ಝಾ ಅವರು ಹೋದ ಡಿಸೆಂಬರ್‌ನಲ್ಲಿ ತಮ್ಮ ಮಗ ವರದ್ ಚಿಕಿತ್ಸೆಗೆ ₹ 35 ಲಕ್ಷ ರೂಪಾಯಿ ಅಗತ್ಯವಿದೆಯೆಂದು ಸಹಾಯನಿಧಿಗಾಗಿ ಕೋರಿದ್ದರು. ರಾಹುಲ್ ಅವರ ತಂಡವು ಇದಕ್ಕೆ ಸ್ಪಂದಿಸಿತ್ತು.

ಐದನೇ ತರಗತಿ ವಿದ್ಯಾರ್ಥಿಯಾಗಿರುವ ವರದ್‌ಗೆ ಅಪ್ಲಾಸ್ಟಿಕ್ ಅನೀಮಿಯಾ ಎಂಬ ಅಪರೂಪದ ರಕ್ತಸಂಬಂಧಿ ಕಾಯಿಲೆ ಇರುವುದನ್ನು ಮುಂಬೈನ್ ಜಸ್‌ಲೋಕ್ ಆಸ್ಪತ್ರೆಯ ವೈದ್ಯರು ಪತ್ತೆ ಮಾಡಿದ್ದರು. ಇಂತಹ ಕಾಯಿಲೆ ಇರುವವರಲ್ಲಿ ರೋಗ ನಿರೋಧಕ ಶಕ್ತಿ ಬಹಳ ದುರ್ಬಲವಾಗಿರುತ್ತದೆ. ಸಾಮಾನ್ಯ ಜ್ವರವೂ ತಿಂಗಳಾನುಗಟ್ಟಲೆ ಕಾಡುತ್ತದೆ. ಆದ್ದರಿಂದ ಬಿಎಂಟಿ ಚಿಕಿತ್ಸೆಯೊಂದೇ ಪರಿಹಾರ ಎಂದು ವೈದ್ಯರು ಹೇಳಿದ್ದರು.

‘ವರದ್ ಬಗ್ಗೆ ತಿಳಿದಾಗ ನಮ್ಮ ತಂಡವು ಸತತವಾಗಿ ಸಂಪರ್ಕ ಸಾಧಿಸಿತು. ಗಿವ್ ಇಂಡಿಯಾ ಸಂಸ್ಥೆಯೊಂದಿಗೆ ಸಹಾಯಹಸ್ತ ಚಾಚಲು ಮುಂದಾಗಿದೆ. ಶಸ್ತ್ರಚಿಕಿತ್ಸೆ ಯಶಸ್ವಿಯಾಗಿದ್ದು ಸಂತಸ ತಂದಿದೆ’ ಎಂದು ರಾಹುಲ್ ಹೇಳಿದ್ದಾರೆ.

ಭಾರತ ಯುವಪಡೆಯನ್ನೂ ಕಾಡಿತ್ತು ಕೋವಿಡ್ ಲಸಿಕೆ!

ನವದೆಹಲಿ (ಪಿಟಿಐ): ವೆಸ್ಟ್ ಇಂಡೀಸ್‌ನಲ್ಲಿ ಈಚೆಗೆ 19 ವರ್ಷದೊಳಗಿನವರ ವಿಶ್ವಕಪ್ ಗೆದ್ದು ಬಂದ ಭಾರತ ತಂಡದ ಹಾದಿ ಸರಳವಾಗಿರಲಿಲ್ಲ. ಕೆರಿಬಿಯನ್ ದ್ವೀಪಕ್ಕೆ ಕಾಲಿಟ್ಟ ಮೊದಲ ದಿನದಿಂದಲೇ ಕಷ್ಟಗಳ ಹಾದಿಯನ್ನು ತುಳಿದು ಇತಿಹಾಸ ಬರೆಯಿತು.

ಭಾರತ ತಂಡದಲ್ಲಿದ್ದ ಏಳು ಆಟಗಾರರಿಗೆ ಕೋವಿಡ್ ಲಸಿಕೆ ನೀಡಲಾಗಿರಲಿಲ್ಲ. ಆದ್ದರಿಂದ ಅವರೆಲ್ಲರನ್ನೂ ಮರಳಿ ಭಾರತಕ್ಕೆ ಹೋಗುವಂತೆ ಅಲ್ಲಿಯ ಆಡಳಿತ ಸೂಚಿಸಿತ್ತು. ಅವರು ಸುಮಾರು 24 ಗಂಟೆಗಳ ಕಾಲ ವಿಮಾನ ನಿಲ್ದಾಣದಲ್ಲಿಯೇ ಕಾಲ ಕಳೆದಿದ್ದರು.

ತಂಡದ ಸ್ಥಳೀಯ ಮ್ಯಾನೇಜರ್ ಲೊಬ್ಜಾಂಗ್ ಜಿ ತೆನ್ಜಿಂಗ್ ಅವರು ಈ ಸಂದರ್ಭದಲ್ಲಿ ಭಾರತ ತಂಡದ ಸಹಾಯಕ್ಕೆ ನಿಂತರು. ಐಸಿಸಿ ಮತ್ತು ಬಿಸಿಸಿಐನಲ್ಲಿರುವ ಕೆಲವು ಅಧಿಕಾರಿಗಳ ನೆರವಿನೊಂದಿಗೆ ಸ್ಥಳೀಯ ಸರ್ಕಾರದೊಂದಿಗೆ ಸಂವಹನ ನಡೆಸಿದರು. ಭಾರತ ಮತ್ತು ಟ್ರಿನಿಡಾಡ್ ಸರ್ಕಾರಗಳೊಂದಿಗೆ ಮಾತನಾಡಿ ಪರಿಹಾರದ ದಾರಿ ಹುಡುಕಿದರು.

‘ಸುದೀರ್ಘ ಪ್ರಯಾಣದ ನಂತರ ಪೋರ್ಟ್ ಆಫ್ ಸ್ಪೇನ್‌ಗೆ ಬಂದಿಳಿದಿದ್ದೆವು. ಅಲ್ಲಿಂದ ಗಯಾನಕ್ಕೆ ಖಾಸಗಿ ವಿಮಾನದಲ್ಲಿ ತೆರಳಬೇಕಿತ್ತು. ಆದರೆ, ಲಸಿಕೆ ಪಡೆಯದಿದ್ದ ಏಳು ಹುಡುಗರನ್ನು ಅಲ್ಲಿ ತಡೆಯಲಾಯಿತು. 18ರೊಳಗಿನ ವಯೋಮಿತಿಯೊಳಗಿನವರಿಗೆ ಆಗಿನ್ನೂ ಭಾರತದಲ್ಲಿ ಲಸಿಕೆ ನೀಡಲಾಗುತ್ತಿಲ್ಲವೆಂದು ವಿಮಾನ ನಿಲ್ದಾಣದ ಅಧಿಕಾರಿಗಳಿಗೆ ಮನವರಿಕೆ ಮಾಡಲು ಪ್ರಯತ್ನಿಸಿದೆವು. ಆದರೆ, ಇನ್ನೊಂದು ವಿಮಾನದ ಮೂಲಕ ದೇಶದಿಂದ ಹೊರನಡೆಯಿರಿ ಎಂದರು. ಭದ್ರತಾ ಸಿಬ್ಬಂದಿ ನಮ್ಮನ್ನು ಸುತ್ತುವರಿದಿತ್ತು. ಆದರೆ, ಅಂದು ಇದ್ದ ಏಕೈಕ ಲುಫ್ತಾನ್ಸಾ ವಿಮಾನ ಹೊರಟುಹೋಗಿತ್ತು. ಮುಂದಿನ ವಿಮಾನ ಮೂರು ದಿನಗಳ ನಂತರವಿತ್ತು. ಇದು ನಮಗೆ ಅನುಕೂಲವಾಯಿತು. ಸ್ಥಳೀಯ ಆಡಳಿತದೊಂದಿಗೆ ಮಾತುಕತೆ ನಡೆಸಲು ಆರಂಭಿಸಿದೆವು. ಅಂದು ರಾತ್ರಿ ವಿಮಾನ ನಿಲ್ದಾಣದ ಸಮೀಪದ ಸಣ್ಣ ಹೋಟೆಲ್‌ನಲ್ಲಿ ವಾಸ್ತವ್ಯ ಮಾಡಬೇಕಾಯಿತು. ಐಸಿಸಿಯೂ ಮಧ್ಯಸ್ಥಿಕೆ ವಹಿಸಿತು’ ಎಂದು ತೆನ್ಜಿಂಗ್ ವಿವರಿಸಿದರು.

ಈ ಏಳು ಜನರಲ್ಲಿ ಎಡಗೈ ಮಧ್ಯಮವೇಗಿ ರವಿಕುಮಾರ್, ಅಂಗಕ್ರಿಷ್ ರಘುವಂಶಿ ಕೂಡ ಇದ್ದರು. ಭಾರತದ ವಿಜಯದಲ್ಲಿ ರವಿಕುಮಾರ್ ಪ್ರಮುಖ ಪಾತ್ರ ವಹಿಸಿದರು.

ಕಡೆಗೂ ಸಮಸ್ಯೆ ಬಗೆಹರಿದು ತಂಡ ಆಡಲು ಸನ್ನದ್ಧವಾಯಿತು. ಆದರೆ, ಲೀಗ್ ಹಂತದ ಮಧ್ಯದಲ್ಲಿ ನಾಯಕ ಯಶ್ ಧುಳ್ ಸೇರಿದಂತೆ ಆರು ಆಟಗಾರರು ಕೋವಿಡ್‌ಗೆ ತುತ್ತಾದರು. ಚೇತರಿಸಿಕೊಂಡ ನಂತರ ಮರಳಿದ ಅವರೆಲ್ಲರೂ ಇತಿಹಾಸ ಬರೆದರು.

ಕ್ರಿಕೆಟ್: ರಿಚಾ ವೇಗದ ಅರ್ಧಶತಕ ವ್ಯರ್ಥ

ಕ್ವೀನ್ಸ್‌ಟನ್(ಪಿಟಿಐ): ಅಮೆಲಿಯಾ ಕೆರ್ ಆಲ್‌ರೌಂಡ್ ಆಟದ ಬಲದಿಂದ ನ್ಯೂಜಿಲೆಂಡ್ ತಂಡವು ಭಾರತದ ಎದುರು ಸತತ ನಾಲ್ಕನೇ ಏಕದಿನ ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ಮಂಗಳವಾರ ನಡೆದ ಪಂದ್ಯದಲ್ಲಿ ಆತಿಥೇಯ ತಂಡವು 63 ರನ್‌ಗಳಿಂದ ಜಯಿಸಿತು. ಐದು ಪಂದ್ಯಗಳ ಸರಣಿಯಲ್ಲಿ 4–0 ಮುನ್ನಡೆ ಗಳಿಸಿತು. ಮಳೆಯಿಂದಾಗಿ ಪಂದ್ಯದಲ್ಲಿ 20 ಓವರ್‌ಗಳನ್ನು ಕಡಿತ ಮಾಡಲಾಗಿತ್ತು. ಆದರೆ, ಮಹಿಳಾ ಏಕದಿನ ಕ್ರಿಕೆಟ್‌ನಲ್ಲಿ ವೇಗದ ಅರ್ಧಶತಕ ಗಳಿಸಿದ ಭಾರತೀಯ ಆಟಗಾರ್ತಿಯೆಂಬ ಹೆಗ್ಗಳಿಕೆಗೆ ರಿಚಾ ಘೋಷ್ ಪಾತ್ರರಾದರು. ಅವರು 28 ಎಸೆತಗಳಲ್ಲಿ ಅರ್ಧಶತಕ ದಾಖಲಿಸಿದರು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 20 ಓವರ್‌ಗಳಲ್ಲಿ 5ಕ್ಕೆ 191 (ಸೂಜಿ ಬೇಟ್ಸ್ 41, ಅಮೆಲಿಯಾ ಕೆರ್ ಔಟಾಗದೆ 68, ರೇಣುಕಾ ಸಿಂಗ್ 33ಕ್ಕೆ2, ರಾಜೇಶ್ವರಿ ಗಾಯಕವಾಡ 26ಕ್ಕೆ1, ದೀಪ್ತಿ ಶರ್ಮಾ 49ಕ್ಕೆ1) ಭಾರತ: 17.5 ಓವರ್‌ಗಳಲ್ಲಿ 128 (ಮಿಥಾಲಿ ರಾಜ್ 30, ರಿಚಾ ಘೋಷ್ 52, ಜೆಸ್ ಕೆರ್ 11ಕ್ಕೆ2, ಹೈಲಿ ಜೆನ್ಸನ್ 32ಕ್ಕೆ3, ಅಮೆಲಿಯಾ 30ಕ್ಕೆ3)

ಉಕ್ರೇನ್ ಬಂಡುಕೋರರೊಂದಿಗಿನ ಸಂಬಂಧ ಗಟ್ಟಿಗೊಳಿಸಲು ಮುಂದಾದ ರಷ್ಯಾ

ರಷ್ಯಾಕ್ಕೆ ಭದ್ರತಾ ಮಂಡಳಿಯಲ್ಲಿ ಭಾರಿ ಹಿನ್ನಡೆ

ಮಾಸ್ಕೊ/ವಿಶ್ವಸಂಸ್ಥೆ (ಎಪಿ): ಉಕ್ರೇನ್ ಮೇಲೆ ಆಕ್ರಮಣ ನಡೆಸಲು ಸಜ್ಜಾಗುತ್ತಿರುವ ರಷ್ಯಾಗೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರಿ ಹಿನ್ನಡೆಯಾಗಿದೆ. ಪೂರ್ವ ಉಕ್ರೇನ್‌ನಲ್ಲಿ ಪ್ರತ್ಯೇಕತಾವಾದಿಗಳನ್ನು ಮಾಸ್ಕೊದ ನಿಯಂತ್ರಣಕ್ಕೆ ತರಲು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ಕ್ರಮಕ್ಕೆ ಸೋಮವಾರ ರಾತ್ರಿ ನಡೆದ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ತುರ್ತು ಸಭೆಯಲ್ಲಿ ಯಾವುದೇ ಬೆಂಬಲ ದೊರೆಯಲಿಲ್ಲ.

ರಷ್ಯಾದ ಪಡೆಗಳು ಶಾಂತಿಪಾಲಕರಾಗಿ ಉಕ್ರೇನ್‌ನ ಡಾನ್‌ಬಾಸ್ ಎಂದು ಕರೆಯಲ್ಪಡುವ ಪ್ರತ್ಯೇಕತಾವಾದಿ ಪ್ರದೇಶದಲ್ಲಿರುತ್ತವೆ ಎಂಬ ಪುಟಿನ್ ಅವರ ಹೇಳಿಕೆಯನ್ನು ವಿಶ್ವಸಂಸ್ಥೆಯಲ್ಲಿನ ಅಮೆರಿಕ ರಾಯಭಾರಿ ಲಿಂಡಾ ಥಾಮಸ್ ಗ್ರೀನ್‌ಫೀಲ್ಡ್ ಅವರು, ‘ಅಸಂಬದ್ಧ’ ಎಂದು ತಳ್ಳಿಹಾಕಿದರು. ಮಂಡಳಿಯ ಇತರ ರಾಷ್ಟ್ರಗಳ ಸದಸ್ಯರು ಸಹ ರಷ್ಯಾ ಕ್ರಮವನ್ನು ಕಟುವಾಗಿ ಖಂಡಿಸಿದರು.

ಪುಟಿನ್ ಅವರ ನಡೆಗಳು ಮತ್ತಷ್ಟು ಆಕ್ರಮಣಕ್ಕೆ ಕಾರಣವಾಗಲಿವೆ ಎಂದು ಅಮೆರಿಕ ಹೇಳಿದೆ. ರಷ್ಯಾದ ಮಿತ್ರ ರಾಷ್ಟ್ರ ಚೀನಾ ಸಹ ರಾಜತಾಂತ್ರಿಕತೆ ಮತ್ತು ಶಾಂತಿಯುತ ಪರಿಹಾರಕ್ಕೆ ಒತ್ತಾಯಿಸಿದೆ.

ಏತನ್ಮಧ್ಯೆ, ಮಾಸ್ಕೊ ವಿರುದ್ಧ ನಿರ್ಬಂಧಗಳನ್ನು ಹೇರಲು ಸಜ್ಜಾಗುತ್ತಿರುವ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಸವಾಲಾಗಿ ರಷ್ಯಾ ತನ್ನ ಸೇನೆಯನ್ನು ಪೂರ್ವ ಉಕ್ರೇನ್‌ನ ಬಂಡುಕೋರರ ಪ್ರದೇಶದಲ್ಲಿ ನಿಯೋಜಿಸಲು ಮಂಗಳವಾರ ಕಳುಹಿಸಿದೆ. ಈ ಪ್ರದೇಶಗಳು ಸ್ವತಂತ್ರವಾಗಿವೆ ಎಂದು ಹೇಳಿರುವ ರಷ್ಯಾ, ಇಲ್ಲಿ ಹಿಡಿತವನ್ನು ಭದ್ರಪಡಿಸಿಕೊಳ್ಳಲು ಮುಂದಾಗಿದೆ. ಈ ನಿಟ್ಟಿನಲ್ಲಿ ರಷ್ಯಾ ಸಂಸತ್ತು ಸುಗ್ರೀವಾಜ್ಞೆ ಮೂಲಕ ಹೊಸ ಮಸೂದೆಗಳನ್ನು ಜಾರಿಗೆ ತಂದಿದ್ದು, ಅಮೆರಿಕ ಮತ್ತು ಅದರ ಮಿತ್ರರಾಷ್ಟ್ರಗಳಲ್ಲಿ ಆತಂಕ ಮೂಡಿಸುವ ಮತ್ತು ಉಕ್ರೇನ್‌ನ ಸಮೀಪ ತನ್ನ ಸೇನೆಯನ್ನು ಕಳುಹಿಸಲು ವೇದಿಕೆ ಸೃಷ್ಟಿಸಿಕೊಂಡಿದೆ.

ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಪೂರ್ವ ಉಕ್ರೇನ್‌ನ ಬಂಡುಕೋರರ ಪ್ರದೇಶಗಳನ್ನು ಸ್ವತಂತ್ರ ಎಂದು ಸೋಮವಾರ ಪ್ರಕಟಿಸಿದ ನಂತರ ಜಗತ್ತಿನಾದ್ಯಂತ ಅನೇಕ ದೇಶಗಳು ಇದನ್ನು ಖಂಡಿಸಿವೆ.

ಪೂರ್ವ ಉಕ್ರೇನ್‌ನ ಡೊನೆಟ್ಸ್ಕ್ ಮತ್ತು ಲುಹಾನ್ಸ್ಕ್ ಪ್ರದೇಶಗಳಲ್ಲಿನ ಬಂಡುಕೋರರ ಹಿಡಿತದಲ್ಲಿರುವ ಪ್ರದೇಶಗಳನ್ನು ರಷ್ಯಾ ಸ್ವತಂತ್ರ ಎಂದು ಹೇಳಿದ್ದು, ತಮ್ಮ ಆಡಳಿತದ ಗಡಿಯಲ್ಲಿ ಇವುಗಳನ್ನು ಗುರುತಿಸಬಹುದು ಎಂದು ಹಲವು ಜನಪ್ರತಿನಿಧಿಗಳು ಮಂಗಳವಾರ ಹೇಳಿದ್ದಾರೆ. ಉಕ್ರೇನ್‌ನ ನಿಯಂತ್ರಣದಲ್ಲಿರುವ ಭೂಮಿಯ ಭಾಗಗಳೂ ಇದರಲ್ಲಿ ಸೇರಿವೆ.

ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ರಾತ್ರಿ ದೇಶವನ್ನು ಉದ್ದೇಶಿಸಿ ಮಾತನಾಡಿ, ‘ನಾವು ಯಾರಿಗೂ ಅಥವಾ ಯಾವುದಕ್ಕೂ ಹೆದರುವುದಿಲ್ಲ. ನಮ್ಮ ಭೂಮಿ ಸೇರಿದಂತೆ ಯಾರಿಗೂ ಏನನ್ನೂ ಕೊಡುವುದಿಲ್ಲ. ಶಾಂತವಾಗಿರಬೇಕು’ ಎಂದು ಜನರನ್ನು ಕೋರಿದ್ದಾರೆ.

ರಷ್ಯಾದ ಕ್ರಮಕ್ಕೆ ಶ್ವೇತಭವನವು ತ್ವರಿತವಾಗಿ ಪ್ರತಿಕ್ರಿಯಿಸಿದ್ದು, ಉಕ್ರೇನ್‌ನ ಪ್ರತ್ಯೇಕತಾವಾದಿ ಪ್ರದೇಶಗಳಲ್ಲಿ ಅಮೆರಿಕದ ಹೂಡಿಕೆ ಮತ್ತು ವ್ಯಾಪಾರವನ್ನು ನಿಷೇಧಿಸಲು ಆದೇಶ ಹೊರಡಿಸಿದೆ. ಸಂಭವನೀಯ ನಿರ್ಬಂಧಗಳನ್ನು ಸಹ ತೆಗೆದುಕೊಳ್ಳಲಾಗುವುದು ಎಂದು ಹೇಳಿದೆ.

ಪೂರ್ವ ಉಕ್ರೇನ್‌ನ ರಷ್ಯಾ ಬೆಂಬಲಿತ ಬಂಡುಕೋರರ ಹಿಡಿತದಲ್ಲಿರುವ ಲುಹಾನ್ಸ್ಕ್ ಪ್ರಾಂತ್ಯಕ್ಕೆ ತೆರಳಲು ತಮ್ಮ ಸಾಮಗ್ರಿ, ಪ್ರೀತಿಯ ಪ್ರಾಣಿಗಳೊಂದಿಗೆ ಸಜ್ಜಾಗಿದ್ದ ಉಕ್ರೇನ್‌ನ ನಿವಾಸಿಗಳು –ಎಪಿ/ಪಿಟಿಐ ಚಿತ್ರ

ದೇಶದ ಹೊರಗೆ ಸೇನೆ ಬಳಕೆ: ರಷ್ಯಾ ಸಂಸತ್ ಒಪ್ಪಿಗೆ

ಮಾಸ್ಕೊ (ಎಪಿ): ದೇಶದ ಹೊರಗೆ ಮಿಲಿಟರಿ ಬಳಕೆ ಮಾಡಲು ರಷ್ಯಾದ ಸಂಸತ್ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರಿಗೆ ಒಪ್ಪಿಗೆ ನೀಡಿದೆ.

ಈ ನಡೆಯು ಉಕ್ರೇನ್ ಮೇಲೆ ವ್ಯಾಪಕವಾದ ದಾಳಿ ನಡೆಸಲು ರಷ್ಯಾ ಪಡೆಗಳಿಗೆ ಇನ್ನೂ ಹೆಚ್ಚಿನ ಅಧಿಕಾರ ಸಿಗಲಿದೆ.

ಭಾರತದ ಸಲಹೆ (ಪಿಟಿಐ): ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಪೂರ್ವ ಉಕ್ರೇನ್‌ಗೆ ತೆರಳಲು ಸೇನೆಗೆ ಆದೇಶ ನೀಡಿದ ನಂತರ ರಷ್ಯಾ-ಉಕ್ರೇನ್ ಗಡಿಯಲ್ಲಿ ಉದ್ವಿಗ್ನತೆ ಉಲ್ಬಣಗೊಂಡಿದೆ ಎಂದು ತೀವ್ರ ಕಳವಳ ವ್ಯಕ್ತಪಡಿಸಿರುವ ಭಾರತ, ಉದ್ವಿಗ್ನತೆಯನ್ನು ಕಡಿಮೆ ಮಾಡುವುದು ತಕ್ಷಣದ ಆದ್ಯತೆ ಆಗಬೇಕು ಎಂದು ವಿಶ್ವಸಂಸ್ಥೆಯ ಭದ್ರತಾ ಮಂಡಳಿಗೆ ತಿಳಿಸಿದೆ.

ಭದ್ರತಾ ಮಂಡಳಿಯ ತುರ್ತು ಸಭೆಯಲ್ಲಿ ಈ ಸಲಹೆ ನೀಡಲಾಗಿದೆ. ಈ ಸಮಸ್ಯೆಯನ್ನು ರಾಜತಾಂತ್ರಿಕ ಮಾರ್ಗದ ಮೂಲಕ ಬಗೆಹರಿಸಬಹುದು ಎಂದು ಹೇಳಿದೆ.

ಉಕ್ರೇನ್‌ಗೆ ತೆರಳಿದ ಏರ್ ಇಂಡಿಯಾ

ನವದೆಹಲಿ (ಪಿಟಿಐ): ಉಕ್ರೇನ್‌ನಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆಯ ಮಧ್ಯೆ ಭಾರತೀಯರನ್ನು ಮರಳಿ ಕರೆತರಲು ಏರ್ ಇಂಡಿಯಾ ಮಂಗಳವಾರ ಬೋಯಿಂಗ್ 787 ವಿಮಾನವನ್ನು ಕಳುಹಿಸಿತು.

ಉಕ್ರೇನ್‌ಗೆ ಫೆ. 22, 24 ಮತ್ತು 26ರಂದು ಮೂರು ವಿಮಾನಗಳನ್ನು ಕಳುಹಿಸುವುದಾಗಿ ಏರ್ ಇಂಡಿಯಾ ಈ ಮೊದಲೇ ಹೇಳಿತ್ತು. ಅದರಂತೆ ಮೊದಲನೇ ವಿಮಾನವು ಮಂಗಳವಾರ ತೆರಳಿದೆ. ಕೀವ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಹೆಚ್ಚುತ್ತಿರುವ ಉದ್ವಿಗ್ನತೆಯ ಮಧ್ಯೆ ತಾತ್ಕಾಲಿಕವಾಗಿ ದೇಶವನ್ನು ತೊರೆಯುವಂತೆ ಭಾರತೀಯ ವಿದ್ಯಾರ್ಥಿಗಳಿಗೆ ಮತ್ತೆ ಸೂಚಿಸಿದೆ.

‘ಉಕ್ರೇನ್: ರಷ್ಯಾದ ನಿಲುವು ಒಪ್ಪಲು ಸಾಧ್ಯವಿಲ್ಲ’

ಟೋಕಿಯೊ (ಎಪಿ): ‘ಉಕ್ರೇನ್‌ನ ಪೂರ್ವ ಭಾಗದ ಪ್ರತ್ಯೇಕತಾವಾದಿ ಪ್ರದೇಶಗಳನ್ನು ಸ್ವತಂತ್ರ ಎಂದು ಘೋಷಿಸಲು ಮುಂದಾಗಿರುವ ರಷ್ಯಾದ ನಿಲುವನ್ನು ಒಪ್ಪಲು ಸಾಧ್ಯವಿಲ್ಲ’ ಎಂದು ವಿಶ್ವದ ಹಲವು ನಾಯಕರು ಹೇಳಿದ್ದಾರೆ. ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ಕ್ರಮವನ್ನು ಖಂಡಿಸಿದ್ದು, ನಿರ್ಬಂಧಗಳನ್ನು ಹೇರಲು ಮುಂದಾಗಿದ್ದಾರೆ.

ರಷ್ಯಾದ ಸೇನೆಯ ಚಲನವಲನಗಳು ಇನ್ನೂ ಸ್ಪಷ್ಟವಾಗಿಲ್ಲದಿದ್ದರೂ, ಏಷ್ಯಾ ಮತ್ತು ಇತರೆಡೆಗಳಲ್ಲಿ ನಾಯಕರು ಉಕ್ರೇನ್‌ನ ಸಾರ್ವಭೌಮತ್ವಕ್ಕೆ ಬಲವಾದ ಬೆಂಬಲವನ್ನು ವ್ಯಕ್ತಪಡಿಸಿದ್ದಾರೆ.

> **ರಷ್ಯಾ ನಮ್ಮ ಶಾಂತಿಯ ಪ್ರಯತ್ನಗಳನ್ನು ನಾಶಪಡಿಸಿದೆ. ಆದರೆ, ನಾವು ನಮ್ಮ ಒಂದಿಂಚೂ ಭೂಮಿಯನ್ನು ಬಿಟ್ಟುಕೊಡುವುದಿಲ್ಲ**
> **ವೊಲೊಡಿಮಿರ್ ಝೆಲೆನ್‌ಸ್ಕಿ**, ಉಕ್ರೇನ್ ಅಧ್ಯಕ್ಷ

> **ರಷ್ಯಾ– ಉಕ್ರೇನ್ ಬಿಕ್ಕಟ್ಟನ್ನು ಮಾತುಕತೆಯ ಮೂಲಕ ಬಗೆಹರಿಸಬೇಕು. ಭಾರತವು ಶಾಂತಿ ಕಾಪಾಡಲು ಆದ್ಯತೆ ನೀಡುತ್ತದೆ**
> **ರಾಜನಾಥ್ ಸಿಂಗ್,** ರಕ್ಷಣಾ ಸಚಿವ

ಯುದ್ಧವು ಜಾಗತಿಕ ಮತ್ತು ಸ್ಥಳೀಯ ಆರ್ಥಿಕತೆಯ ಹಾನಿಯ ಬಗ್ಗೆ ಹಾಗೂ ಉಕ್ರೇನ್‌ನಲ್ಲಿರುವ ವಿದೇಶಿ ಪ್ರಜೆಗಳಿಗೆ ಅಪಾಯವನ್ನುಂಟು ಮಾಡಲಿದೆ ಎಂದು ಯುರೋಪಿಯನ್ ಒಕ್ಕೂಟವು ಕಳವಳ ವ್ಯಕ್ತಪಡಿಸಿದೆ.

‘ಉಕ್ರೇನ್‌ನ ಸಾರ್ವಭೌಮತ್ವ ಮತ್ತು ಅದರ ಪ್ರದೇಶವನ್ನು ಗೌರವಿಸಬೇಕು’ ಎಂದು ದಕ್ಷಿಣ ಕೊರಿಯಾದ ಅಧ್ಯಕ್ಷ ಮೂನ್ ಜೇ-ಇನ್ ಹೇಳಿದ್ದಾರೆ.

ಏತನ್ಮಧ್ಯೆ, ‘ಪ್ರಸ್ತುತ ಬಿಕ್ಕಟ್ಟಿಗೆ ನ್ಯಾಟೊ ಕಾರಣ. ಅಮೆರಿಕ ನೇತೃತ್ವದ ಮೈತ್ರಿಯು ರಷ್ಯಾಕ್ಕೆ ಅಸ್ತಿತ್ವವಾದದ ಬೆದರಿಕೆ’ ಎಂದು ಪುಟಿನ್ ಹೇಳಿದ್ದಾರೆ.

ಬ್ರಿಟನ್ ನಿರ್ಬಂಧ(ಲಂಡನ್ ವರದಿ): ಉಕ್ರೇನ್‌ನಲ್ಲಿ ಪ್ರತ್ಯೇಕತಾವಾದಿಗಳ ವಶದಲ್ಲಿರುವ ಎರಡು ಪ್ರದೇಶಗಳಿಗೆ ಸೇನೆ ನಿಯೋಜಿಸಲು ಮುಂದಾಗಿರುವ ರಷ್ಯಾದ ಮೇಲೆ ತೀವ್ರ ಆರ್ಥಿಕ ನಿರ್ಬಂಧ ಹೇರಲಾಗಿದೆ ಎಂದು ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಮಂಗಳವಾರ ಹೇಳಿದ್ದಾರೆ.

ರಷ್ಯಾದ ಐದು ಬ್ಯಾಂಕ್ ಮತ್ತು ವ್ಯಾಪಾರ ವಹಿವಾಟಿನ ಮೇಲೆ ನಿರ್ಬಂಧ ವಿಧಿಸಲಾಗಿದೆ.

ಒಕ್ಕೂಟ ನಿರ್ಧಾರ: ರಷ್ಯಾ ವಿರುದ್ಧ ನಿರ್ಬಂಧಗಳನ್ನು ಹೇರಲು ಯುರೋಪಿಯನ್ ಒಕ್ಕೂಟ ನಿರ್ಧರಿಸಿದೆ.

ಪ್ರತ್ಯೇಕತಾವಾದಿಗಳ ಹಿಡಿತದಲ್ಲಿರುವ ನಗರದಲ್ಲಿ ಶೆಲ್ ದಾಳಿ

ಉಕ್ರೇನ್: ಪ್ರತ್ಯೇಕತಾವಾದಿಗಳ ಹಿಡಿತದಲ್ಲಿರುವ ನಗರದಲ್ಲಿ ಶೆಲ್ ದಾಳಿ

ಡೊನೆಟಸ್ಕ್, ಉಕ್ರೇನ್ (ರಾಯಿಟರ್ಸ್): ಪೂರ್ವ ಉಕ್ರೇನ್‌ನ ಪ್ರತ್ಯೇಕತಾವಾದಿಗಳ ಹಿಡಿತದಲ್ಲಿರುವ ಡೊನೆಟ್‌ಸ್ಕ್ ನಗರದ ಮಧ್ಯಭಾಗದಲ್ಲಿ ಮಂಗಳವಾರ ಶೆಲ್ ದಾಳಿ ನಡೆದಿದೆ ಎಂದು ವರದಿಯಾಗಿದೆ.

ಸ್ಫೋಟದ ಮೂಲವು ಸ್ಪಷ್ಟವಾಗಿಲ್ಲ. ಆದರೆ, ಪೂರ್ವ ಉಕ್ರೇನ್‌ನಲ್ಲಿ ಸರ್ಕಾರ ಮತ್ತು ಪ್ರತ್ಯೇಕತಾವಾದಿ ಪಡೆಗಳ ನಡುವೆ ಶೆಲ್ ದಾಳಿ ಪುನರಾರಂಭವಾಗಿದೆ ಎಂದು ಮೂಲಗಳು ತಿಳಿಸಿವೆ.

ಕೋವಿಡ್ ನಿರ್ಬಂಧ ಏಪ್ರಿಲ್‌ಗೆ ಅಂತ್ಯ

ಲಂಡನ್(ಪಿಟಿಐ): ‘ಕೋವಿಡ್ ಜತೆ ಬದುಕುವ’ ಕಾರ್ಯತಂತ್ರ ರೂಪಿಸಿರುವ ಬ್ರಿಟನ್ ಸರ್ಕಾರ, ಸಾಂಕ್ರಾಮಿಕ ತಡೆಗಟ್ಟಲು 2020ರ ಮಾರ್ಚ್‌ನಿಂದ ಜಾರಿಗೊಳಿಸಿದ್ದ ಬಹುತೇಕ ಎಲ್ಲಾ ತಾತ್ಕಾಲಿಕ ಕಾನೂನುಗಳು ಏಪ್ರಿಲ್‌ನಿಂದ ರದ್ದಾಗಲಿವೆ ಎಂದು ಪ್ರಧಾನಿ ಬೋರಿಸ್ ಜಾನ್ಸನ್ ಘೋಷಿಸಿದ್ದಾರೆ.

ಸೋಂಕು ದೃಢಪಟ್ಟವರು ಕ್ವಾರಂಟೈನ್‌ಗೆ ಒಳಗಾಗುವ ನಿಯಮ ಇದೇ 24ರಿಂದ ಕೊನೆಗೊಳ್ಳಲಿದೆ. ಅಲ್ಲದೆ ಏಪ್ರಿಲ್ ಒಂದರಿಂದ ಕೊರೊನಾ ಸೋಂಕು ಪತ್ತೆಗೆ ಉಚಿತವಾಗಿ ತಪಾಸಣೆ ಮಾಡುವುದನ್ನು ಸ್ಥಗಿತಗೊಳಿಸಲಾಗುತ್ತದೆ. ಸೋಂಕಿತರ ಸಂಪರ್ಕವನ್ನು ಪತ್ತೆ ಹಚ್ಚುವ ಕಾರ್ಯ, ಲಸಿಕೆ ಪ್ರಮಾಣ ಪತ್ರ ಪರಿಶೀಲನೆ, ವಿದ್ಯಾರ್ಥಿಗಳಿಗೆ ವಾರದಲ್ಲಿ ಎರಡು ಬಾರಿ ಸೋಂಕು ತಪಾಸಣೆಯು ಕೊನೆಗೊಳ್ಳುತ್ತದೆ. ತಿಳಿಸಿದ್ದಾರೆ. ಕೋವಿಡ್ ಇನ್ನೂ ಹೋಗಿಲ್ಲ. ಕೆಲವು ನಿರ್ಬಂಧಗಳನ್ನು ಮಾತ್ರ ವಾಪಸ್ ಪಡೆಯುತ್ತಿದ್ದು, ಸೋಂಕು ಇರುವವರಿಗೂ ಹಲವು ನಿರ್ಬಂಧಗಳು ಮುಂದುವರಿಯಲಿವೆ ಎಂದು ಹೇಳಿದ್ದಾರೆ.

ಹಾಂಗ್‌ಕಾಂಗ್: ಸೋಂಕು ಪತ್ತೆ ಪರೀಕ್ಷೆ ಕಡ್ಡಾಯ

ಹಾಂಗ್‌ಕಾಂಗ್ (ರಾಯಿಟರ್ಸ್): ಹಾಂಗ್‌ಕಾಂಗ್‌ನಲ್ಲಿ ಸೋಂಕು ಪತ್ತೆ ಪರೀಕ್ಷೆ ನಡೆಸುವುದನ್ನು ಕಡ್ಡಾಯಗೊಳಿಸಲಾಗಿದೆ. ಪ್ರಕರಣಗಳು ಹೆಚ್ಚುತ್ತಿರುವುದರಿಂದ ಸರ್ಕಾರ ಈ ನಿರ್ಧಾರ ತೆಗೆದುಕೊಂಡಿದ್ದು, ಮಾರ್ಚ್‌ನಲ್ಲಿ ಕಡ್ಡಾಯವಾಗಿ ಮೂರು ಹಂತದಲ್ಲಿ ಪರೀಕ್ಷೆಗೆ ಒಳಗಾಗಬೇಕು. ಕೋವಿಡ್ ಬಿಗಡಾಯಿಸುತ್ತಿದ್ದು ಮಂಗಳವಾರ 6,211 ಹೊಸ ಪ್ರಕರಣಗಳು ವರದಿಯಾಗಿವೆ

ಏರ್‌ಥಿಂಗ್ಸ್ ಮಾಸ್ಟರ್ಸ್ ಆನ್‌ಲೈನ್ ರ‍್ಯಾಪಿಡ್ ಚೆಸ್ ಟೂರ್ನಿ

ಮತ್ತೆ ಮಿಂಚಿದ ಪ್ರಜ್ಞಾನಂದ

ಚೆನ್ನೈ (ಪಿಟಿಐ): ವಿಶ್ವ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ಅವರನ್ನು ಮಣಿಸಿ ಆತ್ಮವಿಶ್ವಾಸ ವೃದ್ಧಿಸಿಕೊಂಡಿರುವ ಭಾರತದ ಯುವ ಪ್ರತಿಭೆ ಆರ್. ಪ್ರಜ್ಞಾನಂದ ಅವರು ಏರ್‌ಥಿಂಗ್ಸ್ ಮಾಸ್ಟರ್ಸ್ ಆನ್‌ಲೈನ್ ರ‍್ಯಾಪಿಡ್ ಚೆಸ್ ಟೂರ್ನಿಯಲ್ಲಿ ಮತ್ತೆರಡು ಜಯ ಸಂಪಾದಿಸಿದ್ದಾರೆ.

16 ವರ್ಷದ ಪ್ರಜ್ಞಾನಂದ ಅವರು ಮಂಗಳವಾರ 10 ಮತ್ತು 12ನೇ ಸುತ್ತುಗಳಲ್ಲಿ ರಷ್ಯಾದ ಗ್ರ್ಯಾಂಡ್‌ಮಾಸ್ಟರ್‌ಗಳಾದ ಆ್ಯಂಡ್ರೆ ಎಸಿಪೆಂಕೊ ಮತ್ತು ಅಲೆಕ್ಸಾಂಡ್ರಾ ಕೊಸ್ತೆನ್ಯೂಕ್ ಅವರನ್ನು ಪರಾಭವಗೊಳಿಸಿದರು. ಬುಧವಾರ ನಾರ್ವೆಯ ಮ್ಯಾಗ್ನಸ್ ಅವರನ್ನು ಪ್ರಜ್ಞಾನಂದ ಸೋಲಿಸಿದ್ದರು.

ಪ್ರಜ್ಞಾನಂದ ಮಂಗಳವಾರ ಒಂಬತ್ತನೇ ಸುತ್ತಿನಲ್ಲಿ ಉಜ್ಬೆಕಿಸ್ತಾನದ ನಾದಿರ್‌ಬೆಕ್ ಅಬ್ದುಸತರೊವ್ ಎದುರು ಡ್ರಾ ಸಾಧಿಸಿದರೆ, 11ನೇ ಸುತ್ತಿನಲ್ಲಿ ರಷ್ಯಾದ ಇಯಾನ್ ನೆಪೊಮ್ನಿಯಾಚಿ ಎದುರು ಸೋಲು ಕಂಡರು.

ಆರ್. ಪ್ರಜ್ಞಾನಂದ– ಪಿಟಿಐ ಚಿತ್ರ

ಸದ್ಯ ಪ್ರಜ್ಞಾನಂದ ಅವರು 15 ಪಾಯಿಂಟ್ಸ್‌ನೊಂದಿಗೆ 12ನೇ ಸ್ಥಾನದಲ್ಲಿದ್ದಾರೆ. ಎಸಿಪೆಂಕೊ ಎದುರು ಭಾರತದ ಆಟಗಾರನಿಗೆ 42 ನಡೆಗಳಲ್ಲಿ ಗೆಲುವು ಒಲಿಯಿತು. 63 ನಡೆಗಳಲ್ಲಿ ಮಾಜಿ ವಿಶ್ವ ಮಹಿಳಾ ಚಾಂಪಿಯನ್ ಅಲೆಕ್ಸಾಂಡ್ರಾ ಕೊಸ್ತೆನ್ಯೂಕ್ ಅವರನ್ನು ಮಣಿಸಿದರು.

ಪ್ರಜ್ಞಾನಂದ ಅವರು 13, 14 ಮತ್ತು 15ನೇ ಸುತ್ತುಗಳಲ್ಲಿ ಕ್ರಮವಾಗಿ ಜರ್ಮನಿಯ ವಿನ್ಸೆಂಟ್ ಕೇಮರ್, ಅಮೆರಿಕದ ಹ್ಯಾನ್ಸ್ ಮೋಕ್ ನೀಮನ್ ಮತ್ತು ರಷ್ಯಾದ ವ್ಲಾಡಿಸ್ಲಾವ್ ಆರ್ಟ್‌ಮೆವ್ ಅವರನ್ನು ಎದುರಿಸಲಿದ್ದಾರೆ.

ಸದ್ಯ ನೆಪೊಮ್ನಿಯಾಚಿ (27) ಪಾಯಿಂಟ್ಸ್ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದ್ದಾರೆ. ಪ್ರಜ್ಞಾನಂದ ಎದುರಿನ ಸೋಲಿನ ಬಳಿಕ ಪುಟಿದೆದ್ದಿರುವ ಕಾರ್ಲ್‌ಸನ್ (20), ಕುವಾಂಗ್ ಲಿಯೆಮ್ ಲೀ ಮತ್ತು ಕ್ರಿಸ್ಟಾಫ್ ಡುಡಾ ಎದುರು ಗೆದ್ದು ಪಟ್ಟಿಯಲ್ಲಿ ಜಂಟಿ ಎರಡನೇ ಸ್ಥಾನದಲ್ಲಿದ್ದಾರೆ. ಇಷ್ಟೇ ಪಾಯಿಂಟ್ಸ್ ಕಲೆಹಾಕಿರುವ ಆರ್ಟ್‌ಮೆವ್ ಹಾಗೂ ಕೇಮರ್ ಕೂಡ ನಾರ್ವೆ ಆಟಗಾರನೊಂದಿಗೆ ಸ್ಥಾನ ಹಂಚಿಕೊಂಡಿದ್ದಾರೆ.

ಬಾಲ್ ಬ್ಯಾಡ್ಮಿಂಟನ್: ಮಂಗಳೂರು ವಿವಿಗೆ ಪ್ರಶಸ್ತಿ ಗರಿ

ಬೆಂಗಳೂರು: ಮಂಗಳೂರು ವಿಶ್ವವಿದ್ಯಾಲಯ ತಂಡವು ಚೆನ್ನೈನ ಎಸ್.ಆರ್.ಎಂ ವಿಶ್ವವಿದ್ಯಾಲಯದ ಆಶ್ರಯದಲ್ಲಿ ನಡೆದ ಅಖಿಲ ಭಾರತ ಅಂತರ ವಿವಿ ಮಹಿಳಾ ಬಾಲ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಜಯಿಸಿತು. ಇದರೊಂದಿಗೆ 11ನೇ ಸಲ ಪ್ರಶಸ್ತಿ ಗೆದ್ದುಕೊಂಡಿತು.

ಈ ಟೂರ್ನಿಯಲ್ಲಿ ದೇಶದ 62 ವಿಶ್ವವಿದ್ಯಾಲಯಗಳ ತಂಡಗಳು ಸ್ಪರ್ಧಿಸಿದ್ದವು. ಮಂಗಳೂರು ವಿವಿಯು ಎಂಟರ ಘಟ್ಟದಲ್ಲಿ 35-17, 35-20ರಿಂದ ತಮಿಳುನಾಡು ದೈಹಿಕ ಶಿಕ್ಷಣ ವಿವಿ ವಿರುದ್ಧ ಜಯಿಸಿತು. ಮಂಗಳೂರು ವಿವಿಯು ನಾಲ್ಕರ ಘಟ್ಟದ ಲೀಗ್ ಪಂದ್ಯಗಳಲ್ಲಿ ಅತಿಥೇಯ ಎಸ್. ಆರ್. ಎಂ ವಿವಿ ತಂಡವನ್ನು 35 -26 ಹಾಗೂ 35-24ರಿಂದ, ಮದ್ರಾಸ್ ವಿವಿಯನ್ನು 35 -23, 35-28ರಿಂದ ಹಾಗೂ ಅಂತಿಮ ಪಂದ್ಯದಲ್ಲಿ ಅಣ್ಣ ವಿಶ್ವವಿದ್ಯಾಲಯವನ್ನು 35- 33, 35 -20ರಿಂದ ಸೋಲಿಸಿತು.

ಮದ್ರಾಸ್ ವಿವಿಯು ರನ್ನರ್ಸ್ ಅಪ್ ಪ್ರಶಸ್ತಿಯನ್ನು ಪಡೆದುಕೊಂಡಿತು.

ಅಂಗಣಕ್ಕೆ ಜೊಕೊವಿಚ್: ಅದ್ದೂರಿ ಸ್ವಾಗತ

ದುಬೈ (ಎಎಫ್‌ಪಿ): ಕೋವಿಡ್ ಲಸಿಕೆ ತೆಗೆದುಕೊಳ್ಳದ ಕಾರಣ ಆಸ್ಟ್ರೇಲಿಯಾ ಓಪನ್ ಟೂರ್ನಿಯಲ್ಲಿ ಆಡುವುದರಿಂದ ವಂಚಿತರಾಗಿದ್ದ ವಿಶ್ವದ ಅಗ್ರ ಕ್ರಮಾಂಕದ ಟೆನಿಸ್ ಆಟಗಾರ ನೊವಾಕ್ ಜೊಕೊವಿಚ್ ಅವರು ಇಲ್ಲಿ ನಡೆದ ಟೂರ್ನಿಯಲ್ಲಿ ಶುಭಾರಂಭ ಮಾಡಿದರು.

ಅಭಿಮಾನಿಗಳಿಂದ ಅದ್ದೂರಿ ಸ್ವಾಗತ ಸ್ವೀಕರಿಸಿದ ಸರ್ಬಿಯಾ ಆಟಗಾರ, ಮೊದಲ ಸುತ್ತಿನಲ್ಲಿ 6-3, 6-3ರಿಂದ ಇಟಲಿಯ ಲೊರೆಂಜೊ ಮುಸೆಟ್ಟಿ ಅವರನ್ನು ಸೋಲಿಸಿದರು.

ಮೈಸೂರು ರೇಸ್

ಕ್ರೆಸೆಂಡೊ ಗೆಲ್ಲುವ ನಿರೀಕ್ಷೆ

ರಾಜಕುಮಾರಿ ಲೀಲಾವತಿ ದೇವಿ ಮೆಮೋರಿಯಲ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕ್ರೆಸೆಂಡೊ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸ್ವಾಲಿಸ್ ಗಿಫ್ಟ್ 3, ರಷ್ಯನ್ ಸ್ಪೈ 6, ನ್ಯೂಸ್ ಮೇಕರ್ 1
2ನೇ ರೇಸ್: ಡ್ಯಾಗೊಬರ್ಟ್ 2, ಇಂಟ್ರಪಿಡ್ ವಾರಿಯರ್ 8, ಸ್ಕಾರ್ಲೆಟ್ ಪ್ರಿನ್ಸೆಸ್ 9
3ನೇ ರೇಸ್: ಮ್ಯುಟಂಟ್ 10, ಡಿ ಫ್ಯೆರ್ 2, ಇಂಡಿಯನ್ ಡ್ರೀಮ್ಸ್ 1
4ನೇ ರೇಸ್: ಹೀ ಈಸ್ ಡನ್ ಇಟ್ 7, ನೇವಲ್ ವ್ರೆಸ್ಲರ್ 1, ರಾಯಲ್ ಡಿಸೈನ್ 3
5ನೇ ರೇಸ್: ಬೆಂಗಾಜಿ 4, ಮಿಸ್ಟಿಕಲ್ ಮರ್ಲಿನ್ 6, ಅಕ್ವಿಲ ಡಿ'ಓರೊ 1
6ನೇ ರೇಸ್: ಕ್ರೆಸೆಂಡೊ 5, ಡಿ ಗೋಲ್ಡ್ 1, ಹಿಯೋಕ್ಟೇನ್ 4
7ನೇ ರೇಸ್: ಅಭಿನಂದನ್ 1, ಅಮೇಜಿಂಗ್ ಸಫಾರಿ 6, ಡೀಮಸ್ 9
8ನೇ ರೇಸ್: ಚಾಕ್ಷಿ 4, ಫ್ಲಾಶ್ ಬಾಂಡ್ 2, ರಿದ್ಮಿಕ್ 1

ಉತ್ತಮ ಬೆಟ್: ಡ್ಯಾಗೊಬರ್ಟ್

ಜಾಕ್‌ಪಾಟ್	1ನೇ ಟ್ರಬಲ್	2ನೇ ಟ್ರಬಲ್	3ನೇ ಟ್ರಬಲ್
4,5,6,7,8	1,2,3	3,4,5	6,7,8

ಹಾಕಿ ಇಂದಿನಿಂದ

ಬೆಂಗಳೂರು: ಕರ್ನಾಟಕ ರಾಜ್ಯ ಹಾಕಿ ಲೀಗ್ ಚಾಂಪಿಯನ್‌ಷಿಪ್ ಬುಧವಾರ ಆರಂಭವಾಗಲಿದೆ. ಮಾರ್ಚ್ 11ರವರೆಗೆ ನಡೆಯಲಿರುವ ಈ ಟೂರ್ನಿಯಲ್ಲಿ ಒಂಬತ್ತು ತಂಡಗಳು ಆಡಲಿವೆ. ಇದೇ 28ರಿಂದ ಮಾರ್ಚ್ 10ರವರೆಗೆ ಪುರುಷರ ರಾಜ್ಯ ಹಾಕಿ ಚಾಂಪಿಯನ್‌ಷಿಪ್ ಕೂಡ ನಡೆಯಲಿದೆ. ಅದರಲ್ಲಿ ಏಳು ತಂಡಗಳು ಸ್ಪರ್ಧಿಸಲಿವೆ ಎಂದು ಹಾಕಿ ಕರ್ನಾಟಕ ತಿಳಿಸಿದೆ.

ಅಂತರ ವಿವಿ ಅಥ್ಲೆಟಿಕ್ಸ್: ಪ್ರಿಯಾ ಮೋಹನ್‌ಗೆ ಚಿನ್ನ

ಬೆಂಗಳೂರು: ಕರ್ನಾಟಕದ ಪ್ರಿಯಾ ಮೋಹನ್ ಅವರು ಒಡಿಶಾದ ಭುವನೇಶ್ವರದಲ್ಲಿ ನಡೆದ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಮಹಿಳಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

ಕಳಿಂಗ ಇನ್‌ಸ್ಟಿಟ್ಯೂಟ್ ಆಫ್ ಇಂಡಸ್ಟ್ರಿಯಲ್ ಟೆಕ್ನಾಲಜಿ(ಕೆಐಐಟಿ) ಆವರಣದಲ್ಲಿ ಮಂಗಳವಾರ ನಡೆದ ಚಾಂಪಿಯನ್‌ಷಿಪ್‌ನ 400 ಮೀಟರ್ಸ್ ವಿಭಾಗದಲ್ಲಿ ಅವರು 52.58 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಪ್ರಿಯಾ ಅವರು ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯ ತಂಡವನ್ನು ಪ್ರತಿನಿಧಿಸಿದ್ದಾರೆ.

2005ರಲ್ಲಿ ಅನಿಲ್ಡಾ ಥಾಮಸ್ ಅವರು 52.99 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ್ದು ಈ ಹಿಂದಿನ ಕೂಟ ದಾಖಲೆಯಾಗಿತ್ತು.

ಪ್ರಿಯಾ ಮೋಹನ್

100 ಮೀಟರ್ಸ್‌ನಲ್ಲಿ ದ್ಯುತಿ ಮಿಂಚು: ವೇಗದ ಓಟಗಾರ್ತಿ ದ್ಯುತಿ ಚಾಂದ್ ಅವರು 100 ಮೀಟರ್ಸ್ ವಿಭಾಗದಲ್ಲಿ ಚಿನ್ನದ ಪದಕಕ್ಕೆ ಮುತ್ತಿಟ್ಟರು.

ಕೆಐಐಟಿ ವಿಶ್ವವಿದ್ಯಾಲಯವನ್ನು ಪ್ರತಿನಿಧಿಸಿರುವ ದ್ಯುತಿ 11.44 ಸೆಕೆಂಡುಗಳಲ್ಲಿ ಗುರಿ ತಲುಪಿದರು.

ಫುಟ್‌ಬಾಲ್ ದಿಗ್ಗಜ ಪೆಲೆ ಆರೋಗ್ಯ ಸ್ಥಿರ

ಸಾವೊಪೌಲೊ (ಎಪಿ): ಫುಟ್‌ಬಾಲ್ ದಿಗ್ಗಜ ಪೆಲೆ ಅವರ ಆರೋಗ್ಯ ಸ್ಥಿರವಾಗಿದ್ದು, ಚಿಕಿತ್ಸೆಯನ್ನು ಮುಂದುವರಿಸಲಾಗಿದೆ.


ಪೆಲೆ

ಮೂತ್ರಕೋಶದ ಸೋಂಕಿನಿಂದ ಬಳಲಿದ್ದ ಅವರು ಫೆಬ್ರುವರಿ 13ರಂದು ಇಲ್ಲಿಯ ಅಲ್ಬರ್ಟ್ ಐನ್‌ಸ್ಟೈನ್ ಆಸ್ಪತ್ರೆಗೆ ದಾಖಲಾಗಿದ್ದರು. ಕರುಳಿನ ಕ್ಯಾನ್ಸರ್‌ಗೂ ಅವರು ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಆಸ್ಪತ್ರೆಯ ಮೂಲಗಳು ಸೋಮವಾರ ತಿಳಿಸಿವೆ.

'81 ವರ್ಷದ ಪೆಲೆ ಅವರ ಆರೋಗ್ಯ ಸ್ಥಿರವಾಗಿದೆ. ಇನ್ನೂ ಕೆಲವು ದಿನಗಳಲ್ಲಿ ಮನೆಗೆ ಕಳುಹಿಸಲಾಗುವುದು' ಎಂದು ವೈದ್ಯರು ತಿಳಿಸಿದ್ದಾರೆ.

ರಷ್ಯಾ ಮತ್ತು ಉಕ್ರೇನ್ ನಡುವಿನ ಸಂಘರ್ಷವನ್ನು ಶಮನಗೊಳಿಸುವಂತೆ ಮನವಿ...

ವಾಲಿಬಾಲ್: ಅಹಮದಾಬಾದ್‌ಗೆ ಜಯ

ಹೈದರಾಬಾದ್: ಹರದೀಪ್ ಸಿಂಗ್ ಮತ್ತು ಸಾಜುಪ್ರಕಾಶ್ ಮೆಯಲ್ ಅವರ ಅಮೋಘ ಆಟದ ಬಲದಿಂದ ಅಹಮದಾಬಾದ್ ಡಿಫೆಂಡರ್ಸ್ ತಂಡವು ಇಲ್ಲಿ ನಡೆಯುತ್ತಿರುವ ಪ್ರೈಮ್ ವಾಲಿಬಾಲ್ ಲೀಗ್ ಪಂದ್ಯದಲ್ಲಿ ಜಯಿಸಿತು.

ಗಚ್ಚಿಬೌಳಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಅಹಮದಾಬಾದ್ ತಂಡವು 15–14, 15–14, 11–15, 14–15, 15–10ರಿಂದ ಕೊಚ್ಚಿ ಬ್ಲ್ಯೂ ಸ್ಪೈಕರ್ಸ್ ವಿರುದ್ಧ ರೋಚಕ ಜಯ ಸಾಧಿಸಿತು.

ಅಹಮದಾಬಾದ್ ತಂಡದ ಹರದೀಪ್ 19, ಮೆಯಲ್ 17 ಮತ್ತು ಮನೋಜ್ 14 ಅಂಕಗಳನ್ನು ಗಳಿಸಿದರು. ಕೇರಳ ತಂಡದ ಬ್ಲಾಕರ್ ಜಿ.ಎಸ್. ದುಶ್ಯಂತ್ 19, ಕೆ. ಕಾರ್ತಿಕ್ 14, ಅಟ್ಯಾಕರ್ ಕೊಡಿ ಕ್ಲಾಡ್‌ವೆಲ್ 12 ಅಂಕಗಳನ್ನು ಗಳಿಸಿದರು. ಸೆಟರ್ ಪ್ರಶಾಂತ್ ಕುಮಾರ್ ಸರೊಹಾ 18 ಅಂಕಗಳನ್ನು ಗಳಿಸಿದರು.

ಆಳ್ವಾಸ್ ಕನ್ನಡ ಮಾಧ್ಯಮ ಶಾಲೆ
ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ (ರಿ.) ಅಂಗ ಸಂಸ್ಥೆ ಮೂಡಬಿದಿರೆ, ದ.ಕ. – 574227
ಸಂಪೂರ್ಣ ಉಚಿತ ಶಿಕ್ಷಣ ಫಲಾನುಭವಿ ವಿದ್ಯಾರ್ಥಿಗಳಿಗಾಗಿ ಅರ್ಜಿ ಆಹ್ವಾನ
ಆಳ್ವಾಸ್ ಕನ್ನಡ ಮಾಧ್ಯಮ ಶಾಲೆಯ 2022–23ರ ಶೈಕ್ಷಣಿಕ ವರ್ಷದ ಸಂಪೂರ್ಣ ಉಚಿತ ಶಿಕ್ಷಣ ಸೌಲಭ್ಯದಡಿಯಲ್ಲಿ ಉಚಿತ ಶಿಕ್ಷಣಕ್ಕಾಗಿ 6,7,8,ಮತ್ತು 9ನೇ ತರಗತಿಗಳಿಗೆ ಅರ್ಹವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಶೈಕ್ಷಣಿಕ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಪಡೆಯಲು ಇದೊಂದು ಸುವರ್ಣಾವಕಾಶ. ಆಸಕ್ತ ವಿದ್ಯಾರ್ಥಿಗಳು ಅರ್ಜಿಯನ್ನು ಸ್ಪಷ್ಟ ಅಂಚೆ ವಿಳಾಸ ಮತ್ತು ದೂರವಾಣಿ ಸಂಖ್ಯೆಗಳೊಂದಿಗೆ ಕಡ್ಡಾಯವಾಗಿ ಅಧ್ಯಕ್ಷರು, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ (ರಿ.) ಮೂಡುಬಿದಿರೆ - 574227 ಇವರಿಗೆ ದಿನಾಂಕ 10.03.2022ರ ಒಳಗೆ ತಲುಪುವಂತೆ ಕಳುಹಿಸಿಕೊಡಬೇಕು. ಆಯ್ಕೆ ಪ್ರಕ್ರಿಯೆಯಲ್ಲಿ ಉತ್ತೀರ್ಣರಾದವರಿಗೆ ಮಾತ್ರ ಸಂಪೂರ್ಣ ಉಚಿತ ಶಿಕ್ಷಣ, ವಸತಿ ಮತ್ತು ಊಟೋಪಚಾರದ ಸೌಲಭ್ಯ ದೊರೆಯಲಿದೆ.
ಡಾ। ಎಂ. ಮೋಹನ ಆಳ್ವ
ಸೂಚನೆ: 13.03.2022 ದಿನಾಂಕದಂದು ಆಳ್ವಾಸ್ ಕನ್ನಡ ಮಾಧ್ಯಮ ಶಾಲೆ, ಪುತ್ತಿಗೆ ಮೂಡುಬಿದಿರೆ ಇಲ್ಲಿ ಆಯ್ಕೆ ಪ್ರಕ್ರಿಯೆ ನಡೆಯಲಿದೆ.
ಸಂಪರ್ಕಿಸಿರಿ: 7026530137, 7026530263, 9071705131, 6366377824

ಐಎಸ್‌ಎಲ್: ಮುಂಬೈ ಜಯಭೇರಿ

ಮಡಗಾಂವ್: ಬಿಪಿನ್ ಸಿಂಗ್ ಗಳಿಸಿದ ಏಕೈಕ ಗೋಲಿನ ಬಲದಿಂದ ಮುಂಬೈ ಸಿಟಿ ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಪಂದ್ಯದಲ್ಲಿ ಜಯ ಸಾಧಿಸಿತು.

ಮಂಗಳವಾರ ನಡೆದ ಪಂದ್ಯದಲ್ಲಿ ಮುಂಬೈ 1–0ಯಿಂದ ಎಸ್‌ಸಿ ಈಸ್ಟ್ ಬೆಂಗಾಲ್ ಎದುರು ಗೆದ್ದಿತು. ಬಿಪಿನ್ 51ನೇ ನಿಮಿಷದಲ್ಲಿ ಕಾಲ್ಚಳಕ ತೋರಿದರು. ಈ ಜಯದೊಂದಿಗೆ ಮುಂಬೈ ಪಾಯಿಂಟ್ಸ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನಕ್ಕೇರಿತು. ಬುಧವಾರ ವಾಸ್ಕೊದಲ್ಲಿ ಹೈದರಾಬಾದ್ ಎಫ್‌ಸಿ ತಂಡವು ಕೇರಳ ಬ್ಲಾಸ್ಟರ್ಸ್‌ಗೆ ಮುಖಾಮುಖಿಯಾಗಲಿದೆ.

ಭಾರತದ ಅನಾಮಿಕಾ – ಟ್ವಿಟರ್ ಚಿತ್ರ

ಬಾಕ್ಸಿಂಗ್: ಎಂಟರಘಟ್ಟಕ್ಕೆ ನೀತು, ಅನಾಮಿಕಾ

ನವದೆಹಲಿ (ಪಿಟಿಐ): ಅಮೋಘ ಸಾಮರ್ಥ್ಯ ತೋರಿದ ಭಾರತದ ಮಹಿಳಾ ಬಾಕ್ಸರ್‌ಗಳಾದ ನೀತು ಮತ್ತು ಅನಾಮಿಕಾ ಅವರು ಸ್ಟ್ರಾಂಡ್‌ಜಾ ಮೆಮೊರಿಯಲ್ ಬಾಕ್ಸಿಂಗ್ ಟೂರ್ನಿಯಲ್ಲಿ ಸೋಮವಾರ ಕ್ವಾರ್ಟರ್‌ಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ.

ಬಲ್ಗೇರಿಯಾದ ಸೋಫಿಯಾದಲ್ಲಿ ನಡೆಯುತ್ತಿರುವ ಟೂರ್ನಿಯ 48 ಕೆಜಿ ವಿಭಾಗದ ಮೊದಲ ಸುತ್ತಿನ ಸೆಣಸಾಟದಲ್ಲಿ ನೀತು 5–0ಯಿಂದ ರಷ್ಯಾದ ಚುಮಗಾಲಕೊವಾ ಐಲಿಯಾ ಸವಾಲು ಮೀರಿದರೆ, ಅನಾಮಿಕಾ (50 ಕೆಜಿ ವಿಭಾಗ) ಅವರು 4–1ರಿಂದ ಸ್ಥಳೀಯ ಬಾಕ್ಸರ್ ಚುಕನೊವಾ ಜ್ಲಾಟಿಸ್ಲಾವಾ ಅವರನ್ನು ಮಣಿಸಿದರು.

ಮುಂದಿನ ಬೌಟ್‌ಗಳಲ್ಲಿ ನೀತು ಮತ್ತು ಅನಾಮಿಕಾ ಅವರು ಕ್ರಮವಾಗಿ ಇಟಲಿಯ ರಾಬರ್ಟಾ ಬೊನಾಟ್ಟಿ ಮತ್ತು ಅಲ್ಜೀರಿಯಾದ ರೌಮಾಸ್ಯಾ ಬೌಲೆಮ್ ಅವರನ್ನು ಎದುರಿಸಲಿದ್ದಾರೆ.

54 ಕೆಜಿ ವಿಭಾಗದಲ್ಲಿ ಕಣಕ್ಕಿಳಿದಿದ್ದ ಶಿಕ್ಷಾ ಹಾಗೂ ಆಕಾಶ್ (ಪುರುಷರ 67 ಕೆಜಿ ವಿಭಾಗ) ಮೊದಲ ಸುತ್ತಿನ ಬೌಟ್‌ಗಳಲ್ಲಿ ನಿರಾಸೆ ಅನುಭವಿಸಿದರು.

ಶಿಕ್ಷಾ ಅವರು ಮಾಜಿ ವಿಶ್ವ ಚಾಂಪಿಯನ್ ಹಾಗೂ ಹಾಲಿ ಏಷ್ಯನ್ ಚಿನ್ನದ ಪದಕ ವಿಜೇತೆ, ಕಜಕಸ್ತಾನದ ದಿನಾ ಜೊಲಾಮನ್ ಎದುರು 0–5ರಿಂದ ಸೋತರು. ಇಷ್ಟೇ ಅಂತರದಿಂದ ಆಕಾಶ್ ಜರ್ಮನಿಯ ಡೇನಿಯಲ್ ಕ್ರೊಟರ್ ಎದುರು ಎಡವಿದರು.

ಕಳೆದ ಆವೃತ್ತಿಯಲ್ಲಿ ದೀಪಕ್ ಕುಮಾರ್ ಹಾಗೂ ನವೀನ್ ಬೂರಾ ಅವರು ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಗೆದ್ದುಕೊಂಡಿದ್ದರು.